ಮಾನವಿಕ ಕರ್ಣಾಟಕ

ಸಂಪುಟ ೪ ಸಂಚಿಕೆ ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೪

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳದ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೪ ಸಂಚಿಕೆ ೪

೧೬

ಆಗಸ್ಟ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೪

MANAVIKA KARNATAKA, Kannada quarterly of the University of Mysore. Volume 4, Number 4. Edited by H. S. Krishnaswamy Iyengar and Dr. A. V. Narasimha-Murthy

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಶ್ರೀ ಮೀರಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು

ವಿಷಯಸೂಚಿ

ಈ ಸಂಚಿಕೆಯ ಲೇಖನಗಾರರು

೧ **ಗಣೇಶ ಕುರ್ಡಿ**, ನ್ಯಾಯವಾದಿಗಳು ಮತ್ತು ವ್ಯಾಪಾರಚಿಹ್ನೆ ಸಲಹೆಗಾರರು, 67/ಬಿ, ಪದ್ಮಾ ನಿಲಯ, ಸರಸ್ವತಿಪುರ ಹೊಸ ಬಡಾವಣೆ, ಮೈಸೂರು 570009

೨ **ಕಂಠೀರಾವ್**, ಕನ್ನಡ ಭಾಷೆ ಮತ್ತು ಅಭಿವೃದ್ಧಿ ನಿರ್ದೇಶನಾಲಯ, 63, ಅರಮನೆ ರಸ್ತೆ, ಬೆಂಗಳೂರು 52

೩ **ಸೀತಾರಾಮ್ ಜಾಗೀರ್‌ದಾರ್**, ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೪ **ಡಾ. ಎಂ. ನರಸಿಂಹನ್**, ತತ್ತ್ವಶಾಸ್ತ್ರ ವಿಭಾಗ, ಸರ್ಕಾರಿ ಆರ್ಟ್ಸ್ ಕಾಲೇಜು, ಬೆಂಗಳೂರು

೫ **ದಾಮೋದರ ಕೃಷ್ಣ ಪೊದುವಾಳ್**, ವಾಣಿಜ್ಯ ಅಧ್ಯಾಪಕರು, ಮಂಗಳಗಂಗೋತ್ರಿ, ಮಂಗಳೂರು 574152

೬ **ಸಣ್ಣನಂಜೇಗೌಡ**, ಸಂಶೋಧನ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ

೭ **ಜಿ. ಟಿ. ನಾರಾಯಣರಾವ್**, ವಿಜ್ಞಾನ ಸಂಪಾದಕರು, ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೮ **ಎಸ್. ನಾರಾಯಣ ಮೂರ್ತಿ**, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಮಲ್ಲಿಕಾ, ೩೫೭–ಬಿ, ಮಾಗಡಿ ಕಾರ್ಡ್ ರಸ್ತೆ, ಬೆಂಗಳೂರು 560040

೯ **ಎಸ್. ಚನ್ನಪ್ಪ**, ಉಪ ಸಂಪಾದಕರು, ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ

೧೦ **ವಿ. ಎನ್. ಶೇಷಗಿರಿರಾವ್**, ತತ್ತ್ವಶಾಸ್ತ್ರ ಅಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು

ಗಣೇಶ ಶರ್ಮ

ಚಾರ್ಲ್ಸ್ ಡ ಗಾಲ್

ಎರಡನೆಯ ಮಹಾಯುದ್ಧದ ಕಾಲದಲ್ಲಿ ಹಿಟ್ಲರನ ಜರ್ಮನಿಯಿಂದ ಪೂರ್ಣ ಸೋಲನ್ನನುಭವಿಸಿ ಅಪಮಾನದಿಂದ ಕೆಳಗೆ ತಲೆ ಹಾಕಿದ್ದ ಫ್ರಾನ್ಸು ಯುದ್ಧ ಅಂತ್ಯಗೊಂಡಾಗ ಪ್ರಪಂಚದ ಪಂಚ ಮಹಾರಾಷ್ಟ್ರಗಳಲ್ಲಿ ಒಂದಾಗಿ ಅಭಿಮಾನದಿಂದ ತಲೆಯೆತ್ತಿ ನಿಂತಿತ್ತು. ಈ ಪವಾಡಸದೃಶ ಘಟನೆಗೆ ಕಾರಣಪುರುಷ ಆ ದೇಶದ ವೀರ ಯೋಧ ಹಾಗೂ ಕುಶಲ ರಾಜತಂತ್ರಜ್ಞ ಚಾರ್ಲ್ಸ್ ಡ ಗಾಲ್. ತನ್ನ ದೇಶದ ಹೆಚ್ಚು ಗಣನೀಯ ವ್ಯಕ್ತಿಗಳು, ಪುಢಾರಿಗಳು ಕೈಕಾಲು ಬಿಟ್ಟು ಜರ್ಮನಿಯೊಡನೆ ಹೇಯವಾದ ಒಪ್ಪಂದಕ್ಕೆ ಸಿದ್ಧರಾಗಿ ನಿಂತಿದ್ದಾಗ ದೇಶದಿಂದ ಪಲಾಯನ ಮಾಡಿ ಹೊರಗಿದ್ದುಕೊಂಡೇ ಸ್ವದೇಶಬಾಂಧವರನ್ನು ಪ್ರೋತ್ಸಾಹಿಸಿ ಅವರಲ್ಲಿ ದೇಶದ ಭವಿತವ್ಯದ ಬಗ್ಗೆ ಭರವಸೆ ಹುಟ್ಟುವಂತೆ ಮಾಡಿ, ದೇಶವನ್ನು ಆಕ್ರಮಿಸಿಕೊಂಡಿದ್ದ ಜರ್ಮನರನ್ನು ಪ್ರತಿಭಟಿಸುವಂತೆ ಮಾಡಿದ ಶ್ರೇಯಸ್ಸು ಡ ಗಾಲ್‌ಗೇ ಸಲ್ಲತಕ್ಕದ್ದು. ಅವನಿಗಿಂತ ಐನೂರು ವರ್ಷಗಳ ಮುಂಚೆ ಆಗಿಹೋಗಿದ್ದ ಸುಪ್ರಸಿದ್ಧ ಸಂತಳಾದ ಜೋನ್ ಆಫ್ ಆರ್ಕ್ ತವೊಳಗುಂಟಾಗಿದ್ದ ಒಡಕನ್ನು ಮರೆತು ಇಂಗ್ಲಿಷರನ್ನು ಫ್ರಾನ್ಸಿನಿಂದ ಹೊಡೆದೋಡಿಸುವಂತೆ ದೇಶಬಾಂಧವರನ್ನು ಪ್ರೋತ್ಸಾಹಿಸಿ ಅವರಲ್ಲಿ ಏಕತೆಯನ್ನುಂಟುಮಾಡುವ ಪಾತ್ರವನ್ನು ಯಶಸ್ವಿಯಾಗಿ ವಹಿಸಿದ್ದಳು. ಡ ಗಾಲ್ ಕೂಡ ಅದೇ ಪಾತ್ರವನ್ನು ಅಷ್ಟೇ ಯಶಸ್ವಿಯಾಗಿ ವಹಿಸಿದನೆನ್ನಬಹುದು.

ಚಾರ್ಲ್ಸ್ ಡ ಗಾಲ್ 1890ರ ನವೆಂಬರಿನಲ್ಲಿ ಜನಿಸಿದ. ಅವನ ತಂದೆತಾಯಿ ಬೌದ್ಧಿಕ ಹಾಗೂ ಸೈನಿಕ ಹಿನ್ನೆಲೆಯಿದ್ದ ಮೇಲಿನ ಮಧ್ಯಮವರ್ಗಕ್ಕೆ ಸೇರಿದ ಕ್ಯಾತೊಲಿಕ್ ಮನೆತನಗಳಿಗೆ ಸೇರಿದವರು. ಅವನ ತಾತ ಪ್ರಸಿದ್ಧ ಇತಿಹಾಸಜ್ಞ. ಕಕ್ಕಂದಿರಲ್ಲೊಬ್ಬ ಸಸ್ಯಶಾಸ್ತ್ರಜ್ಞ, ಇನ್ನೊಬ್ಬ ಕಕ್ಕ ಕೆಲ್ಟಿಕ್ ಭಾಷೆ ಹಾಗೂ ಸಾಹಿತ್ಯಗಳಲ್ಲಿ ಪ್ರವೀಣ. ರಾಜಪಕ್ಷಕ್ಕೆ ಸೇರಿದ ತಂದೆ ಜೀನ್ ಡ ಗಾಲ್ ಪ್ಯಾರಿಸಿನ ಪ್ರಸಿದ್ಧ ಕಾಲೇಜೊಂದರಲ್ಲಿ ಅಧ್ಯಾಪಕ. ಚಾರ್ಲ್ಸ್ ಮತ್ತು ಅವನ ಅಣ್ಣತಮ್ಮಂದಿರು 1914ರ ಅನಂತರ ಬೆಳಕಿಗೆ ಬಂದ ಗಣರಾಜ್ಯವನ್ನು ಎತ್ತಿಕಟ್ಟಿದ ಪೀಳಿಗೆಗೆ ಸೇರಿದವರು. ತಮ್ಮ ದ್ವಿತೀಯ ಪುತ್ರನಲ್ಲಿ ಉಜ್ವಲ ಭವಿತವ್ಯದ ಗುಣಗಳಿರುವುದನ್ನು ಕಂಡ ತಾಯಿತಂದೆ ಅವನಲ್ಲಿ ಶ್ರೇಷ್ಠಮಟ್ಟದ ಆತ್ಮವಿಶ್ವಾಸ ಮತ್ತು ಅಭಿಮಾನಗಳು ಬೆಳೆಯುವುದಕ್ಕೆ ಕಾರಣರಾದರು. ಈ ಗುಣಗಳು ಅವನಲ್ಲಿ ಕೊನೆಯ ವರೆಗೂ ಜಾಗೃತವಾಗಿದ್ದುವು. ಹಿಟ್ಲರನ ಜರ್ಮನಿ ಅವನ ದೇಶವನ್ನಾಕ್ರಮಿಸಿ ಅವನು ಇಂಗ್ಲೆಂಡಿನಲ್ಲಿ ಆಶ್ರಯ ಪಡೆದಿದ್ದಾಗ ಅವನ ತಲೆಯ ಮೇಲೆ ಮರಣದಂಡನೆಯಿದ್ದಿತು. ದೇಶಭ್ರಷ್ಟನಾಗಿದ್ದ ಅವನಿಗೆ ನಿಲ್ಲಲು ತನ್ನದೆಂಬ ಎಡೆಯಿರಲಿಲ್ಲ. ಅಂತಹ ಕಾಲದಲ್ಲಿ ಸಹಾ ಅವನು ಇಂಗ್ಲೆಂಡಿನಲ್ಲಿದ್ದ ತನ್ನ ಒಡನಾಡಿ

ಮಿತ್ರರಾಷ್ಟ್ರಗಳ ಪ್ರತಿನಿಧಿಗಳೊಂದಿಗೆ ಸಮಾನಭಾವದಿಂದಲೇ ವರ್ತಿಸುತ್ತಿದ್ದ. ಕೆಲವು ಪ್ರಸಂಗಗಳಲ್ಲಿ ಅವರನ್ನು ಪ್ರತಿಭಟಿಸುತ್ತಲೂ ಇದ್ದ. ಅವರಿಗೆ ಅವನ ಅಹಂಕಾರದ ವರ್ತನೆ ಸೇರಿಬರುತ್ತಿದ್ದಿಲ್ಲವಾದರೂ ಅವನನ್ನು ಗೌರವಿಸದಿರುವುದು, ಮೆಚ್ಚಿಕೊಳ್ಳದಿರುವುದು ಕಠಿಣ ವಾಗುತ್ತಿತ್ತು. ಅವನು ಯಾವಾಗಲೂ ಹೆಮ್ಮೆ, ಅಧಿಕಾರ ಹಾಗೂ ಮಹಾತ್ವಾಕಾಂಕ್ಷೆಗಳ ಮಹಾರಾಷ್ಟ್ರ ಫ್ರಾನ್ಸಿನ ವ್ಯಕ್ತಿತ್ವವನ್ನು ಹೊರಸೂಸುವಂತೆ ಗೋಚರಿಸುತ್ತಿದ್ದ. ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟನಿಗೆ ಮಾತ್ರ ಅವನನ್ನು ಸಹಿಸಿಕೊಳ್ಳುವುದು ಆಗುತ್ತಿರಲಿಲ್ಲ. ಅವನು ಚಾರ್ಲ್ಸ್‌ನನ್ನು ವೈಯಕ್ತಿಕ ಮಹಾತ್ವಾಕಾಂಕ್ಷೆಯಿಂದ ಕೂಡಿದ ಸ್ವದೇಶಾಭಿಮಾನಿಯೆಂದು ತಿಳಿಯುತ್ತಿದ್ದ. ತಾನು ಜೋನ್ ಆಫ್ ಆರ್ಕ್ ಎಂದೇ ಈತ ತಿಳಿದುಕೊಂಡಿದ್ದಾನೆ ಎಂದು ರೂಸ್‌ವೆಲ್ಟ್ ತನ್ನ ಹತ್ತಿರದವರಿಗೆ ಚಾಲ್ಸ್‌ರ್ ಬಗ್ಗೆ ಹೇಳಿದ್ದುಂಟು. ಒಂದು ರೀತಿಯಲ್ಲಿ ಈ ಅಸಹ್ಯತೆ ಪರಸ್ಪರವಾಗಿತ್ತೆನ್ನಬಹುದು.

ಚಾಲ್ಸ್‌ರ್ ಬೌದ್ಧಿಕವೃತ್ತಿಯನ್ನು ಅನುಸರಿಸುವುದಕ್ಕೆ ಯೋಗ್ಯನಾಗಿ ತೋರಿದ. ಅವನು ಪ್ರಾಚೀನ ಭಾಷೆಗಳಾದ ಗ್ರೀಕ್ ಮತ್ತು ಲ್ಯಾಟಿನ್‌ಗಳಲ್ಲಿ ಪಂಡಿತ. ಅವನ ಐತಿಹಾಸಿಕ ಜ್ಞಾನ ಪ್ರಜ್ಞೆಗಳು ಅಗಾಧವಾಗಿದ್ದುವು. ವಾರ್ ಮೆಮ್ವೊರ್ಸ್ ಎಂಬ ಕೃತಿ ಅವನಿಗೆ ಫ್ರೆಂಚ್ ಸಾಹಿತ್ಯದ ಇತಿಹಾಸದಲ್ಲಿ ಶಾಶ್ವತವಾದ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ. ಆದರೆ ಅವನು ಸ್ವೇಚ್ಛೆಯಿಂದ ಆರಿಸಿಕೊಂಡದ್ದು ಸೇಂಟ್ ಸೀರಿನ ಸೈನಿಕ ಶಾಲೆಯಲ್ಲಿ ತರಬೇತು ಮುಗಿಸಿ 1911ರಲ್ಲಿ ಸನ್ನದು ಪಡೆದ ಸೇನಾಧಿಕಾರಿಯಾದ. 1914ರ ಮಹಾಯುದ್ಧದಲ್ಲಿ ಸೈನಿಕ ಆದೇಶ ಗಳಲ್ಲಿ ಮೂರು ಸಲ ಅವನ ಹೆಸರನ್ನು ಉಲ್ಲೇಖಿಸಲಾಗಿತ್ತು. ಅನಂತರ ಅವನು ಗಾಯಾಳು ವಾಗಿ ವೆರ್ಡುನಿನಲ್ಲಿ ಸೆರೆಯಾಳಾದ. ಸೆರೆಯಿಂದ ತಪ್ಪಿಸಿಕೊಂಡು ಓಡಿಹೋಗಲು ಯತ್ನಿಸಿದ ಯುದ್ಧ ಬಂದಿ ಅಧಿಕಾರಗಳ ವಾಸದಲ್ಲಿದ್ದಾಗ ಯುದ್ಧಕಾಲದಲ್ಲಿ ಜರ್ಮನಿಯ ಸಿವಿಲ್ (ದೀವಾನೀ) ಅಧಿಕಾರಿವರ್ಗದ ಮೇಲೆ ಸೈನಿಕ ಪ್ರಭಾವದಿಂದುಂಟಾಗುವ ಅಪಾಯವನ್ನು ಕುರಿತಾದ ಕೃತಿಯ ಬಹುಭಾಗದ ಕರಡನ್ನು ತಯಾರಿಸಿದ. 1920–21ರಲ್ಲಿ ಪೋಲೆಂಡಿಗೆ ಹೋಗಿದ್ದ ಜನರಲ್ ಮ್ಯಾರಿಮ್ ವೇಗಾನ ಸೈನಿಕ ಆಯೋಗದ ಅಧಿಕಾರವರ್ಗದಲ್ಲಿ ಮೇಜರ್ ಹುದ್ದೆಯಲ್ಲಿ ಸೇವೆ ಸಲ್ಲಿ ಸಿದ. ಎರಡು ಮಹಾಯುದ್ಧಗಳ ನಡುವೆ ಸೇಂಟ್ ಸೀರ್ ಸೈನಿಕ ಶಾಲೆಯಲ್ಲಿ ಸೈನ್ಯದ ಇತಿಹಾಸದ ಅಧ್ಯಾಪಕನಾಗಿ, ಮಾರ್ಷಲ್ ಪೆಟೇನ ಸಹಾಯಕನಾಗಿ ದುಡಿದ. ಸೈನ್ಯಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಅನೇಕ ಪುಸ್ತಕಗಳನ್ನು ಬರೆದ. ದಿ ಆರ್ಮಿ ಆಫ್ ದಿ ಫ್ಯೂಚರ್ (1934) ಎಂಬ ಪುಸ್ತಕದಲ್ಲಿ ಟ್ಯಾಂಕುಗಳ ಧಾರಾಳ ಉಪಯೋಗದ ಮೂಲಕ ಪದಾತಿದಳದ ಯಾಂತ್ರೀಕರಣವನ್ನು ಸಮರ್ಥಿಸಿದ. 1940ರಲ್ಲಿ ಫ್ರಾನ್ಸಿನ ಆಕ್ರಮಣಕ್ಕೆ ಪರಿಣಾಮಕಾರಿಯಾಗಿ ಉಪಯೋಗಿಸ ಲಾದ ಪ್ಯಾನ್ಜರ್ ಪಡೆಗಳ ನಿರ್ಮಾಣದಲ್ಲಿ ಜರ್ಮನರು ಅವನ ಅನೇಕ ಸಿದ್ಧಾಂತಗಳನ್ನು ಉಪ ಯೋಗಿಸಿಕೊಂಡರು. ಆದರೆ ಈ ತತ್ತ್ವಗಳು ಅವನ ಸೈನಿಕ ಮೇಲಧಿಕಾರಿಗಳಿಗೆ ಒಪ್ಪಿಗೆಯಾಗದೆ ಅವನು ಅವರ ಟೀಕೆಗಳಿಗೆ ಗುರಿಯಾಗಬೇಕಾಯಿತು. ಅವನಿಗೆ ಸೈನಿಕವೃತ್ತಿಯಲ್ಲಿ ಮುಂದುವರಿ ಯುವುದಕ್ಕೆ ಮಾರ್ಷಲ್ ಪೆಟೇನಿಂದ ಬಹಳಷ್ಟು ಸಹಾಯವಾಯಿತು. ಸೈನ್ಯದ ಬಗ್ಗೆ ಅವರಿಗೆ ನಿಜವಾದ ಶ್ರದ್ಧೆಯಿತ್ತು. 1932ರಲ್ಲಿ ಅವನು ದಕ್ಷ ಸೇನಾಧಿಕಾರಿಯೆನಿಸಿಕೊಂಡು ರಾಷ್ಟ್ರೀಯ

ರಕ್ಷಣಾಸಭೆಗೆ (ನ್ಯಾಶನಲ್ ಡಿಫೆನ್ಸ್ ಕೌನ್ಸಿಲ್) ಕಾರ್ಯದರ್ಶಿಯಾದ.

ಎರಡನೆಯ ಮಹಾಯುದ್ಧದ ಪ್ರಾರಂಭದಲ್ಲಿ ಕರ್ನಲ್ ಡ ಗಾಲ್ ಮ್ಯಾಜಿನೋ ಕೋಟೆಯ ಹಿಂಭಾಗದಲ್ಲಿ ಒಂದು ಟ್ಯಾಂಕ್ ದಳದ ನಾಯಕನಾಗಿದ್ದ. 1940ರ ಮೇ ತಿಂಗಳ ಮಧ್ಯದಲ್ಲಿ ಜರ್ಮನಿಯ ಪಡೆಗಳು ಸಮುದ್ರದತ್ತ ರಭಸದಿಂದ ಮುಂದುವರಿಯುತ್ತಿದ್ದಾಗ ಅವನನ್ನು ಅಪೂರ್ಣ ಸಜ್ಜಿತ ಸೈನ್ಯ ವಿಭಾಗವೊಂದರ ದಳಪತಿಯನ್ನಾಗಿ ನೇಮಿಸಲಾಯಿತು. ಫ್ರಾನ್ಸಿನ ಕದನದಲ್ಲಿ ಫ್ರೆಂಚ್ ಪಡೆಗಳು ನಡೆಸಿದ ಎರಡೂ ಆಕ್ರಮಣಗಳ ದಾಳಿಗಳಲ್ಲಿ ಅವನು ಮುಂದಾಳಾಗಿದ್ದ. ಸಲಕರಣೆಗಳ ಅಭಾವದಿಂದಾಗಿ ಆ ದಾಳಿಗಳು ಯಶಸ್ವಿಯಾಗಲಿಲ್ಲ. ಆದರೆ ಅವನು ದಕ್ಷ ಸೇನಾನಾಯಕನೆಂಬದು ಸ್ಥಾಪಿತವಾಯಿತು. ಜೂನ್ ತಿಂಗಳ ಐದರಂದು ಫ್ರಾನ್ಸ್ ಪೂರ್ಣ ಸೋಲನ್ನು ಎದುರಿಸುತ್ತಿದ್ದಾಗ ಆಗಿನ ಪ್ರಧಾನ ಮಂತ್ರಿ ಪಾಲ್ ರೇನಾ ಅವನನ್ನು ಯುದ್ಧವಿಭಾಗದ ಆಧೀನ ಕಾರ್ಯದರ್ಶಿಯನ್ನಾಗಿ ನೇಮಿಸಿದ. ಡ ಗಾಲ್ ಕೇವಲ ಹನ್ನೊಂದು ದಿನಗಳ ಕಾಲ ಮಂತ್ರಿಯಾಗಿ ಉಳಿದ. ಈ ಅಲ್ಪಾವಧಿಯಲ್ಲಿಯೇ ಚರ್ಚಿಲ್ ಮಹಾಶಯನಿಗೆ ಅವನು ನಾಟ್ಸಿಗಳ ದೃಢನಿಶ್ಚಯದ ವೈರಿಯೆಂಬುದು ಖಚಿತವಾಗಿ ಅವನ ನಂಬುಗೆಗೆ ಪಾತ್ರನಾದ. ಫ್ರಾನ್ಸಿನ ಸೋಲಿನ ಕೊನೆಯ ಘಳಿಗೆಯಲ್ಲಿ ಪೆಟೇನ ಹೊಸ ಸರಕಾರ ಹಿಟ್ಲರನೊಡನೆ ಅಪಮಾನಕರವಾದ ಸಂಧಾನದ ಮಾತುಕತೆ ನಡೆಯಿಸುತ್ತಿದ್ದಾಗ ಅದನ್ನು ತಿಳಿದು ಮನಸ್ಸು ರೋಸಿಹೋದ ಡ ಗಾಲ್ ಇಂಗ್ಲೆಂಡಿಗೆ ವಿಮಾನವೊಂದರಲ್ಲಿ ಪಲಾಯನ ಮಾಡಿ ಜೂನ್ 18ರಂದು ತನ್ನ ಐತಿಹಾಸಿಕ ರೇಡಿಯೋ ಭಾಷಣವನ್ನು ಅಲ್ಲಿಂದ ಪ್ರಸಾರ ಮಾಡಿದ. ಅದರಲ್ಲಿ ಅವನು ತನ್ನ ದೇಶಬಾಂಧವರಿಗೆ ಹೋರಾಟವನ್ನು ಮುಂದುವರಿಸುವಂತೆ ಕರೆಯಿತ್ತ. ಫ್ರಾನ್ಸ್ ಒಂದು ಕದನದಲ್ಲಿ ಸೋತಿದೆಯೇ ವಿನಾ, ಯುದ್ಧದಲ್ಲಲ್ಲ ಎಂದು ಸಾರಿದ. ಆ ಸಮಯದಲ್ಲಿ ಅವನಿಗೆ ಯಾವ ರಾಜಕೀಯ ಮಹಾತ್ವಾಕಾಂಕ್ಷೆಯೂ ಇರಲಿಲ್ಲ. ಫ್ರಾನ್ಸಿನಲ್ಲಿ ಜರ್ಮನರ ವಿರುದ್ಧ ಪ್ರತಿಭಟನೆಯನ್ನುಂಟುಮಾಡುವುದು ಅವನ ಉದ್ದೇಶವಾಗಿತ್ತು. ಫ್ರಾನ್ಸ್ ಸೋಲನ್ನೊಪ್ಪದೆ ಯುದ್ಧವನ್ನು ಮುಂದುವರಿಸುವದೆಂಬದನ್ನು ಖಚಿತಗೊಳಿಸಬೇಕಾಗಿತ್ತು. ಅವನು ತನ್ನ ದೇಶದ ಗಣ್ಯವ್ಯಕ್ತಿಗಳು ಸ್ವತಂತ್ರ ಫ್ರೆಂಚರ ಚಳವಳಿಯನ್ನು ಪ್ರಾರಂಭಿಸ ಬಹುದೆಂದು ನೆನಸಿದ್ದ. ಆದರೆ ಹಾಗಾಗಲಿಲ್ಲ, ಆ ವೇಳೆಗೆ ಬ್ರಿಗೇಡಿಯರ್ ಜನರಲ್ ಆಗಿದ್ದ ಡ ಗಾಲ್ ರಾಜಕೀಯಕ್ಕಿಳಿಯಬೇಕಾಯಿತು. ಅವನು ಫ್ರಾನ್ಸಿನ ಹೊರಗಿನಿಂದ ಹೋರಾಟ ವನ್ನು ಮುಂದುವರಿಸುವುದಕ್ಕೆ ಫ್ರೆಂಚ್ ನ್ಯಾಷನಲ್ ಕಮಿಟಿ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಸ್ವತಂತ್ರ ಚಳವಳಿಯನ್ನು ಪ್ರಾರಂಭಿಸಿದ. ಸೆಪ್ಟೆಂಬರ್ ತಿಂಗಳಲ್ಲಿ ಡ ಗಾಲ್ ಪರ ಬ್ರಿಟಿಷ್ ಪಡೆ ಗಳು ಡಾಕಾರ್, ಸೆನೆಗಾಲನ್ನು ಆಕ್ರಮಿಸಿಕೊಳ್ಳಲು ಮಾಡಿದ ಪ್ರಯತ್ನ ವಿಫಲವಾದರೂ ನವೆಂಬರ ನೊಳಗಾಗಿ ಡ ಗಾಲ್ ಪಡೆ 35,000 ಸೈನಿಕರನ್ನೂ 20 ಯುದ್ಧ ನೌಕೆಗಳನ್ನೂ ಹೊಂದಿತ್ತು. ಆಫ್ರಿಕದಲ್ಲಿಯ ಅನೇಕ ಫ್ರೆಂಚ್ ವಸಾಹತುಗಳು ಅವನನ್ನು ಹಿಂಬಾಲಿಸಲು ಸಿದ್ಧವಾಗಿದ್ದುವು. ಸೆಪ್ಟೆಂಬರ್ 1941ರಲ್ಲಿ ದಿ ಫ್ರೀ ಫ್ರೆಂಚ್ ನ್ಯಾಷನಲ್ ಕೌನ್ಸಿಲ್ ಸ್ಥಾಪಿತವಾಗಿ ಡ ಗಾಲ್ ಅದರ ಅಧ್ಯಕ್ಷನಾದ. ಮುಂದೆ ಜೂನ್ 1943ರಲ್ಲಿ ಕಮಿಟಿ ಆಫ್ ನ್ಯಾಷನಲ್ ಲಿಬರೇಷನ್ ಸ್ಥಾಪಿತವಾಯಿತು. ಉತ್ತರ ಆಫ್ರಿಕದಲ್ಲಿ ಫ್ರೆಂಚ್ ಹೈ ಕಮಿಷನರನಾಗಿದ್ದ ಹೆನ್ರಿ ಜಿರಾಡ್

ಮತ್ತು ಡ ಗಾಲ್ ಇಬ್ಬರೂ ಅದರ ಅಧ್ಯಕ್ಷರಾದರು. ಅಮೇರಿಕನರಿಗೆ ಡ ಗಾಲನಲ್ಲಿ ಪೂರ್ಣ ನಂಬಿಕೆಯಿಲ್ಲದ್ದೇ ಇದಕ್ಕೆ ಕಾರಣವಾಗಿತ್ತು. ವಿವಿಧ ಕಡೆಗಳಲ್ಲಿ ಮತ್ತು ರೂಪಗಳಲ್ಲಿ ನಡೆದಿದ್ದ ಫ್ರೆಂಚರ ಯುದ್ಧಪ್ರಯತ್ನಕ್ಕೆ ಮಾರ್ಗದರ್ಶನ ಮಾಡುವುದೇ ಈ ಸಂಸ್ಥೆಯ ಉದ್ದೇಶವಾಗಿತ್ತು. ಸೆಪ್ಟೆಂಬರ್ 9ರಂದು ಜಿರಾಡ್ ತನ್ನ ಅಧ್ಯಕ್ಷಪದವಿಗೆ ರಾಜೀನಾಮೆಯಿತ್ತ. ಏಪ್ರಿಲ್ 1944ರಲ್ಲಿ ಡ ಗಾಲ್ ಎಲ್ಲ ಫ್ರೆಂಚ್ ಪಡೆಗಳ ಅಧಿಪತಿಯಾದ. ಅಷ್ಟರಲ್ಲಿ ಇಂಡೋಚೀನವೊಂದನ್ನು ಬಿಟ್ಟು ಉಳಿದೆಲ್ಲ ಫ್ರೆಂಚ್ ವಸಾಹತುಗಳು ಅವನ ಅಧಿಕಾರಕ್ಕೊಳಗಾಗಿದ್ದುವು. ಅಕ್ಟೋಬರ್ 1943ರಲ್ಲಿ ಕಾರ್ಸಿಕಾದ ವಿಮೋಚನೆಯಾಯಿತು.

1944ರಲ್ಲಿ ಫ್ರಾನ್ಸಿನ ವಿಮೋಚನೆಯಾದ ಬಳಿಕ ಡ ಗಾಲ್ ವಿಜಯೋತ್ಸಾಹದಿಂದ ಸ್ವದೇಶಕ್ಕೆ ಮರಳಿದ. ಅವನ ತಾತ್ಪೂರ್ತಿಕ ಆಡಳಿತ ಮಿತ್ರ ರಾಷ್ಟ್ರಗಳ ಮನ್ನಣೆ ಪಡೆಯಿತು. ಆದರೆ ವಿಜಯದ ಅನಂತರ ಫ್ರಾನ್ಸಿನಲ್ಲಿ ರಾಜಕೀಯ ಒಕ್ಕಟ್ಟು ಉಳಿಯಲಿಲ್ಲ. ಸಂಮಿಶ್ರ ಸರಕಾರವನ್ನು ನಿರ್ಮಿಸಿದ್ದ ರಾಜಕೀಯ ಪಕ್ಷಗಳ ಮುಖಂಡರಿಗೂ ಡ ಗಾಲ್‌ಗೂ ಆಡಳಿತದ ಧೋರಣೆಗಳಿಗಾಗಿ ವೈಮನಸ್ಸು ಉಂಟಾದ್ದರಿಂದ ಅವನು ಜನವರಿ 1946ರಲ್ಲಿ ತನ್ನ ಅಧ್ಯಕ್ಷ ಪದವಿಗೆ ರಾಜೀನಾಮೆಯಿತ್ತ. ಮರುವರ್ಷ ನಾಲ್ಕನೆಯ ಗಣರಾಜ್ಯದ ಅಧ್ಯಕ್ಷತೆಗೆ ಉಮೇದುವಾರಿಕೆಯನ್ನು ನಿರಾಕರಿಸಿದ. ಇದಾದ ಬಳಿಕ ಅವನು ಫ್ರಾನ್ಸ್ ಪ್ರಬಲ ನಿರ್ವಾಹಕ ಅಧಿಕಾರದ ಅಥವಾ ನಿರಂಕುಶಾಧಿಕಾರದ ಕೆಳಗೆ ಬಲಿಷ್ಠ ರಾಷ್ಟ್ರವಾಗಬೇಕೆನ್ನುವವರ ಮುಂದಾಳಾದ. 1947ರಲ್ಲಿ ರಾಸೆಂಬಲ್ಮೆಂಟ್ ಡು ಪೀಪಲ್ ಫ್ರಾನ್ಸೈಸ್ ಎಂಬ ಪಕ್ಷದ (R.P.F.) ನಾಯಕನಾದ. ಆದರೆ ಈ ಪಕ್ಷಕ್ಕೆ ಅಧಿಕಾರಕ್ಕೆ ಬರಲು ಸಾಧ್ಯವಾಗದೆ ಅದು 1953ರಲ್ಲಿ ಕೊನೆಗೊಂಡಿತು.

1958ರಲ್ಲಿ ಆಲ್ಜೀರಿಯದಲ್ಲಿ ಸೈನ್ಯ ಸರಕಾರದ ವಿರುದ್ಧ ನಿಂತಾಗ ದೇಶದಲ್ಲಿ ಅಂತರ್ಯುದ್ಧ ಪ್ರಾರಂಭವಾಗಿ ಆಡಳಿತ ಸೈನ್ಯದ ಕೈಸೇರದಂತೆ ಪ್ರಜಾಸತ್ತೆಯನ್ನು ರಕ್ಷಿಸುವುದಕ್ಕಾಗಿ ಅಧ್ಯಕ್ಷ ಕೋಟಿ ಮತ್ತು ಫ್ರೆಂಚ್ ಚೇಂಬರಿನ ಮುಂದಾಳುಗಳು ಆ ವರೆಗೆ ಅಜ್ಞಾತವಾಸದಲ್ಲಿದ್ದ 68ವರ್ಷ ವಯಸ್ಸಿನ ಡ ಗಾಲನನ್ನೇ ಮರೆಹೊಗಬೇಕಾಯಿತು. ಜೂನ್ 1ರಂದು ಅವನು ಹೊಸ ಸರ್ಕಾರದ ನಾಯಕನಾದ. 4ನೆಯ ಗಣರಾಜ್ಯದ ಬದಲು, ರಾಷ್ಟ್ರಾಧ್ಯಕ್ಷನಿಗೆ ಹೆಚ್ಚು ಅಧಿಕಾರವಿದ್ದ 5ನೆಯ ಗಣರಾಜ್ಯ ಬಂತು. ಡಿಸೆಂಬರ್ 1958ರಲ್ಲಿ ಅವನು 5ನೆಯ ಗಣರಾಜ್ಯದ ಪ್ರಥಮ ಅಧ್ಯಕ್ಷನಾದ. ಆಲ್ಜೀರಿಯದ ಸಮಸ್ಯೆಯನ್ನು ಬಗೆಹರಿಸಲು ಅವನಿಗೆ 4 ವರ್ಷ ಹಿಡಿಯಿತು. ಆಲ್ಜೀರಿಯ ಫ್ರಾನ್ಸಿಗೆ ಸೇರಿದ ಪ್ರದೇಶವೆಂಬ ಫ್ರಾನ್ಸಿನ ಸೈನ್ಯದ ಹಾಗೂ ರಾಜಕೀಯ ಪಕ್ಷಗಳ ಮನೋಭಾವವನ್ನು ಅವನು ಯಶಸ್ವಿಯಾಗಿ ಎದುರಿಸಿ ಅದಕ್ಕೆ ಸ್ವಾತಂತ್ರ್ಯವಿತ್ತ. ಅಲ್ಲಿ ಶಾಂತಿ ನೆಲಸುವಂತೆ ಮಾಡಿದ. ಅವನು ಅಧಿಕಾರಕ್ಕೆ ಬಂದೊಡನೆಯೇ ಆಫ್ರಿಕದಲ್ಲಿಯ ಎಲ್ಲ ಫ್ರೆಂಚ್ ವಸಾಹತುಗಳಿಗೆ ಸ್ವಾತಂತ್ರ್ಯ ನೀಡಿದ. ಇದರಿಂದಾಗಿ ಮತ್ತು ಸೋವಿಯತ್ ರಷ್ಯ ಮತ್ತು ಅಮೆರಿಕಗಳನ್ನು ಎದುರಿಸಿ ಹೊಸತಾಗಿ ಅಸ್ತಿತ್ವದಲ್ಲಿ ಬಂದಿದ್ದ ರಾಷ್ಟ್ರಗಳ ಹಿತಬಾಧ್ಯತೆಗಳನ್ನು ಎತ್ತಿ ಕಟ್ಟಿದ್ದರಿಂದಾಗಿ ಆಫ್ರಿಕ, ಏಷ್ಯ ಮತ್ತು ಲ್ಯಾಟಿನ್ ಅಮೆರಿಕಗಳಲ್ಲಿ ಡ ಗಾಲ್ ಅತ್ಯಂತ ಆದರಕ್ಕೆ ಪಾತ್ರನಾದ ವ್ಯಕ್ತಿಯಾದ. ಫ್ರಾನ್ಸ್ ಕೂಡ ಮೂರನೆಯ ಜಗತ್ತಿನ ರಾಷ್ಟ್ರಗಳ ಗೌರವಕ್ಕೆ ಪಾತ್ರವಾಯಿತು. ಡ ಗಾಲ್ ಸಾಧಿಸಿದ ಇನ್ನೊಂದು ಕಾರ್ಯವೆಂದರೆ ಕಾರ್ಯಾಂಗಕ್ಕೆ ಅಧಿಕ ಭದ್ರತೆ ಮತ್ತು ಅಧ್ಯಕ್ಷನಿಗೆ ಹೆಚ್ಚಿನ

ಅಧಿಕಾರಗಳು ಉಂಟಾಗುವಂತೆ ಸಂವಿಧಾನವನ್ನು ರೂಪಿಸಿದ್ದು. ಇದರಿಂದಾಗಿ ಅವನು ನಿರಂಕುಶ ಪ್ರಭುವಾಗಲಿಚ್ಛಿಸುತ್ತಿದ್ದಾನೆಂದು ಕೆಲವರು ದೂರುವಂತಾಯಿತು. ಆದರೆ ಇದು ನಿರಾಧಾರವಾದ ದೂರಾಗಿತ್ತು. 1946ರಲ್ಲಿ ಅವನು ಸ್ವೇಚ್ಛೆಯಿಂದ ಅಧ್ಯಕ್ಷಪದವಿಯನ್ನು ಬಿಟ್ಟುಕೊಟ್ಟಿದ್ದ. 1965ರಲ್ಲಿ ಅಧ್ಯಕ್ಷತೆಗೆ ಮರುಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಅವನು ದ್ವಿತೀಯ ಮತದ ನೆರವು ಪಡೆಯಬೇಕಾಯಿತು. ಅವನು ನಿರಂಕುಶ ಪ್ರಭುವಾಗಲು ಇಚ್ಛಿಸುತ್ತಿದ್ದಿಲ್ಲವೆಂಬುದು ಇಷ್ಟರಿಂದಲೇ ಸ್ಪಷ್ಟವಾಗುತ್ತದೆ. 1961ರಲ್ಲಿ ಅವನು ಇನ್ನೊಂದು ಸೈನಿಕ ಬಂಡಾಯವನ್ನೆದುರಿಸಬೇಕಾಗಿ ಬಂತು. ಅದನ್ನು ಅವನು ತನ್ನ ಚಾಣಾಕ್ಷತೆಯಿಂದ ಹತ್ತಿಕಲು ಶಕ್ತನಾದ.

ಆದರೆ 1967ರಿಂದ ಅವನ ಆಡಳಿತ ಕಡಿಮೆ ಯಶಸ್ವಿಯಾಗತೊಡಗಿತು. ಅವನ ಸರ್ಕಾರ ಸಾಮಾಜಿಕ ಸುಧಾರಣೆಗಳತ್ತ ಸಾಕಷ್ಟು ಲಕ್ಷ್ಯಗೊಟ್ಟಿರಲಿಲ್ಲ. ಪ್ರಾರಂಭದಲ್ಲಿ ಜನತೆಯ ಬೆಂಬಲವಿದ್ದ ವಿದ್ಯಾರ್ಥಿಗಳ ದಂಗೆ ಕಾರ್ಮಿಕರ ಸಂಪ್ಪುಗಳು ಅವನ ಪ್ರತಿಷ್ಠೆಗೆ ಬಲವಾದ ಏಟು ಕೊಟ್ಟವು. ಸೋವಿಯತ್ ದೇಶ ಚೆಕೊಸ್ಲೊವಾಕಿಯವನ್ನು ಆಕ್ರಮಿಸಿದ ಘಟನೆಯೂ ಅವನಿಗೆ ಹಿತಕಾರಿಯಾಗಲಿಲ್ಲ. ಇಸ್ರೇಲ್ ಮತ್ತು ಅರಬ್ ರಾಷ್ಟ್ರಗಳ ನಡುವಿನ 1967ರ ಯುದ್ಧದ ಮೊದಲಿನ ಮತ್ತು ಅನಂತರದ ಅವನ ನಿಲುವನ್ನು ದೇಶಬಾಂಧವರು ಕಟುವಾಗಿ ಟೀಕಿಸಿದರು. ಅವನ ವಯಸ್ಸೂ ಅವನಿಗೆ ವಿರುದ್ಧವಾಗಿತ್ತು. ಅವನು ಅನೇಕ ಸಮಾಜಸುಧಾರಣೆಗಳನ್ನು ಮಾಡಬಯಸಿದನಾದರೂ ಅದು ಅವನಿಗೆ ಶಕ್ಯವಾಗದೆ ಹೋಯಿತು. ಹೆಚ್ಚು ಕಡಿಮೆ ಅವನವೇ ಆಗಿದ್ದ ಕಾರ್ಯನೀತಿಗಳನ್ನು ಅವಿಧೇಯ ಯುವಕರೂ ಅವನ ರಾಜಕೀಯ ಪಕ್ಷದ ಸಂಪ್ರದಾಯವಾದಿ ಸದಸ್ಯರೂ ಒಪ್ಪದಾದರು. ಏಪ್ರಿಲ್ 1969ರಲ್ಲಿ ಆದ ಪ್ರಾದೇಶಿಕ ಪ್ರಾಮುಖ್ಯಕ್ಕೆ ಸಂಬಂಧಿಸಿದ ಪ್ರಜಾನಿರ್ಧಾರದಲ್ಲಿ ಸೋಲಾದುದರಿಂದ ಅವನು ತನ್ನ ಅಧ್ಯಕ್ಷಪದವಿಯನ್ನು ಬಿಟ್ಟುಕೊಟ್ಟ. 1970ರ ನವೆಂಬರ್ 9ರಂದು ಹೃದಯಾಘಾತದಿಂದ ಅವನಿಗೆ ಮರಣವೊದಗಿತು.

ಡ ಗಾಲ್‌ನ ವಿದೇಶನೀತಿಯಲ್ಲಿ ವೈಶಿಷ್ಟ್ಯವಿತ್ತು. ತನ್ನ ದೇಶಕ್ಕೆ ಅಂತರರಾಷ್ಟ್ರೀಯ ರಂಗದಲ್ಲಿ ಯೋಗ್ಯ ಸ್ಥಾನ ದೊರಕಿಸುವ ಮತ್ತು ಎರಡು ಅತ್ಯಂತ ಪ್ರಬಲ ರಾಷ್ಟ್ರಗಳಾದ ಅಮೆರಿಕ ಮತ್ತು ಸೋವಿಯತ್ ದೇಶಗಳಿಂದ ಪ್ರಭಾವಿತವಾಗಿದ್ದ ಯುದ್ಧಾನಂತರದ ಜಗತ್ತಿನಲ್ಲಿ ಅದನ್ನು ಸಮಹಾದಿಯಲ್ಲಿ ನಡೆಯಿಸಿಕೊಂಡು ಹೋಗುವ ಹೊಣೆ ಅವನ ಮೇಲಿದ್ದಿತ್ತು. ಈ ಎರಡು ರಾಷ್ಟ್ರಗಳ ನಡುವೆ ಯುದ್ಧವಾದಲ್ಲಿ ಫ್ರಾನ್ಸ್ ಪ್ರಜಾಪ್ರಭುತ್ವದ ಕಡೆಗೆ ಇರಬೇಕಾಗುವುದೆಂಬುದನ್ನು ಮನಗಂಡ ಅವನು ಫ್ರಾನ್ಸನ್ನು ಅಟ್ಲಾಂಟಿಕ್ ಮೈತ್ರಿಯಲ್ಲಿರುವಾಗಲೇ ನೇಟೋದಿಂದ ಕ್ರಮೇಣ ಫ್ರೆಂಚ್ ಪಡೆಗಳನ್ನು ಹಿಂದೆಗೆದುಕೊಂಡು ಪಾಶ್ಚಾತ್ಯ ಕೂಟದಿಂದ ಫ್ರಾನ್ಸ್ ಹೊರಬೀಳುವಂತೆ ಮಾಡಿದ. ಲ್ಯಾಟಿನ್ ಅಮೆರಿಕ, ಇಂಡೋಚೀನ ಮತ್ತು ಮಧ್ಯಪೂರ್ವಗಳಲ್ಲಿ ಅಮೆರಿಕದ ನೀತಿಯನ್ನು ಅವನು ಉಗ್ರವಾಗಿ ಪ್ರತಿಭಟಿಸಿದ. ಯುರೋಪಿನ ರಾಷ್ಟ್ರಗಳು ಪರಸ್ಪರ ಸಹಕರಿಸುವುದು ಅವಶ್ಯವೆಂಬುದು ಅವನ ಮತವಾಗಿತ್ತು. ಅವನು ಪ್ರಾರಂಭದಲ್ಲಿ ಐರೋಪ್ಯ ಆರ್ಥಿಕ ಸಮುದಾಯವು ಐರೋಪ್ಯ ರಾಷ್ಟ್ರಗಳನ್ನು ಯಂತ್ರತಂತ್ರಜ್ಞರ ಅಧೀನಕ್ಕೆ ಒಳಪಡಿಸುತ್ತದೆ ಎಂದು ಈ ಸಮುದಾಯವನ್ನು ಧ್ವಂಸಗೊಳಿಸುವದಾಗಿ ಬೆದರಿಕೆ ಹಾಕಿದನಾದರೂ, ಕೊನೆಯಲ್ಲಿ ಫ್ರಾನ್ಸ್ ಈ ಸಮುದಾಯದಲ್ಲಿ ಸೇರುವುದರಿಂದ ಅದರ ಆರ್ಥಿಕತೆ ವೃದ್ಧಿಗೊಳ್ಳುವದೆಂಬುದನ್ನು ಮನಗಂಡು ಫ್ರಾನ್ಸ್ ಅದರಲ್ಲಿ ಸೇರುವಂತೆ ಮಾಡಿದ. ಬ್ರಿಟನ್ ಈ ಸಮುದಾಯದಲ್ಲಿ

ಪ್ರವೇಶಿಸುವುದನ್ನು ಅವನು ನಿಷೇಧಿಸುವುದಕ್ಕೆ ಆ ದೇಶಕ್ಕೆ ಅಮೇರಿಕದೊಡನೆ ಇದ್ದ ಗಾಢ ಮೈತ್ರಿಯೇ ಕಾರಣ. ಫ್ರಾನ್ಸ್ ಮತ್ತು ಪಶ್ಚಿಮ ಜರ್ಮನಿಗಳ ನಡುವೆ ಮೈತ್ರಿ ಬೆಳೆಯುವುದಕ್ಕೆ ಅವನು ಬಹಳಷ್ಟು ಪ್ರಯತ್ನಿಸಿದ. 1962ರಲ್ಲಿ ಅವನು ಪಶ್ಚಿಮ ಜರ್ಮನಿಗೆ ಭೇಟಿಯಿತ್ತಾಗ ಅವನು ಸಂಯುಕ್ತ ಯುರೋಪಿನ ಪ್ರಥಮ ಅಧ್ಯಕ್ಷನೇನೋ ಅನ್ನುವಂತೆ ಅವನಿಗೆ ಹಾರ್ದಿಕ ಸ್ವಾಗತ ದೊರೆಯಿತು. 1967ರಲ್ಲಿ ಕೆನಡಕ್ಕೆ ಭೇಟಿ ಕೊಟ್ಟಾಗ ಆ ದೇಶದಲ್ಲಿದ್ದ ಫ್ರೆಂಚ್ ಪ್ರತ್ಯೇಕತಾವಾದಿಗಳ ಧ್ಯೇಯವನ್ನು ಬಹಿರಂಗವಾಗಿ ಸಮರ್ಥಿಸಿದ. ಫ್ರಾನ್ಸಿನ ಮುಖಂಡತ್ವದಲ್ಲಿ ಮೂರನೆಯ ಜಗತ್ತನ್ನು ನಿರ್ಮಿಸುವುದು ಅವನ ಉದ್ದೇಶವಾಗಿತ್ತೆಂದು ಹೇಳಲಾಗುತ್ತಿದೆ. ಅವನು ಅತ್ಯಂತ ಕುಶಲರಾದ ರಾಜಕೀಯ ವ್ಯಕ್ತಿಗಳ ಗುಣಗಳನ್ನು ಹೊಂದಿರಲಿಲ್ಲವಾದರೂ ಅವನಿಗೆ ಉತ್ತಮವಾದ ದೂರದೃಷ್ಟಿಯಿತ್ತು. ಆದರೆ ಸಮನ್ವಯ. ಸಂಧಾನಗಳಿಗೆ ಅವಶ್ಯಕವಾದ ಜಾಣಾಕ್ಷತೆಯನ್ನು ಸೂಚಿಸುವ ಮಧ್ಯದೃಷ್ಟಿ ಅವನದಾಗಿರಲಿಲ್ಲ. ಅಲ್ಪಕಾಲದ ಯೋಜನೆಗಳಲ್ಲಿ ಅವನು ಪ್ರವೀಣನಾಗಿದ್ದ. ಅವನ ಎಲ್ಲ ಕಾರ್ಯನೀತಿಗಳೂ ಫ್ರಾನ್ಸಿಗೆ ಹಿತಕಾರಿಯಾದುವೆಂದು ಹೇಳಲಾಗುವದಿಲ್ಲ. ಆದರೆ ಅವು ಅವನ ದೃಷ್ಟಿಯಲ್ಲಿ ಯೋಗ್ಯವಾದವುಗಳಾಗಿದ್ದು ಅವುಗಳಿಂದ ಫ್ರಾನ್ಸಿನ ಹಿತ ಸಾಧಿಸಬಹುದೆಂದು ಅವನು ದೃಢವಾಗಿ ನಂಬಿದ್ದ. ಯುದ್ಧಾನಂತರದ ಜಗತ್ತಿನ ರಾಜಕೀಯದಲ್ಲಿ ಡ ಗಾಲ್ ಬಹುಕಾಲದ ವರೆಗೆ ಕ್ಷೋಭೆಯನ್ನುಂಟುಮಾಡಿದ, ಆದರೆ ಚೇತನ ದಾಯಕವಾದ ಅಂಶವಾಗಿದ್ದ.

ಡ ಗಾಲ್ ಇತರರ ಕುಂದುಕೊರತೆಗಳನ್ನು ಎತ್ತಿ ತೋರಿಸುವ ಖಂಡಿತವಾದಿಯೂ ನಿಷ್ಠುರ ಸ್ವಭಾವದವನೂ ಆಗಿದ್ದ. ತನ್ನನ್ನು ಪೀಡಿಸಿದವರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ಅವರನ್ನು ಅವನು ನಿರ್ದಯೆಯಿಂದ ನಡೆಯಿಸಿಕೊಂಡ ಉದಾಹರಣೆಗಳಿವೆ. ತನಗಾಗಿ ದುಡಿದವರನ್ನು ರಕ್ಷಿಸಿದ, ಕೈಬಿಟ್ಟ ಉದಾಹರಣೆಗಳೂ ಇಲ್ಲದಿಲ್ಲ. ಉಪಕಾರಸ್ಮರಣೆಯ ಗುಣವೂ ಅವನಲ್ಲಿತ್ತು. ಸ್ವತಂತ್ರ ಫ್ರಾನ್ಸಿನ ಚಳವಳಿಯ ಕಾಲದ ತನ್ನ ಸಂಗಾತಿಗಳಿಗೆ ಅವನು ಯಾವತ್ತೂ ಕೃತಜ್ಞನಾಗಿದ್ದ. ಅವನು ಲೇಡಿ ಚರ್ಚಿಲಳಿಗೆ ಅವಳ ಪತಿಯ ಮರಣದ ಅನಂತರ ಸ್ವಂತ ಕೈಬರಹದಲ್ಲಿ ನಿಯತವಾಗಿ ಸಹಾನುಭೂತಿಯ ಪತ್ರಗಳನ್ನು ಬರೆಯುತ್ತಿದ್ದದ್ದು ಇದಕ್ಕೆ ಒಂದು ಉದಾಹರಣೆ. ಮುಂದಿನ ಪೀಳಿಗೆ ಯೂರೋಪಿನ ಪಿತಾಮಹರಲ್ಲೊಬ್ಬನೆಂದು ಎಣಿಸಬಹುದಾದ ಫ್ರಾನ್ಸಿನ ಮೇರು ವ್ಯಕ್ತಿಗೆ ಪ್ರಪಂಚದ ಇತಿಹಾಸದಲ್ಲಿ ಶಾಶ್ವತವಾದ ಸ್ಥಾನವಿದೆ.

ಕಂಠೀರಾವ್

ಸೂತ್ರ

"ಸೂತ್ರ" ಎಂಬ ಪದಕ್ಕೆ ಅನೇಕ ಅರ್ಥಗಳುಂಟು. ತಂತು, ಎಳೆ, ದಾರ ಎಂಬುದು ಸಾಮಾನ್ಯಾರ್ಥ. ಹಿಂದೀ, ಮರಾಠೀ, ಉರ್ದು ಭಾಷೆಗಳಲ್ಲಿ 'ಸೂತ್' ಎಂಬ ಪದವೂ ಇದನ್ನೇ ಸೂಚಿಸುವುದು. 'ಸೂತ' ಎಂಬುದು 'ಸೂತ್' ಶಬ್ದದ ಹಿಂದೀ-ಉರ್ದು ತದ್ಭವ.

ಸಾಮಾನ್ಯಾರ್ಥದಲ್ಲಿ 'ಸೂತ್ರೀಕರಿಸು' ಎಂದಾಗ ಹೊಸೆಯುವುದು, ನೂಲುವುದು, ಪೋಣಿಸುವುದು, ಇತ್ಯಾದಿ ಅರ್ಥಗಳಾಗುವುವು. ನೂಲುವ ಸಾಮೂಹಿಕ ಚಳವಳಿಯನ್ನು ಗಾಂಧೀಜಿಯವರು 'ಸೂತ್ರಯಜ್ಞ' ಎಂದು ಕರೆದುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದಾಗಿದೆ. ಕೀಲುಗೊಂಬೆಗಳ ಹಿಂದೆ ಅವುಗಳ ದಾರಗಳನ್ನು ಹಿಡಿದು ಆಡಿಸುವುದನ್ನು ಎಲ್ಲರೂ ಕಂಡರಿತ ವಿಷಯ. ಈ ದಾರಗಳನ್ನು ಅಥವಾ ಕೀಲುಗಳನ್ನು 'ಸೂತ್ರ' ಎಂದು ಕರೆಯುವುದುಂಟು. ಸಕಲ ಚೇತನಾಚೇತನ ಜಗತ್ತಿನ ಸೂತ್ರವನ್ನು ತನ್ನ ಕೈಯಲ್ಲಿಟ್ಟುಕೊಂಡು ಸೃಷ್ಟಸ್ಥಿತಿಲಯಾದಿ ವ್ಯಾಪಾರ ಮಾಡುತ್ತಿರುವ ಪರಮಾತ್ಮನನ್ನು 'ಸೂತ್ರನಾಮಕ' ಎಂದು ಸಂಬೋಧಿಸಿರುವುದೂ ಈ ಅರ್ಥದಲ್ಲಿಯೇ.

ಇನ್ನು, ಶಾಸ್ತ್ರೀಯ ಭಾಷೆಯಲ್ಲಿ 'ಸೂತ್ರ' ಶಬ್ದಕ್ಕಿರುವ ಪ್ರಸಿದ್ಧಾರ್ಥವೆಂದರೆ 'ಸಂಕ್ಷಿಪ್ತ ಪದವಿನ್ಯಾಸ'. ಹೇಳಬೇಕಾದ ವಿಷಯವನ್ನು ಸಂಕ್ಷಿಪ್ತವಾಗಿಯೂ ಬಂಧುರವಾಗಿಯೂ ಸಂಗ್ರಹವಾಗಿಯೂ ನಿರೂಪಿಸುವುದನ್ನು 'ಸೂತ್ರೀಕರಣ' ಎಂದು ಕರೆಯುವುದುಂಟು. ಸೂತ್ರೀಕರಣಕ್ಕೆ ಅಕ್ಷರ, ಮಾತ್ರೆ, ಪ್ರಾಸಾದಿಗಳ ಕಟ್ಟುಪಾಡುಗಳಾವುವೂ ಇದ್ದಂತೆ ತೋರುವುದಿಲ್ಲ. ಈ ಕೆಳಗಿನ ಶ್ಲೋಕ 'ಸೂತ್ರ'ದ ಸಾಮಾನ್ಯ ಲಕ್ಷಣವನ್ನು ವಿವರಿಸುವುದು :

ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶತೋಮುಖಮ್
ಅಸ್ತೋಭಂ ಅನವದ್ಯಂಚ ಸೂತ್ರಂ ಸೂತ್ರವಿದೋವಿದುಃ

ಇದು 'ಸೂತ್ರ' ಪದದ ಪ್ರಸಿದ್ಧಾರ್ಥದ ಸ್ಥೂಲ ರೂಪರೇಷೆ : ಸೂತ್ರದಲ್ಲಿ ಹೇಳಬೇಕಾದ ಅರ್ಥವನ್ನು ತಿಳಿಸಲು ಅಗತ್ಯವಾದಷ್ಟೇ ಅಕ್ಷರಗಳಿರಬೇಕು. ನಾನಾ ಶಾಖೆಗಳಲ್ಲಿ ಬರುವ ಅರ್ಥವನ್ನು ಅದು ವಿಮರ್ಶಾತ್ಮಕವಾಗಿ ನಿರೂಪಿಸುವಂತಿರಬೇಕು. ವಿಷಯ ಸಂಧಿಗ್ಧವಾಗಿರಕೂಡದು. ಅರ್ಥಪೂರ್ಣವೂ ಬೋಧಗಮ್ಯವೂ ಆಗಿರಬೇಕು. ಸಾರವತ್ತಾಗಿರಬೇಕು. ದೋಷರಹಿತವಾಗಿರಬೇಕು. ಇದೇ ಮೇಲಿನ ಶ್ಲೋಕಾಭಿಪ್ರಾಯ. ಎಲ್ಲ ಶಾಸ್ತ್ರಕಾರರು ಈ ಲಕ್ಷಣವನ್ನೇ ಸಾರ್ವತ್ರಿಕವಾಗಿ ಅಂಗೀಕರಿಸಿದ್ದಾರೆಂದು ಹೇಳಬಹುದು. ನಾಟಕಾರಂಭದಲ್ಲಿ ನಾಟಕದ ಕಥೆಯನ್ನು ಸಂಗ್ರಹವಾಗಿ ನಿರೂಪಿಸುವ ಪಾತ್ರವನ್ನು 'ಸೂತ್ರಧಾರ' ಎಂದು ಕರೆಯುವ ಪ್ರಾಚೀನ ಸಂಪ್ರದಾಯವನ್ನೂ ಗಮನಿಸಬಹುದು,

ಕಾಲ ಸರಿದಂತೆ ಮನನ ಮಾಡಲು ಅನುಕೂಲವಾಗುವುದಕ್ಕಾಗಿ ಋಷಿಮುನಿಗಳು ಶಾಸ್ತ್ರ ವಿಷಯಗಳನ್ನು ಸಂಗ್ರಹವಾಗಿ ನಿರೂಪಿಸಲು ಸೂತ್ರ ಶೈಲಿಯನ್ನು ಹೆಚ್ಚು ಹೆಚ್ಚಾಗಿ ಬಳಕೆಗೆ ತಂದರು.[1] ಪಾಣಿನಿ, ಪತಂಜಲಿ, ಜೈಮಿನಿ, ಬಾದರಾಯಣ, ನಾರದ, ಶಾಂಡಿಲ್ಯ, ಆಪಸ್ತಂಬ, ಬೋಧಾಯನ, ಗೌತಮ, ಹಾರೀತ, ವಸಿಷ್ಠ, ಗೋಭಿಲ, ಖಾದಿರ, ಉಷಾಣಸ, ಕಾಪೇಯ, ಪಾರಸ್ಕರ, ಲಾಟ್ಯಾಯನ, ದ್ರಾಹ್ಯಾಯಣ ಮೊದಲಾದ ಋಷಿಗಳು ಸೂತ್ರಕಾರರಲ್ಲಿ ಪ್ರಸಿದ್ಧರಾಗಿದ್ದಾರೆ. ಪ್ರಸಿದ್ಧ ಸೂತ್ರಗಳೆಲ್ಲವೂ ಋಗ್, ಯಜುಸ್, ಸಾಮ, ಅಥರ್ವ ವೇದಗಳ ಉಪಶಾಖೆಗಳಿಗೆ ಅನುಗುಣವಾಗಿ ರಚಿತವಾಗಿವೆ. ಈ ಸೂತ್ರ ಸಾಹಿತ್ಯ ನಿರ್ಮಾಪಕರೆಲ್ಲರೂ ಆಯಾ ವೇದ ಸಂಪ್ರದಾಯಗಳ ಅನುಯಾಯಿಗಳಾಗಿದ್ದರು.

'ಪತ್ಯುಕ್ಷಿಪ್ತಮುಖಾನಾಂ ಕಂಠಸೂತ್ರಂ ಬಿಭರ್ತಿ' ಎಂಬುದು ಪುರಾಣ ವಚನ. ನಾರೀಮಣಿಗೆ ಮಂಗಲಸೂತ್ರ ಹೇಗೆ ಶುಭಪ್ರದವೋ ಗ್ರಂಥರಚನೆಗೆ ಸೂತ್ರ ಶೈಲಿಯೂ ಅಷ್ಟೇ ಮಂಗಲಪ್ರದವೆಂಬುದು ಈ ಶ್ಲೋಕದ ಅಭಿಪ್ರಾಯ. ಪ್ರಾಯಶಃ ಈ ದೃಷ್ಟಿಯಿಂದಲೂ ಗ್ರಂಥಕಾರರಲ್ಲನೇಕರು ಸೂತ್ರಶೈಲಿಯನ್ನು ಅನುಸರಿಸಿರಬೇಕು. ಚರಕ, ಸುಶ್ರುತ, ವಾಗ್ಭಟ ಮೊದಲಾದ ಆಯುರ್ವೇದಾಚಾರ್ಯರೂ ಸೂತ್ರರೂಪದಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ. ಸರಿ ಸುಮಾರಾಗಿ ಭಾರತೀಯ ಎಲ್ಲ ಭಾಷೆಗಳಲ್ಲಿ ವ್ಯಾಕರಣ ಮತ್ತು ಛಂದೋಗ್ರಂಥಗಳು ಸೂತ್ರರೂಪವಾಗಿಯೇ ರಚಿತವಾಗಿವೆಯೆಂದು ಹೇಳಬಹುದು.

ಪಾಣಿನಿಯ ವ್ಯಾಕರಣ ಸೂತ್ರಗಳು,[2] ಪತಂಜಲಿಯ ಯೋಗಸೂತ್ರಗಳು, ಜೈಮಿನ್ಯಾಚಾರ್ಯರ ಪೂರ್ವಮೀಮಾಂಸಾ ಸೂತ್ರಗಳು, ಬಾದರಾಯಣ (ವೇದವ್ಯಾಸ) ರಚಿತ ವೇದಾಂತ ಸೂತ್ರಗಳು ಅಥವಾ ಬ್ರಹ್ಮಸೂತ್ರಗಳು.[3] ಕಲ್ಪಸೂತ್ರ ಅಥವಾ ಮಾನವ ಕಲ್ಪಸೂತ್ರಗಳು, ಶ್ರೌತ ಸೂತ್ರಗಳು, ಶುಲ್ಬಸೂತ್ರಗಳು, ಗೃಹ್ಯಸೂತ್ರಗಳು ; ಧರ್ಮಸೂತ್ರಗಳು, ನ್ಯಾಯಸೂತ್ರಗಳು,

---

[1] D F. Mulla, *Principles of Hindu Law* : 'The objective of Sutras or aphorism was to give in a compressive style of composition principles and rules with the utmost brevity. The aphorismic style helped to avoid over-burdening the memory.'

[2] ಪಾಣಿನಿಯ ವ್ಯಾಕರಣ ಸೂತ್ರಗಳನ್ನು ಕುರಿತು ಮಾಕ್ಡೊನೆಲ್, '**A monument of thoroughness and brevity**' ಎಂಬುದಾಗಿ ಹೇಳಿದ್ದಾನೆ.

[3] ನಿರುಪಪದವಾಚ್ಯವಾಗಿ 'ವ್ಯಾಸ' ಎಂದಾಗ 'ದ್ರೌಣಿವ್ಯಾಸ', 'ಕುಮಾರವ್ಯಾಸ' ಮೊದಲಾದವರನ್ನು ಗ್ರಹಣಮಾಡದೆ ವ್ಯಾಸತ್ವವರ್ಗದಲ್ಲಿ ಶ್ರೇಷ್ಠರಾದ ಮಹರ್ಷಿ ವೇದವ್ಯಾಸರನ್ನೇ ಹೇಗೆ ಗ್ರಹಣಮಾಡುವೆವೋ ಹಾಗೆಯೇ ವಿಶೇಷಣ ಉಪಪದವಿಲ್ಲದೆ 'ಸೂತ್ರ' ಎಂದಾಗ ವೇದವ್ಯಾಸ ವಿರಚಿತ 'ಬ್ರಹ್ಮಸೂತ್ರವನ್ನೇ' ಗ್ರಹಿಸಬೇಕೆಂಬುದು ಒಂದು ಶಿಷ್ಟ ಸಂಪ್ರದಾಯ. ಇದು ವೇದಾಂತಸೂತ್ರಗಳ ಮಹತ್ತ್ವವನ್ನು ಸೂಚಿಸುವುದು.

ಭಕ್ತಿಸೂತ್ರಗಳು, ಆಯುರ್ವೇದ ಸೂತ್ರಗಳು, ಇವೇ ಮೊದಲಾದವು ಭಾರತೀಯ ಪ್ರಸಿದ್ಧ ಸೂತ್ರ ಗ್ರಂಥಗಳೆಂದು ಹೇಳಬಹುದು.

ಸೂತ್ರಗಳ ರಚನೆ ಮತ್ತು ಪದವಿನ್ಯಾಸಗಳಲ್ಲಿಯೂ ಸಾಕಷ್ಟು ವೈವಿಧ್ಯ ಕಂಡುಬರುವುದು. ಕೆಲವು ಸೂತ್ರಗಳು ಅತಿಸಂಕ್ಷೇಪವಾಗಿದ್ದರೆ ಇನ್ನು ಕೆಲವು ಸುದೀರ್ಘವಾಗಿವೆ. ಮೇಲಿನ ಪ್ರಸಿದ್ಧ ಸೂತ್ರಗ್ರಂಥಗಳಿಂದ ಕೆಲವು ಸೂತ್ರಗಳನ್ನು ಇಲ್ಲಿ ದೃಷ್ಟಾಂತವಾಗಿ ಉದಾಹರಿಸಬಹುದಾಗಿದೆ.

‘ ಯೋಗಃ ಚಿತ್ತವೃತ್ತಿ ನಿರೋಧಃ ’
‘ ಅಭ್ಯಾಸ ವೈರಾಗ್ಯಾಂ ತನ್ನಿರೋಧಃ’ ಇತ್ಯಾದಿ

—ಪಾತಂಜಲ ಯೋಗಸೂತ್ರ

‘ ಅರ್ಧಮಾತ್ರಾಲಾಘಾ ಪುತ್ರೋತ್ಸವಂ ಮನ್ಯಂತೇ ವೈಯ್ಯಾಕರಣಾಃ ’

—ವ್ಯಾಕರಣಸೂತ್ರ

‘ ಗತಿಸಾಮ್ಯಾನ್ಯಾತ್ ’
‘ ಆನಂದಮಯೋ ಅಭ್ಯಾಸಾತ್ ’
‘ ಸ್ಮೃತೇಶ್ಚ ’ ಇತ್ಯಾದಿ

—ಬ್ರಹ್ಮಸೂತ್ರ

‘ ನಾತಸ್ಮಿನ್ ಪರಮಪ್ರೇಮರೂಪಾ ’
‘ ಅಮೃತಸ್ವರೂಪಾಚ ’
‘ ಮಹತ್ಸಂಗಸ್ತು ದುರ್ಲಭೋಽಗಮ್ಯೋಽಮೋಘಶ್ಚ ’
‘ ದುಸ್ಸಂಗಃ ಸರ್ವಥೈವ ತ್ಯಾಜ್ಯಃ ’
‘ ಅನಿರ್ವಚನೀಯಂ ಪ್ರೇಮಸ್ವರೂಪಮ್ ’
‘ ನಾಸ್ತಿ ತೇಷು ಜಾತಿ-ವಿದ್ಯಾ-ರೂಪ-ಕುಲ-ಧನ ಕ್ರಿಯಾದಿ ಭೇದ ಃ ’ ಇತ್ಯಾದಿ

—ನಾರದೀಯ ಭಕ್ತಿಸೂತ್ರ

‘ ಸಾ ಪರಾನುರಕ್ತಿರೀಶ್ವರೇ ’

—ಶಾಂಡಿಲ್ಯ ಭಕ್ತಿಸೂತ್ರ

‘ ಮಾತರಃ ಪುತ್ರ ಭಾಗಾನುಸಾರೇಣ ಭಾಗಹಾರಿಣ್ಯಃ
ಅನುಢಾಶ್ಯ ದುಹಿತಾರಾಃ’

—ವಿಷ್ಣು ಧರ್ಮಸೂತ್ರ

‘ ಸಾ ವ್ಯವಹಾರಿಕಾ ’

—ಉಶಾನಸ ಧರ್ಮಸೂತ್ರ

‘ ಗರ್ಭಸ್ಯ ಪಿತೃಮಾತೃಜ ರಸಜ ಸತ್ವಜ
ಸಾತ್ಮ್ಯಜಾನಿ ಶರೀರ ಲಕ್ಷಣಾನಿ ’
‘ ಮನಶ್ಚೇಷ್ಟಾ ಪ್ರತ್ಯಯ ಭೂತಮಿಂದ್ರಿಯಾಣಾಮ್ ’

'ರಸಸ್ಯಾಸ್ವಾದಯತ್ಯನೇನೇತಿ ರಸನಂ'
'ವೇಗಾನ್ನಧಾರಯೇತ್'
'ಅಸುತತ್ವಾತ್ ಅಸವಃ'
'ಮರ್ದನಂ ಗುಣವರ್ಧನಮ್' ಇತ್ಯಾದಿ

—ಆಯುರ್ವೇದ ಸೂತ್ರಗಳು

ಪಾಶ್ಚಾತ್ಯರಲ್ಲಿ

ಪಾಶ್ಚಾತ್ಯರಲ್ಲಿ ಗ್ರಂಥರಚನೆಗೆ ಸೂತ್ರಪದ್ಧತಿಯನ್ನು ಬಳಸಿಕೊಂಡವರಲ್ಲಿ ಗ್ರೀಕ್ ತತ್ತ್ವಜ್ಞಾನಿ ಹಿಪಾಕ್ರೇಟಿಸನೇ ಮೊದಲಿಗನೆಂದು ಹೇಳುತ್ತಾರೆ. ಗ್ರೀಕರು ಸೂತ್ರಗಳನ್ನು **Aphorism** ಎಂದು ಕರೆದರು. ಇದು '**Aphorize**' ಎಂಬ ಗ್ರೀಕ್ ಧಾತು ರೂಪದಿಂದ ಬಂದದ್ದು. '**Aphorize**' ಎಂದರೆ ಸಂಗ್ರಹವಾಗಿ, ಸಂಕ್ಷಿಪ್ತವಾಗಿ ಬಂಧುರವಾದ ರೀತಿಯಲ್ಲಿ ವಿಷಯ ನಿರೂಪಣೆ ಮಾಡುವುದು. ಈ ಶೈಲಿಯನ್ನು ಕಾಲಕ್ರಮದಲ್ಲಿ ರೋಮನ್, ಇಂಗ್ಲಿಷ್, ಜರ್ಮನ್ ಮತ್ತು ಅಮೆರಿಕನ್ ಗ್ರಂಥಕರ್ತರು ಬಳಸಿಕೊಂಡಿದ್ದಾರೆ. ಪ್ರಾರಂಭದಲ್ಲಿ, ಅಷ್ಟೊಂದು ಪ್ರಮಾಣ ಪುರಸ್ಸರವಾಗಿ ಹೇಳಬೇಕಾಗಿರದ, ಅಂದರೆ ಕಲೆ, ವ್ಯವಸಾಯ, ವೈದ್ಯಕೀಯ, ರಾಜಶಾಸ್ತ್ರ ಮೊದಲಾದ ವಿಷಯಗಳ ನಿರೂಪಣೆಗೆ ಮಾತ್ರ ಈ ಪದ್ಧತಿಯನ್ನು ಬಳಸಿಕೊಳ್ಳಲಾಗುತ್ತಿತ್ತು. ಬರಬರುತ್ತ ಶಾಸ್ತ್ರೀಯ ಮತ್ತು ವೈಜ್ಞಾನಿಕ ವಿಷಯ ನಿರೂಪಣೆಗೂ ಈ ಪದ್ಧತಿಯನ್ನು ಪಾಶ್ಚಾತ್ಯರು ಬಳಸಿಕೊಳ್ಳಲಾರಂಭಿಸಿದರೆಂದು ಬೇಕನ್ ಮಹಾಶಯ ಸೂಚಿಸಿದ್ದಾನೆ.

ಹಿಪಾಕ್ರೇಟಿಸನ ಗ್ರಂಥಾರಂಭದ ಸೂತ್ರವನ್ನು ಕನ್ನಡದಲ್ಲಿ ಹೀಗೆ ನಿರೂಪಿಸಬಹುದು :

ಆಯುಷ್ಯ ಅತ್ಯಲ್ಪ ; ಕಲೆ ಕ್ಲಿಷ್ಟವಿಷಯ ; ಅವಕಾಶ ದುರ್ಲಭ ; ಪ್ರಯೋಗದಲ್ಲಿಯೇ ಕಾಲಕಳೆಯುವುದು ವಿನಾಶಕಾರಿ ; ಪ್ರತಿಯೊಂದಕ್ಕೂ ಕಾರಣ ಹುಡುಕುವುದು ಕಷ್ಟಸಾಧಕ ; ಯುಕ್ತವಾದುದನ್ನು ಕೂಡಲೇ ಮಾಡಬೇಕು.'[1] ಇತ್ಯಾದಿ.

ಪಾರಿಸಿಕ ಕಾವ್ಯ ಪ್ರಪಂಚದಲ್ಲಿ. ಘನತೆವೆತ್ತ ಉಮರಖಯ್ಯಾಮನ 'ಆಯುವೆಂಬಾ ಪಕ್ಕಿ ಪಾರ್ವ ದೂರವು ಕಿರಿದು " ಎಂಬುದರ ಮೂಲ ಪರ್ಶಿಯನ್ ಉಕ್ತಿಯೂ ಸೂತ್ರರೂಪವಾಗಿದೆಯೆಂದು ಹೇಳಬಹುದು. ಪರ್ಶಿಯನ್ ಸಾಹಿತ್ಯಕ ಸೂತ್ರ ಶೈಲಿ ಹೊಸದೇನಲ್ಲ.

ಲ್ಯಾಟಿನ್ ಭಾಷೆಯಲ್ಲಿರುವ 'ಸೊಲಾರ್ನೊ' ರಚಿತ ಗ್ರಂಥವೇ ಪಾಶ್ಚಾತ್ಯ ಸೂತ್ರ ಗ್ರಂಥಗಳಲ್ಲಿ ಮಹತ್ವದ್ದೆಂದು ತಜ್ಞರು ಅಭಿಪ್ರಾಯಪಡುತ್ತಾರೆ. ಸೊಲಾರ್ನೊ ಗುಂಪಿಗೆ ಸೇರಿದ ವೈದ್ಯ ವಿಜ್ಞಾನಿ ಜೊನೆಸ್ ಮೆಡಿಟ್ಯಾನೋ ಎಂಬಾತ ತನ್ನ ಗುಂಪಿನವರ ಸಂಪ್ರದಾಯಗಳನ್ನು ಈ ಗ್ರಂಥದಲ್ಲಿ ಸೂತ್ರೀಕರಿಸಿದ್ದಾನೆಂದು ಪ್ರತೀತಿ. ಇದು ಹನ್ನೊಂದನೆಯ ಶತಮಾನದ ಕೃತಿಯೆಂದು ಹೇಳುತ್ತಾರೆ.

---

[1] ಇದು 'ಅನಂತ ಶಾಸ್ತ್ರಂ ಬಹುಬೋಧಿತವ್ಯಂ
ಸ್ವಲ್ಪಶ್ಚಕಾಲೋಬಹವಶ್ಚವಿಘ್ನಾಃ
ಯತ್ಸಾರಭೂತಂ ತದುಪಾಸಿತವ್ಯಮ್' ಎಂಬ ಭಾರತೀಯ ಸೂತ್ರಕ್ಕೆ ಅರ್ಥದಲ್ಲಿ ಸಮೀಪಗತವಾಗಿದೆಯೆಂದು ಹೇಳಬಹುದು.

ಡೆಚ್‌ಮನ್ ಬೋಯರ್ ಪ್ರಾಪ್ ಎಂಬಾತ ರಚಿಸಿದ ಮತ್ತೊಂದು ಸೂತ್ರಗ್ರಂಥವೂ ಪಾಶ್ಚಾತ್ಯ ಸಾಹಿತ್ಯವಲ್ಲಿ ಪ್ರಸಿದ್ಧವಾಗಿದೆ. ಇದು 1709ರಲ್ಲಿ ಪ್ರಕಟವಾಯಿತೆಂದು ಹೇಳುತ್ತಾರೆ. ಇದು ಕೂಡ ವೈದ್ಯಶಾಸ್ತ್ರವನ್ನೇ ಕುರಿತದ್ದೆಂದು ಕಂಡುಬರುವುದು. ಶೈಲಿ ಕ್ಲಿಷ್ಟವಾಗಿದೆ ಮತ್ತು ಇದು ವೈದ್ಯಶಾಸ್ತ್ರಾಭ್ಯಾಸಿಗಳಿಗೆ ಕುತೂಹಲಕಾರಿಯಾಗಿದೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಹತ್ತೊಂಬತ್ತನೆಯ ಶತಮಾನದ ಮತ್ತೊಂದು ಪ್ರಸಿದ್ಧ ಸೂತ್ರಗ್ರಂಥವೆಂದರೆ ಜರ್ಮನ್ ತತ್ತ್ವಜ್ಞಾನಿ ಫ್ರೆಡರಿಕ್ ನೀಷೆ ರಚಿಸಿದ 'ವಿಲ್ ಟು ಪವರ್' ಎಂಬುದು. ಇದು 400 ಸೂತ್ರಗಳಿಂದ ಕೂಡಿದ ಅವನ ಮೇರು ಕೃತಿಯೆಂದೂ ಮಹಾಕ್ರಾಂತಿಕಾರಿ ಸಾಹಿತ್ಯವರ್ಗಕ್ಕೆ ಸೇರಿದ್ದೆಂದೂ ಹೇಳಬಹುದು. ಹತ್ತೊಂಬತ್ತನೆಯ ಶತಮಾನದ ಅಮೆರಿಕನ್ ಖ್ಯಾತ ತತ್ತ್ವಜ್ಞಾನಿ ಜಾನ್‌ಸನ್ ಅಲೆಗ್ಸಾಂಡರ್ ಬ್ರಯಾನ್ ಎಂಬಾತ ತನ್ನ ' ಟ್ರೀಟೈಸ್ ಆನ್ ಲ್ಯಾಂಗ್ವೇಜಸ್ ' ಎಂಬ ಗ್ರಂಥವನ್ನು ಸೂತ್ರ ರೂಪವಾಗಿಯೇ ರಚಿಸಿದ್ದಾನೆಂದೂ ತಿಳಿದು ಬರುವುದು.[5]

[5] ಉದಾ : The heathens make graven images· we make verbal ones ; and the heathens worship not more ardently the work of their hands than the work of our pens·"

Treatise on Languages

ಅನೇಕ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ ನಮಗಿರುವ ವಿಷಯಮೂಲಗಳು ಮುಖ್ಯವಾಗಿ ಸೂತ್ರಗಳು. ಕ್ರಿಸ್ತಯುಗಕ್ಕೆ ಕೆಲವು ಶತಮಾನಗಳ ಹಿಂದೆಯೇ ಭಾರತದಲ್ಲಿ ಬೆಳೆದಿದ್ದ ಅನನ್ಯ ದ್ವಾರ ಸಾಹಿತ್ಯರೂಪ ಈ ಸೂತ್ರಗಳು. ಆಗಿನ್ನೂ ಸಾಹಿತ್ಯದ ಉದ್ದೇಶಗಳಿಗೆ ಬರವಣಿಗೆಯನ್ನು ಬಳಸುತ್ತಿರಲಿಲ್ಲ. ಆದ್ದರಿಂದ ಸಮಸ್ತ ಜ್ಞಾನವನ್ನೂ ನೆನಪಿನ ಮೂಲಕವೇ ರಕ್ಷಿಸಬೇಕಾಗಿತ್ತು. ಸೂತ್ರಗಳು ಅತ್ಯಂತ ಸಂಕ್ಷಿಪ್ತ ರೂಪದಲ್ಲಿದ್ದು ವಿವರಣೆಯಿಲ್ಲದೆ ಅರ್ಥಮಾಡಿಕೊಳ್ಳುವುದು ಅತಿ ಕಠಿಣವಾಗುತ್ತದೆ. ಮೂಲತಃ ಅವುಗಳನ್ನು ಗುರುವು ಶಿಷ್ಯನಿಗೆ ಅವುಗಳ ಪ್ರಮಾಣಬದ್ಧ ವಿವರಣೆಗಳೊಂದಿಗೆ ಮುಖತಃ ಕಲಿಸುತ್ತಿದ್ದನು. ಅವು (ಬರವಣಿಗೆಗೆ ಇಳಿದದ್ದು) ಬಹಳ ಕಾಲಾನಂತರ. ಕಾಲಕ್ರಮದಲ್ಲಿ ಹೆಚ್ಚು ಕಡಮೆ ವ್ಯತ್ಯಾಸಗೊಂಡಿದ್ದ ವ್ಯಾಖ್ಯಾನಗಳನ್ನು ಆಗ ಒಂದು ರೂಪಕ್ಕೆ ತಂದು ಭಾಷ್ಯಗಳು ಎಂಬ ಹೆಸರಿನಲ್ಲಿ ಬರೆದಿಟ್ಟರು. ಅವನ್ನು ಬರೆದದ್ದು ಸಾಮಾನ್ಯರ ಭಾಷೆಯಲ್ಲಿ ಅಥವಾ ದೇಶಭಾಷೆಯಲ್ಲಿ, ಎಂದರೆ ವೈದಿಕಸಂಸ್ಕೃತವಲ್ಲದ ಸಾಮಾನ್ಯ ಸಂಸ್ಕೃತದಲ್ಲಿ. ಇಂತಹ ಸೂತ್ರರೂಪದ ಸಾಹಿತ್ಯ, ಅದರ ಅಗತ್ಯ ಮುಗಿದ ಬಹಳ ಕಾಲದ ಬಳಿಕವೂ ಸೃಷ್ಟಿಯಾಗುತ್ತಲೇ ಹೋಯಿತು. ಪ್ರಾಚೀನವಾದ ಕಲ್ಪಸೂತ್ರಗಳಂತಹವಲ್ಲದ ಅನೇಕ ತಾತ್ತ್ವಿಕ ಸೂತ್ರಗಳಲ್ಲಿ ಕೆಲವು ಈ ಕಾಲಕ್ಕೆ ಸೇರಿದವು. ಸಾಮಾನ್ಯವಾಗಿ ಕ್ರಿ. ಶ. 200-500 ಅವಧಿಯಲ್ಲಿ ಅವು ರಚಿತವಾದುವು ಎನ್ನುತ್ತಾರೆ. ಆದರೆ ಅವು ಮಂಡಿಸುವ ಸಿದ್ಧಾಂತಗಳೇ ಅಷ್ಟು ಈಚಿನವು ಎಂಬುದು ಅದರರ್ಥವಲ್ಲ ಎಂದು ನೆನಪಿಡಬೇಕಾದದ್ದು ಅತಿ ಮುಖ್ಯ. ಅವುಗಳನ್ನು ಮೊದಲು ನಿರೂಪಿಸಿದ ಗೌತಮ ಮತ್ತು ಕಪಿಲ ಮುಂತಾದವರನ್ನು ಋಷಿಗಳೆಂದು ಕರೆದಿರುವುದರಿಂದ, ಆ ಸಿದ್ಧಾಂತಗಳು ಎಷ್ಟು ಪ್ರಾಚೀನವಾದುವು ಎಂಬುದು ಗೊತ್ತಾಗುತ್ತದೆ....ಒಂದು ಅರ್ಥದಲ್ಲಿ ಸೂತ್ರಗಳು ದರ್ಶನಗಳ ಆರಂಭದ ಹಂತವನ್ನು ನಿರೂಪಿಸುತ್ತಿದ್ದರೂ ವಾಸ್ತವವಾಗಿ, ದೀರ್ಘವಾದ ಒಂದು ಅವಧಿಯಲ್ಲಿ ಅವು ಬೆಳೆದಿವೆ ಎಂಬುದನ್ನು ಸೂಚಿಸುತ್ತವೆ. ದರ್ಶನಗಳ ನಿಜವಾದ ಪ್ರಾಚೀನತೆಯನ್ನು ಈ ಸೂತ್ರಗಳು ಸರಿಯಾಗಿ ಹೇಳದಿದ್ದರೂ ಅವು ಮೊಟ್ಟಮೊದಲಿಗೆ ಸೂತ್ರೀಕೃತವಾದ ಕಾಲದ ಅನಂತರ ಆಚಾರ್ಯರು, ಭಾಷ್ಯಕಾರರುಗಳಿಂದ ಪರಿಷ್ಕಾರಗೊಂಡಿದೆ... ಸೂತ್ರಗಳ ಉದ್ದೇಶ ದ್ವಿಮುಖವಾದದ್ದು ಎನ್ನಬಹುದು. ಅವು ಬೋಧಿಸುವ ನಿರ್ದಿಷ್ಟ ಸಿದ್ಧಾಂತವನ್ನು ಪ್ರತಿಷ್ಠಾಪಿಸುವುದು ಒಂದು. ಅವುಗಳೊಂದಿಗೆ ಹೊಂದದ ಉಳಿದ ಎಲ್ಲ ಸಿದ್ಧಾಂತಗಳನ್ನೂ ಖಂಡಿಸುವುದು ಇನ್ನೊಂದು. ಹೀಗೆ ಅವು ವಿಮರ್ಶಾತ್ಮಕವೂ ಆಗಿವೆ, ರಚನಾತ್ಮಕವೂ ಆಗಿವೆ. ಒಂದು ಸಿದ್ಧಾಂತದ ಸಾಹಿತ್ಯ ಎಂದರೆ ಸೂತ್ರಗಳು, ಅವುಗಳನ್ನು ಕುರಿತ ಒಂದು ಅಥವಾ ಹೆಚ್ಚಿನ ಭಾಷ್ಯಗಳು, ಭಾಷ್ಯಗಳನ್ನೇ ವಿವರಿಸುವ ವ್ಯಾಖ್ಯಾನಗಳು ಮತ್ತು ಪ್ರಕರಣ ಗ್ರಂಥಗಳು. ಇವು ಗದ್ಯ ಅಥವಾ ಪದ್ಯ ಅಥವಾ ಎರಡರಲ್ಲೂ ಇದ್ದು ಈ ಸಿದ್ಧಾಂತದ ಉದ್ಧೃತ ಮುಖಗಳನ್ನು ಕುರಿತು ವಿವೇಚಿಸುತ್ತವೆ. ಪ್ರತಿಯೊಂದು ಸಂದರ್ಭದಲ್ಲೂ ಈ ಸಾಹಿತ್ಯವು, ಸೂತ್ರಗಳು ರಚಿತವಾದ ಸ್ವಲ್ಪ ಕಾಲದ ಬಳಿಕ ಆರಂಭವಾಗಿ ಈಗ್ಗೆ ಒಂದೆರಡು ಶತಮಾನದ ಹಿಂದಿನವರೆಗೂ ಮುಟ್ಟುವ ದೀರ್ಘ ಅವಧಿಗೆ ಸೇರಿದವು.[1]

---

1 ಎಂ. ಹಿರಿಯಣ್ಣ : 'ಭಾರತೀಯ ತತ್ತ್ವಶಾಸ್ತ್ರದ ರೂಪುರೇಷೆಗಳು' (ಅನು : ಡಾ ಪ್ರಭುಶಂಕರ), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ. ಪು. ೧೯೪-೯

ಸೀತಾರಾಮ ಜಾಗೀರ್‌ದಾರ್

ಘಟಾಂತಕಿಯ ಬಸದಿಗಳು ಹಾಗೂ ಘಟಾಂತಿಕೆ

ಕನ್ನಡನಾಡಿನಲ್ಲಿ ಜೈನಧರ್ಮ ಸು. ೧೨ನೆಯ ಶತಮಾನದ ವರೆಗೆ ಒಂದು ಪ್ರಬಲಧರ್ಮವೇ ಆಗಿತ್ತು. ಊರೂರಿಗೆ ಹೋದಲ್ಲೆಲ್ಲ ಜಿನಬಸದಿಗಳನ್ನು ಕಾಣಬಹುದಾಗಿತ್ತು. ಈ ವಿಷಯವನ್ನು ಶಾಸನಪದ್ಯವೊಂದು ಸೊಗಸಾಗಿ ವರ್ಣಿಸಿದೆ :

ಜಿನಧರ್ಮಾವಾಸಮಾದತ್ತಮಳ ವಿನಯದಾಗಾರಮಾದತ್ತು ಪದ್ಮಾ
ಸನನಿರ್ಪಾ ಪದ್ಮಮಾದತ್ತತಿವಿಶದ ಯಶೋಧಾಮಮಾದತ್ತು ವಿದ್ಯಾ
ಧನಜನ್ಮಸ್ಥಾನಮಾದತ್ತಸಮತರಳ ಗಂಭೀರ ಸದ್ಗೇಹಮಾದ
ತ್ತೆನಿಸಲ್ಕಿಂತುಳ್ಳ ನಾನಾಮಹಿಮೆಯೊಳೆಸೆಗುಂ ಚಾರು ಕರ್ನಾಟದೇಶಂ ‖[1]

ಹೀಗೆ ‘ಕರ್ಣಾಟ ದೇಶ’ದಲ್ಲಿ ಜೈನಧರ್ಮ ಪಸರಿಸಲು ಜೈನಯತಿಗಳು ಒಂದು ಪಕ್ಷವಾದರೆ ಅದರ ಅನುಯಾಯಿಗಳು ಇನ್ನೊಂದು ಪಕ್ಷ. ಜೈನಯತಿಗಳು ವಾಗ್ಧಾರೆಯಿಂದ ಜೈನಧರ್ಮವನ್ನು ಹಬ್ಬಿಸಿದರು ; ಅನುಯಾಯಿಗಳು ಜಿನಾಲಯಗಳನ್ನು ಕಟ್ಟುವುದರ ಮೂಲಕ ಅದನ್ನು ಅಲ್ಲಲ್ಲಿ ಸ್ಥಿರವಾಗಿ ನಿಲ್ಲಿಸಿದರು. ‘ಚೈತ್ಯನಿರ್ಮಾಣ, ಸಾಹಿತ್ಯನಿರ್ಮಾಣ–ಇವು ಪ್ರಾರಂಭದಲ್ಲಿ ಆತ್ಮೋದ್ಧಾರಕ್ಕೆ ಸಾಧನಗಳಾದುವು’[2]. ಮಧ್ಯಕಾಲದಲ್ಲಿ ಈ ಆತ್ಮೋದ್ಧಾರ ಕಾರ್ಯದಲ್ಲಿ ‘ಘಟಾಂತಕಿ’ಯ ಬಸದಿಗಳಿಗೊಂದು ವಿಶೇಷಸ್ಥಾನವಿದ್ದಿತು.

ಕರ್ನಾಟಕ ಪ್ರಾಂತದಲ್ಲಿ ‘ಘಟಾಂತಕಿ’ ದೇವಿಯ ಬಸದಿಗಳು ಸಹಸ್ರದ ಮೇಲೆ ಇದ್ದುವು. ಆದರೆ ಈಗ ಅವುಗಳಲ್ಲಿ ಹಲವು ಇಲ್ಲದಂತಾಗಿವೆ. ನಮ್ಮ ಗಮನಕ್ಕೆ, ಬೆಳಕಿಗೆ, ಮಾತ್ರ ಮೂರು ಬಸದಿಗಳ ವಿಷಯ ಬಂದಿದೆ. ಸಂಶೋಧನೆಯಲ್ಲಿ ಮಿಕ್ಕವೂ ಹೊರಕ್ಕೆ ಬರಬಹುದು. ಆ ಮೂರು ಇಂತಿವೆ :

1 ಧಾರವಾಡ ಜಿಲ್ಲೆಯ ಗದಗ ತಾಲೂಕಿನ ಲಕ್ಕುಂಡಿಯಲ್ಲಿ ಜೈನಬಸದಿಯ ಮುಂದೆ ಒಂದು ಶಿಲಾಶಾಸನವನ್ನು ನೆಟ್ಟಿದೆ; ಅದರಲ್ಲಿ ಹೀಗಿದೆ: “ಆ ಬಸದಿಯ ಪ್ರತಿಬದ್ಧ ವಪ್ಪ ತೋಂಟದ ಘಟಾಂತಿಕೆಯ ಬಸದಿಯ ಪಾರ್ಶ್ವ ದೇವಗ್ಗೆ ನಡವ [ಪ್ರಟ್ಟಿ] ಮೂನೂಜು ‖ ಈ ತೋಂಟಮ ನಾರೊಬ್ಬರು ಮಾಡಿದವರು ಪ್ರಷ್ಪಮಂ ನಡೆಸುವರು ‖ ”[3] ಈ ಶಾಸನದಲ್ಲಿ ಈ ಬಸದಿಯನ್ನು

---

1 ರಾ. ನರಸಿಂಹಾಚಾರ್, ‘ಶಾಸನ ಪದ್ಯಮಂಜರಿ’ ಪದ್ಯ. ೧೨೪

2 ‘ಕನ್ನಡ ಸಾಹಿತ್ಯ’ ಚರಿತ್ರೆ (ಕ. ಅ. ಸಂ.) (1974), ಸಂಪುಟ ೧, ಪು. ೫೧೨

3 (a) *B. K. I.*, Vol. I (S.I. I. XI) pt. I, No. 177, lines 87–88

(b) ‘ಕನ್ನಡಶಾಸನಸಂಪದ’, ಲಕ್ಕುಂಡಿಶಾಸನ, ಪು. ೨೯

1007ರಲ್ಲಿ ಮಾಡಿದಂತೆ ತಿಳಿದು ಬರುತ್ತದೆ. ಲಕ್ಕುಂಡಿಯಲ್ಲಿನ ಈ ಬಸದಿಯನ್ನು ಆಗಾಗ ಶಿಥಿಲವಾದಾಗ ಭರತ, ನಾಕಿ ಹಾಗೂ ಸಿರಿಪಾಳ ಇವರು ಜೀರ್ಣೋದ್ಧಾರ ಮಾಡಿದರು. ಸಿರಿಪಾಳನಿಂದ ಆ ಕೆಲಸ ಸಂಪೂರ್ಣ ಆಯಿತು ಎಂದು ಮುಂತಾಗಿ ಬರೆದಿದೆ.[4]

2 ಅದೇ ಜಿಲ್ಲೆಯ ನವಲ್ಗುಂದ ತಾಲೂಕಿನ 'ಮೊರಬ' ಗ್ರಾಮದಲ್ಲಿ 'ಘಟಾಂತಕಿ'ಯ ಬಸದಿ ಇದ್ದುದಾಗಿ ಅಲ್ಲಿಯ ಎರಡು ಶಾಸನಗಳಿಂದ ತಿಳಿದುಬರುತ್ತದೆ.

i ಕಲ್ಲೇಶ್ವರ ದೇವಾಲಯದ ಮುಂದೆ ನೆಟ್ಟ ಕಲ್ಲಿನಲ್ಲಿರುವ ಶಾಸನದಲ್ಲಿ ದಾನಬಿತ್ತ ಭೂಮಿಯ ವಿವರಣೆಯಲ್ಲಿ 'ಘಟಾನ್ತಕಿ ಬಸದಿಯ' ಪ್ರಸ್ತಾಪವಿದೆ–"ಸೀಮೆಯೂರಿಂ ತೆಂಕ ಘಟಾನ್ತಕಿಯ ಬಸದಿಯ ದಾನಶಾಲೆಯ . . . ." ಇತ್ಯಾದಿ.[5] ಇದಕ್ಕಿಂತ ಹೆಚ್ಚಿಗೆ ಇದರ ಬಗ್ಗೆ ಏನೂ ಬರೆದಿಲ್ಲ.

ii ಹನುಮಂತದೇವರ ಗುಡಿಯಲ್ಲಿ ನಿಂತಿರುವ ಶಿಲಾಶಾಸನ. ಇದು ಜೈನಧರ್ಮದ ಅಭ್ಯಾಸಿಗಳಿಗೆ ಮಹತ್ವದ್ದಾಗಿದೆ. ಈ ಶಾಸನದ ಪ್ರಕಾರ, "ಶ್ರೀಮನ್ನಾಗಚಂದ್ರ ಸಿದ್ಧಾನ್ತ ದೇವರ್ಮ್ಮರಮ್ಬದ ಘಟಾನ್ತಕಿಯ ಬಸದಿಯೊಳ್ ಸನ್ಯಸನ ವಿಧಿಯಿಂ ಮುಡಿಪಿ ಸ್ವರ್ಗ್ಗಸ್ಥರಾದರ್ . . . ." . . . . ಇತ್ಯಾದಿ. ಈ ನಾಗಚಂದ್ರನ ಕೀರ್ತಿ–ಯಶಸ್ಸು ವಿಶೇಷ ವಾಗಿತ್ತು :

ಸುರಗಜದ ರಜತ ಶೈಳದ ।
ಶರದಭ್ರದ ಧವಳ ಪುಣ್ಡರೀಕದ ಶುಂಭದ್ ।
ಹರಹಾಸದ ಬೆಳ್ಪನದಃ
ಕರಿಪುದು ಶ್ರೀನಾಗಚಂದ್ರ ಮುನಿಪತಿಯ ಯಶ ॥[6]

ಆತ 'ಸಿದ್ಧಾಂತಾದಿ ಸಮಸ್ತಶಾಸ್ತ್ರ ನಿಪುಣ, ಜ್ಯೋತಿರ್ವಿದ್ವಾನ್, ಹೋರಾಶಾಸ್ತ್ರವಿಶಾರದ, ಮಂತ್ರ ಚೂಡಾಮಣಿ, ಬ್ರಹ್ಮರಾಕ್ಷಸಭಯಂಕರ' ಆಗಿದ್ದು ಯಾಪನೀಯ ಸಂಘದ ಮೈಲಾಪತೀರ್ಥದ ಕಾರೆಯ ಗಣದ ಜಯಕೀರ್ತಿಯತಿಯ ಶಿಷ್ಯನೂ ಆಗಿದ್ದ. ಎಂದರೆ ಆತನೂ ಯಾಪನೀಯ ಸಂಘಕ್ಕೆ ಸಂಬಂಧಪಟ್ಟಿದ್ದ. ಎನ್ನುವುದು ಸ್ಪಷ್ಟ. ಈ ನಾಗಚಂದ್ರ ಸಮಾಧಿಮರಣ ಹೊಂದಿದ. ಆ ಘಟಾಂತಕಿಯ ಬಸದಿ ಯಾಪನೀಯ ಸಂಘಕ್ಕೆ ಸಂಬಂಧಪಟ್ಟಿತ್ತು ಎಂದು ಸ್ವಯಂವ್ಯಕ್ತವಾಗುತ್ತದೆ. ಏಕೆಂದರೆ ಯಾಪನೀಯರು ವಿಶೇಷವಾಗಿ ಜಿನಬಸದಿಗಳಲ್ಲಿ ಸ್ಥಾನಿಕರಾಗಿ ನಿಲ್ಲುವುದು

---

4 ಅದೇ, ಪಂಕ್ತಿ ೮೫ ರಿಂದ ೮೭

5 *B.K.I.* Vol. I, pt. II, No.124

6 ಈ ಕಂದಪದ್ಯದ ನಾಲ್ಕನೆಯ ಪಾದ, ಚತುರ್ಮಾತ್ರಾ ಗಣ ಲೆಕ್ಕದ ದೃಷ್ಟಿಯಿಂದ ಗಮನಾರ್ಹವಾಗಿದೆ.

ರೂಢಿ[7]. ಈ ಶಾಸನದ ಕಾಲ ಶಕವರ್ಷ ೯೮೧, ವಿಕಾರಿ, ಕಾರ್ತಿಕ ಶುದ್ಧ ೨ ಬುಧವಾರ (10-11-1059).

3 ಮೂರನೆಯ ' ಘಟಾಂತಕಿಯ ಬಸದಿ' ನಂಜನಗೂಡು ತಾಲ್ಲೂಕಿನ ಕಣೆನೂರು ಎಂಬ ಗ್ರಾಮದಲ್ಲಿ ಇದ್ದುದಾಗಿ ಇತ್ತೀಚೆಗೆ ದೊರೆತ ಶಾಸನವೊಂದರಿಂದ ತಿಳಿದುಬರುತ್ತದೆ : ಕಣೆಯಲೂರಲು ಓಂದೆ ಘಟಂತಕಿ ದೇವಿಯರು ಎತ್ತಿಸಿದ ಬಸದಿಯ ಆದಿನಾಥ ಸ್ವಾಮಿಗಳ ದಿಬ್ಯ ತೀರ್ತ್ಥಕ್ಕೆ......ಇತ್ಯಾದಿ. ಇದರ ಕಾಲ ಶಕವರ್ಷ ೧೨೬೦, ಈಶ್ವರ, ವೈಶಾಖ ಶುದ್ಧ ೫ ಬ್ರಿಹವಾರ (6-4-1337)[8].

ಈ ಬಸದಿ ಇದ್ದುದಕ್ಕೆ ಈ ಶಾಸನ ಹಾಗೂ ಅಲ್ಲಿ ಇರುವ ಈ ಗಣ ಬಸವೇಶ್ವರ ದೇವಸ್ಥಾನದ ಬಳಿ ಬಿದ್ದಿರುವ ಭಗ್ನ ಆದಿನಾಥನ ಮೂರ್ತಿಗಳೇ ಸಾಕ್ಷಿ. ಆ ಬಸದಿಯ ಕಟ್ಟಡದ ಕಲ್ಲುಗಳೂ ಬಸವೇಶ್ವರ ದೇವಸ್ಥಾನದ ಅಕ್ಕಪಕ್ಕದಲ್ಲಿ ಬಿದ್ದಿದ್ದು ಅದರ ಸ್ಮಾರಕಗಳಾಗಿವೆ. ಈಗಣ ಚಿಕ್ಕ ಗ್ರಾಮ ಕಣೆನೂರು ಒಂದೊಮ್ಮೆ 'ಪೆರ್ಗ್ಗಣೆಯ' ಆಗಿತ್ತು. ಗಂಗರ ಕಾಲದಿಂದಲೂ ಅದು ಪ್ರಸಿದ್ಧ ಹಾಗೂ ಪ್ರಮುಖ ಸ್ಥಳವೂ ಆಗಿತ್ತು[9]. ೧೨೬೦ರ ಶಾಸನದಿಂದ 'ಘಟಂತಕಿ ದೇವಿ ಎತ್ತಿಸಿದ—ಎಂದರೆ ಮಾಡಿಸಿದ ಬಸದಿ ತತ್ಪೂರ್ವದಲ್ಲಿ ನಿರ್ಮಾಣಗೊಂಡಿತ್ತು ಎಂಬುದು ಖಚಿತ ಸಂಗತಿ ಆಗಿದ್ದು ಅದು ಯಾವಾಗ ಎಂಬುದಕ್ಕೆ ಸ್ಪಷ್ಟ ತೇದಿಯುಳ್ಳ ದಾಖಲೆಗಳು ಇನ್ನೂ ಹೊರ ಬಿದ್ದಿಲ್ಲ. ಮತ್ತೆ ಈ ಬಸದಿಯ ಬಗ್ಗೆ ಹೆಚ್ಚಿನ ಮಾಹಿತಿಯೂ ಸದ್ಯ ದೊರೆಯುತ್ತಿಲ್ಲ.

ಈ ಮೂರು ' ಘಟಾನ್ತಕಿಯ ಬಸದಿ' ಗಳನ್ನು ಗಮನಕ್ಕೆ ತಂದುಕೊಂಡರೆ ಅವು ಕನ್ನಡ ನಾಡಿನ ವಿವಿಧ ಭಾಗಗಳಲ್ಲಿ ಹರಡಿಕೊಂಡಿದ್ದುವೆಂದು ಖಚಿತವಾಗಿ ಹೇಳಬಹುದು; ಮತ್ತು ಜೈನರ ಹಲವು ಪಂಗಡಗಳಿಗೆ ಸಂಬಂಧಪಟ್ಟಿದ್ದುವೆಂದೂ ತಿಳಿಯಬಹುದು.

ಈ ಘಟಾಂತಕಿಯ ಬಸದಿಗಳನ್ನು ಯಾರು ಕಟ್ಟಿಸಿದರು ಎಂಬ ಪ್ರಶ್ನೆ ಏಳುವುದು ಸಹಜ. ಅದಕ್ಕೆ ಉತ್ತರ ಹುಡುಕುವುದು ಮತ್ತು ಅದರ ಮೂಲಚೂಲಗಳ ಬಗ್ಗೆ ಇನಿತು ವಿಚಾರ ಮಾಡುವುದು ಈ ಲೇಖನದ ಉದ್ದೇಶ.

ಧಾರವಾಡ ತಾಲ್ಲೂಕಿನ ಮುಗುದ ಗ್ರಾಮದಲ್ಲಿ ದೊರಕಿದ ಶಾಸನವೊಂದರಲ್ಲಿ ಮಹಾ ಸಾಮನ್ತ ದಂಡನಾಯಕ ಮಾರ್ತಂಡನ ಹೆಂಡತಿಯನ್ನು 'ಘಟಾನ್ತಕಿ' ಎಂದು ವರ್ಣಿಸುತ್ತಿದ್ದುದಾಗಿ ಹೇಳಿದೆ :

---

7 Dr. A. N. Upadhye, More Light on The Yapaniya Sangha, A Jaina Sect, *Annals of the Bhandarkar Oriental Research Institute*, Vol. LV, p. 18 (1974)

8 *Ep. Car.*, Vol. III (1974), ನಂಜನಗೂಡು, ನಂ. 146

9 (a) ಅದೇ, ಪಂಕ್ತಿ 7

(b) ಅದೇ ಗ್ರಂಥ, ನಂಜನಗೂಡು, ನಂ. 147

ಒದವಿದ ಸದ್ಗುಣ ಪ್ರಬಳ ಸಂಪತಿಯಿಂ ಬಗೆಯಲ್ಕೆ ಸೀತೆಯೆಂ
ಬುದು ಗಿರಿಜಾತೆಯೆಂಬುದು ಸರಸ್ವತಿಯೆಂಬುದು ಕೊನ್ತಿ ಮದ್ರಿಯೆಂ
ಬುದು ಸಲೆಗಂಗೆಯೆಂಬುದು ಸುಳೋಚನೆಯೆಂಬುದು ಭೂಮಿದೇವಿಯೆಂ
ಬುದು ವುಶಾದೇವಿಯೆಂಬುದು ಘಟಾನ್ತ್ರಕಿಯೆಂಬುದು ಗೊಜ್ಜಿಯಕ್ಕನಂ ॥[10]

ಇಲ್ಲಿನ ‘ ಘಟಾನ್ತ್ರಕಿ ’ಯನ್ನು ದೇವತೆ ಎಂದು ಆ ಶಾಸನದ ಸಂಪಾದಕರು ವಿವರಿಸಿದ್ದಾರೆ.[11] ಇದರ ಕಾಲ 1125 (ಶಾ. ಶ. 1047, ಪುಷ್ಯ. ಶು 5) ಎಂಬುದನ್ನು ಮನದಂದರೆ ದೇವತೆ ಎಂದು ವಿವರಿಸುವುದಕ್ಕಿಂತ “ ದಾನಚಿಂತಾಮಣಿ ಅತ್ತಿಮಬ್ಬೆ ” ಎಂದು ವಿವರಿಸುವುದು ಹೆಚ್ಚು ಸಮಂಜಸವೆಂದು ನನಗೆ ತೋರುತ್ತದೆ. ಏಕೆಂದರೆ ‘ಘಟಾನ್ತ್ರಕಿ’ ಎಂಬುದು ಅತ್ತಿಮಬ್ಬೆಯ ಬಿರುದುಗಳಲ್ಲೊಂದು ; ಬ್ರಹ್ಮಶಿವ ಆಕೆಯನ್ನು ವರ್ಣಿಸುತ್ತ ಹೀಗೆ ಹೇಳಿದ್ದಾನೆ :

ಅಕಳಂಕ ಚರಿತೆ ಜಿನಚರ
ಣ ಕಂಜಕಿಂಜಲ್ಕ ಪುಂಜರಂಜಿತ ತನು ಸ—॥
ರ್ವ್ವ ಕಳಾವಿದೆ ಶೌಚಿ ಘಟಾಂ
ತಿಕೆ ದಾನವಿನೋದೆಯೆಂಬ ಬಿರುದಿಂ ನೆಗಳ್ದಳ್ ॥[12]

ಈ ಘಟಾನ್ತ್ರಕಿ, ಘಟಾಂತಿಕೆ, ಘಟಂತಿಕೆ—ಎಂಬ ಬಿರುದಿನ ದಾನಚಿಂತಾಮಣಿ ಅತ್ತಿಮಬ್ಬೆ, ತನ್ನ ಒಳ್ಗುಣಗಳಿಂದ, ಶುದ್ಧ ಚಾರಿತ್ರದಿಂದ ಜೈನಧರ್ಮದಲ್ಲಿ ನಿಷ್ಠೆಯಿಂದ ಬಾಳಿದ ಘನವ್ಯಕ್ತಿ ಎನಿಸಿಕೊಂಡಳು. ಪೊನ್ನನ ಶಾಂತಿಪುರಾಣದ ಸಾವಿರ ಪ್ರತಿಗಳನ್ನು ಮಾಡಿಸಿ ಹಂಚಿದಳು.[13] ಅದೇ ಪ್ರಕಾರ ಆಕೆ ನಾಡಿನಲ್ಲಿ ಸಾವಿರದ ಐನೂರು ಬಸದಿಗಳನ್ನು ಕಟ್ಟಿಸಿದುದಾಗಿ ರನ್ನ ಕವಿಯ “ ಅಜಿತ ತೀರ್ಥಕರ ಪುರಾಣ ತಿಲಕಂ ” ಗ್ರಂಥದಿಂದ ತಿಳಿದು ಬರುತ್ತದೆ.[14] ರನ್ನನ ಮಾತಿಗೆ ಲಕ್ಕುಂಡಿಯ ಶಾಸನ ಪುಷ್ಟಿದಾಯಕವಾಗಿದೆ. ಇದನ್ನು ; ಇನ್ನಷ್ಟು ವಿವರಿಸಿದೆ :

i ಪರಮಶ್ರೀ ಜಿನನಾಥಗೇಹ ವಿಳಸಚ್ಛೃಂದೋಹ ಸಂದೋಹ ಭಾ ।
ಸುರ ಜೈನ ಪ್ರತಿಮಾ ವಿಚಿತ್ರ ಮಣಿಘಂಟಾಮಾಳಿಕಾ ಸಂಯೆಸಾ ॥
ಬಿರದಮ್ಮ್ಕಿಜ[3]ವ ಬೇಚ[3]ವೇಚ[3]ನಿಪಿನಂ ನಿರ್ಮಾಪಣಂಗೆಯ್ದು ಭೂ ।
ಭರದೊಳ್ ಧರ್ಮಮನತ್ತಿಮಬ್ಬೆಯುಮೊಲಿನ್ನಾರುಜ್ಜ್ವಳಂ ಮಾಡಿದರ್ ॥

---

10 *B. K. I.*, Vol. I, Pt. II, No. 177, Lines, 34-36

11 *Ibid.*, Index, p. 268

12 ‘ಸಮಯ ಪರೀಕ್ಷೆ’ (ಸಂ. ಬಿ. ಎಸ್. ಕುಲಕರ್ಣಿ), ಅಧಿಕಾರ ೧-೪೦, ಪು. ೭

13 ‘ಶಾಂತಿಪುರಾಣ’ (ಸಂ. ಎ. ವೆಂಕಟರಾವ್ ಹಾಗೂ ಎಚ್. ಶೇಷಯ್ಯಂಗಾರ್) ಪರಿಶಿಷ್ಟ ೧, ಪದ್ಯ ೨, ಪು. 302

14 ‘ಅಜಿತತೀರ್ಥಕರಪುರಾಣತಿಲಕಂ’ (ಸಂ. ಮಂ. ಆ. ರಾಮಾನುಜಯ್ಯಂಗಾರ್) ಆ. ೧-೫೮ರಿಂದ ೬೦, ಪು. ೧೨

ii ಆ ಸತಿ ಮುವ್ಮಾಡಿಸಿದಾ ।
ಸಾಸಿರದಯ್ನೂಱು ಬಸದಿಗಿದು ಕಳಶಮೆನ-॥
ಲ್ಭಾಸುರವಾಯ್ತು ಜಿನೇಂದ್ರಾ-
ವಾಸಂ ತೊಳಗುವ ಸುವರ್ಣ್ನ ಕಳಶೋನ್ನತಿಯಿಂ ॥[15]

—ಲಕ್ಕುಂಡಿಯಲ್ಲಿ ಕಟ್ಟಿಸಿದ ಜಿನಾಲಯ 1501ನೆಯದಾಗುತ್ತದೆ ; ರನ್ನನ ಇನ್ನೊಂದು ಪದ್ಯವನ್ನು ಕುರಿತರೆ ಈ ಬಸದಿಗಳ ನಿರ್ಮಾಣ ಅನೇಕ ಕಡೆಗೆ ನಡೆಯಿತೆಂಬುದೂ ಖಚಿತವಾಗುತ್ತದೆ.

ಜಿನಪೂಜೋತ್ಸವಕೆಲ್ಲಿಯುಂ ಜಿನಕಥಾಳಾಪೋತ್ಸವಕ್ಕೆಲ್ಲಿಯುಂ ।
ಜಿನತೀರ್ಥೋತ್ಸವಕೆಲ್ಲಿಯುಂ ಜಿನಮುನಿಪಾತ್ರೋತ್ಸವಕೆಲ್ಲಿಯುಂ ॥
ಜಿನಗೇಹೋತ್ಸವಕೆಲ್ಲಿಯುಂ ಜಿನಮಹಾದಾನೋತ್ಸವಕ್ಕೆಲ್ಲಿಯುಂ
ಧನಮಂ ಪತ್ತಿಸುತಿರ್ಪೆ ನೀನೆ ಪಿರಿಯೈ ಶ್ರೀದಾನ ಚಿಂತಾಮಣಿ ॥[16]

—ಈ ಹೇಳಿಕೆಗಳಲ್ಲಿ ಇನಿತು ಉತ್ಪ್ರೇಕ್ಷೆ ಇದ್ದಿರಬಹುದೆಂದು ಹೇಳಲು ಬಗೆದರೂ ಸಂಪೂರ್ಣ ಅಸತ್ಯವೆಂದು ಅಲ್ಲಗಳೆಯಲೂ ಬರುವದಿಲ್ಲ. ಕಾರಣ, ಅತ್ತಿಮಬ್ಬೆ ಅನೇಕ ಕಡೆಗೆ 'ಜಿನಗೇಹ' ಅಥವಾ ಬಸದಿಗಳನ್ನು ಕಟ್ಟಿಸಿದಳು. ಕೆಲವೆಡೆಯಲ್ಲಿ ಆಕೆಯ ಬಿರುದು 'ಘಟಾನ್ತಕಿ' ಎಂಬುದೆ ಪ್ರಮುಖವಾಗಿ ಆ ಬಸದಿಗಳಿಗೆ 'ಘಟಾನ್ತಕಿ ಬಸದಿ' ಎಂಬ ರೂಢಿ ಪ್ರಚಲಿತವಾಯಿತವಾಯಿತು ಎಂದು ನಮಗೆ ತೋರುತ್ತದೆ. 'ಘಟಾನ್ತಕಿ ಬಸದಿಗಳ' ಪ್ರಸ್ತಾಪ ಇದ್ದ ಶಾಸನಗಳ ಕಾಲಮಾನವನ್ನು ಗಮನಕ್ಕೆ ತಂದುಕೊಂಡರೆ, ಅವೆಲ್ಲ ಸದ್ಯ ೧೧ನೆಯ ಶತಮಾನದ ಈಚೆಗಿನವೇ ಆಗಿವೆ; ಇದು ಗಮನಾರ್ಹವಾದ ಸಂಗತಿ.

ಕ್ರಿ. ಶ ೧೧೫೮ರ ಮುಗುವದ ಶಾಸನದಲ್ಲಿ ಗೊಜ್ಜಿಯಕ್ಕನನ್ನು 'ಘಟಾನ್ತಕಿ' ಎಂದು ಹೇಳಿದ ಹಾಗೆ ಶ್ರವಣಬೆಳ್ಗೊಳದ ಎರಡು ಶಾಸನಗಳಲ್ಲಿ ಜೈನ ಶ್ರಾವಕಿಯರಾದ ಪಚಿಕಬ್ಬೆ ಮತ್ತು ಜಾಕವ್ವೆಯರನ್ನು ಅತ್ತಿಮಬ್ಬೆಗೆ ಹೋಲಿಸಲಾಗಿದೆ:

i ದಾನದೊಳಭಿಮಾನದೊಳೀ
ಮಾನಿನಿಗೆಣೆಯಿಲ್ಲ ಸತಿಯ . . . . ॥
ಕೇನಾರ್ತ್ಥಿಯೆನ್ದು ಕುಡುವಳೆ
ದಾನಮನೇಚಬ್ಬೆಯತ್ತಿಮಬ್ಬರಸೆಯವೊಲ್ ॥[17]

—ಇದರ ಕಾಲವೂ ಸುಮಾರು ೧೨ನೆಯ ಶತಮಾನದ ಪೂರ್ವಾರ್ಧವೇ ಆಗಿದ್ದು ಚಾಳುಕ್ಯ ೬ನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲಕ್ಕೆ ಒಳಪಟ್ಟಿದೆ. ಕಾರಣ ಮುಗುವದ ಶಾಸನದ ಸಮಕಾಲೀನವೇ ಆಗಿದೆ.

---

15 *B K I*, Vol., Pt. I, N Io. 52, Lines 30-32 & 44-45

16 ಅಜಿತತೀರ್ಥಕರಪುರಾಣ ತಿಲಕಂ, ಆ. ೧೨–೧೬, ಪು. ೧೯೮

17 *Ep. Car.*, Vol., II (1973), No. 532, p 328

ii ಗಿರಿಸುತೆಗೆ ಜಹ್ನುಕನ್ನೆಗೆ
ಧರಣೀಸುತೆಗತ್ತಿಮಬ್ಬೆಗನುಪಮಗುಣದೊ
ಳ್ದೊರೆಯೆನಲಿಂತೀ ಸಕಳೋ
ರ್ವ್ವರೆಯೊಳ್ ಬಾಚವ್ವೆಶೀಳವತಿ ಸತಿ ನೆಗಳ್ದಳ್ ॥

—ಇದರ ಕಾಲ 1181. ಈ ಎರಡು ಶಾಸನಗಳಲ್ಲಿ ಅತ್ತಿಮಬ್ಬೆಯನ್ನು ಗೊಜ್ಜಿಯಕ್ಕನನ್ನು (ಮುಗುದದ ಶಾಸನ) ವರ್ಣಿಸುವಲ್ಲಿ ಹೇಳಿದ ದೇವತೆಗಳೊಂದಿಗೇ ಸಮಜೋಡಿಸಿರುವುದು ಕೂಲಂಕಷ ಅಭ್ಯಾಸದಲ್ಲಿ ಸ್ಪಷ್ಟವಾಗುತ್ತದೆ. ಆದುದರಿಂದ ಅಲ್ಲಿ ಬಂದ 'ಘಟಾನ್ತಕಿ' ಈ ಅತ್ತಿಮಬ್ಬೆಯೆ ಆಗಿರಬೇಕೆಂದು ನಮಗೆ ತೋರುತ್ತದೆ. ಇನ್ನು ಆ ಅತ್ತಿಮಬ್ಬೆಯನ್ನು ವರ್ಣಿಸುವಲ್ಲಿ ರನ್ನನಾಗಲಿ[18]—ಲಕ್ಕುಂಡಿಯ ಶಾಸನದ[19] ಕರ್ತೃ ಆಗಲಿ 'ಘಟಾಂತಕಿ' ಎಂದು ಹೇಳಿಲ್ಲ. ಕಾರಣ ನಮಗೆ ಈ ಶಬ್ದ, ಅತ್ತಿಮಬ್ಬೆಯನ್ನು 'ಘಟಾಂತಕಿ' ಎಂದು ಕರೆದ ಮೇಲೆಯೇ ಹೆಚ್ಚು ಪ್ರಸಿದ್ಧಿಗೆ ಬಂದಿತೆಂದು ತೋರುತ್ತದೆ.

'ಘಟಾಂತಕಿ' ಎಂದರೆ ಏನು ಎಂಬ ಪ್ರಶ್ನೆ ಏಳುವುದು ಸಹಜವೇ. ಈ ಪ್ರಶ್ನೆಗೆ ಸದ್ಯ ಒಂದು ಖಚಿತ ಉತ್ತರ ಕೊಡುವುದು ಕಷ್ಟಕರವಾದ ಸಂಗತಿಯೇ. ಏಕೆಂದರೆ ಈ ಬಿರುದು ಬಂದ ಮೂಲ ಸಂಗತಿ ಭಿನ್ನ ಭಿನ್ನ ಬಗೆಯಾಗಿದೆ—ಜೈನ ಕೃತಿಗಳಲ್ಲಿ. 'ಘಟಾನ್ತಕಿ' ಎಂಬ ಬಿರುದಿಗೆ ಮೂಲ, ಮಧ್ಯಯುಗೀನ, ೧ನೆಯ ಅಕಲಂಕಭಟ್ಟನ ಸಂಬಂಧದಲ್ಲಿ ಪ್ರಚಲಿತವಿದ್ದ ಕಥೆಯೆಂದು ತೋರುತ್ತದೆ. ಅದೆಂದರೆ ಅಕಲಂಕಭಟ್ಟ ಬೌದ್ಧಧರ್ಮದ ತಾರಾದೇವಿಯನ್ನು ಗೆದ್ದ ಸಂಗತಿ. ಇದು ಕನ್ನಡ ಕೃತಿಗಳಲ್ಲಿ ಒಂದು ಬಗೆಯಾಗಿದ್ದರೆ ಸಂಸ್ಕೃತದಲ್ಲಿ ಇನ್ನೊಂದು ಬಗೆಯಾಗಿದೆ.

i ಕನ್ನಡದ ಕೆಲವು ಕೃತಿಗಳ ಪ್ರಕಾರ, ಕಂಚಿಯಲ್ಲಿದ್ದ ಬೌದ್ಧರು ಅಲ್ಲಿದ್ದ ಜೈನರನ್ನು ಸಂಪೂರ್ಣ ನಾಶ ಮಾಡಲು ಬಯಸಿ ಅಲ್ಲಿಯ ರಾಜನಾದ ಹಿಮಶೀತಲನಿಗೆ ಅಲ್ಲಿದ್ದ ಅಕಲಂಕನನ್ನು ವಾದಭೂಮಿಗೆಳೆಯಲು ಕಳಿಸಬೇಕೆಂದು ಪ್ರಾರ್ಥಿಸುತ್ತಾರೆ. ಆ ವಾದದಲ್ಲಿ ಸೋತವರ ಧರ್ಮದವರೆಲ್ಲರನ್ನೂ ಎಣ್ಣೆಯ ಗಾಣದಲ್ಲಿ ಹಾಕಿ ಸಣ್ಣಾಗಿ ರುಬ್ಬಿಸಬೇಕೆಂದು ಒಂದು ನಿಯಮವನ್ನೂ ನಿರ್ಬಂಧವನ್ನೂ ಹಾಕಿಕೊಳ್ಳುತ್ತಾರೆ. ಅನಂತರ ಬೌದ್ಧರು ತಮ್ಮ ತಂತ್ರಶಕ್ತಿಯ ಮೂಲಕ ತೆರೆಯ ಮರೆಯಲ್ಲಿ ಒಂದು ಘಟದಲ್ಲಿ ಹೆಂಡವನ್ನು ತುಂಬಿಟ್ಟು ಅದರಲ್ಲಿ ತಾರಾದೇವಿಯನ್ನು ಆಹ್ವಾನಿಸಿ ಆಕೆಯ ಅವರಿಗಾಗಿ ಪ್ರಚ್ಛನ್ನವಾಗಿ ವಾದ ಮಾಡು

---

18 ಅಜಿತತೀರ್ಥಕರಪುರಾಣ ತಿಲಕಂ

19 *B. K. I*, Vol. I ; pt. I, No. 52-53 : 53ನೆಯ ಶಾಸನ ವಿಶೇಷ ಸ್ಥಾಲಿತ್ಯಗಳಿಂದ ಕೂಡಿದ್ದು ಒಡೆದು ತುಂಡಾಗಿದೆ; ಅಕ್ಷರಗಳು ಅಲ್ಲಲ್ಲಿ ಅಳಿಸಿಯೂ ಹೋಗಿವೆ. ಇನ್ನು 52ನೆಯ ಶಾಸನದ ಪೂರ್ವಭಾಗ 53ರ ನಕಲೇ ಆಗಿರಲು ಸಾಧ್ಯವಿದೆ. ವಿಶೇಷ ವಿವರಣೆಗೆ ಪ್ರೊ. ತೀ. ನಂ. ಶ್ರೀ. ಅವರ 'ದಾನಚಿಂತಾಮಣಿ ಅತ್ತಿಮಬ್ಬೆ' ಎಂಬ ಲೇಖನ ನೋಡಿ—ಸಮಾಲೋಕನ (1974), ಪು. ೧೫೦—೧೬೫

ವಂತೆ ಏರ್ಪಾಟು ಮಾಡಿಕೊಳ್ಳುತ್ತಾರೆ. ಅಕಲಂಕ ಆ ಸಭೆಗೆ ವಾದಕ್ಕೆ ಬರುತ್ತಾನೆ. ಕೆಲವರ ಪ್ರಕಾರ ಈ ವಾದ ಏಳು ದಿನ, ಮತ್ತೆ ಕೆಲವರ ಪ್ರಕಾರ ಹದಿನೇಳು ದಿನ ನಡೆಯುತ್ತದೆ. ಮಹಾ ವಾದಿಯಾದ ಅಕಲಂಕನಿಗೆ ವಾದದಲ್ಲಿ ಜಯ ಉಂಟಾಗದಿರಲು ಆಶ್ಚರ್ಯ ಉಂಟಾಗುತ್ತದೆ; ಕುತೂಹಲ ಕೆರಳುತ್ತದೆ. ಆಗ ಆತನ ಕನಸಿನಲ್ಲಿ ಕೂಷ್ಮಾಂಡಿನಿ ಬಂದು ತಾರೆಯನ್ನು ಸೋಲಿಸುವ ವಿಧಾನವನ್ನು ತಿಳಿಸಿಕೊಡುತ್ತಾಳೆ. ಅಕಲಂಕ ಮಾರನೆಯ ದಿನ ಹಾಗೆ ಮಾಡಲು ತಾರಾದೇವಿ ಸೋತು ನಿರುತ್ತರಳಾಗುತ್ತಾಳೆ. ಆಗ ಅಕಲಂಕ ತೆರೆಯನ್ನು ಹರಿದು ಘಟವನ್ನು ಒದೆದು ಒಡೆದು ಪುಡಿಪುಡಿಮಾಡುತ್ತಾನೆ. ಆದರೆ ಕರುಣೆಯಿಂದ ಜನರನ್ನು ರಕ್ಷಿಸುತ್ತಾನೆ—ಅರ್ಥಾತ್ ನಿಯಮ ವಂತೆ ಅವರನ್ನು ಗಾಣಕ್ಕೆ ಒಡ್ಡಿಸುವದಿಲ್ಲ[20]. ಈ ಕಥೆಯ ಪ್ರಕಾರ ಅಕಲಂಕನ ಕನಸಿನಲ್ಲಿ ಬಂದ ದೇವತೆಯಾದ ಕೂಷ್ಮಾಂಡಿನಿ ಯಕ್ಷಿಯೇ 'ಘಟಾಂತಕಿ' ಆಗಬಹುದು. ಕೂಷ್ಮಾಂಡಿನಿ ಅಥವಾ ಅಂಬಿಕೆ ಎನಿಸಿಕೊಂಡ ಆಕೆ, ನೇಮಿನಾಥ ತೀರ್ಥಂಕರನ ಯಕ್ಷಿ[21]. ಈ ದಿಶೆಯಲ್ಲಿ ಸದ್ಯ ನಮಗೆ ಅತ್ಯಂತ ಪುರಾತನ ದಾಖಲೆಯೆಂದರೆ ಬಂಧುವರ್ಮನ 'ಹರಿವಂಶಾಭ್ಯುದಯಂ' ಎಂಬ ಕಾವ್ಯ:

ಪರಮತ ತಾರೆಯಂ ಖಳವಿಕಾರೆಯನೋಡಿಸಿ ಗೆಲ್ದು ಗೆಲ್ಲದೊಳ್
ಪರಮ ಜಿನೇಂದ್ರ ಶಾಸನ ವಿಭಾಸನ ಕಾರ್ಯ ಸಮರ್ಥೆಯಾದ ಸುಂ
ದರಮುಖಿಯಕ್ಷದೇವಿ ಪರಿರಕ್ಷಿಸುಗುನ್ನತ ಜೈನಮಾರ್ಗ ಭಾ
ಸುರಗುಣರಂಜಿನೀಯೆ ಸುವಿ[ಧೇಯ ವಿನೇ]ಯ ಜನಂಗಳೆಲ್ಲಮಂ॥

ಬಂಧುವರ್ಮನ ಕಾಲ ನಮ್ಮ ಪ್ರಕಾರ ಸು. 11ನೆಯ ಶತಮಾನದ ಮಧ್ಯಭಾಗ. ಏಕೆಂದರೆ 1076-1126ರ ವರೆಗೆ ಇಡೀ ಕರ್ನಾಟಕದ ಚಕ್ರವರ್ತಿಯಾಗಿದ್ದ 6ನೆಯ ವಿಕ್ರಮಾದಿತ್ಯನ ಸೋದರನಾದ ಕೀರ್ತಿವರ್ಮನನ್ನೂ[22] ಅದೇ ಕಾಲದಲ್ಲಿ ಬಾಳಿದ ವೀರಣಂದಿಯತಿಯೊಬ್ಬನನ್ನೂ[23] ಸ್ಮರಿಸಿರುವ ಬ್ರಹ್ಮಶಿವ ಬಂಧುವರ್ಮನನ್ನು ಸ್ಮರಿಸಿರುವುದು. ಬ್ರಹ್ಮಶಿವನು ಜೈನಧರ್ಮ ಪ್ರವರ್ಧನರಲ್ಲಿ ಗಂಗರಾಜನನ್ನು ಸ್ಮರಿಸಿಲ್ಲವಾದುದರಿಂದ ಆತ ಅವನ ಸಮಕಾಲೀನ ಇಲ್ಲವೇ ತತ್ಪೂರ್ವದಲ್ಲಿ ಇದ್ದ. ಕೊಂಡಗುಳಿ ಕೇಶಿರಾಜನ (ಕ್ರಿ. ಶ. 1107) ಸಮಕಾಲೀನನೇ ಆದ ಜೇಡರದಾಸಿಮಯ್ಯನನ್ನು ಹೆಸರು ಹಿಡಿದು ಉಲ್ಲೇಖಿಸಿರುವ ಕಾರಣದಿಂದ[24] ಬ್ರಹ್ಮಶಿವ ಆತನ ಸಮಕಾಲೀನ ; ಬಸವಣ್ಣ ಮೊದಲಾದವರ ಪ್ರಭಾವ ಇಲ್ಲವಾದುದರಿಂದ ಕ್ರಿ.ಶ.

---

20 R. Narasimhachar, *Ep. Car*, Vol.I I, Introduction, p. 84

21 Dr. P. B. Desai, *Jainism in South India and some Jaina Epigraphs*, p. 173

22 ಸಮಯಪರೀಕ್ಷೆ, ಅಧಿಕಾರ-೧, ಪದ್ಯ-೪೬, ಪು. ೮

23 a) ಅದೇ. ಪದ್ಯ-೨೧, ೨೨, ೨೩, ಮತ್ತು ೨೮

b) ಬ್ರಹ್ಮ ಅಥವಾ ಬ್ರಹ್ಮಶಿವನು ವೀರಣಂದಿಮುನಿಯ ಶಿಷ್ಯನೇಬುದು ಪ್ರತಿ ಅಧಿಕಾರದ ಮುಗಿತಾಯದ ಗದ್ಯದಿಂದ ಸುಸ್ಪಷ್ಟವಿದೆ.

24 ದೇವರದಾಸಿಮಯ್ಯನ ಕಾಲವಿಚಾರ, ಕ.ಸಾ.ಪ.ಪ.,ಸಂ. ೫೯, ಸಂ. ೧, ಪು. ೧-೬

೧೧೫೦ಕ್ಕೂ ಮುಂಚಿತವೇ ಇದ್ದನೆಂಬುದರಲ್ಲಿ ಸಂದೇಹವಿಲ್ಲ. ಬ್ರಹ್ಮಶಿವನನ್ನು ನಾಗಚಂದ್ರನ ಮೊಮ್ಮಗ ಮತ್ತು ಕ್ರಿ. ಶ. 1189ರಲ್ಲಿ 'ಚಂದ್ರಪ್ರಭಪುರಾಣ'ವನ್ನು ಬರೆದ 'ಅಗ್ಗಳನ ಕೆಳೆಯಂ' ಎಂಬ, ಈಗ ವಿದ್ವಾಂಸರು ನಿರೂಪಿಸಿರುವ ವಿಷಯಗಳು ನಮ್ಮ ನಿರ್ಣಯಕ್ಕೆ ಅಡ್ಡ ಬರುತ್ತವೆ. ಆದರೆ ನಾಗಚಂದ್ರನ ರಾಮಚಂದ್ರಚರಿತಪುರಾಣದಿಂದ ಆ ನಾಗಚಂದ್ರನೂ ಈ ಬ್ರಹ್ಮಶಿವನೂ ಒಬ್ಬ ವೀರಣಂದಿಯ[25] ಶಿಷ್ಯರೇ ಆಗಿರುವುದರಿಂದ-ಇಳಿವಯಸ್ಸಿನಲ್ಲಿ 'ಸಮಯ ಪರೀಕ್ಷೆ'ಯನ್ನು ರಚಿಸಿದ ಬ್ರಹ್ಮನು ತಂದೆ ಅಥವಾ ತಾಯಿಯ (ನಮ್ಮ ಕೆಲ ವಿದ್ವಾಂಸರು ಭಾವಿಸಿರುವಂತೆ)[26] ತಂದೆಯಾದ ನಾಗಚಂದ್ರನ ಮೊಮ್ಮಗನಾಗಲು ಸಾಧ್ಯವಿಲ್ಲ. ಇದು ಸ್ವಲ್ಪ ಅಸಂಭಾವ್ಯ ಸಂಗತಿಯೇ ಆಗಿದೆ. ಇನ್ನು ಬ್ರಹ್ಮಶಿವನು ಸಮಯಪರೀಕ್ಷೆಯಲ್ಲಿ ನಾಗಚಂದ್ರನನ್ನೂ ಅವನ ಕೃತಿಗಳನ್ನೂ ಹೆಸರು ಹಿಡಿದು ಎಲ್ಲಿಯೂ ಉಲ್ಲೇಖಿಸಿಲ್ಲ. ನಾಗಚಂದ್ರನ ತರುವಾಯದಲ್ಲಿ ಇದ್ದಿದ್ದರೆ, ಅವನು ನಾಗಚಂದ್ರನ ನಾಮ ಹಾಗೂ ಗ್ರಂಥಗಳನ್ನು ಉಲ್ಲೇಖಿಸುತ್ತಿದ್ದ. ತನ್ನನ್ನು "ಸುಕವಿ ಪಂಪರಾಜನ ಮೊಮ್ಮಂ" ಎಂದು ಹೇಳಿಕೊಂಡಿರುವಲ್ಲಿ ಅಭಿನವ ಪಂಪನನ್ನು ಸಮೀಕರಿಸಿದುದೇ ನಮ್ಮ ವಿದ್ವಾಂಸರು ಎಡವಿದುದಕ್ಕೆ ಕಾರಣವಾಗಿದೆ. ನಾಗಚಂದ್ರನು 'ಅಭಿನವ ಪಂಪ' ಎಂದು ಹೇಳಿಕೊಂಡಿರುವನೇ ವಿನಾ ಕೇವಲ 'ಪಂಪ' ಎಂದಾಗಲಿ, 'ಪಂಪರಾಜ' ಎಂದಾಗಲಿ ಹೇಳಿಕೊಂಡಿಲ್ಲ. ಹಾಗಾದರೆ ಬ್ರಹ್ಮಶಿವನು ಹೇಳಿದ 'ಪಂಪರಾಜ' ಯಾರು ಎಂದು ಪ್ರಶ್ನಿಸಬಹುದು. ಅದಕ್ಕೆ ಉತ್ತರ ಬ್ರಹ್ಮಶಿವನ 'ಸಮಯ ಪರೀಕ್ಷೆ'ಯಲ್ಲೇ ಇದೆ. ಅದೆಂದರೆ ಆದಿ ಕವಿ ಪಂಪ ಬ್ರಹ್ಮಶಿವನು ಪಂಪನನ್ನೂ ಮತ್ತು ಕೃತಿ 'ಆದಿಪುರಾಣ'ವನ್ನೂ ಕುರಿತು ಹೀಗೆ ಹೇಳಿದ್ದಾನೆ :

ಜನವಲ್ಲಭನಮಳಯಶೋ ।
ಧನನುತ್ತಮು ರಾಜಪೂಜಿತಂ ಬುದನಿಳಯಂ ।
ಜಿನ ಪಾದಾಂಬುಜ ಮಧುಕರ
ನೆನೆ ನೆಗಳ್ದಂ ಪಂಪರಾಜನೂರ್ಜ್ಜಿತತೇಜಂ ॥
ಶುಭಚರಿತನನಖಿಳಕವಿ
ಪ್ರಭುವಂ ಲೋಕೈಕ ಮಾನ್ಯನಂ ತ್ರೈಭುವನ ॥
ಪ್ರಭುಚರಿತಮನತಿ ಭಕ್ತಿಯಿ
ನಭಿನುತಮೆನೆ ಪೇಳ್ದ ಪಂಪನಂ ಪೊಗಳದರಾರ್ ॥[27]

---

[25] ನಾಗಚಂದ್ರ, ರಾಮಚಂದ್ರಚರಿತಪುರಾಣ (**B. L. Rice, Ed.**) ಪ್ರಥಮಾಶ್ವಾಸ–26, 27, ಪು.7]

[26] ಮಲ್ಲಿನಾಥಪುರಾಣ (1974) ಡಾ. ಬಿ. ಬಿ. ಹೆಂಡ್ತಿ, ಪ್ರಸ್ತಾವನೆ. ಪು. iii

[27] ಸಮಯಪರೀಕ್ಷೆ, 32, 33 ; ಇಲ್ಲಿನ ಪದ್ಯದಲ್ಲಿನ ' ಜನವಲ್ಲಭ ' ಎಂಬ ಪದವು ಎಚ್. ದೇವೀರಪ್ಪನವರ ಕರಸ್ವಾಲಿತ್ಯದಿಂದ ' ಜಿನವಲ್ಲಭ ' ಆಗಿದ್ದು (ಪ್ರ. ಕ. ಸಂ. 24, ಸಂ-4, ಪು. 29), ಡಾ। ಎಂ. ಎಂ. ಕಲ್ಬುರ್ಗಿ ಇವರು ಈ ಪದ್ಯ ಪಂಪನ ತಮ್ಮ ಜಿನ

ಪಂಪನೂ ಬ್ರಹ್ಮಶಿವನೂ ಒಂದು ವಂಶಕ್ಕೆ ಸಂಬಂಧಪಟ್ಟಿದ್ದಾರೆ. ಅದೆಂದರೆ ವತ್ಸ ಗೋತ್ರ[28] ನೋಡಿ [ಪಂಪನ ಮೂಲಪುರುಷ ಮಾಧವ ಸೋಮಯಾಜಿ] :

1 ನಯಶಾಲಿ ವತ್ಸಗೋತ್ರ ।
ಶ್ರಯಣೀಯನನೇಕ ಸಕಳಶಾಸ್ತ್ರಾರ್ಥವಿನಿ ॥
ಶ್ಚಯಮತಿಕೃತಿ ಮಾಧವ ಸೋ
ಮಯಾಜಿಸವೆ ನೆಗಳ್ದನಾಸಮುದ್ರಂಬರೆಗಂ ॥[29]

2 ಇಳಿಯೊಳ್ಸಲೆ ನೆಲಸಿದ ಪೊ ।
ಟ್ಟಳಗೆಱೆಯೊಳ್ನೆಗಳ್ದ ಸಿಂಗರಾಜನ ಸುತನ ॥
ಗ್ಗಳದೇವನ ಕಳೆಯಂ ದ್ವಿಜ
ಕುಳರತ್ನಂ ವತ್ಸಗೋತ್ರ ತಿಳಕಂ ಬ್ರಹ್ಮಂ ॥ [30]

ಈ ಪದ್ಯದಲ್ಲಿ ಬಂದಿರುವ ಅಗ್ಗಳನು ಈಗಾಗಲೆ ಡಾ. ಬಿ. ಎಸ್. ಕುಲಕರ್ಣಿ ಅವರು ಸೂಚಿಸಿರುವಂತೆ ಕ್ರಿ. ಶ. ೧೧೮೯ರಲ್ಲಿ 'ಚಂದ್ರಪ್ರಭಪುರಾಣ' ಗ್ರಂಥವನ್ನು ಬರೆದ ಅಗ್ಗಳನಾಗಿ ಲಾರ.[31] ಅದೇ ಅಗ್ಗಳನೆಂದಿಟ್ಟುಕೊಂಡರೂ ಬಂಧುವರ್ಮನ ಕಾಲ ಕ್ರಿ. ಶ. ೧೧೮೯ಕ್ಕೂ ಮುಂಚಿತವೆಂದು ನಿಶ್ಚಿತವಾಗುತ್ತದೆ. ಬಂಧುವರ್ಮ, ಕರ್ಣಪಾರ್ಯನನ್ನು ಅನುಸರಿಸಿದ್ದಾನೆನ್ನುವ

ವಲ್ಲಭನಿಗೆ ಸಂಬಂಧಿಸಿದೆ ಎಂದು ನಿರೂಪಿಸುವುದಕ್ಕೆ ಕಾರಣವಾಗಿದೆ. ಶ್ರೀ ದೇವೀರಪ್ಪನವರು ಬಳಸಿಕೊಂಡ ಮೂಡಬಿದ್ರೆಯ ಹಸ್ತಪ್ರತಿಯ ಮೈಕ್ರೊಫಿಲ್ಮ್ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಇರುವುದರಿಂದ (N. 1748) ಅದನ್ನು ಪರೀಕ್ಷಿಸಿದ ಮೇಲೆ ಡಾ. ಕಲ್ಬುರ್ಗಿ ಇವರ 'ಸಾಧನೆ' ಸಂ. 4, ಸಂ. 2 (ಏಪ್ರಿಲ್-ಜೂನ್ 1975) ಪು. 150-152 ರಲ್ಲಿ ಬಂದ ಲೇಖನ "ಪಂಪನ ತಮ್ಮ ಜಿನವಲ್ಲಭ" ಸರಿಯಾದುದಲ್ಲವೆಂದು ನಮ್ರನಾಗಿ ತಿಳಿಸಬೇಕಾಗಿದೆ. ಈ ಮೈಕ್ರೊಫಿಲ್ಮ್ ಪ್ರತಿಯನ್ನು ನೋಡಲು ಅದನ್ನು ಒದಗಿಸಿದ ಕ. ಅ. ಸಂಸ್ಥೆಯ ಶ್ರೀ. ಬಿ. ಎಸ್. ಸಣ್ಣಯ್ಯ ಅವರಿಗೆ ಋಣಿಯಾಗಿರುವೆ. ಬೇಕಾದವರು N. 1748 folio–3 ಇದನ್ನು ನೋಡಿ.

28 ಜಿನವಲ್ಲಭನ ಗಂಗಾಧರ ಶಾಸನದಲ್ಲಿ ಈ ವತ್ಸಗೋತ್ರವನ್ನೇ 'ಶ್ರೀ ವತ್ಸ ಗೋತ್ರ' ಎಂದು ಹೇಳಿದೆ. ನೋಡಿ ಪ್ರ. ಕ. ಸಂ. 50-3, ಸಂ 54-3, 'ಭಾರತಿ'. ಮಾರ್ಚ್ 1967.

29 ವಿಕ್ರಮಾರ್ಜುನವಿಜಯ, ಆ. ೧೪-೪೨ (ಕ. ಸಾ. ಪ. ಮುದ್ರಣ) ಪು. ೬೧೩

30 ಸಮಯಪರೀಕ್ಷೆ, ಅ. ೧-೫೭, ಪು. ೧೦

31 ಅದೇ. ಪ್ರಸ್ತಾವನೆ, ಪು. xxxii; ಈ ಪದ್ಯದಲ್ಲಿ ಬಂದಿರುವ 'ಸಿಂಗರಾಜ' ಎಂಬ ಹೆಸರೂ ಗಮನಾರ್ಹವಾಗಿದೆ. ಏಕೆಂದರೆ ಜಿನವಲ್ಲಭನ ತಾಯಿ ಅಬ್ಬಣಬ್ಬೆಯ ತಂದೆಯ ತಂದೆಯ ಹೆಸರೂ 'ಸಿಂಗ' ಎಂದೇ ಇದ್ದಿತು. ನೋಡಿ–ಪೂರ್ವೋಕ್ತ ಜಿನವಲ್ಲಭನ ಶಾಸನ

ಮಾತ್ರ ಆತನ ಕಾಲ ಕ್ರಿ.ಶ.೧೨೦೦ ಎಂಬುದೂ[32] ಸರಿಯಲ್ಲವೆಂದು ನಮ್ರನಾಗಿ ತಿಳಿಸ ಬೇಕಾಗಿದೆ.

ii ಅಕಲಂಕ ಭಟ್ಟನ ಕಥೆ ಪ್ರಭಾಚಂದ್ರನ ಕಥಾಕೋಶದಲ್ಲಿ ಸ್ವಲ್ಪ ಬೇರೆಯ ಬಗೆಯದಾಗಿದೆ. ಅದರ ಪ್ರಕಾರ ಅಕಲಂಕಭಟ್ಟನ ಈ ಪ್ರಸಂಗ, ಕಲಿಂಗದೇಶದಲ್ಲಿಯ ರತ್ನಸಂಚಯ ಪುರದಲ್ಲಿ ನಡೆಯುತ್ತದೆ. ಬೌದ್ಧರ ಜೊತೆ ವಾದದಲ್ಲಿ ಪ್ರಚ್ಛನ್ನರೂಪದಲ್ಲಿ ಘಟದಲ್ಲಿದ್ದು (ಕುಂಭೋವತೀರ್ಯ) ವಾದಿಸುತ್ತಿದ್ದ ತಾರಾದೇವಿಯನ್ನು ಸೋಲಿಸಲು ಆರು ತಿಂಗಳ ಕಾಲ ವಾದಿಸಿದರೂ ಸಾಧ್ಯವಾಗದ ಅಕಲಂಕ ಚಿಂತೋತ್ಪನ್ನನಾಗಿ, ದೀನನಾಗಿ, ಒಂದು ದಿನ ಚಕ್ರೇಶ್ವರಿ ದೇವಿಯನ್ನು ಪ್ರಾರ್ಥಿಸುತ್ತಾನೆ. ಆ ಚಕ್ರೇಶ್ವರಿ ದೇವಿಯು ಆತನಿಗೆ ಪ್ರತ್ಯಕ್ಷಳಾಗಿ ತಾರಾದೇವಿ ಅಕಲಂಕನೊಂದಿಗೆ ಪ್ರಚ್ಛನ್ನ ರೂಪದಲ್ಲಿ ವಾದಮಾಡುತ್ತಿರುವ ಕಾರಣದಿಂದ ಆತನಿಗೆ ಗೆಲವು ಉಂಟಾಗಿಲ್ಲವೆಂದು ಸಮಾಧಾನ ಹೇಳಿ ಆಕೆಯನ್ನು ಸೋಲಿಸುವ ವಿಧಾನವನ್ನು ಅತ ಪ್ರಾತರೂಪ ಸ್ವಸ್ಥಂ ವಾಕ್ಯಂ ವ್ಯಾಘಟ್ಯ ಪೃಚ್ಛ್ಯ ತಾವದೇತಸ್ಯಾ ಪರಾಜಯೋಭವತೀತಿ ಎಂದು ಸೂಚಿಸುತ್ತಾಳೆ[33]. ಮಿಕ್ಕ ವಿಷಯವೆಲ್ಲ ಈ ಕಥೆಯಲ್ಲೂ ಸುಮಾರು ಪೂರ್ವೋಕ್ತ ರೀತಿಯಂತೇ ಇದೆ. ಈ ಕಥೆಯ ಪ್ರಕಾರ 'ಘಟಾಂತಕಿ' ಚಕ್ರೇಶ್ವರಿ ಆಗುತ್ತಾಳೆ. ಚಕ್ರೇಶ್ವರಿ ಆದಿನಾಥ ತೀರ್ಥಂಕರನ ಯಕ್ಷಿ. ಶ್ರವಣಬೆಳ್ಗೊಳದ ಚಿಕ್ಕ ಬೆಟ್ಟದಲ್ಲಿನ ಶಾಸನವೊಂದು ಈ ಸಂಗತಿಯನ್ನು ಸಂಕ್ಷೇಪರೂಪದಲ್ಲಿ ನಿರೂಪಿಸಿದೆ[34]

ಕೂಷ್ಮಾಂಡಿನಿ ಮತ್ತು ಚಕ್ರೇಶ್ವರಿ–ಈ ಇಬ್ಬರು ಯಕ್ಷಿಯರಲ್ಲಿ ಯಾರು ಅಕಲಂಕನಿಗೆ ಸಹಾಯ ಮಾಡಿದರು–ಎಂಬುದು ಸದ್ಯ ನಮಗೆ ಬಿಡಿಸಲು ಸಾಧ್ಯವಾಗದ ಸಮಸ್ಯೆಯಾಗಿದೆ. ಜನ ಜನಿತವಾದ ಜೈನಸಮಾಜದಲ್ಲಿನ ಈ ಕಥೆ ಜೈನಮತವನ್ನು ಪ್ರಸಾರ ಮಾಡುವಲ್ಲಿ ವಿಪುಲ ನಿಷ್ಠೆಯನ್ನು ತೋರಿದ, ಪ್ರಾಯಃ ಪವಾಡಗಳನ್ನೂ[35] ಮೆರೆದ ಅತ್ತಿಮಬ್ಬೆಯನ್ನು ಆ ಯಕ್ಷದೇವತೆಗೆ ಹೋಲಿಸಿ 'ಘಟಾಂತಕಿ' ಎಂದು ಕರೆದಿರಬಹುದು. ಅಂತೆಯೆ ಬ್ರಹ್ಮಶಿವನು ಆಕೆಯನ್ನು 'ಅಕಳಂಕ

---

32 ಪರಿವಂಶಾಭ್ಯುದಯ (1974) ಪೀಠಿಕೆ, ಪು. xv–xvii

33 ಪ್ರಭಾಚಂದ್ರನ 'ಕಥಾಕೋಶ' (ಸಂ. ಡಾ. ಎ. ಎನ್. ಉಪಾಧ್ಯೆ) ಕಥೆ ೨, ಭಾರತೀಯ ಜ್ಞಾನಪೀಠದ ಪ್ರಕಟಣೆ (MDJG : 55) ಪು. ೩-೮

34(a) *EP., Car*, vol. II (1973), No. 77, p. 44 (Lines 48–63)

35 ಬಾಹುಬಲಿ ದರ್ಶನಕ್ಕೆಂದು ಬೆಟ್ಟವೇರುವಾಗ ಅಕಾಲ ವೃಷ್ಟಿಯಾಗುವುದು, ಗೋದಾವರೀ ನದಿ ಇಬ್ಭಾಗವಾಗಿ ದಾರಿ ಕೊಡುವುದು, ತೊರೆಯಲ್ಲಿ ಬಿದ್ದ ಜಿನಬಿಂಬ ಎಂಟು ದಿನದ ಮೇಲೆ ಕೈಗೆ ಬರುವುದು-ಇತ್ಯಾದಿಗಳನ್ನೂ ಇಲ್ಲಿ ಗಮನದಲ್ಲಿಟ್ಟುಕೊಂಡಿದೆ. ನೋಡಿ–ಲಕ್ಕುಂಡಿಯ ಪೂರ್ವೋಕ್ತ ಶಾಸನ ಹಾಗೂ ರನ್ನನ ಅಜಿತ ತೀರ್ಥಕರ ಪುರಾಣ.

ಚರಿತೆ' ಎಂದು ಹೇಳಿದ ವಿಷಯವನ್ನು ಅಕಲಂಕಭಟ್ಟನ ಚರಿತ್ರೆಯಂತೆ ಚರಿತ್ರೆಯುಳ್ಳವಳು ಎಂದು ಈಗ ವಿವರಿಸಬಹುದು. ಅತ ಏವ ಸದ್ಯ 'ಘಟಾಂತಕಿ' ಎಂದರೆ ಅತ್ತಿಮಬ್ಬೆಯೆಂದೂ 'ಘಟಾಂತಕಿಯ ಬಸದಿ' ಎಂದರೆ ಆಕೆ ಕಟ್ಟಿಸಿದ ಬಸದಿ ಎಂದೂ ನಿಶ್ಚಯಿಸಬಹುದು[36].

---

36 ಈ ಲೇಖನವನ್ನು ಬರೆಯುವಲ್ಲಿ ಪ್ರೋತ್ಸಾಹ ನೀಡಿದುದಲ್ಲದೆ 'ಘಟಾಂತಕಿ' ಎಂದರೆ 'ತಾರಾದೇವಿ' ಆಗಿರಬಹುದು ಎಂಬ ಸೂಚನೆ ಇತ್ತುದಕ್ಕೆ ಡಾ॥ ಎ. ಎನ್. ಉಪಾಧ್ಯೆ ಅವರಿಗೆ ಋಣಿಯಾಗಿರುವೆ.

ಅತ್ತಿಮಬ್ಬೆ ತನ್ನ ತಪಸ್ಸು ನಿಷ್ಠೆ ಔದಾರ್ಯ ತ್ಯಾಗ ಧರ್ಮಾನುರಾಗ ಕಾವ್ಯಪ್ರೇಮಗಳಿಂದ ತನ್ನ ಕಾಲದ ಜನರ ಕಣ್ಣಲ್ಲಿ ಅದ್ಭುತ ವ್ಯಕ್ತಿಯಾದಳು. ಅವಳು ಮೆರೆದ ಪವಾಡಗಳನ್ನು ಅವಳ ಆಶ್ರಯದಲ್ಲಿದ್ದ ರನ್ನನೂ ಅವಳ ಶಾಸನವೂ ಕೊಂಡಾಡಿವೆ. ಜಿನನನ್ನು ಹೊತ್ತು ತಂದ ಅವಳನ್ನು ಕಂಡ ಗೋದಾವರಿ ತನ್ನ ಪ್ರವಾಹವನ್ನು ಉಡುಗಿಸಿತು ; ಇದರಿಂದಾಗಿ ತೈಲಪ ತನ್ನ ಸೈನ್ಯದೊಡನೆ ನದಿಯನ್ನು ದಾಟುವುದು ಸಾಧ್ಯವಾಯಿತು. ಮದಿಸಿದ ಆನೆ ಅವಳ ಪಾದಗಳಿಗೆ ಶರಣಾಗಿ ಎರಗಿತು. ಅಕಸ್ಮಾತ್ ನದಿಯಲ್ಲಿ ಬಿದ್ದುಹೋದ ಜಿನಬಿಂಬ ಎಂಟು ದಿನಗಳಲ್ಲಿ ಕೈಗೆ ಬಂದಿತು (ಆ ಎಂಟು ದಿನವೂ ಅವಳು ಉಪವಾಸವಿದ್ದಳು). ಶ್ರವಣಬೆಳಗೊಳದ ಗೊಮ್ಮಟ ವಿಗ್ರಹವನ್ನು ನೋಡುವ ವರೆಗೆ ಅನ್ನವನ್ನು ತ್ಯಜಿಸುವೆನೆಂಬ ನಿಯಮವನ್ನು ಪಾಲಿಸಿ, ದರ್ಶನಕ್ಕಾಗಿ ಪರ್ವತವನ್ನು ಹತ್ತುವಾಗ ಅವಳ ಮಾರ್ಗಾಯಾಸ ಪರಿಹಾರಕ್ಕಾಗಿ ಅಕಾಲವೃಷ್ಟಿಯೂ ಆಯಿತು. ಇವು ಅವಳು ಮಾಡಿದಳೆಂದು ಹೇಳಲಾದ ಕೆಲವು ಪವಾಡಗಳು.

ಹೀಗೆ ಅತ್ತಿಮಬ್ಬೆ ಈಚಿನವರ ಕಣ್ಣಲ್ಲಿ ಮಾತ್ರವಲ್ಲ ; ತನ್ನ ಕಾಲದಲ್ಲಿಯೇ ಪವಾಡ ವ್ಯಕ್ತಿಯಾಗಿ ಪರಿಣಮಿಸಿದ್ದಳು. ಚಕ್ರವರ್ತಿ ಪೂಜಿತೆಯೂ ಆಗಿದ್ದಳು.

ಅವಳಾದ ಮೇಲೆ ಹುಟ್ಟಿದ ಅನೇಕ ಶಾಸನಗಳಲ್ಲಿಯೂ ಬ್ರಹ್ಮಶಿವನ ಸಮಯ ಪರೀಕ್ಷೆಯಲ್ಲಿಯೂ ಅವಳನ್ನು ಮನಸಾರೆ ಕೊಂಡಾಡಲಾಗಿದೆ. ಅವಳು ನಾಡಿನಲ್ಲಿ ಶೀಲ ಅನುಪಮ ಗುಣ ಔದಾರ್ಯ ಅಭಿಮಾನಗಳಿಗೆ ಸಂಕೇತವಾಗಿ ಬಾಳಿದಳು. ಮುಂದಿನ ಜನಾಂಗದ ಮೇಲೆಯೂ ತನ್ನ ಪ್ರಭಾವವನ್ನು ಬೀರಿದ ಮಹಾವ್ಯಕ್ತಿಗಳಲ್ಲಿ ಇವಳೂ ಒಬ್ಬಳು[1].

---

1. 'ಅತ್ತಿಮಬ್ಬೆ', ಕನ್ನಡ ವಿಶ್ವಕೋಶ, ಸಂ. ೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು. ೨೫೭

ಡಾ. ಎಂ. ಎನ್. ನರಸಿಂಹನ್

ಭಾರತೀಯ ತರ್ಕಶಾಸ್ತ್ರದ ರೂಪರೇಖೆಗಳು—೧

ವೇದಗಳ ಕಾಲ

ಪ್ರಸ್ತಾವನೆ

"ವಿಶ್ವದ ಇಟಲಿ ಮಾತ್ರವಲ್ಲ ; ಕಲೆಗಳ ಸೌಂದರ್ಯದ ಬೀಡು ಮಾತ್ರವಲ್ಲ ; ವಿಶ್ವದ ಮತಧರ್ಮಗಳ ನೆಲೆ ಮಾತ್ರವಲ್ಲ ; ಮತಧರ್ಮಗಳೇ ಭಾರತ," ಎಂದು ಕ್ರ್ಯಾಂಬ್[1] ಭಾರತದ ಬಗ್ಗೆ ಆಡಿದ ಮಾತುಗಳು ಅಕ್ಷರಶಃ ನಿಜ. ಭಾರತ ಮಾತೆಯ ಸರ್ವಕ್ಷೇತ್ರಗಳ ಚಾರಿತ್ರಿಕ ಪ್ರಗತಿಗೆ ಇತರ ಅಂಶಗಳಿಗಿಂತ ಅದರ ಮತಧರ್ಮ ತತ್ತ್ವ ತಳಹದಿಯಾಗಿದೆ. ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಹಿತ್ಯಕ ಮತ್ತಿತರ ಜೀವನದ ಮುಖಗಳೆಲ್ಲ ಸ್ಫೂರ್ತಿ ಪಡೆದುದು ಮಾತ್ರವಲ್ಲದೆ ಅದರಿಂದ ನಿರ್ದೇಶಿತ ಕ್ರಮದಲ್ಲಿಯೇ ಬೆಳೆದುಬಂದಿವೆ. ವಿಚಾರದ ಉಗಮಕಾಲದಿಂದಲೂ ಭೌಗೋಳಿಕ ಭೌತಿಕ ಅಂಶಗಳಿಗೆ ಸೀಮಿತವಾಗದೆ ಅದರ ಜನ ಒಂದು ಬಗೆಯ ವಿಶ್ವಮಾನವ ಸಂಸ್ಕೃತಿಯೆಡೆ ಮನ ತೋರಿದರು. ಆದರೆ ಅಂಥ ದೃಷ್ಟಿ ಅವರನ್ನು ಕೇವಲ ಗಗನಚುಂಬಿಗಳನ್ನಾಗಿ ಮಾಡಿ ಇಂದಿನ ಪ್ರಾಪಂಚಿಕ ಜೀವನವನ್ನು ತಾತ್ಸಾರದಿಂದ ನೋಡುವಂತೆ ಮಾಡಲಿಲ್ಲ. ನಿತ್ಯವೂ ಶಾಶ್ವತವೂ ಆದುದರ ಅನ್ವೇಷಣೆಯಲ್ಲಿ .ತೊಡಗಿದ ಅವರು ತಮ್ಮ ಆಸೆ ಆಕಾಂಕ್ಷೆಗಳನ್ನು ಸ್ಪಷ್ಟಕಾರ್ಯಗತ ಕ್ರಮ ನಿಯಮಗಳಲ್ಲಿ ನಿರೂಪಿಸಿ ಸಾಮಾಜಿಕ ಜೀವನ ಕ್ರಿಯಾಸಕ್ತ ನಿಯಮಗಳ ಆಚರಣೆಯಿಂದು ತಮ್ಮ ಜೀವನದ ಮೂಲಕ ತೋರಿದ್ದಾರೆ. ಅಂಥ ಸಾಂಘಿಕ ಜೀವನದ ನಾಂದಿ ತತ್ತ್ವಗಳು, ಮೌಲ್ಯಗಳು ಮತ್ತು ಪುರುಷಾರ್ಥಗಳನ್ನು ಜೀವನದಲ್ಲಿ ಸಾಧಿಸಬೇಕಾದರೆ ವ್ಯಕ್ತಿಯು ದೈಹಿಕ, ಮಾನಸಿಕ ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಅವರು ತಿಳಿದಿದ್ದರು. ಈ ಮನೋಭಾವ ಜೀವನದ ಎಲ್ಲ ಕ್ಷೇತ್ರಗಳಿಗಿಂತ ಅವರ ವಿದ್ಯಾಭ್ಯಾಸ ಮತ್ತು ಶಿಕ್ಷಣ ಕ್ರಮದಲ್ಲಿ ಎದ್ದು ಕಾಣುತ್ತದೆ.

ಭಾರತದಲ್ಲಿ, ಅದರಲ್ಲಿಯೂ ಪ್ರಾಚೀನ ಭಾರತದಲ್ಲಿ, ''ಶಿಕ್ಷಣ ಶಿಕ್ಷಣಕ್ಕೋಸ್ಕರವೇ, ಅದನ್ನು ಪಡೆಯುವುದೇ ಅದರ ಗುರಿ ಮತ್ತು ಅಂತ್ಯ'' ಎಂಬ ಭಾವನೆ ಇರಲಿಲ್ಲ. ಅದು ಒಂದು ಸಾಧನ ಮಾತ್ರ, ಯಾರಿಗೋ ತೋರಿದ ಒಂದು ಆಕಸ್ಮಿಕ ಕಲ್ಪನೆಯಾಗಿಲ್ಲದೆ,

---

[1] Cramb, quoted by Bhagavan Das in *Cultural Heritage of India*, vol. IV, p. 3

ನಾಡಿನ ಪರಿಷ್ಕರ ವಿಚಾರ ಮಂಥನದ ಫಲವಾದ ಅದು ಜನರ ಜೀವನವನ್ನು ರೂಪಿಸಿ, ಆತ್ಮ ಸಾಕ್ಷಾತ್ಕಾರ ಪಡೆಯಲು ಅವಕಾಶ ಮಾಡಬೇಕು. ಇಡೀ ಜಗತ್ತೇ ಒಂದು ದೊಡ್ಡ ಶಾಲೆ. ಜನ್ಮ ಪೂರ್ತಿ ನಾವೆಲ್ಲ ವಿದ್ಯಾರ್ಥಿಗಳು. ಪ್ರಾಪಂಚಿಕ ಜೀವನ ಒಂದು ದೊಡ್ಡ ಪ್ರಯಾಣ. ಹುಟ್ಟಿನಿಂದ ಸಾವಿನ ವರೆಗೆ ನಾವೆಲ್ಲ ಯಾನ ಮಾಡುತ್ತಿದ್ದೇವೆ. ಈ ಬಗೆಯ ಮುನ್ನಾಗುವಿಕೆಯ ಏಕಮಾತ್ರ ಗುರಿ ಮತ್ತು ಪ್ರಯೋಜನವೆಂದರೆ ಸತ್ಯದ ತಿಳಿಯುವಿಕೆ. ಅದನ್ನು ಸಾಧಿಸಲು ಇರುವ ಏಕೈಕ ಮಾರ್ಗವೆಂದರೆ ಧರ್ಮ ಎಂದು ಹಿರಿಯರು ತಿಳಿದಿದ್ದರು. ಈ ಅಂಶವನ್ನು ತೈತ್ತಿರೀಯ ಉಪನಿಷತ್ತು, "ಸತ್ಯವನ್ನು ಹೇಳು. ಧರ್ಮ ಪಂಥದಲ್ಲಿ ನಡೆ."[2] ಎಂಬ ಜನಪ್ರಿಯ ಮಹಾ ವಾಕ್ಯಗಳಲ್ಲಿ ಸ್ಪಷ್ಟಪಡಿಸಿದೆ. ಇದರಿಂದ ನಿಜವಾಗಿ ಭಾರತೀಯರ ಮನಸ್ಸು ಸತತವಾಗಿ, ಸಂಪೂರ್ಣವಾದ ಸತ್ಯಕ್ಕೋಸ್ಕರ ಹಾತೊರೆಯುತ್ತಿದ್ದಿತು ಎಂಬುದು ಸ್ಪಷ್ಟವಾಗುತ್ತದೆ. ಅಪೂರ್ಣ ಸತ್ಯ, ಅಸತ್ಯ ಮತ್ತು ಸತ್ಯೇತರ ವಿಷಯಗಳಾವುವೂ ಅವರಿಗೆ ತೃಪ್ತಿ ಕೊಡುತ್ತಿರಲಿಲ್ಲ. ಜೀವನಸಾಮ್ಯದ ಮತ್ತೊಂದು ಮುಖವಾದ ಸಾವಿನ ಸತ್ಯಾಂಶವನ್ನು ತಿಳಿಯಲು ಆಹಾರ, ನಿದ್ರೆ, ಪಾನಾದಿಗಳನ್ನು ಬಿಟ್ಟು ಯಮನ ಮನೆಯ ಬಾಗಿಲಲ್ಲಿ ಕಾದ ಬಾಲಕ ನಚಿಕೇತನ[3] ಜೀವನದ ಈ ಬಗೆಯ ಜ್ಞಾನ ತೃಷ್ಣೆಯನ್ನು ಉದಾಹರಿಸುತ್ತದೆ. ಬಾಲಕ ನಚಿಕೇತನ ಮನಸ್ಸು ಕೇವಲ ಕೆರಳಿದ ಕುತೂಹಲವನ್ನು ತೃಪ್ತಿಪಡಿಸುವ ವಿಷಯ ಶೇಖರಣೆಯಿಂದ ತೃಪ್ತಿ ಹೊಂದಲಿಲ್ಲ. ಅವನ ದೃಷ್ಟಿಯಲ್ಲಿ ಅದು ನಿಜವಾದ ವಿದ್ಯಾಭ್ಯಾಸವೇ ಅಲ್ಲ. ಯಾವ ಶಿಕ್ಷಣ ನಮ್ಮನ್ನು ಭ್ರಮೆಯಿಂದ ಪ್ರಮೆಗೆ ಕರೆದೊಯ್ಯುವುದಿಲ್ಲವೋ. ಯಾವುದು ನಮ್ಮನ್ನು ವಿಕಾರಗಳಿಂದ ನಿರ್ವಿಕಾರ ಸ್ಥಿತಿಗೆ ಒಯ್ಯುವುದಿಲ್ಲವೋ. ಉಪನಿಷತ್ತಿನ ವಾಕ್ಯದಲ್ಲಿ ಹೇಳುವುದಾದರೆ, "ಕತ್ತಲೆಯಿಂದ ಬೆಳಕಿಗೆ, ಅಸತ್ಯದಿಂದ ಸತ್ಯಕ್ಕೆ, ಮರಣದಿಂದ ಅಮರತ್ವಕ್ಕೆ" — ಒಟ್ಟಿನಲ್ಲಿ ಹೇಳುವುದಾದರೆ, ಅನಿತ್ಯ ಅಶಾಶ್ವತ ಸಂಸಾರ ಚಕ್ರದಿಂದ ವಿಮೋಚನೆ ಮಾಡುವುದಿಲ್ಲವೋ, ಅದು ಶಿಕ್ಷಣವೇ ಅಲ್ಲ ಎಂದು ಸಾರಿದ ಪ್ರಾಚೀನ ಭಾರತದಲ್ಲಿ ಸಕಲ ಶಾಸ್ತ್ರಗಳೂ ವಿವಿಧ ಜ್ಞಾನಗಳೂ ಈ ಬಗೆಯ ಜೀವನಕ್ಕೆ ಆಧಾರಸ್ತಂಭವಾದ ಮನಸ್ಸು ಮತ್ತು ಅದರ ಸಾಧನವಾದ ದೇಹದ ತರಬೇತು ಶಿಕ್ಷಣದ ಕಡೆ ಗಮನ ಹರಿಸಿತು. ಮತ್ತು ಅದನ್ನು ಸಾಧಿಸಲು ಕೇವಲ ವಸ್ತು ವಿಷಯಗಳ ಜ್ಞಾನವನ್ನು ಹೊರಗಿನಿಂದ ಮನಸ್ಸಿನೊಳಕ್ಕೆ ನೂಕಿದರೆ ಸಾಲದು. ಇಡೀ ವ್ಯಕ್ತಿಯಲ್ಲೇ ಒಂದು ಬಗೆಯ ದೈಹಿಕ, ಮಾನಸಿಕ ಬದಲಾವಣೆ ಉಂಟಾಗಿ ಅವನು ಹೊಸ ದೃಷ್ಟಿಯಿಂದ ಜೀವನವನ್ನು ನೋಡಲು ಸಿದ್ಧನಾಗಬೇಕು. ಬಹಿರ್ಗಮನದಲ್ಲಿ ನಿರತನಾಗಿರುವ ತನ್ನ ಮನಸ್ಸನ್ನು ತಡೆದು ನಿಲ್ಲಿಸಿ (ವಿಲ್ಸನ್ ಹೇಳಿರುವಂತೆ, "ಸೆರೆಹಿಡಿದು, ಪ್ರಾಣಿಕ್ರಿಯೆಗಳಲ್ಲಿ ನಿರತವಾಗುವುದರಿಂದ ತಪ್ಪಿಸಿ") ಅಪಾರವೂ ಗಾಢವೂ ಆದ ತನ್ನ ಗಂಭೀರ ಮತ್ತು ಸುಪ್ತ ಶಕ್ತಿಗಳನ್ನು ತಿಳಿದು ಅವು ವಿಕಸಿಸಲು ವ್ಯಕ್ತಿ ಯತ್ನಿಸಬೇಕು, ಎಂದು ನಿರ್ಧರಿಸಿದ್ದರು.

---

[2] Taittiriya Upanishad, Siksha vall. xi – 1

[3] Refer Taittiriya Aranyaka and Katha Upanishad.

ಮೇಲೆ ತಿಳಿಸಿದ ರೀತಿಯಲ್ಲಿ "ಮನಸ್ಸು ತನ್ನಲ್ಲಿ ತಾನಿರುವಿಕೆ"ಯನ್ನು ಕಲಿಸುವುದು ಶಿಕ್ಷಣದ ಜವಾಬ್ದಾರಿ ಎಂದು ಸ್ಪಷ್ಟಪಡಿಸಿದ ಮೇಲೆ ಅಷ್ಟಕ್ಕೇ ತೃಪ್ತರಾಗದೆ ಅದನ್ನು ಕಾರ್ಯಗತ ಮಾಡಲು ಬೇಕಾದ ಒಂದು ವ್ಯವಸ್ಥಿತ ಬೋಧನ ಕ್ರಮವನ್ನೂ ತಜ್ಞರು ಜನರ ಮುಂದಿಟ್ಟರು. ಆ ಕ್ರಮವೇ ಖ್ಯಾತ ಗುರು ಕುಲ ವಾಸ. ಅದರ ಪ್ರಧಾನ ಲಕ್ಷಣವೆಂದರೆ ಬೋಧಕ–ಬೋಧಿತರ ನಡುವೆ ಇದ್ದ ಹಾರ್ದಿಕ ಆತ್ಮೀಯತೆ. ಕೇವಲ ತರಗತಿ ಮತ್ತು ಪಠ್ಯ ಪುಸ್ತಕಗಳಿಗೆ ಮಾತ್ರ ಸೀಮಿತವಾಗದೆ ಅವರಿಬ್ಬರ ಸಂಬಂಧ ಒಂದು ಸಜೀವತೆಯಿಂದ ಕೂಡಿದ ಮಾನವೀಯತೆಯ ಮೇಲೆ ರಚಿತವಾಗಿತ್ತು: ಬೋಧನೆಯು ತಾಂತ್ರಿಕ ಕ್ರಮ ಸಲಕರಣೆಗಳಿಂದ ನಿಯಂತ್ರಿತವಾಗದೆ ಪ್ರೀತಿ ವಿಶ್ವಾಸ ನಂಬಿಕೆಗಳನ್ನು ಅವಲಂಬಿಸಿತ್ತು. ಅದೊಂದು ಬಗೆಯ ಸಹಜೀವನವಾದುದರಿಂದ ಬೋಧಕನಿಗೆ ಶಿಕ್ಷಿತನ ದೇಹ, ಮಾನಸಿಕ ಶಕ್ತಿಗಳ ನಕ್ಷೆ ರೂಪಿಸಿಕೊಳ್ಳಲು ಸದವಕಾಶವಾಗಿದ್ದಿತು. ಅದನ್ನು ಸಿದ್ಧಪಡಿಸಿದ ಮೇಲೆ ಗುರು ಯಾವ ಕ್ರಮದಲ್ಲಿ, ಎಷ್ಟರ ಮಟ್ಟದಲ್ಲಿ, ಎಷ್ಟು ಮತ್ತು ಯಾವ ವಿಷಯವನ್ನು ವಿದ್ಯಾರ್ಥಿಗೆ ನೀಡಬಹುದು ಎಂಬುದನ್ನು ತೀರ್ಮಾನಿಸುತ್ತಿದ್ದ. ಬೋಧನ ಕ್ರಮದಲ್ಲಿ ವಿದ್ಯಾರ್ಥಿಗಳ ದಕ್ಷತೆ ಗ್ರಾಹಕ ಶಕ್ತಿಗಳನ್ನು ಅನುಸರಿಸಿ, ಶ್ರವಣ, ಮನನ ಮತ್ತು ನಿಧಿಧ್ಯಾಸನ ಕ್ರಮಗಳನ್ನು ಆಚಾರ್ಯ ಅನುಸರಿಸುತ್ತಿದ್ದ, ಎಂದು ಉಪನಿಷತ್ತು ತಿಳಿಸುತ್ತದೆ. ಶ್ರವಣ ಎಂದರೆ ಶಿಕ್ಷಕ ಉಚ್ಚರಿಸಿದ ಶಬ್ದಗಳನ್ನು ಕೇಳಿ ಪುನರುಚ್ಚರಿಸುವುದು. ಈ ಸಂಪ್ರದಾಯವನ್ನು ಉದ್ಯೋತ್ಕಾರ "ಜ್ಞಾನ ರಕ್ಷಿಸಲ್ಪಟ್ಟ ಗುರುವಿನಿಂದ ಶಿಷ್ಯನಿಗೆ ಒಯ್ದು ರವಾನೆಯಾಗುತ್ತಿದ್ದ ಕ್ರಮ"[4] ಎಂದು ವಿವರಿಸಿದ್ದಾನೆ.

ವೇದಗಳ ಕಾಲದಲ್ಲಿ ತರ್ಕವಿದ್ಯೆ

ಭಾರತೀಯರ ಜೀವನದ ಬಗ್ಗೆ ನಮಗೆ ದೊರೆತಿರುವ ಪ್ರಪ್ರಥಮ ಸಾಧಾರ ಗ್ರಂಥಗಳೆಂದರೆ ವೇದಗಳು. "ಕೇವಲ ಭಾರತದ ಮಾತ್ರವಲ್ಲ. ಇಡೀ ವಿಶ್ವದ ಜನಕೋಟಿಯ ಪ್ರಪ್ರಥಮ ಉಕ್ತ ಶಬ್ದ ಗುಚ್ಛಗಳು ವೇದಗಳು", ಎಂದು ಪಾಶ್ಚಾತ್ಯ ಭಾಷಾ ಪಂಡಿತರು[5] ಅಭಿಪ್ರಾಯ ಪಟ್ಟಿದ್ದಾರೆ, ಅವು ರಾಷ್ಟ್ರದ ಸಂಸ್ಕೃತಿಯ ಉಗಮಸೂಚಕ ಗ್ರಂಥಗಳು ಮಾತ್ರವಲ್ಲದೆ ಅದರ ಅತ್ಯಂತ ವೈಭವಪೂರಿತ ಸಾಹಿತ್ಯವೂ ಹೌದು. ಅವುಗಳಲ್ಲಿ ನಿರೂಪಿಸಿ ಬೋಧಿತವಾಗಿರುವ ಮೇಲ್ಮಟ್ಟದ ವಿಚಾರ ರೀತಿನೀತಿಗಳು ಮತ್ತು ಸರಳ ಜೀವನವೇ ಅವುಗಳ ಖ್ಯಾತನಕ್ಕೆ ಕಾರಣ. ಅನೇಕ ವಿಂಶತಿ ದಶಕಗಳಲ್ಲಿ ರಚಿಸಲ್ಪಟ್ಟ ಆ ವಿಪುಲ ಸಾಹಿತ್ಯದ ಮೊದಲ ಹಂತ ಋಗ್ವೇದದ ಸೂಕ್ತಗಳು. ಪ್ರಸಿದ್ಧ ಸಂಸ್ಕೃತ ಸಂಶೋಧಕರಾದ ಮ್ಯಾಕ್ಡೊನಲ್‌ರವರು "ನಮಗೆ ಇಂದು ದೊರೆತಿರುವ ಸ್ವರೂಪಕ್ಕೆ ಅದು ಬರಲು ಅನೇಕ ಶತಮಾನಗಳು ಉರುಳಿರಬೇಕು," ಎಂದಿದ್ದಾರೆ.

---

4 ಸಂಪ್ರದಾಯೋ ನಾಮ ಶಿಷ್ಯೋಪಾಧ್ಯಾಯ ಸಂಬಂಧಸ್ಯ ಅವಿಚ್ಛೇದೇನ ಶಾಸ್ತ್ರಪ್ರಾಪ್ತಿಃ"—Nyayavartika of Udyotkara
ಇದನ್ನೇ "ಶ್ರುತಿ" ಎಂದು ಹೇಳುವುದು.

5 **Maxmueller**—*Origin and Development of Religion*

ವೇದ ಎಂಬ ಶಬ್ದ ಮಂತ್ರ ಮತ್ತು ಬ್ರಾಹ್ಮಣ ಎಂಬ ಎರಡು ಭಾಗಗಳಿಂದ ಕೂಡಿರುತ್ತದೆ ಎಂದು ಆಪಸ್ತಂಬ[6] ತಿಳಿಸಿದ್ದಾನೆ. ಮಂತ್ರ ಎಂಬ ಶಬ್ದ 'ವಿಚಾರ', 'ವಿಚಾರ ಸಾಧನ' ಎಂದು ಅರ್ಥ ಕೊಡುವ 'ಮನನ' ಶಬ್ದದಿಂದ ಬಂದಿದೆ ಎಂದು ಯಾಸ್ಕ ಹೇಳುತ್ತಾನೆ.[7] ಅನಂತರ ಬಂದ ಜೈಮಿನಿ ಸೂತ್ರ ಗ್ರಂಥದಲ್ಲಿ ಮಂತ್ರಗಳ ಪ್ರಾಮುಖ್ಯ ಪ್ರಯೋಜನಗಳ ಬಗ್ಗೆ ಬರೆಯುತ್ತ, ಅವುಗಳ ಸರಿಯಾದ ಉಚ್ಚಾರಣೆಯೇ ಅಪೇಕ್ಷಿತ ಫಲಗಳನ್ನು ನೀಡುತ್ತದೆ ಎಂದಿದ್ದಾನೆ.[8] ಇದರಿಂದ ಅವುಗಳ ರಕ್ಷಣೆ, ಪೋಷಣೆ ಮತ್ತು ತಪ್ಪಿಲ್ಲದೆ ಇಂದಿಗೆ ಸಾಗಿಸಿ ಬರುವಿಕೆ ಒಂದು ಪವಿತ್ರ ಮತ್ತು ಜವಾಬ್ದಾರಿಯುತ ಕೆಲಸವಾಗಿತ್ತು. ಅನಂತರದ ಜನರಿಂದ ಪ್ರಕ್ಷೇಪ ಮಾಡುವಿಕೆಯನ್ನು ತಪ್ಪಿಸಿ ಮಂತ್ರಗಳನ್ನು ಅವರ ಪೂರ್ವರೂಪದಲ್ಲಿಯೇ ಉಳಿಸಲು ಕೆಲವು ಭಾಷಾ ತಂತ್ರಗಳನ್ನು ಕಂಡುಹಿಡಿಯಬೇಕಾಯಿತು. ಇದನ್ನು ವೇದಗಳ ಬಗ್ಗೆ ಸಾಂಪ್ರದಾಯಿಕ ಶೋಧಕರಲ್ಲಿ ರೂಢಿಯಲ್ಲಿದ್ದ ಆಚಾರ ನಿಷ್ಠೆಗಳೇ ಬಹುಮಟ್ಟಿಗೆ ಸಾಧಿಸಿದ್ದುವು. ಅವರೂ ಶ್ರುತಿಗಳ ಸಂಪಾದಕರು ಅವುಗಳ ಶಾಬ್ದಿಕ ಪರಿಶುದ್ಧತೆ, ಪದಗಳ ಉಚ್ಚಾರಣೆ, ಶಬ್ದಗಳ ನಡುವಿನ ಅಂತರಗಳು, ಸ್ಪಷ್ಟತೆ, ಸ್ಫುಟೋಚ್ಚಾರಣೆಗಳ ಬಗ್ಗೆ ಸ್ವಲ್ಪವೂ ಅನಾದರಣೆ ತೋರಲು ಇಚ್ಛಿಸಲಿಲ್ಲ. ಈ ವಿಷಯಗಳಲ್ಲಿ ಮಾತ್ರವಲ್ಲದೆ ಮಂತ್ರಗಳ ರಚನಾಕ್ರಮ, ವಿಚಾರ ಪ್ರಾಧಾನ್ಯ, ಶಬ್ದ ಗಾಂಭೀರ್ಯ ಮತ್ತು ಮಾಧುರ್ಯ ಮತ್ತು ಎಲ್ಲಿ ಕ್ರಿಯೆಯೂ ಬಿಗಿಲಾಗಿ ವ್ಯಾಕರಣ ನಿಯಮಬದ್ಧತೆಗಳಲ್ಲಿ ಮೊದಲಿನಿಂದಲೂ ಅನೂಚಾನವಾಗಿ ಹರಿದು ಬರುತ್ತಿದ್ದ ನಿಯಮ ಕಟ್ಟಳೆಗಳ ದಾಟಿಯನ್ನು ಪ್ರತಿಯೊಬ್ಬ ವೇದ ಆಚಾರ್ಯ ಶೋಧಕನೂ ಶಿಕ್ಷಣ ಸಂದರ್ಭದಲ್ಲಿ ಮನಸ್ಸಿನಲ್ಲಿಟ್ಟುಕೊಂಡು ಮುಂದುವರಿಯುತ್ತಿದ್ದ. ಕ್ರಮಬದ್ಧತೆಯಿಂದ ಅದನ್ನು ಸ್ವೀಕರಿಸುತ್ತಿದ್ದುದು ಮಾತ್ರವಲ್ಲದೆ ತಮ್ಮ ಸಂಶೋಧನ ಮನೋಭಾವದಿಂದ ಅದನ್ನು ಉತ್ತಮಗೊಳಿಸುತ್ತಲೂ ಇದ್ದ. ಶೋಧಕರಿಗೆ ಇದೇ ಒಂದು ದೊಡ್ಡ ತಪಸ್ಸು ಆಗಿತ್ತು. ಮೆಕ್ಡೊನಲ್ ಹೇಳುವಂತೆ "ಅನ್ಯ ರಾಷ್ಟ್ರಗಳ ಸಾಹಿತ್ಯ ಚರಿತ್ರೆಯಲ್ಲಿ ಕಾಣಲಾಗದ ಒಂದು ಕೃತಜ್ಞತಾ ಸಂಪ್ರದಾಯವನ್ನು"[9] ಈ ಬಗೆಯ ಕ್ರಮಗಳು ಭಾರತೀಯರಿಗೆ ಒದಗಿಸಿಕೊಟ್ಟುವು.

ಭಾರತೀಯ ಪುರಾತನಗಳ ಗ್ರಂಥಗಳೆಂದು ಹೇಳಲ್ಪಡುವ ಋಗ್ವೇದದ ಸಂಹಿತೆಗಳ ಕಾಲದಲ್ಲಿ ನಾವು ಎರಡು ಹಂತಗಳನ್ನು ಕಾಣುತ್ತೇವೆ. ಮೊದಲನೆಯದು ವೇದ ಮಂತ್ರಗಳ

---

6 ಮಂತ್ರಬ್ರಾಹ್ಮಣಾತ್ಮಕಃ ಶಬ್ದರಾಶಿಃ ವೇದ ಇತಿ...
ಮಂತ್ರಬ್ರಾಹ್ಮಣಯೋರ್ ವೇದನಾಮಧೇಯಂ ।

—Apastamba in *Yajnaparibhasha*

7 Yaska's *Nirukta*, VII-3-6

8 ಮಂತ್ರಾಣಾಂ ಅದೃಷ್ಟಾರ್ಥಮುಚ್ಚಾರಣ ಮಾತ್ರಂ। ಉಚ್ಚಾರಣಾತ್ ಅದೃಷ್ಟಾರ್ಥಃ

—Jaimini–Purva Mimamsa Sutra

9 Macdonnel, *India's past*

ಸೃಷ್ಟಿಕಾಲ. ಈ ಕಾಲದಲ್ಲಿ ಋಷಿಗಳು ತಮ್ಮ ದರ್ಶನ ಅನುಭವಗಳನ್ನು ಋಕ್ಕುಗಳ ರೂಪದಲ್ಲಿ ನಮಗೆ ನೀಡಿದ್ದಾರೆ. ಎರಡನೆಯದು ಅನಂತರ ಬಂದ ಕಾಲ. ಈ ಕಾಲದಲ್ಲಿ ತಾವು ಪಡೆದುದನ್ನು ಬದಲಾಯಿಸದೆ ಉಳಿಸಿಕೊಳ್ಳುವುದು ಅವರ ಮುಖ್ಯ ಸಮಸ್ಯೆ ಆಯಿತು. ಬಾಯಿಂದ ಬಾಯಿಗೆ ಕಂಠಪಾಠದಲ್ಲಿ ಒಪ್ಪಿಸಲ್ಪಡುತ್ತಿದ್ದ ಸಾಹಿತ್ಯವನ್ನು ಒಂದು ನಿರ್ದಿಷ್ಟ ರೂಪದಲ್ಲಿ ವ್ಯಕ್ತಪಡಿಸುವುದು ಒಂದು ದೊಡ್ಡ ಜವಾಬ್ದಾರಿಯ ಕೆಲಸವೇ ಸರಿ. ಕೇವಲ ರಾಜಕೀಯ ಮತ್ತು ಮತೀಯ ದೃಷ್ಟಿಯಿಂದ ಮಾತ್ರವಲ್ಲದೆ ಸಾಹಿತ್ಯ ದೃಷ್ಟಿಯಿಂದಲೂ ಇದು ಆವಶ್ಯಕವಾಗಿ ತೋರಿತು. ಬಾಯಿಪಾಠ ಕ್ರಮದಲ್ಲಿ ಆಗಬಹುದಾದ ಅನೇಕ ಭಾಷಾ ಬದಲಾವಣೆಗಳಿಂದ ವೇದ ಸಾಹಿತ್ಯವನ್ನು ಕಾಪಾಡಬೇಕಾಯಿತು. ಉಚ್ಚಾರಣೆ, ನಿರೂಪಣೆ, ಹ್ರಸ್ವ ದೀರ್ಘಗಳು, ಅನೇಕ ಸಲ ಶಬ್ದದ ಪ್ರಯೋಗದಲ್ಲಿಯೇ ಬದಲಾವಣೆಗಳು, ವಿನ್ಯಾಸಗಳು ಕಂಡುಬಂದು ಭಾಷೆ ಮಾರ್ಪಾಡಾಗುವುದು ಬಹು ಸಾಮಾನ್ಯ. ಈ ಬಗೆಯ ವ್ಯತ್ಯಾಸಗಳಿಗೆ ಅವಕಾಶ ಕೊಡದೆ ಗೊತ್ತಾದ ರೀತಿಯಲ್ಲಿ ಅವುಗಳನ್ನು ಗುರು ಶಿಷ್ಯನಿಗೆ ಒಪ್ಪುವಂತೆ ಮಾಡುವುದು ಪರಿಗಣಿತರ ಪವಿತ್ರ ಜವಾಬ್ದಾರಿಯಾಗಿತ್ತು. ವಿಲ್ಸನ್ ಅಭಿಪ್ರಾಯ ಪಡುವಂತೆ "ಋಕ್‌ಗಳ ಪ್ರಾಚೀನತೆ, ಶೈಲಿಯ ಅಸ್ಪಷ್ಟತೆ, ಭಾಷಾ ವೈಶಿಷ್ಟ್ಯ, ಅಸಂಖ್ಯಾತವಾಗಿ ಬೆಳೆಯುತ್ತಿದ್ದ ಅವುಗಳನ್ನು ನೆನಪಿನಲ್ಲಿಟ್ಟುಕೊಂಡು ಕ್ರಮವಾಗಿ ಪಾಠ ಹೇಳುವುದು—ಅದರಲ್ಲಿಯೂ ಚದುರಿ ಹರಡಿದ್ದ ವ್ಯವಹಾರದಲ್ಲಿಲ್ಲದ ಅನೇಕ ಸೂಕ್ತಗಳನ್ನು ಒಂದು ಸ್ಪಷ್ಟ ಕ್ರಮಬದ್ಧರೂಪಕ್ಕೆ ತರುವ ಕಾಲ ಬಂದಿತ್ತು"[10] ಈ ಅಂಶವನ್ನು ಚರ್ಚಿಸುತ್ತ ಯಾಸ್ಕ ತನ್ನ ನಿರುಕ್ತದಲ್ಲಿ ವೇದಾಧ್ಯಯನ ಮಾಡುತ್ತಿದ್ದ ಜನರನ್ನು ಎರಡು ಬಗೆಯಾಗಿ ವಿಂಗಡಿಸಿದ್ದಾನೆ. ಮೊದಲನೆಯವರು ಸಾಕ್ಷಾತ್ ಅನುಭವ ಪಡೆದ ಋಷಿಗಳು. ಆದರೆ ಆ ಬಗೆಯ ಸಾಕ್ಷಾತ್ಕಾರ ಎಲ್ಲರ ಪರಿಮಿತಿಯಲ್ಲಿರಲಿಲ್ಲ. ಸಾಕ್ಷಾತ್ಕಾರವಿಲ್ಲದೆ ಜ್ಞಾನ ಪಡೆದವರು ಶೃತ ಋಷಿಗಳು. ಋಷಿಗಳು ಶೃತ ಋಷಿಗಳಿಗೆ ಉಪದೇಶದ ಮೂಲಕ ವೇದವನ್ನು ಬೋಧಿಸುತ್ತಿದ್ದರು. ಈ ರೀತಿ ಶಿಕ್ಷಣ ಪಡೆಯುತ್ತಿದ್ದವರು ಏಕಪದಿ, ದ್ವಿಪದಿ, ಚತುಷ್ಪದಿ, ಅಷ್ಟಪದಿ, ನವಪದಿ, ಕೊನೆಗೆ ಸಹಸ್ರಾಕ್ಷರ ಎಂದು ಹಂತಹಂತವಾಗಿ ಸತ್ಯದ ಮೆಟ್ಟಿಲುಗಳನ್ನು ಹತ್ತಿ ತಿಳಿಯುತ್ತಿದ್ದರು. ಸಂಹಿತೆಯ ಕಾಲದ ವೇಳೆಗೆ ಗುರು ತನ್ನ ಬೋಧನಾ ಕ್ರಮವನ್ನು ಶಿಷ್ಯರ ಶಕ್ತಿಗಳಿಗನುಗುಣವಾಗಿ ಬದಲಾಯಿಸಿಕೊಳ್ಳುತ್ತಿದ್ದುದನ್ನು ಸಾಯಣ ಹತ್ತನೆಯ ಮಂಡಲದ ಭಾಷ್ಯದಲ್ಲಿ ವಿದ್ಯಾರ್ಥಿಗಳನ್ನು ಮಹಾ ಪ್ರಜ್ಞಾನ್, ಮಧ್ಯಮ ಪ್ರಜ್ಞಾನ್ ಮತ್ತು ಅಲ್ಪಪ್ರಜ್ಞಾನ್ ಎಂದು ವಿಂಗಡಿಸಿದೆ, ಎಂದಿದ್ದಾನೆ. ವೇದ ಪಾಠದ ವಿದ್ಯಾರ್ಥಿಗಳ ಅರ್ಹತೆ ಬಗ್ಗೆ ಆಚಾರ್ಯ ಎಷ್ಟು ಗಮನ ಹರಿಸಿದ್ದ, ಎಂಬುದನ್ನು ಇದು ಸ್ಪಷ್ಟ ಮಾಡುತ್ತದೆ. ಆದರೆ ವೇದದ ಕಾಲದ ಋಷಿಗಳು, ಬೋಧಕರು ಅಷ್ಟಕ್ಕೇ ತೃಪ್ತಿ ಹೊಂದಲಿಲ್ಲ. ಕಲಿತುಕೊಳ್ಳುವವರ ಮತ್ತು ಉಪದೇಶ ಮಾಡುವವರ ಯೋಗ್ಯತೆಗಳನ್ನು ನಿರ್ಧರಿಸಿದಂತೆಯೇ, ಉಪದೇಶಿಸಿದ ವಿಷಯದ ಬಗ್ಗೆಯೂ ಬಹು ಗಮನ ಹರಿಸಿ ವೇದೋಚ್ಚಾರಣೆಯಲ್ಲಿ ಅನುಸರಿಸಿದ ಕ್ರಮವನ್ನೇ ಒಂದು ವಿಶೇಷ ಕಲೆಯಾಗಿ ಮಾಡಿದ್ದರು. ಅದು ಸ್ವೇಚ್ಛೆಗೆ ಬಿಡಲ್ಪಡದೇ ಒಂದು ನಿರ್ದಿಷ್ಟವಾದ ಛಂದೋ

---

10 Wilson *Rgveda Samhita I-XIX*

ಮಾತ್ರಗಳಿಂದ ರೂಪಿಸಲ್ಪಟ್ಟಿತ್ತು. ಇದರಿಂದ ಲಿಖಿತ ಹಸ್ತಪ್ರತಿಗಳನ್ನು ಓದಿ ತಿಳಿಯುವುದಕ್ಕಿಂತ, ಸಾಯಣ ಹೇಳುವಂತೆ, ವೇದ ಪಾಠ ಗುರುವಿನ ಅಧರ ಚಲನೆಯನ್ನು ನೋಡಿ ಕಲಿಯುವ ಒಂದು ಶಿಕ್ಷಣ ಕಲೆಯಾಗಿತ್ತು.[11] ಶ್ರುತಿ ಕಣ್ಣಿನಿಂದ ನೋಡಿ ಕಲಿಯುವ ಶಾಸ್ತ್ರವಲ್ಲ. ಕಿವಿಯಿಂದ ಕೇಳಿ ತಿಳಿಯುವ ಶಾಸ್ತ್ರ ಎಂಬ ಭಾವನೆ ಬೇರೂರಿತು. ಅನಂತರದ ಕಾಲದಲ್ಲಿ ಈ ಅಂಶ ಬೆಳೆದು, ವೇದವನ್ನು ಬರೆಯುವುದು ಮಹಾಪರಾಧ ಎಂದು ಪರಿಗಣಿಸಲ್ಪಟ್ಟಿತು. 8ನೆಯ ಶತಮಾನದಲ್ಲಿದ್ದ ಕುಮಾರಿಲ, ವೇದವನ್ನು ಬರೆಯುವ ಯತ್ನ ದೊಡ್ಡ ದ್ರೋಹ ಎಂದಿದ್ದಾನೆ.[12] ಮಹಾಭಾರತ ವೇದವನ್ನು ಬರೆಯುವವರನ್ನು ನರಕಕ್ಕೆ ಕಳುಹಿಸುತ್ತಾರೆ ಎಂದಿದೆ. ವೇದಗಳ ಕಾಲದಲ್ಲಿ ಬರವಣಿಗೆಯಿತ್ತು. ಆದರೆ ಅದು ಬಹು ಅಲ್ಪಮತಿಗಳಿಗೆ ಶಿಕ್ಷೆಯಾಗಿ ವಿಧಿಸಲ್ಪಡುತ್ತಿತ್ತು. ಇದರಿಂದ ವೇದಗಳಲ್ಲಿ ವಾಕ್ ಅಥವಾ ಮಾತಿಗೆ ಕೊಡುತ್ತಿದ್ದ ಪ್ರಾಧಾನ್ಯ ಸಿದ್ಧವಾಗುತ್ತದೆ.

ವೇದಗಳ ಕಾಲದ ಒಂದು ವೈಶಿಷ್ಟ್ಯವೆಂದರೆ ಪರಿಣತರ ಸಭೆಗಳು. ಇವುಗಳನ್ನು ಪ್ರಾಚೀನ ಭಾರತದ ವೈದಿಕ ವಿದ್ಯಾಭ್ಯಾಸದ ಶಿಬಿರಗಳು ಎಂದರೆ ತಪ್ಪಾಗಲಾರದು. ಸಾಯಣ ತನ್ನ ಭಾಷ್ಯದಲ್ಲಿ ಇವುಗಳನ್ನು ಬ್ರಾಹ್ಮಣ ಸಂಘಗಳೆಂದು ಕರೆದಿದ್ದಾನೆ. ಇವುಗಳಲ್ಲಿ ವಿವಿಧ ಶಾಸ್ತ್ರಗಳಿಗೆ ವೇದೋಕ್ತ ಕರ್ಮಗಳಲ್ಲಿ ಪರಿಶ್ರಮ ಪಡೆದಿದ್ದ ಪಂಡಿತರು ಸೇರಿ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುತ್ತಿದ್ದರು. ಇಂದು ನಡೆಯುತ್ತಿರುವ ವಿವಿಧ ಬಗೆಯ ಚರ್ಚಾಗೋಷ್ಠಿ ಸಮ್ಮೇಳನಗಳಿಗೆ ಇವು ತಳಹದಿ ಮತ್ತು ಮೇಲ್ಪಂಕ್ತಿ.

ಪರಿಷತ್ತುಗಳು ಪ್ರಾಯಶಃ ಯಜ್ಞ ಯಾಗಾದಿಗಳ ಸಂದರ್ಭದಲ್ಲಿ ನಡೆಯುತ್ತಿದ್ದುವು. ಅವುಗಳಿಗೆ ಋಷಿಗಳೇ ಆಧಾರ ಸ್ತಂಭಗಳಾಗಿದ್ದರು. ವಿವಿಧ ಅಂಶಗಳ ಬಗ್ಗೆ ಚರ್ಚೆ ಮಾಡಿ ವಿಷಯಗಳನ್ನು ನಾನಾ ದೃಷ್ಟಿಕೋಣಗಳಿಂದ ಪರೀಕ್ಷಿಸಿ ನಿರ್ಣಯ ಕೈಗೊಳ್ಳುತ್ತಿದ್ದ ಹೆದ್ದಾರಿಗಳು ಎಂದು ಅವುಗಳನ್ನು ಕೆಲವರು ವರ್ಣಿಸಿದ್ದಾರೆ. ಅಂಥ ಗೋಷ್ಠಿಗಳಲ್ಲಿ ಚರ್ಚಿಸಲ್ಪಟ್ಟು ಮಾಡಿದ ನಿರ್ಣಯಗಳು ಅನಂತರ ಶೇಖರಿಸಲ್ಪಟ್ಟು ನಾನಾ ಕಡೆಗಳಿಗೆ ಹರಡಲ್ಪಡುತ್ತಿದ್ದವು. ಈ ಬಗೆಯ ಸಭೆಗಳು ಸಾಧಿಸಿದ ಕೆಲಸ ನಿಜವಾಗಿಯೂ ಸ್ತುತ್ಯರ್ಹವಾದುದು. ವೈದಿಕ ಸಾಹಿತ್ಯ ಕಂಠ ಪಾಠ ಕ್ರಮದಲ್ಲಿ ಮುನ್ನಾಗುತ್ತಿದ್ದಾಗ ಅವು ನೀಡಿದ ನೆರವು ಆದರ್ಶ ಸೌಲಭ್ಯಗಳು ನಿಜವಾಗಿಯೂ ಶ್ಲಾಘನೀಯವಾದುವು. ಇಂದಿಗೂ ಅಚ್ಚಳಿಯದೆ ಉಳಿದಿರುವ ವೈದಿಕ ವಾಙ್ಮಯ ಹಿರಿತನಕ್ಕೆ ಅವು ಸಾಧನವಾದುವು, ಎಂದರೆ ಅತಿಶಯೋಕ್ತಿ ಅಲ್ಲ. ಆಧುನಿಕ ತರ್ಕ ಪದ್ಧತಿಗಳಂತೆ ಶಾಸ್ತ್ರ ವಿಷಯಗಳನ್ನು ನಿರೂಪಿಸಿ ವಿವರಿಸದಿದ್ದರೂ ಸಕಲ ಶಾಸ್ತ್ರಗಳಿಗೂ ಮಾತೃಭೂಮಿಯಂತಿರುವ ವಿಚಾರ ಮತ್ತು ವಾಕ್ಯಗಳ ರಕ್ಷಣೆ ಪೋಷಣೆ ಬಗ್ಗೆ ಅವು ಕೈಗೊಂಡಿದ್ದ ಕ್ರಮ ಅಭ್ಯಾಸಗಳು

---

11 ಅಧ್ಯಯನ ವಿಧಿಶ್ಚ ಲಿಖಿತ ಪಾಠಾದಿವ್ಯಾವೃತ್ತ ಅಧ್ಯಯನ ಸಂಸ್ಕೃತತ್ವಂ ಸ್ವಾಧ್ಯಾಯಸ್ಯ ಗಮಯತಿ''–Sayana *Introduction to Crmmentary on Rgveda*

12 Kumarila's *Tantra vartika*, p. 86

ಅವುಗಳ ಕರ್ತೃಗಳ ರಚನಾತ್ಮಕ ಬುದ್ಧಿ ಮತ್ತು ಮುಂದಾಲೋಚನೆ, ವಿವೇಕಗಳ ಸೂಚಕಗಳು. ಇಂದಿನ ತರ್ಕಕ್ಕೆ ಜನ್ಮಸ್ಥಳದಂತಿರುವ ಅವು ಗಳಿಸಿದ ಕೆಲವು ಪ್ರಧಾನ ಸಾಧನೆಗಳನ್ನು ಮುಂದೆ ತಿಳಿಸಲಾಗಿದೆ.

ಪರಿಷತ್ತುಗಳ ಪ್ರಪ್ರಥಮ ಸಾಧನೆಯೆಂದರೆ ವೇದಭಾಷಾ ಪರಿಷ್ಕರಣ ; ಋಗ್ವೇದದ ಒಂದು ಸೂಕ್ತದಲ್ಲಿ ಬೃಹಸ್ಪತಿಯು ದೇವರನ್ನು ಪರಮಜ್ಞಾನ, ಜ್ಯೋತಿರ್ಮಯ' ಎಂದು ವಿವರಿಸಿ ಯೋಗದಿಂದ ಮಾತ್ರ ಅವನನ್ನು ಸಾಧಿಸಬಹುದೆಂದು ತಿಳಿಸಿದೆ. ಈ ಬಗೆಯ ನಿರೂಪಣೆ ಪ್ರಾಯಶಃ ವೈದಿಕ ಸಾಹಿತ್ಯದಲ್ಲಿ ನಮಗೆ ದೊರಕಬಹುದಾದ ಕೆಲವೇ ಪರಿಷ್ಕರಣ ಸೂಕ್ತಗಳಲ್ಲಿ ಒಂದು. ತನ್ನ ಭಾಷ್ಯದ ಆರಂಭದಲ್ಲಿ ಈ ಸೂತ್ರದ ಬಗ್ಗೆ ಬರೆಯುತ್ತ ಸಾಯಣ, "ವೇದವು ದೇವರು ಧರ್ಮ ಮತ್ತು ಪರಬ್ರಹ್ಮನ ಬಗ್ಗೆ ಹೇಳುತ್ತದೆ. ವೇದವನ್ನು ಘೋಷಿಸದೆ ನಿಂದಿತವೂ, ಅಸ್ಪೃತವೂ ಮತ್ತು ಜಗಳಗಂಟಿತನದಿಂದ ಕೂಡಿದುದೂ ಆದ ಭಾಷೆ ಪರಮಸತ್ಯದೆಡೆ ಒಯ್ಯುವುದಿಲ್ಲ...ಯಾರೂ ಪದಗಳ ಸುರಿಮಳೆ ಸುರಿಸದಿರಲಿ. ಹಾಗೆ ಮಾಡುವುದು ಶಬ್ದಗಳ ದುರುಪಯೋಗವಷ್ಟೆ. ಆ ಬಗೆ ಶಬ್ದಾಡಂಬರದಲ್ಲಿ ಆಸಕ್ತಿಯಿರುವವನು ಕಾವ್ಯ ಮತ್ತು ನಾಟಕಗಳನ್ನು ಓದಲಿ. ಅವನಿಗೆ ಸತ್ಯಧರ್ಮಗಳ ಮಾರ್ಗ ತಿಳಿಯಲು ಅಧಿಕಾರವಿಲ್ಲ," ಎಂದು ಹೇಳಿದ್ದಾನೆ.[13] ಈ ಮಾತು ಋಗ್ವೇದದ ಕಾಲದ ವೇಳೆಗೆ ಪರಿಣತರು ಭಾಷೆಯಲ್ಲಿ ಪಾಮರ ಮತ್ತು ವೈದಿಕ ಭಾಷೆಯೆಂದು ವ್ಯತ್ಯಾಸ ಕಾಣಿಸಿದ್ದರೆಂಬುದನ್ನು ಸ್ಪಷ್ಟಮಾಡುತ್ತದೆ. ನಮಗೆ ಭಾಸವಾಗುವುದಿರಲಿ, ಸಾಯಣನೇ ಮತ್ತೊಂದು ಕಡೆ[15] ಈ ವ್ಯತ್ಯಾಸ ಕಾಣಿಸಿ, ವೇದಭಾಷೆ ದೇವಭಾಷೆ. ಅದು ಬ್ರಾಹ್ಮಣ ಭಾಷೆ ಎಂದು ಟಿಪ್ಪಣಿ ಬರೆದಿದ್ದಾನೆ. ವೇದ[16] ಮಂತ್ರಗಳಲ್ಲಿಯೂ ಮಂತ್ರ, ಕಲ್ಪ, ಬ್ರಾಹ್ಮಣ ಮತ್ತು ಅನ್ಯೇತರ ಭಾಷೆ ಎಂದು ನಾಲ್ಕು ಭಾಷಾರೂಪಗಳನ್ನು ತಿಳಿಸಿದೆ. ನಿರುಕ್ತ ಇದನ್ನು ವಿವರಿಸಿ, ಮೊದಲ ಮೂರು ಭಾಷೆಗಳು ಋಕ್, ಯಜು ಮತ್ತು ಸಾಮ ವೇದದ ಭಾಷೆಗಳೆಂದೂ ನಾಲ್ಕನೆಯದು ಸ್ಥಳೀಯ ಜನರ ಭಾಷೆಯೆಂದೂ ಅರ್ಥಮಾಡಿದೆ.

---

13 'ಸಕಲ ದೇವತಾನಾಂ ಧರ್ಮಸ್ಯ ಪರಬ್ರಹ್ಮ ತತ್ವಸ್ಯ ಚ ಪ್ರತಿಪಾದಕಂ ವೇದಂ ಅನುಚ್ಚಾರ್ಯ ಪರನಿಂದಾಸ್ಪಿತ ಕಲಹಾದಿ ಹೇತುಂ
ಲೌಕಿಕೀಂ ವಾರ್ತಾಂ ಸರ್ವತ್ರ ಉಚ್ಚಾರಯತಃ ಸ್ಪಷ್ಟ ಏವವಾಚಿ ಭಾಗ್ಯಭಾವಃ ।
. . . . . . ವಾಚೋ ವಿಗ್ಲಾಪನಂ ಹಿ ತತ್ . . . .
. . . . . . ಯದ್ಯಸ್ಯಸೌ ಕಾವ್ಯನಾಟಕಂ ಶೃಣೋತಿ ತಥಾಪಿ ನಿರರ್ಥಕಮೇವ ತಚ್ಛ್ರವಣಂ

Sayana : Introduction to Rgveda Commentary

15 ತಸ್ಮಾತ್ ಬ್ರಾಹ್ಮಣಾ ಉಭಯಂ ವಾಚಂ ವದಂತಿ ಯಾಚ ದೇವಾನಾಂ ಮನುಷ್ಯಾಣಾಮಿತಿ—Sayana

16 Rgveda I–164–45

ಪಾಮರನ ಭಾಷೆ ಉನ್ನತ ಜ್ಞಾನ ಸಾಧಿಸುವವರ ಭಾಷೆಯಲ್ಲ (ಪಾಪಾಯಾಃ ಭಾಷಾಂ) ಅದು ಸಾಮಾನ್ಯ ವಸ್ತುವಿಷಯಗಳನ್ನು ಬೋಧಿಸಲು (ನಾಮ ಧೇಯ ದಧಾನಾಃ)[17] ಉಪಯೋಗಿಸಲ್ಪಡುತ್ತಿದ್ದಿತು. ಅದು ಅಸತ್ಯ(ಅಲೀಕ). ಏಕೆಂದರೆ ಅದು ಪರಮ ಜ್ಞಾನದ ಸಾಧನವಾಗಲಾರದು. ಸತ್ಯದ ಭಾಷೆಯು (ಬ್ರಹ್ಮಾಣಾಂ ವಾಚಃ) ಭಾಗಶಃ ರೂಪ ಮಾತ್ರ-ವ್ಯವಹಾರದ ಅಂತರಾಳದಲ್ಲಿರುವುದನ್ನು (ನಿಹಿತಂ ಗುಹಾಯಾಂ) ಅದು ತಲುಪಿ ತಿಳಿದು ನಿರೂಪಿಸಬಲ್ಲದು. ಶ್ರೇಷ್ಠವೂ ಪರಿಪೂರ್ಣವೂ ಆದ ಜ್ಞಾನ ಮಾತ್ರ ನಮ್ಮನ್ನು ಪರಮ ಸತ್ಯದ ದ್ವಾರಕ್ಕೆ ಕೊಂಡೊಯ್ಯಬಲ್ಲದು. ಈ ಬಗೆಯ ಜ್ಞಾನವನ್ನು ವೇದಗಳ ಮೂಲಕ ವಿದ್ಯಾರ್ಥಿ ದೇವತೆ ಸರಸ್ವತಿಯ ಕರುಣೆಯಿಂದ ಮಾತ್ರ (ಪ್ರೇಮ್ಣಾ ಆವಿರ್ಭವತಿ) ಗಳಿಸಬಹುದು, ಎಂದೂ ವೇದ ಸಾಹಿತ್ಯ ತಿಳಿಸುತ್ತದೆ. ಭಾಷೆಯಲ್ಲಿ ಈ ರೀತಿಯ ಪವಿತ್ರತೆ ಸಾಧಿಸಲು ಯೋಗ ತಪಸ್ಸುಗಳು ಅಗತ್ಯ. ಅವುಗಳನ್ನು ಆಚರಿಸಿ ಅಂತಹ ಭಾಷೆಯನ್ನು ಪಡೆದವರೇ ಋಷಿಗಳು. ಅವರನ್ನೇ ಶ್ರುತಿಗಳು ವಿಪ್ರರು, ವೇಧಸರು, ಕವಿಗಳು, ಮನೀಷಿಗಳು ಎಂಬ ಪರ್ಯಾಯವಾಚೀ ಶಬ್ದಗಳಿಂದ ಸೂಚಿಸುವುವು. ಅವರು ಅತಿ ಶ್ರೇಷ್ಠ ಜನ. ಉನ್ನತ ಚಿತ್ತವೃತ್ತಿಯಿಂದ ಕೂಡಿ ಸೂಕ್ಷ್ಮ ದೇಹದಿಂದ ಚರಿಸುತ್ತಿರುತ್ತಾರೆ. ಅವರುಗಳು ಅನುಭವಿಸಿ ಹೇಳಿದ ಉಕ್ತಿಗಳೇ ಶ್ರುತಿ ವಾಕ್ಯಗಳು. ಇಂತಹ ಮಹಾತ್ಮರುಗಳು ಪರಿಷತ್ತುಗಳಲ್ಲಿ ಭಾಗವಹಿಸಿ ಇತರರಿಗೆ ಜ್ಞಾನದಾನ ಮಾಡುತ್ತಿದ್ದರು. ಇವರುಗಳ ನೇತೃತ್ವದಲ್ಲಿ ಭಾಷೆ ಪರಿಶುದ್ಧಿ ಹೊಂದಿತೆಂದರೆ ವಿಶೇಷವೇನೂ ಇಲ್ಲ. ಶ್ರುತಿಗಳೇ ಹೇಳುವಂತೆ ಇಂತಹ ಸಭೆಗಳಲ್ಲಿ ಜನಸಾಮಾನ್ಯರ ಶಬ್ದ ಪ್ರಯೋಗಗಳು "ಜರಡಿಯಲ್ಲಿ ಧಾನ್ಯಗಳು ಜಾಲಿಸಲ್ಪಟ್ಟು ಶುದ್ಧವಾಗುವಂತೆ"[18] ಉತ್ತಮಗೊಳಿಸಲ್ಪಡುತ್ತಿದ್ದವು. "ಏಷಾಂ ವಾಚಿ ಭದ್ರಾ ಲಕ್ಷ್ಮೀರ್ ನಿಹಿತಾ" ಎಂಬ ವೇದೋಕ್ತ ಪಂಡಿತರ ಸಭೆಗಳಲ್ಲಿ ಭಾಷೆ ತತ್ತ್ವ ವಿಚಾರಗಳು ಹೊರಗೆಡಹುವ ಹೊನಲು ಕುಲುಮೆಯಲ್ಲಿ ಕಾಯಿಸಲ್ಪಟ್ಟು ಪರಿಶುದ್ಧಗೊಳಿಸಿದ ಲೋಹದಂತೆ ತಜ್ಞರ ಮನಸ್ಸಿನ ಮುಂದೆ ಹಾದು ಹೋಗಿ ಸ್ಪಷ್ಟತೆ, ನಿರ್ದಿಷ್ಟತೆ ಮತ್ತು ನಿರ್ದುಷ್ಟತೆಯ ರೂಪ ಪಡೆಯುತ್ತಿದ್ದುವು. ಮತ್ತೊಂದು ನಿದರ್ಶನ. ಈ ಸೂಕ್ತದ ಮೇಲೆ ಬರೆಯುತ್ತಾ ಸಾಯಣನು ಆ ಕಾಲದ ವೇಳೆಗೆ ಚರ್ಚಾಕ್ರಮ ಮತ್ತು ಸಮ್ಮೇಳನಗಳ ವ್ಯವಹಾರದ ಮೂಲಕ ಜಿಜ್ಞಾಸೆ ಬೆಳೆದು ಬಂದಿತ್ತೆಂಬುದಕ್ಕೆ ಈ ಮಂತ್ರವೇ ಸಾಕ್ಷಿ. ಎಂದಿದ್ದಾನೆ (ವಿದ್ವತ್ಸಂಘೇ ವಾಚ ಮಂಕ್ರತ).

---

[17] Ibid., X-71-1

ತೈತ್ತಿರೀಯ ಸಂಹಿತೆಯಲ್ಲಿ ವಾಕ್ ಮೊದಲು ಸಾಗರದ ಘರ್ಜನೆಯಂತೆ ಅಸ್ಪಷ್ಟವಾಗಿತ್ತೆಂದೂ ಇಂದ್ರನು ಅವುಗಳಿಗೆ ನಾಮರೂಪ ಅರ್ಥ ಬರುವಂತೆ ಮಾಡಿದನೆಂದೂ ಕಥೆಯೊಂದಿದೆ.

ವಾಗ್ ವೈ ಪರಾಚೀ ಅವ್ಯಾಕೃತಾ ಅವದತ್ । ತಂ ಇಂದ್ರಃಮಧ್ಯತಃ ಅನಕ್ರಮ್ಯ ವ್ಯಾಕರೋತ್ । ತಸ್ಮಾದಿಯಂ ವ್ಯಾಕೃತಾ ವಾಕ್ ಉದ್ಯತೇ....

—ತೈತ್ತರೀಯ ಸಂಹಿತಾ

[18]. ಸಕ್ತುಮಿವ ತಿತ ಉನಾ ಪುನಂತೋ

ಋಗ್ವೇದದ ಕಾಲದಲ್ಲಿ ಭಾಷೆಗೆ ಇಷ್ಟು ಪ್ರಾಧಾನ್ಯ ಕೊಡಲು ಕಾರಣವಿಲ್ಲದೆ
ಇರಲಿಲ್ಲ. ಋಷಿಗಳು ವಿಚಾರಕ್ಕಿಂತ ಭಾಷೆ ಹೆಚ್ಚು ಪ್ರಧಾನವೆಂದು ಪರಿಗಣಿಸಿ ಆ ರೀತಿ ಮಾಡ
ಲಿಲ್ಲ. ಹಾಗಿದ್ದರೆ ಅವರೂ ಅನೇಕ ಆಧುನಿಕರಂತೆ ಶಾಬ್ದಿಕವಾದಿಗಳೆಂದು ಪರಿಗಣಿಸಲ್ಪಡು
ತ್ತಿದ್ದರು. ಮೊದಲೇ ಹೇಳಿದಂತೆ ಭಾಷೆಗೋಸ್ಕರವೇ ಭಾಷೆ ಎಂದು ಅವರು ತಿಳಿದಿರಲಿಲ್ಲ.
ಭಾಷೆ ಒಂದು ಸಾಧನ ಮಾತ್ರ ; ನಮ್ಮನ್ನು ಸತ್ಯಕ್ಕೆ ಕರೆದೊಯ್ಯುವ ಉಪಕರಣಗಳಲ್ಲಿ
ಅದೊಂದು ಎಂದು ತಿಳಿದಿದ್ದರು ಅವರು. ವೇದಾಭ್ಯಾಸ ಮಾಡುವವರಲ್ಲಿ ಶಬ್ದಗಳ ಸರಿ
ಯಾದ ಅರ್ಥ ತಿಳಿದು ಉಪಯೋಗಿಸುವವನನ್ನು ವೇದಗಳು ತಮ್ಮ ಆಪ್ತಮಿತ್ರನೆಂದು ಕರೆದಿವೆ
(ಸಚಿ, ಸಖಿ). ಆ ರೀತಿ ಇಲ್ಲದವನು ಧರ್ಮಾನುಷ್ಠಾನದ ಒಳ್ಳೆಯ ಫಲಗಳನ್ನೂ ಕಳೆದುಕೊಳ್ಳು
ತ್ತಾನೆ, ಮಾತ್ರವಲ್ಲ ; ವೈದಿಕ ಭಾಷಾ ಪರಿಜ್ಞಾನವಿಲ್ಲದವನು ಕೇಳಿದರೂ ಕೂಡ ತಪ್ಪು
ತಿಳಿಯುತ್ತಾನೆ. ಇದರಿಂದ ಅವನು ಶೀಲಜೀವನ ನಡೆಸಲಾರ ಎಂದಿವೆ ಅವು. ಸರಿಯಾದ
ಭಾಷಾ ಜ್ಞಾನ ಒಳ್ಳೆಯ ಅಥವಾ ಶೀಲವಂತ ಜೀವನದ ನಾಂದಿ ಎಂದು ಋಷಿಗಳು ತಿಳಿದಿದ್ದ
ಕಾರಣದಿಂದ ಅವರ ಗಮನ ಭಾಷಾ ಸ್ವಚ್ಛತೆಯ ಕಡೆ ಹರಿದಿತ್ತು. ಇದನ್ನು ಸಾಧಿಸಲು
ಅವರು ಪ್ರಾರಂಭದಿಂದಲೇ ಭಾಷಾ ವಿಜ್ಞಾನವನ್ನು ವೇದ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ
ಒಂದು ಕಡ್ಡಾಯ ವ್ಯಾಸಂಗ ವಿಷಯವನ್ನಾಗಿ ಮಾಡಿದ್ದರು. ಪದಗಳ ಸ್ವರೂಪ ರಚನಾಕ್ರಮ
ಗಳ ತಿಳಿವಳಿಕೆ ಸರಿಯಾದ ಅರ್ಥ ತಿಳಿಯಲು ಬಹು ಸಹಾಯಕ ಎಂದು ತಿಳಿದಿದ್ದ ಅವರು ವ್ಯಾಕ
ರಣದ ಪ್ರಾಧಾನ್ಯವನ್ನು ಒತ್ತಿ ಹೇಳುತ್ತಿದ್ದುದು ವೇದೋಕ್ತಿಗಳಿಂದಲೇ ಸ್ಪಷ್ಟವಾಗುತ್ತದೆ. ತನ್ನ
ನಿರುಕ್ತದಲ್ಲಿ ಇದರ ಬಗ್ಗೆ ಬರೆಯುತ್ತಾ ಯಾಸ್ಕ ಹೀಗೆಂದಿದ್ದಾನೆ: ''ಬೋಧಕನು ಎಲ್ಲಾ
ಬಗೆಯ ವಿದ್ಯಾರ್ಥಿಗಳಿಗೂ ವೇದವನ್ನು ಬೋಧಿಸಬಾರದು . . . . ಬುದ್ಧಿವಂತನೂ
(ಮೇಧಾವಿ) ಮತ್ತು ಸೌಶೀಲ್ಯ ಮತ್ತು ತಪಸ್ಸಿನಿಂದ ಕೂಡಿದವನೂ ಇವುಗಳ ಜೊತೆಗೆ ಜ್ಞಾನ
ತೃಷ್ಣೆಯಿಂದ ಕೂಡಿದವನೂ ಆದವನಿಗೆ ಮಾತ್ರ ಬೋಧಿಸಬೇಕು . . . . ಬೋಧಿಸುವಾಗ
ಏಕ ಅಕ್ಷರ ಶಬ್ದಗಳ ಮೂಲಕ ಬೋಧಿಸಕೂಡದು. ಅದರಲ್ಲೂ ವ್ಯಾಕರಣ ತಿಳಿಯದವನಿಗೆ
ಬೋಧಿಸಲೇ ಕೂಡದು.''[18] ಅಲ್ಲಿಗೇ ನಿಲ್ಲಿಸದೆ ಯಾಸ್ಕ ವಿದ್ಯಾಧಿದೇವತೆ ಒಬ್ಬ ಬ್ರಾಹ್ಮಣನನ್ನು
ಸಂಧಿಸಿ ಹೀಗೆಂದು ಪ್ರಾರ್ಥಿಸುವ ಘಟನೆಯೊಂದನ್ನು ನಮ್ಮ ಗಮನಕ್ಕೆ ತಂದಿದ್ದಾನೆ. ''ಶ್ರೋತ್ರಿ
ಯನೇ, ನನ್ನನ್ನು ಕಾಪಾಡು. ನಾನು ನಿನ್ನ ಸಂಪತ್ತು. ನನ್ನನ್ನು ಕೆಳಗೆ ಕಂಡ ಅಪಾತ್ರರಿಗೆ, ಹೊಟ್ಟೆ
ಕಿಚ್ಚು ಪಡುವವನು (ಅಸೂಯಕ), ಸರಳತೆ ಪ್ರಾಮಾಣಿಕತೆ ಇಲ್ಲದವನು (ಅನೃಜು) ಆತ್ಮ
ಸಂಯಮ ಇಲ್ಲದವನು (ಅಯತಾ) ಇವರಿಗೆ, ನೀಡಬೇಡ. ಆಗ ಮಾತ್ರ ನಾನು ಸಮರ್ಥ
ನಾಗುತ್ತೇನೆ. . . . . ಇಂಥ ನಿಧಿಯನ್ನು ಕಾಪಾಡಲು ಯಾರು ಶುಚಿವಂತರೋ,
ಭಾಷ್ಪೋದ್ರೇಕರಹಿತರೋ (ಅಪ್ರಮತ್ತ:), ಬುದ್ಧಿವಂತರೋ ಮತ್ತು ಬ್ರಹ್ಮಚರ್ಯನಿಷ್ಠರೋ
ಅಂಥವರಿಗೆ ನನ್ನನ್ನು ಉಪಾಧ್ಯಾಯ ದಾನ ಮಾಡುವಂತೆ ಮಾಡು.” ವಿದ್ಯಾಧಿದೇವತೆಯ
ಪ್ರಾರ್ಥನೆ ಮೇಲೆ ನಿರೂಪಿಸಿದ ಲಕ್ಷಣಗಳು, ಆಸಕ್ತಿ ಮತ್ತು ಸಜ್ಜುಗೊಳಿಸಿದ ಭಾಷಾ ಪ್ರಾವೀಣ್ಯ

---

[18] Yaska : Nirukta II, 3–4

ದಿಂದ ಕೂಡಿದ ವಿದ್ಯಾರ್ಥಿಗೆ ಮಾತ್ರ ವೇದ ಕಲಿಯುವ ಅರ್ಹತೆ ಇದೆ ಎಂಬ ಋಷಿಗಳ ಮನೋಭಾವವನ್ನು ವ್ಯಕ್ತಪಡಿಸುತ್ತದೆ.

ಪರಿಷತ್ತುಗಳು ಕೇವಲ ಭಾಷಾ ಪರಿಶುದ್ಧತೆ ಮಾಧುರ್ಯಗಳ ಕಡೆ ಗಮನ ಕೊಟ್ಟವು ಎಂದರೆ ತಪ್ಪಾಗುತ್ತದೆ. ವಾಕ್ ಪರಿಶುದ್ಧಿಯಾಗುತ್ತಿದ್ದಂತೆ ಅರ್ಥ ಸ್ಪಷ್ಟತೆ, ನಿರೂಪಣಾ ಸಾಮರ್ಥ್ಯಗಳೂ ಮುಂದುವರಿಯುತ್ತಿದ್ದುವು. ಋಷಿಗಳ ದೃಷ್ಟಿಯಲ್ಲಿ ವಾಕ್ ಮತ್ತು ಅರ್ಥಗಳು ತಕ್ಕಡಿಯ ಸಮ ದೂಗುವ ತಟ್ಟೆಗಳಂತೆ. ಇದರಿಂದ ಅರ್ಥರಹಿತ ಶಬ್ದಗಳ ಪ್ರಯೋಗಕ್ಕೆ ಅವಕಾಶವಿರಲಿಲ್ಲ. ಕೇವಲ ಕಂಠಪಾಠದಲ್ಲಿ ಪರ್ಯವಸಾನವಾಗದೆ ಅವುಗಳ ಅರ್ಥ ಸಾಕ್ಷಾತ್ಕಾರಕ್ಕೆ ಸಾಧನವಾಗಬೇಕು ಎಂದು ಸ್ಪಷ್ಟಪಡಿಸಿ ಕೇವಲ ಶಬ್ದೋಚ್ಚಾರಣೆಗಳಲ್ಲಿ ನಿರತರಾಗಿ ಅರ್ಥದ ಕಡೆ ಗಮನ ಕೊಡದವರನ್ನು ವೇದೋಕ್ತಿಗಳೇ ನಿಂದಿಸಿವೆ. ಋಗ್ವೇದದ ಹತ್ತನೆಯ ಮಂಡಲದ ಒಂದು ಸೂಕ್ತ, ಶ್ರವಣವಾದ ಮೇಲೆ ಸಾಕ್ಷಾತ್ಕಾರ ಪಡೆಯಲು ಬೇಕಾದ ವಿಶ್ರಾಂತಿ, ಮೌನ ತಾಳದೇ ಆತುರದಲ್ಲಿ ಅವುಗಳನ್ನು ಹೇಳತೊಡಗಿದ ವಿದ್ಯಾರ್ಥಿಗಳನ್ನು ವರ್ಷಪೂರ್ತಿ ನಿದ್ರಿಸುತ್ತಿದ್ದು ಮೋಡ ಮಳೆ ಕಂಡ ತಕ್ಷಣವೇ ವಟಗುಟ್ಟಲು ಪ್ರಾರಂಭಿಸಿದ ಕಪ್ಪೆಗಳಂತೆ ಎಂದು ಹೀಯಾಳಿಸುತ್ತದೆ. ಯಾಸ್ಕ ಇದರ ಬಗ್ಗೆ ಬರೆಯುತ್ತ, ವೇದಾಧ್ಯಯನ ಮುಗಿಸಿ ಮೌನವ್ರತ ಕೈಗೊಂಡವರು ಮಾತ್ರ ಸರಿಯಾದ ವೈದಿಕ ವಿದ್ಯಾರ್ಥಿಗಳೆಂದಿದ್ದಾನೆ. ಇದೇ ಅಂಶವನ್ನು ಅದೇ ವೇದ ಶಾಖೆಯ ಒಂದನೆಯ ಮಂಡಲದ ಮತ್ತೊಂದು ಋಕ್ ಇನ್ನೂ ಸ್ಪಷ್ಟಪಡಿಸುತ್ತದೆ. ಅದು ಹೀಗಿದೆ : "ನಾನು ಕೇಳುತ್ತೇನೆ. ವಾಕ್‌ನ ಜನ್ಮಸ್ಥಳವೇನು ? ವಾಕ್ ಬ್ರಹ್ಮ (ಬ್ರಹ್ಮಾಯಂ ವಾಚಃ). ಅದನ್ನು ನಾನು ಐಂದ್ರಿಕತೆ. ಪ್ರಾಪಂಚಿಕತೆಗಳಿಂದ ಬಂಧಿತನಾಗಿರುವವರೆಗೂ ತಿಳಿಯಲಾರೆ.[19] ಋತದ ಪರಮ ಜ್ಞಾನದ ಉದಯ ಮಾತ್ರ ವಾಕ್‌ನ ಅರ್ಥ ತಿಳಿಯಲು ಸಹಾಯ ಮಾಡುತ್ತದೆ." ಮತ್ತೊಂದು ಮಂತ್ರ. "ಋಕ್ ಮತ್ತು ಅಕ್ಷರದ ಹಿಂದಿರುವ ಸತ್ಯಾರ್ಥವನ್ನು ತಿಳಿಯದವನು ಕೇವಲ ಅವುಗಳ ಉಚ್ಚಾರಣೆಯಿಂದ ಏನನ್ನೂ ಸಾಧಿಸಲಾರ. ಅವುಗಳಲ್ಲಿಯೇ ಎಲ್ಲ ದೇವರೂ ಅಂತಸ್ಥರಾಗಿದ್ದಾರೆ". ಎಂದು ಹೇಳುತ್ತದೆ. ಸಾಯಣ ತನ್ನ ಟಿಪ್ಪಣಿಯಲ್ಲಿ, ಗೂಢಾರ್ಥಗಳನ್ನು ತಿಳಿಯದವನಿಗೆ ಋಗ್ವೇದ ಕೇವಲ 'ಅಪರಾವಿದ್ಯೆ' ಎಂದಿದ್ದಾನೆ.[20] ಯಾಸ್ಕ, "ಸಮವ್ಯಾಸಂಗ ಮಾಡುವ ವಿದ್ಯಾರ್ಥಿಗಳಲ್ಲಿ ಕೆಲವರು ಕೇವಲ ಶಬ್ದ ಮಾತ್ರ ಕೇಳಿ ಅರ್ಥ ತಿಳಿಯದಿರಬಹುದು. ಮತ್ತೆ' ಕೆಲವರು ಕೇಳಿದರೂ ಪೂರ್ಣವಾಗಿ ಕೇಳದಿರಬಹುದು. ಆದರೆ ಪೂರ್ಣವಾಗಿಯೂ ಬಲು ಸೊಗಸಾಗಿಯೂ ವಸ್ತ್ರ ಧರಿಸಿ ಒಬ್ಬ ಗೃಹಿಣಿಯು ತನ್ನ ಪತಿಯ ಮುಂದೆ ಹೇಗೆ ಸಾಲಂಕಾರ ಭೂಷಿತಳಾಗಿ ಕಾಣಿಸಿಕೊಳ್ಳುವಳೋ ಮತ್ತು ಆದರಿಂದ ಅವಳನ್ನು 'ನೋಡಿ' 'ಕೇಳ'ಬಹುದೋ ಹಾಗೆಯೇ ಒಳ್ಳೆಯ ಶ್ರೋತ್ರಿಯ ವಿದ್ಯಾರ್ಥಿಯ ಮುಂದೆ ಶಬ್ದಗಳು ತಮ್ಮ ಅರ್ಥವನ್ನು ಹೊರತೋರುತ್ತವೆ, ಎಂದು ನಿರುಕ್ತದಲ್ಲಿ[21] ಹೇಳಿದ್ದಾನೆ. ಮತ್ತೊಂದು

---

19 ನಿಸ್ಸ್ಯಃ ಸನ್ನದ್ಧೋ ಮನಸಾ ಸ್ಮರಾಮಿ.

20 Rg Bhashya I, 164–35, 38

21 Rg Veda, 71. 4 : also Yaska, Nirukta : I–19

ಕಡೆ, ಸರಿಯಾಗಿ ಅರ್ಥ ತಿಳಿದಿರುವ ಪಂಡಿತನು ಸಭೆಗಳಿಗೆ ಭೂಷಣ ; ಹಾಗಿಲ್ಲದೆ (ಅರ್ಥ ತಿಳಿಯದೆ) ಕೇವಲ ಶಬ್ದೋಚ್ಚಾರಣೆಯಲ್ಲಿ ನಿರತನಾಗಿರುವವನು ಬಂಜೆ ಮತ್ತು ಹಾಲು ಕೊಡದ ಸುಮ್ಮನೆ ಅಲೆದಾಡುತ್ತಿರುವ ದನದಂತೆ, ಪುಷ್ಪ ಫಲ ರಹಿತವಾಗಿ ಬೆಳೆಯುತ್ತಿರುವ ವೃಕ್ಷದಂತೆ,[22] ಎಂದು ಅಭಿಪ್ರಾಯ ಸೂಚಿಸಿದ್ದಾನೆ. ಅಲ್ಲದೆ ಅಂಥವರನ್ನು [ಪದಗಳ ಸರಿಯಾದ ಅರ್ಥ ಗೊತ್ತಿಲ್ಲದವರು-ಅರ್ವಾಕ್] ವೇದ ಶಾಸ್ತ್ರಾಭ್ಯಾಸ ಅಧ್ಯಯನಕ್ಕಲ್ಲ, ನೇಗಿಲಿನಿಂದ ನೆಲ ಉಳಲು ಅಥವಾ ಮಗ್ಗದಿಂದ ನೇಯುವುದಕ್ಕೆ ಕಳುಹಿಸಬೇಕು ಎಂದು ಋಗ್ವೇದ ಭಾಷ್ಯದಲ್ಲಿ[23] ಬರೆದಿದ್ದಾನೆ. ತನ್ನ ಈ ಬಗೆಯ ಅಭಿಪ್ರಾಯವನ್ನು ಸಂಹಿತೋಪನಿಷತ್ ಬ್ರಾಹ್ಮಣದ ಒಂದು ಉಕ್ತಿಯಿಂದ ಯಾಸ್ಕ ದೃಢಪಡಿಸಿದ್ದಾನೆ. "ಅರ್ಥ ತಿಳಿಯದೆ ವೇದದ ಹೊರೆಯನ್ನು ತಲೆಯಲ್ಲಿಟ್ಟುಕೊಂಡಿರುವವನು ವಾಸನೆಯನ್ನು ಅನುಭವಿಸದೆ ಗಂಧದ ಹೊರೆಯನ್ನು ಹೊತ್ತು ಸಾಗುತ್ತಿರುವ ಕತ್ತೆಗಳಂತೆ[24]. . . ಅರ್ಥ ತಿಳಿಯದ ವಿದ್ಯೆ ತಣ್ಣಗಿರುವ ಬೂದಿಯ ಮೇಲೆ ಇಡುವ ಮರದ ತುಂಡಿನಂತೆ (ಎಂದಿಗೂ ಅದಕ್ಕೆ ಕಾವು ತಗಲುವುದಿಲ್ಲ ಎಂದರ್ಥ)." ಇದರ ಬಗ್ಗೆ ಟಿಪ್ಪಣಿ ಬರೆಯುತ್ತಾ ಸಾಯಣ, ಅರ್ಥ ತಿಳಿಯದೇ ಕೇವಲ ಶಬ್ದಗ್ರಾಹಕ ವೇದದ ವಿದ್ಯಾರ್ಥಿಯನ್ನು ಅವುಗಳಲ್ಲಿ ಗೂಢವಾಗಿರುವ ಬ್ರಹ್ಮಜ್ಯೋತಿಯ ಕಡೆಗೆ ಎಂದೂ ಕರೆದೊಯ್ಯಲಾರವು,[25] ಎಂದಿದ್ದಾನೆ. ಇವುಗಳು ಮಾತ್ರವಲ್ಲ. ಇನ್ನೂ ಅನೇಕ ಋಕ್‌ಗಳು ವೇದಾಧ್ಯಯನದಲ್ಲಿ ಅರ್ಥಸಾರಗಳು ತಿಳಿಯುವಿಕೆ ಬಹು ಪ್ರಧಾನವೆಂದು ತೋರುತ್ತವೆ.

ಭಾಷಾ ಪರಿಶುದ್ಧತೆ ಮತ್ತು ಅರ್ಥಗಳು ಸಮತೂಕದಿಂದ ಮಾತ್ರವಲ್ಲ. ಮಂತ್ರಗಳ ಕ್ರಮಬದ್ಧ ಉಚ್ಚಾರಣೆಯೇ ಒಂದು ಬಗೆಯ ಅಪ್ರತ್ಯಕ್ಷ ಆಧ್ಯಾತ್ಮಿಕ ಫಲವನ್ನು[26] ಕೊಡುತ್ತ

---

22 ತನ್ನ ಭಾಷ್ಯದಲ್ಲಿ ಸಾಯಣನು ಪುಷ್ಪ ಶಬ್ದಕ್ಕೆ ವೇದದ ಪೂರ್ವಕಾಂಡವು ಬೋಧಿಸುವ ಧರ್ಮವೆಂದೂ ಫಲ ಶಬ್ದ ಉತ್ತರಕಾಂಡ ಬೋಧಿಸುವ ಬ್ರಹ್ಮನನ್ನು ಬೋಧಿಸಲು ಉಪಯೋಗಿಸಲ್ಪಟ್ಟಿದೆಯೆಂದೂ, ಫಲವು ಹೇಗೆ ನಮಗೆ ಸುಖ ತರುತ್ತದೆಯೋ ಹಾಗೆಯೇ ಬ್ರಹ್ಮನು ತೃಪ್ತಿ ತರುತ್ತಾನೆ ಎಂದೂ ಬರೆದಿದ್ದಾನೆ.

ಅಂತೆಯೇ ಮತ್ತೊಂದು ಉಪಮೆಯಲ್ಲಿಯೂ ಪಶುವಿನಂತೆಯೇ ವೇದವೂ ಹಾಲನ್ನು (ಅಂದರೆ ಧರ್ಮವನ್ನು)–ಬ್ರಹ್ಮಜ್ಞಾನ, ಮತಧರ್ಮ ಮತ್ತು ಪರಮಜ್ಞಾನವನ್ನು-ಕೇವಲ ಶಬ್ದೋಚ್ಚಾರಕನಿಗೆ (ಪಾಠಮಾತ್ರಪರಂ ಪ್ರತಿ) ಕೊಡುವುದಿಲ್ಲ, ಎಂದರ್ಥಮಾಡಿದ್ದಾನೆ.

23 ವಾಚಂ ಅಭಿಪದ್ಯ ಪಾಪಯಾ . . . . ವಾಚಂ ಲೌಕಿಕೀಂ ತಯಾ ಪಾಪಯಾ ಪಾಪಕಾರಿಣಾ ವಾಚಾ . . . .

24 ಸ್ಥಾಣುರಯಂ ಭಾರಹಾರಃ . . . ನಿಗದೇನೈವ ಶಬ್ದ್ಯತೇ . . .

25 ಯದ್ ವೇದವಾಕ್ಯ ಮಾಚಾರ್ಯಾತ್ ಗೃಹೀತಂ ಅರ್ಥಜ್ಞಾನರಹಿತಂ ಪಾಠರೂಪೇ ನೈವ ಪುನರುಚ್ಚಾರ್ಯತೇ ತತ್ ಕದಾಚಿದಪಿ ನ ಜ್ವಲತಿ ಸ್ವಾರ್ಥಂ ನ ಪ್ರಕಾಶಯತಿ

—Sayana

26 ನಿಯತ ಪಾಠಕ್ರಮ ಸಾಫಲ್ಯಸ್ಯಾಯ ಉಚ್ಚಾರಣಮೇವ ಮಂತ್ರಪ್ರಯೋಜನಂ

ದೆಂದು ವೇದಗಳು ಸಾರುತ್ತವೆ. ವೇದ ಸಾಹಿತ್ಯವೇ ಒಂದು ರಹಸ್ಯಾರ್ಥದಿಂದ ಕೂಡಿದ ಸಾಗರ. ವೇದೋಕ್ತಿಗಳು ಅಕ್ಷರಗಳಿಂದ ರಚಿಸಲ್ಪಟ್ಟಿವೆ. ಅಕ್ಷರವೆಂದರೆ ಕೇವಲ ಬರೆಯಲು ಉಪಯೋಗಿಸುವ ಲಿಪಿ ಮಾತ್ರವಲ್ಲ. ಅವಿನಾಶಿಯೂ ಶಾಶ್ವತವೂ ಆದುದನ್ನೂ ಅದು ಸೂಚಿಸುತ್ತದೆ.[27] ಎಂದು ಮ್ಯಾಕ್ಸ್‌ಮುಲ್ಲರ್ ಅಭಿಪ್ರಾಯ ಸೂಚಿಸಿದ್ದಾನೆ. ಇದರಿಂದ ಅದರ ಸರಿಯಾದ ಉಚ್ಚಾರಣೆ ಒಂದು ಬಗೆಯ ಪಾವಿತ್ರ್ಯವನ್ನು ವ್ಯಕ್ತಿಯಲ್ಲಿ ಉಂಟುಮಾಡುತ್ತದೆ ಎಂಬ ಭಾವನೆ ಬೆಳೆಯಿತು. ಅಷ್ಟೇ ಅಲ್ಲ. ಇವರ ಬಗ್ಗೆ ಬರೆಯುತ್ತ. ಅನಂತರದ ಗ್ರಂಥ ಒಂದು ಅಕ್ಷರ ಅಥವಾ ಬಿಂದುವನ್ನು ತಪ್ಪು ಹೇಳಿದರೂ ಸರ್ವನಾಶವಾಗುತ್ತದೆ[28] ಎಂದು ಎಚ್ಚರಿಕೆ ನೀಡಿದೆ.

ಪರಿಷತ್ತುಗಳಲ್ಲಿ ನಾವು ಕಾಣಬಹುದಾದ ಒಂದು ವಿಶೇಷ ಅಂಶವೆಂದರೆ, ಸಭಿಕರು ಪಡೆದಿದ್ದ ವಾಕ್ ಮತ್ತು ವಿಚಾರ ಸ್ವಾತಂತ್ರ್ಯ. ಘೋಷಕ ಘೋಷಿತರಿಬ್ಬರೂ ತಾವು ನಡೆಸಿದ ವಿಷಯ ವಿಚಾರ ಮಂಥನದ ಫಲವನ್ನು ನಿರ್ಭಯವಾಗಿ, ನಿಸ್ಸಂಕೋಚವಾಗಿ ಸಭಿಕರ ಮುಂದೆ ನೀಡುವ ಅವಕಾಶ ಸ್ವಾತಂತ್ರ್ಯ ಪಡೆದಿದ್ದರು. ನಿಜವಾಗಿಯೂ ಇದು ಬಹು ಗಮನಾರ್ಹ ಮತ್ತು ಸ್ತುತ್ಯರ್ಹ ಅಂಶ. ಸಮಾನ ಭಾವನೆಗಳಿಂದ ಕೂಡಿದ ವ್ಯಕ್ತಿಗಳಿಂದ ಸಭೆ ರಚಿಸಲ್ಪಡುತ್ತಿದ್ದಿತು. ಹೆಚ್ಚು ಕಡಿಮೆ, ಉಚ್ಚ ನೀಚರೆಂಬ ಭಾವನೆಯಿಲ್ಲದೆ ಎಲ್ಲರೂ ಸತ್ಯಾನ್ವೇಷಣೆಯಲ್ಲಿ ತೊಡಗಿದ್ದ ಸಹಗಾಮಿಗಳಂತೆ (ಸಖಾಯಃ ಸಖ್ಯಾನಿ ಜಾನತೇ) ವರ್ತಿಸುತ್ತಿದ್ದರು. ಎಲ್ಲರ ಉದ್ದೇಶವೂ ಪರಮಸತ್ಯ ಮತ್ತು ಒಳ್ಳೆಯದರ ಅನ್ವೇಷಣೆಯಾಗಿದ್ದಿತು. ಇದರಿಂದ ಪ್ರತಿಯೊಬ್ಬನೂ ತಾನೇ ಯೋಗಗಳಿಂದ ಪಡೆದಿದ್ದ ಅನುಭವ ಜ್ಞಾನವನ್ನು ಇತರರ ಮುಂದೆ ನಿರೂಪಿಸಲು ಅಧಿಕಾರ ಪಡೆದಿದ್ದ. ಅಂಥ ಬೆಳಕು ನೀಡುವವರು ಕೇವಲ ಶ್ರೋತೃಗಳಾಗಿರದೆ ಚರ್ಚೆಗಳಲ್ಲಿ ಬಹುವಾಗಿ ಮತ್ತು ಬಹಿರಂಗವಾಗಿ ವಿಚಾರ ವಿನಿಮಯ ಮಾಡುತ್ತಿದ್ದರು, ಎಂದು ಸಾಯಣ ಬರೆದಿದ್ದಾನೆ.

ಈ ಬಗೆಯ ವೈದಿಕ ಶಿಕ್ಷೆಯ ಫಲಿತಾಂಶವೆಂದರೆ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ ಮತ್ತು ಛಂದಸ್ ಎಂಬ ಷಡಂಗ ವೇದ ಎಂದು ಕರೆಯಲ್ಪಡುವ ವೇದಾಂಗಗಳಲ್ಲಿ ವೇದಾಧ್ಯಯನ ಪರ್ಯವಸಾನವಾಯಿತು. ಈ ಅಂಗಗಳು ಈಗ ಕೇವಲ ಸೂತ್ರರೂಪದಲ್ಲಿ ಉಳಿದಿದ್ದರೂ ಸಮರ್ಪಕ ರೀತಿಯಲ್ಲಿ ವೇದಗಳನ್ನು ಅಧ್ಯಯನ ಮಾಡಲು ಅವುಗಳ ಹಿನ್ನೆಲೆ ಅತ್ಯಗತ್ಯ ಎನ್ನುವುದನ್ನು ಮರೆಯಲಾಗದು. ಇದಕ್ಕಿಂತಲೂ ಪ್ರೌಢ ವಿಷಯವೆಂದರೆ, ವೇದಾಧ್ಯಯನದ ಹಿನ್ನೆಲೆಯಾಗಿರುವ ಈ ಷಡಂಗ ಶಾಸ್ತ್ರಗಳಿಗೂ ಬೆನ್ನುಮೂಳೆಯಂತಿರುವ ಮತ್ತೊಂದು ಶಾಸ್ತ್ರವನ್ನು ವೇದವೇ ಹೇಳುತ್ತದೆ. ಅದು ಶಾಸ್ತ್ರಗಳ ಶಾಸ್ತ್ರವಾದ ವಿಚಾರ ಶಾಸ್ತ್ರ ; ಋಗ್ವೇದದ ಒಂದು ಋಕ್‌ನಲ್ಲಿ " ವಕ್ಮ್ಯಾನಾಂ ಮೇಲಿಂ " ಎಂಬ ಪ್ರಯೋಗವಿದೆ. ಈ ಶಬ್ದ ಪರಸ್ಪರ ವಿರೋಧ ಭಾವನೆಗಳನ್ನು ಸಮನ್ವಯ ಮಾಡಿ ತೀರ್ಪು ಕೊಡುವವನು ಎಂಬರ್ಥ ಸೂಚಿಸುತ್ತದೆ. ಇವರಿಂದ ಋಗ್ವೇದದ ಕಾಲದ ವೇಳೆಗೆ ವಾದ ಕಲೆ ಬೆಳೆದಿದ್ದು, ಪೂರ್ವ ಪಕ್ಷ, ಖಂಡನ ಮತ್ತು

---

27 Max Mueller: *Ancient Indian Literature*, P. 507

28 ಪಾಣಿನಿ ಶಿಕ್ಷಾ, V. 52

ಸಿದ್ಧಾಂತಗಳೆಂಬ ಹಂತಗಳನ್ನೊಳಗೊಂಡ ವಾದ ರೀತಿ ಶಾಸ್ತ್ರ ಪರಿಣತರಿಗೆ ಪರಿಚಯವಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಆದರೆ ಅದು ಅಂದಿನ ಕಾಲದಲ್ಲಿ ಇಂದು ಬೆಳೆದಿರುವಷ್ಟು ವಿಸ್ತಾರವಾಗಿ ಆನ್ವೇಷಿಕೀ ರೂಪದಲ್ಲೇ ಬೆಳೆದಿಲ್ಲದಿರಬಹುದು. ಇಂದು ಉಪಯೋಗಿಸುವಷ್ಟು ತಾರ್ಕಿಕ ಶಬ್ದಗಳ ಮಾಲೆ ಅಂದಿನವರಿಗೆ ಪರಿಚಯವಿಲ್ಲದಿದ್ದಿರಬಹುದು. ಆದರೆ ಇವುಗಳೆಲ್ಲ ಗೌಣ. ವೈಜ್ಞಾನಿಕ ಮನೋಭಾವದ ಪ್ರಧಾನ ಅಂಶಗಳಾದ ಸತ್ಯಪ್ರಿಯತೆ, ಭಾಷಾ ಪರಿಶುದ್ಧತೆ, ಅರ್ಥಸ್ಪಷ್ಟತೆ, ಕ್ರಮಬದ್ಧ ವಿಷಯ ನಿರೂಪಣೆ, ವಿಚಾರ ವಿಶ್ಲೇಷಣೆ, ಪೂರ್ವಪಕ್ಷ ನಿರೂಪಣೆ ಮತ್ತು ಖಂಡನೆ, ಅಂತ್ಯದಲ್ಲಿ ಸರಿ ಮತ್ತು ಸಮಂಜಸವಾದುದರ ಸಿದ್ಧಾಂತ. ಇದು ವೇದಗಳ ಕಾಲದ ಜನರಿಗೆ ತಿಳಿದಿತ್ತೆಂಬುದರಲ್ಲಿ ಸಂದೇಹವಿಲ್ಲ. ಅದರಲ್ಲಿಯೂ ಪರಿಷತ್ತುಗಳು ಈ ಅಂಶಗಳನ್ನು ಸಾಧಿಸಲು ಏರ್ಪಟ್ಟ ವಿಶೇಷ ಸಮಾರಂಭಗಳು ಎಂಬುದು ನಿಸ್ಸಂಶಯವಾದ ವಿಷಯವೇ ಸರಿ.

ಮಾನವನ ಜೀವನ ಸಂಗ್ರಾಮವು ಹೇಗೆ ದ್ವಿಮುಖವೋ ಹಾಗೆಯೇ ಮಾನವನ ಅನ್ವೇಷಣೆಗೆ ವಿಷಯವಾದ ವಿಶ್ವವೂ ದ್ವಿಮುಖಿ. ಪಾರಮಾರ್ಥಿಕ, ವ್ಯಾವಹಾರಿಕ ; ನಿತ್ಯ, ಅನಿತ್ಯ ; ಚೇತನಾತ್ಮಕ, ಅಚೇತನಾತ್ಮಕ–ಹೀಗೆ ದ್ವಿಮುಖಿವಾದ ವಿಶ್ವದ ರಹಸ್ಯವನ್ನರಿಯಲು ಮಾನವನ ಪ್ರಯತ್ನವೂ ದ್ವಿವಿಧ: ಇಂದ್ರಿಯಗೋಚರವಾದ ಪ್ರತ್ಯಕ್ಷ ವೀಕ್ಷಣ ಪ್ರಮಾಣವನ್ನೇ ಅವಲಂಬಿಸಿ, ವಿಶ್ಲೇಷಣಾತ್ಮಕವಾದ ಜ್ಞಾನವನ್ನು ಮಾತ್ರ ಪಡೆಯಬಲ್ಲ ವೈಜ್ಞಾನಿಕ ದೃಷ್ಟಿ: ಇಂದ್ರಿಯಾನುಭವವನ್ನು ಮೀರಿದ ಸತ್ಯ-ಸೌಂದರ್ಯಗಳನ್ನು ಸಾಕ್ಷಾತ್ಕರಿಸುವ ಋಷಿಗಳ ಪೂರ್ಣದರ್ಶನ. ಮಾನವನ ಸಂಸ್ಕೃತಿಯ ಇತಿಹಾಸದಲ್ಲಿ ಈ ಎರಡು ಪ್ರಯತ್ನಗಳಿಗೂ ಅವುಗಳಿಗನುರೂಪವಾದ ವೈಶಿಷ್ಟ್ಯವಿದೆ: ಅಲ್ಲದೆ ಎರಡು ಪ್ರಯತ್ನಗಳೂ ಅವುಗಳಿಗೆ ಸಹಜವಾದ ಸಿದ್ಧಿಯನ್ನೂ ಪಡೆದಿವೆ. ತತ್ತ್ವಜ್ಞಾನಕ್ಕೆ ಸಾಧನಗಳಾದ ಈ ಎರಡು ಪ್ರಯತ್ನಗಳೂ ಕೆಲವು ವೇಳೆ ಪರಸ್ಪರ ಸಂಬಂಧವೇ ಇಲ್ಲದೆ ಪ್ರತ್ಯೇಕವಾಗಿ ನಡೆದು ಬೆಳೆದುದೂ ಉಂಟು. ಪರಸ್ಪರ ಸೌಹಾರ್ದ ಸಾಮರಸ್ಯಗಳಿಂದ ಒಂದರ ಮೇಲೆ ಇನ್ನೊಂದರ ಪ್ರಭಾವ ಹರಿದು ಪರಸ್ಪರ ಪೋಷಕಗಳಾದ ಸನ್ನಿವೇಶಗಳೂ ಉಂಟು. ಇದಲ್ಲದೆ, ಇವೆರಡಕ್ಕೂ ಸಂಬಂಧವಿಲ್ಲದೆ, ಮತವೆಂದು ಹೇಳಿಕೊಳ್ಳುವ ಅಂಧಶ್ರದ್ಧೆ ಬೆಳೆದು ಈ ಎರಡು ಸಾಧನೆಗಳನ್ನೂ ಕುಂಠಿತಗೊಳಿಸಿರುವ ಸಂದರ್ಭಗಳು ಇನ್ನೂ ಹೇರಳವಾಗಿವೆ. ಪರಸ್ಪರ ಪೋಷಕಗಳಾದ ಮೊದಲೆರಡರ ಶ್ರದ್ಧೆ ಮಾತ್ರ ಜಗತ್ತತ್ತ್ವದ ದಿವ್ಯ ದರ್ಶನಕ್ಕೆ ಸಾಧಕ. ವೈಜ್ಞಾನಿಕ ಅನ್ವೇಷಣೆಗೆ ಬೇಕಾದ ಧೀಶಕ್ತಿಯಿಂದಲೂ ಕವಿದರ್ಶನಕ್ಕೆ ಬೇಕಾದ ಭಾವುಕಶಕ್ತಿಯಿಂದಲೂ ಜೀವವನ್ನು ಪಡೆಯದಿರುವ ಮತಶ್ರದ್ಧೆ ಶ್ರದ್ಧೆಯಲ್ಲ, ಕೇವಲ ಅಂಧತೆ. ಇದರ ಪರಿಣಾಮವನ್ನೇ ''ಅಂಧೇನೈವ ನೀಯಮಾನಾ ಯಥಾಂಧಾಃ'' ಎಂಬ ಉಪನಿಷದ್ವಾಕ್ಯವು ಮೂದಲಿಸುತ್ತದೆ.

—**ಜಿ.ಎನ್. ಚಕ್ರವರ್ತಿ***

---

*'ಋಕ್ಸಂಹಿತಾಸಾರ', ಮೈಸೂರು (1965), ಪು. 3–4

ದಾಮೋದರ ಕೃಷ್ಣ ಪೊದುವಾಳ್

ಲೆಕ್ಕಪರಿಶೋಧನ ವೃತ್ತಿಯ ಭವಿಷ್ಯ

ಸಮಾಜದ ಅಭ್ಯುದಯಕ್ಕಾಗಿ ಇನ್ನಷ್ಟು ಉಪಯೋಗಕರ ನವೀನ ಪಾತ್ರದ ನಿರ್ವಹಣೆ ಇದೀಗ ಸಿ. ಎ. ಯ (Chartered Accountant ; ಸನ್ನದು ಪಡೆದ ಲೇಖಾಪಾಲ) ಪಾಲಿಗೆ ಬಂದೊದಗಿದೆ. ಇತ್ತೀಚೆಗೆ ಮುಂಬಯಿಯಲ್ಲಿ ಸಮಾವೇಶಗೊಂಡ ಭಾರತದ ಸಿ. ಎ.ಗಳ ಅಧಿವೇಶನದಲ್ಲಿ ಕೆಲವು ಮುಖ್ಯಾಂಶಗಳನ್ನು ಈ ದಿಶೆಯಲ್ಲಿ ಚರ್ಚಿಸಲಾಯಿತು. ಪರಂಪರಾನುಗತ ಕ್ಷೇತ್ರದಿಂದ ಕತ್ತು ಹೊರಚಾಚಿ ತನ್ನ ಚಟುವಟಿಕೆಗಳನ್ನು ವಿಸ್ತರಿಸಲು ಸಿ. ಎ. ಈಗ ಹೆಣಗಬೇಕಾಗಿದೆ. ಪ್ರಸಕ್ತ ವೃತ್ತಿಗೆ ತನ್ನದೇ ಆದ ಹಲವಾರು ಸಮಸ್ಯೆಗಳಿವೆ. ಕಾಲದಿಂದ ಕಾಲಕ್ಕೆ ತಲೆದೋರುವ ಕುಂದುಕೊರತೆಗಳಿವೆ. ಇವುಗಳತ್ತ ಕ್ಷ-ಕಿರಣ ಹರಿಸಿ, ಉದ್ಯೋಗ ಪ್ರಗತಿಪರವಾಗುವಂತೆ ಮತ್ತು ಸಮಾಜದ ಹಿತಕಾರಿ ಹಾಗೂ ಶ್ರೇಯೋಭಿಲಾಷಿಯಾಗುವಂತೆ ಮಾಡಲು ಅನೇಕ ಸಾಧ್ಯತೆಗಳಿವೆ.

ಯಾವುದೇ ಕ್ರಿಯಾತ್ಮಕ ಹಾಗೂ ಬೆಳೆಯುವ ವೃತ್ತಿ ಕಾಲಕ್ಕೆ ತಕ್ಕಂತೆ ಬದಲಾಗುವುದು ಅನಿವಾರ್ಯ. ಬ್ರಿಟಿಷ್ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಇನ್‌ಸ್ಟಿಟ್ಯೂಟ್ ಆಫ್ ಇನ್‌ಕಾರ್ಪೊರೇಟೆಡ್ ಅಕೌಂಟೆಂಟ್ಸ್ ಜೊತೆ ವಿಲೀನವಾಯಿತು. ನಮ್ಮ ದೇಶದಲ್ಲೂ ಉನ್ನತವಲಯದ ವೃತ್ತಿಪರರು ಬದಲಾದ ಪರಿಸರಕ್ಕೆ ಹೊಂದಿಕೊಳ್ಳುವ ಮನೋಭೂಮಿಕೆ ಸಾಧಿಸಿಕೊಂಡಿದ್ದಾರೆ. ರೂ. 5 ಲಕ್ಷ ಹಾಗೂ ಅದಕ್ಕೂ ಮಿಗಿಲು ನಿವ್ವಳ ಆದಾಯ ಹೊಂದಿರುವ ಸಂಸ್ಥೆ ಸುಮಾರು ಸೇ. 25 ರಷ್ಟು ಉದ್ಯಮಘಟಕ ತೆರಿಗೆ ಕೊಡಬೇಕಾಗಿದೆ. ಪರಿಣಾಮವಾಗಿ ಬೊಂಬಾಯಿಯ ಅನೇಕ ಪ್ರಸಿದ್ಧ ಸಿ. ಎ. ಸಂಸ್ಥೆಗಳು ಬಹಳಷ್ಟು ಜನ ಹಿರಿಯ ಅರ್ಹತೆಯುಳ್ಳ ಕಾರ್ಯದರ್ಶಿಗಳನ್ನು ಕೆಲಸದಿಂದ ಹೊರದಬ್ಬಿದುವು. ಇದಕ್ಕೆ ಕಾರಣವೆಂದರೆ ಸಣ್ಣ ಸಂಸ್ಥೆಗಳು ಪ್ರಾದೇಶಿಕ ಮಟ್ಟದಲ್ಲಿ ಲೆಕ್ಕಪರಿಶೋಧನೆ ನಡೆಸತೊಡಗಿದ್ದು.

ಸನ್ನದು ಪಡೆದಿರುವ ಭಾರತದ ಲೇಖಾಪಾಲರ ಸಂಘ ತನ್ನ ನಡವಳಿಕೆಯ ನೀತಿಸಂಹಿತೆಯನ್ನು 1963ರಲ್ಲಿ ರೂಪಿಸಿಕೊಂಡಿತು. ವ್ಯವಹಾರದಲ್ಲಿ ಕ್ಷುಲ್ಲಕವರ್ತನೆ ಎಂಬುದಾಗಿ ಪರಿಗಣಿತವಾದ ಅನೇಕ ವಿಧಾನಗಳ ಬಗ್ಗೆ ಅದು ತಿಳಿಸುತ್ತ, ಅವುಗಳ ಕುರಿತು ಜಾಗರೂಕರಾಗಿರಲು ಎಚ್ಚರಿಸುತ್ತದೆ. ಆದರೆ ಈ ಶಾಸನವಿಧಿ ಪ್ರಚಲಿತ ಪರಿಸ್ಥಿತಿಗನುಗುಣವಾಗಿ ಸಿ. ಎ. ಹೇಗೆ ಕಾರ್ಯಪ್ರವೃತ್ತನಾಗಬೇಕು ಎಂಬುದನ್ನು ತಿಳಿಸುತ್ತಿಲ್ಲ. ಜನರು ಸಿ. ಎ. ಯಿಂದ ಏನನ್ನು ಅಪೇಕ್ಷಿಸುವರು ಮತ್ತು. ಸಿ ಎ. ಅವರಿಗಾಗಿ ಏನು ಮಾಡಬೇಕು ಎಂಬ ವಿಚಾರಗಳು ಆದರಲ್ಲಡಕವಾಗಿಲ್ಲ. ಅವರ ದೃಷ್ಟಿಯಲ್ಲಿ ಕಾರ್ಯದಕ್ಷತೆಯನ್ನಳೆಯುವ ಪ್ರಮಾಣಗಳೇನು ಎಂಬುದನ್ನು ಯಾವ ವಿಧಿಯೂ ತಿಳಿಸುತ್ತಿಲ್ಲ. ಈ ದಿಶೆಗಳಲ್ಲಿ ಕಂಪನಿ ಅಧಿನಿಯಮ ಅನೇಕಾನೇಕ ವಿಧಿಗಳನ್ನು ಒಳಗೊಂಡಿದೆ. ಅಲ್ಲದೆ

ಅವನ್ನು ತಿದ್ದುಪಡಿ ಹಾಗೂ ಸೇರಿಕೆಗಳಿಂದ ಬದಲಾಯಿಸಿದ ಪರಿಸ್ಥಿತಿಗೆ ಹೊಂದುವಂತೆ ಮಾಡಲಾಗುತ್ತಿದೆ. ಉದಾಹರಣೆಗೆ, ಈಗಾಗಲೇ ಸ್ವೀಕೃತವಾದ ಬಂಡವಾಳ ರೂ. 25 ಲಕ್ಷವಿರುವ ಪ್ರತಿಯೊಂದು ಕಂಪನಿಯೂ ಆಂತರಿಕ ಲೆಕ್ಕ ಪರಿಶೋಧನೆ ನಡೆಸಲೇಬೇಕೆಂದು ಶಾಸನ ವಿಧಿಸಿ, ಲೆಕ್ಕಪರಿಶೋಧಕ ತನ್ನ ಕಾರ್ಯದ ಆರಂಭದ ಮುನ್ನ ಇದನ್ನು ಗಮನಿಸಬೇಕೆಂದು ತಿಳಿಸಿದೆ.

"ವ್ಯವಸ್ಥಾಪನ/ನಿರ್ವಹಣೆ/ಸಮಾಲೋಚನ ತಜ್ಞಸೇವೆ" ಎಂಬ ಬೃಹತ್ ಶಾಖೆಗೆ ಸಂಬಂಧಿಸಿದ ಅನೇಕ ಅಂಶಗಳನ್ನು ಇಂದಿನ ವೃತ್ತಿ ಒಳಗೊಳ್ಳಬೇಕಾಗಿದೆ. ಬರಿಯ ಸರಿಯೋ ತಪ್ಪೋ ಎಂಬ ಶೋಧನಕಾರ್ಯವೂ ಸೇರಿ ವೆಚ್ಚದ ಬಗ್ಗೆ, ಧನವ್ಯವಸ್ಥೆಯ ಬಗ್ಗೆ, ಕಂದಾಯ ತೆರಿಗೆಗಳ ಬಗ್ಗೆ, ಮತ್ತಿತರ ಸಂಬಂಧಿಸಿದ ವ್ಯವಹಾರಗಳ ಬಗ್ಗೆ ನಿರ್ವಹಣಾ ಮಂಡಳಿಗೆ ತಿಳಿವಳಿಕೆ ಕೊಡಬೇಕಾದ ಕರ್ತವ್ಯ ಸಿ. ಎ. ಯ ಹೆಗಲ ಮೇಲೇರಿದೆ. ಒಟ್ಟು ಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚಿನ ಸಿ. ಎ.ಗಳು ಈ ವೃತ್ತಿಪರರಾಗದೆ ಕೈಗಾರಿಕಾ ಘಟಕಗಳಲ್ಲಿ ಸೇರಿಕೊಂಡಿದ್ದಾರೆ. ಮೊದಲು ರೂಪಗೊಂಡ ನೀತಿಸಂಹಿತೆಯ ವಿಸ್ತರಣೆ ಮತ್ತು ಸೂಕ್ತ ಬದಲಾವಣೆಗಳು ಅತ್ಯಗತ್ಯ. ವಿಸ್ತರಿಸಿದ ಪಾತ್ರನಿರ್ವಹಣೆಯ ಹಾದಿಯಲ್ಲಿ ಬಂದೊದಗುವ ಸಮಸ್ಯೆಗಳ ಜಟಿಲತೆ ನೀಗಲು ಹಾಗೂ ಪ್ರಸಕ್ತ ಕಾಲದ ಆರ್ಥಿಕ ಹಾಗೂ ಸಾಮಾಜಿಕ ಗುರಿ ಉದ್ದೇಶಗಳ ಸಾಧನೆಗೆ ಬೇಕಾದ ನೀತಿಪ್ರಮಾಣಗಳಿಗೆ ಪ್ರಾಶಸ್ತ್ಯ ನೀಡಲು ನೀತಿಸಂಹಿತೆಯಲ್ಲಿ ಮಾರ್ಪಾಡುಗಳು ಅನಿವಾರ್ಯ.

ವ್ಯಾಪಾರ ಹಾಗೂ ಕೈಗಾರಿಕೆಗಳಲ್ಲಿ ಹುಟ್ಟಿ ತಾನೇತಾನಾಗಿ ಪಾಚಿ ಹಬ್ಬಿದಂತೆ ಹಬ್ಬುವ ಅನೇಕ ಸಂಕೀರ್ಣತೆಗಳು ಈ ವೃತ್ತಿಗೊಂದು ಸವಾಲಾಗಿ ವಿಶಿಷ್ಟ ಸ್ಥಾನ ಗಳಿಸಿವೆ. ಸೇವಾಪರವೃತ್ತಿಯಾದುದರಿಂದ ಸಾಮಾಜಿಕ ಹಾಗೂ ಆರ್ಥಿಕ ರಂಗಗಳಲ್ಲಿ ಹಬ್ಬುವ ಹೊಮ್ಮುವ ಬದಲಾವಣೆಗಳ ತಾಳಕ್ಕೆ ಹೆಜ್ಜೆ ಹಾಕಬೇಕಾಗಿದೆ. ಈ ವೃತ್ತಿ ಕಾಲಪ್ರವಾಹದ ದಂಡೆಗುಂಟ ಜನಸೇವೆಯಲ್ಲಿ ತನ್ನನ್ನು ತಾನು ಕಂಡುಕೊಳ್ಳಬೇಕಾಗಿದೆ. ಈಗಂತೂ ಆರ್ಥಿಕ, ಕೈಗಾರಿಕಾ ಹಾಗೂ ವಾಣಿಜ್ಯಕ ವಿವಿಧ ಮಜಲುಗಳಲ್ಲಿ ದೇಶವನ್ನು ನಡೆಸುವುದರಲ್ಲಿ ಸರ್ಕಾರ ಮಹತ್ತರ ಪಾತ್ರ ವಹಿಸಿದೆ. ಆದುದರಿಂದ ಸಾರ್ವಜನಿಕ ಲೆಕ್ಕ ಉತ್ತರವಾದಿತ್ವ ಬಹುಮುಖ್ಯ. ವೃತ್ತಿಗೆ ಗಳಿಕೆ ಅನಿವಾರ್ಯವಾದರೂ ಅದು ಪ್ರಾಮಾಣಿಕ ಹಾಗೂ ನ್ಯಾಯಸಹಜವಾಗಿರಬೇಕು. ಲಾಭಕ್ಕಾಗಿ ಮಾತ್ರ ತಾವು ಕಾರ್ಯಗೈಯುತ್ತೇವೆ ಎಂಬ ಮನೋಭಾವ ವೃತ್ತಿಯ ಸದಸ್ಯರಿಗೆ ಸಾಧುವಲ್ಲ.

ಲೆಕ್ಕ ಪರಿಶೋಧನ ಕಾರ್ಯದ ಬಗ್ಗೆ ಹೇಳುವುದಾದರೆ, ಸಿ. ಎ. ಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಗಮನಿಸಲು ಹಾಗೂ ಇತರ ವಿವರವಾದ ಮಾಹಿತಿ ಹಾಗೂ ನಿಖರ ಅಂಕಿ ಅಂಶಗಳನ್ನು ಪಡೆಯಲು ತಕ್ಕ ಸ್ವಾತಂತ್ರ್ಯವಿರಲೇಬೇಕು. ತಾನು ನೀಡಿದ ಪ್ರಮಾಣಪತ್ರ, ಉದ್ಯಮದ ಬಗ್ಗೆ ವಿಶ್ವಸನೀಯ ಮಾಹಿತಿ ಕೊಡುವಂತದ್ದಿರಬೇಕು; ವಿವರಗಳು ನಿಜವಾದ ಹಾಗೂ ಅಕೃತ್ರಿಮ ರೀತಿಯಲ್ಲಿ ನಮೂದಿಸಲ್ಪಟ್ಟಿರಬೇಕು. ಒಮ್ಮೆ ಷೇರುದಾರರಿಗೂ ಬಂಡವಾಳ ತೊಡಗಿಸುವ ಇಚ್ಛೆಯುಳ್ಳ ಸಾರ್ವಜನಿಕರಿಗೂ ಉದ್ಯಮ ಘಟಕದ ಬಗ್ಗೆ ಸಿ. ಎ. ಅಸತ್ಯದ ಪರಿಶೋಧಕ ಪಟ್ಟಿಯ ಮೂಲಕ ಕೆಟ್ಟ ಅಭಿಪ್ರಾಯ ಬರುವಂತೆ ಮಾಡಿದರೆ ವೃತ್ತಿಯ ಶೀಲಭಂಗ ಮಾಡಿದಂತೆ, ಸಾರ್ವಜನಿಕ ಹಿತಕ್ಕೆ ಧಕ್ಕೆ ಮಾಡಿದಂತೆ. ಯಾವ ವೃತ್ತಿಯೂ ತಾನು ಬೆಳೆಯಲು ನಿರಂತರ ಹೋಗ

ಬೇಕಾಗುತ್ತದೆ ಎಂಬುದು ನಿಚ್ಚಳ ಸತ್ಯ. ಸಮಾಜಸೇವೆಯುತ್ತ ನಿರಂತರ ಅವಿರತ ಅಧ್ಯಯನ ನಡೆಸಬೇಕು: ಹೊಸದಾಗಿ ಸಿ. ಎ. ವೃತ್ತಿಗೆ ಸೇರಿದ ಉತ್ಸಾಹಿ ತರುಣ ಮೇಧಾವಿಗಳಿಗೆ ಉತ್ತಮ ಅವಕಾಶ ಕಲ್ಪಿಸಿ ಅವರ ಬುದ್ಧಿವಂತಿಕೆ ವೃತ್ತಿಯಲ್ಲಿ ಓತಪ್ರೋತವಾಗಿ ಹರಿಯುವಂತೆ ಮಾಡು ವುದು ವೃತ್ತಿಯ ಪ್ರಗತಿ ಬೀಜಮಂತ್ರ. ತರುಣರ ಉತ್ಸಾಹವನ್ನು ಕೆರಳಿಸಿ ಅವರು ಬದುಕಿ ಬಾಳುವಂತಹ ವಾತಾವರಣವನ್ನು ಹೀಗೆ ವ್ಯವಹಾರ ಜಗತ್ತಿನಲ್ಲಿ ಸೃಷ್ಟಿಸಬಹುದಾಗಿದೆ. ತತ್ತ್ವ ವೇನೋ ಸರಿ, ಆದರೆ ಇದು ಪ್ರತ್ಯಕ್ಷ ಲೋಕದಲ್ಲಿ ಕಂಡುಬರುತ್ತಿಲ್ಲ. ವೃತ್ತಿಯ ಸಿಂಹಪಾಲು ಹಿಂದೆ ಸ್ಥಾಪಿತವಾದ ದೊಡ್ಡ ಸಂಸ್ಥೆಗಳ ಕೈ ಸೇರುತ್ತಿದೆ. ತರುಣ ಸದಸ್ಯರ ಈ ದೂರೂ ಅಪ್ರಿಯ ಸತ್ಯವಾದುದಾಗಿದೆ (ಅನುಬಂಧಗಳು 1 ಮತ್ತು 2).

1956ರ ಕಂಪನಿ ಶಾಸನದ ವಿಧಿ 226ರ ಪ್ರಕಾರ ತಿಳಿದು ಬರುವಂತೆ, ಸಿ.ಎ. ಗಳ ಕೆಲಸ ಕೇವಲ 'ತನಿಖಾಗುರ್ತು ಹಾಕುವುದು' ಹಾಗೂ ಖಾತೆ ಸರಿದೂಗಿಸುವುದು ಮಾತ್ರವೇ ಅಲ್ಲ. ತಮ್ಮ ಕಕ್ಷಿದಾರರಿಗೆ ತಾವು ಹೇಗೆ ಅನುಕೂಲಿಗಳೋ ಹಾಗೇ ಸಿ. ಎ. ಗಳು ಸಾರ್ವಜನಿಕರಿಗೂ ಸೇವೆ ಸಲ್ಲಿಸಬೇಕಾದುದು ಅವರ ಪರಮ ಕರ್ತವ್ಯ. ಅಲ್ಲದೆ ಉದ್ಯಮ ಘಟಕಗಳ ನಿರ್ವಹಣಾ ಮಂಡಳಿಗೆ ಸಮಸ್ಯಾ ಪರಿಹಾರವನ್ನು ಅನ್ವೇಷಿಸುವ ದಾರಿಯಲ್ಲಿ ತಮ್ಮ ವೃತ್ತಿ ನೈಪುಣ್ಯವನ್ನು ಮೆರೆಯಬಹುದಾಗಿದೆ. ಅತೀವ ವೆಚ್ಚದ ಈ ಆರ್ಥಿಕ ಸಂಕ್ರಮಣ ಕಾಲದಲ್ಲಿ ಉತ್ಪಾದನೆ ವೆಚ್ಚದ ಇಳಿತ ಸಾಧ್ಯವೇ ಎಂಬುದನ್ನು ಕಂಡುಹಿಡಿಯಬೇಕಾಗಿದೆ; ಅದರಿಂದ ಅನುಭೋಗಿಗಳಿಗೆ ಅಲ್ಪ ಹಾಗೂ ಸುಲಭ ಬೆಲೆಗೆ ಸಾಮಗ್ರಿಗಳು ದೊರೆಯುವಂತಾಗುತ್ತದೆ. ತೆರಿಗೆ, ನಿರ್ವಹಣೆಯ ಲೆಕ್ಕ ಶಾಸ್ತ್ರ, ಆಯವ್ಯಯ ಮುಂಗಡಪತ್ರ ತಯಾರಿಕೆ ಹಾಗೂ ಆದರಿಂದ ವೆಚ್ಚದ ಇಳಿತದ ಪರಿಶೀಲನೆ, ಆರ್ಥಿಕಯೋಜನೆ ಇತ್ಯಾದಿ ವಿಷಯಗಳಲ್ಲಿ ಕೃಷಿ ನಡೆಸಬಹುದಾಗಿದೆ. ಒಟ್ಟಿನಲ್ಲಿ, ಆರ್ಥಿಕ ಮತ್ತು ಸಾಮಾಜಿಕ ವರ್ತುಳಗಳಲ್ಲಿ ಸಿ. ಎ. ಗಳು ವಿಚಕ್ಷಣೆಯಿಂದ ತಮ್ಮ ಪಾತ್ರನಿರ್ವಹಣೆ ಮಾಡಬಹುದಾಗಿದೆ.

ನಿರ್ವಹಣೆ ಸಮಾಲೋಚನೆ ಸೇವೆಯ ಸೀಮೆಯಲ್ಲಿ ಬರುವ ಕೆಳಗೆ ಕಾಣಿಸಿದ ಕಾರ್ಯಗಳಲ್ಲಿ ಸಿ. ಎ. ಗಳು ತಮ್ಮ ಅನುಭವ ಹಾಗೂ ಬುದ್ಧಿಮತ್ತೆಯಿಂದ ಮುಂಜಾಗ್ರತೆಯ ದೃಷ್ಟಿ ಹಾಗೂ ಜ್ವಲಂತ ಅನ್ವೇಷಣೆಯ ಚಕ್ಷುಗಳಿಂದ ತಂತ್ರ ವ್ಯವಸ್ಥೆಗೆ ನೆರವಾಗಬಹುದಾಗಿದೆ.

1 ಬಂಡವಾಳ ಹೂಡುವ ಯೋಜನೆಗಳ ಗುಣ ವಿಮರ್ಶೆ,

2 ಸಾಧ್ಯತಾ ಹಾಗೂ ಯೋಜನಾ ವರದಿಗಳು,

3 ಕಾಲಕಾಲದ ಆರ್ಥಿಕಪಟ್ಟಿಗಳ ವಿಶ್ಲೇಷಣೆ ಹಾಗೂ ಅಭಿಪ್ರಾಯ ವ್ಯಕ್ತಮಾಡುವುದು,

4 ವೆಚ್ಚ ವಿಶ್ಲೇಷಣೆ ಹಾಗೂ ವೆಚ್ಚ ನಿರ್ಣಯಶಾಸ್ತ್ರದ ಬಗೆಗಳು—ಪರಿಮಾಣ ವೆಚ್ಚ ನಿರ್ಣಯದ ಬಗೆ, ಮುಂಗಡ ಹಾಗೂ ಹತೋಟಿ ವೆಚ್ಚ ವಿಧಾನ, ನಿರ್ವಹಣಾ ಹಾಗೂ ಶುದ್ಧಿ ವಿಧಾನಗಳು,

5 ಉತ್ಪಾದನೆ, ಲಾಭ, ಉತ್ಪಾದನ ಸಾಮರ್ಥ್ಯ ಮತ್ತು ಉತ್ಪನ್ನ ಮಿಶ್ರಣದಲ್ಲಿ ಬದಲಾವಣೆ ಮಾಡಿದಾಗ ಉಂಟಾಗುವ ಪರಿಣಾಮ, ಇತ್ಯಾದಿ,

6 ವೆಚ್ಚ–ಗಾತ್ರ ಲಾಭ ವಿಶ್ಲೇಷಣೆ,

7 ಭೇದಾತ್ಮಕ ವೆಚ್ಚ ವಿಶ್ಲೇಷಣೆ,

8 ಬೆಲೆ ನಿಷ್ಕರ್ಷೆ ನೀತಿಗಳು,

9 ಕಾರ್ಮಿಕ ಕಾರ್ಯಗಳು.

ಸಣ್ಣ ಪರಿಮಾಣದ ಹಾಗೂ ಮಧ್ಯಮಗಾತ್ರದ ಘಟಕಗಳಿಗೆ ಸಮಾಲೋಚನೆಯ ಸೇವೆಯನ್ನೊದಗಿಸುವ ಅವಶ್ಯಕತೆಯೂ ಇದೆ. ಇವು ವೃತ್ತಿಯನ್ನು ಇನ್ನಷ್ಟು ಅಧಿಕಗಳಿಕೆಯುಳ್ಳದ್ದಾಗಿ ಮಾಡಬಲ್ಲುವು.

ಕೆಲವೇ ಕೆಲವು ಸಿ.ಎ.ಗಳು ದೇಶದ ಸಮಸ್ತ ಕಂಪನಿಗಳ ಲೆಕ್ಕ ಪರಿಶೋಧನ ಕಾರ್ಯ ಮಾಡುತ್ತಿರುವುದು 'ಏಕಸ್ವಾಮ್ಯ'ವನ್ನು ಪ್ರತಿಬಿಂಬಿಸುತ್ತದೆ. ಎಂಬ ವಾದವನ್ನು ಪರಿಶೀಲಿಸೋಣ. ಪ್ರಪಂಚದ ಎಲ್ಲೆಡೆಯಲ್ಲೂ ವೃತ್ತಿಗಳ ವಿಷಯಗಳಲ್ಲಿ ಏಕಸಾಮ್ಯವಿರುವುದು ಕಂಡುಬರುತ್ತದೆ. ಏಕೆಂದರೆ ಅದು ತಜ್ಞತೆಯ ಕೆಲಸ; ಎಲ್ಲರಿಗೂ ನಿಲುಕುವ ವಿಷಯವಲ್ಲ ಅದು. ಜವಾಬ್ದಾರಿಯುತ ಕಾರ್ಯನಿರ್ವಹಣೆ ಕೆಲವೇ ಕೆಲವು ಜನರಿಗೆ ಮಾತ್ರ ಸಾಧ್ಯವಾಗುವುದು. "ನಿರುದ್ಯೋಗಕ್ಕೊಂದು ಪರಿಹಾರ'', ''ಏಕಸ್ವಾಮ್ಯ ತಪ್ಪಿಸಿರಿ'', ಎಂಬ ಕೂಗು ಪ್ರಚಲಿತ ಸ್ಥಿತಿಯಲ್ಲಿ ಅರ್ಥವಿಲ್ಲದ್ದು. ಅಲ್ಲದೆ, ಈ ವೃತ್ತಿಯ ಕೇಂದ್ರೀಕರಣ ವಿಶ್ವದ ಸಮಸ್ಯೆ, ಭಾರತಕ್ಕೊಂದಕ್ಕೆ ಸಂಬಂಧಿಸಿದುದಲ್ಲ. 45 ಕಂಪನಿಗಳಿಂದ ಆಡಿಟ್‌ಗಾಗಿ ಸ್ವೀಕೃತವಾದ ರೂ. 8.5 ಲಕ್ಷದಲ್ಲಿ ಎ. ಎಫ್. ಫರ್ಗ್ಯುಸನ್ ಮತ್ತು ಕಂಪನಿ ರೂ. 4.2 ಲಕ್ಷವನ್ನು 'ಶುಲ್ಕ'ವಾಗಿ, ಇತರ ಸೇವೆಗಳಿಗಾಗಿ ಪಡೆಯಿತು. ಲೊವ್ಲಾಕ್ ಮತ್ತು ಲ್ಯೂಯಿಸ್ ಕಂಪನಿ ರೂ. 7.3 ಲಕ್ಷವನ್ನು ಪರಿಶೋಧನ ಶುಲ್ಕವಾಗಿಯೂ ರೂ. 2.2 ಲಕ್ಷವನ್ನು ಉಳಿದ ಸೇವೆಗಳಿಗಾಗಿಯೂ 52 ಕಂಪನಿಗಳಿಂದ ಪಡೆಯಿತು. ಒಟ್ಟು ಸೇವೆಗಳ ಪೈಕಿ ಬಹು ದೊಡ್ಡ ವೊಬಲಗು ಪಡೆದುದು ನಾಸೂಭಾಯಿ ಮತ್ತು ಕಂಪನಿ (66.6%). ಸುರಿ ಮತ್ತು ಕಂಪನಿ ಹಾಗೂ ದಲಾಲ್ ಮತ್ತು ಷಾ ಸಂಸ್ಥೆಗಳು ಒಟ್ಟು ಗಳಿಕೆಯ ಶೇ. 60ನ್ನು ಇತರ ಸೇವೆಗಳಿಗಾಗಿ ಪಡೆದುವು (ಅನುಬಂಧಗಳು 1 ಹಾಗೂ 2).

65,000ದಷ್ಟು ವೃತ್ತಿನಿರತ ಸದಸ್ಯರ ಸಂಖ್ಯೆ ಹೊಂದಿದೆಯೆಂದು ತನ್ನನ್ನು ಬಣ್ಣಿಸಿಕೊಳ್ಳುವ ಅಮೆರಿಕನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಕೌಂಟೆಂಟ್ಸ್‌ನ (AICCA) 85,000 ಸದಸ್ಯರಲ್ಲಿ 350 ಪಾಲುದಾರರು ಹಾಗೂ ಒಡೆಯರು ಕಂಪನಿಗಳ ಶೇ. 80ರಷ್ಟು ಪರಿಶೋಧನ ಕಾರ್ಯವನ್ನು ನಿರ್ವಹಿಸುವರು; ಮತ್ತು 13,000 ಲಕ್ಷ ಡಾಲರುಗಳು ಅವರು ಸ್ವೀಕರಿಸುವ ಶುಲ್ಕ. ಬ್ರಿಟನ್ನಿನಲ್ಲೂ ಇದೇ ಕಥೆ. ಪ್ರೈಸ್‌ವಾಟರ್‌ಹೌಸ್ ಮತ್ತು ಕಂಪನಿಯಿಂದ ಪ್ರಾರಂಭವಾಗಿ ಟರ್‌ಕ್ವಾಂಡ್‌ಯಂಗ್ ಮತ್ತು ಕಂಪನಿಯಲ್ಲಿ ಮುಗಿಯುವ ಎಂಟು ಕಂಪನಿಗಳು ಅಲ್ಲಿಯ ವೃತ್ತಿಸಿಂಹಗಳು. ಈ ಸಮಸ್ಯೆಗೊಂದು ಪರಿಹಾರವನ್ನು ಕಾಲವೇ ನಿರ್ಣಯಿಸಬೇಕು.

ಹಾಗೆ ನೋಡಿದರೆ ಲೆಕ್ಕ ಪರಿಶೋಧನವೃತ್ತಿ ಬರುಬರುತ್ತಾ ಕ್ಲಿಷ್ಟವಾಗುತ್ತಿದೆ, ಎಂಬುದು ಅನುಭವವೇದ್ಯ. ಗಗನ ಚುಂಬಿ ಬೆಲೆಗಳು, ಹೆಚ್ಚುತ್ತಿರುವ ತಲೆಭಾರವೆಚ್ಚ, ಅರ್ಹತೆಯಿರುವ ಸಿಬ್ಬಂದಿಯ ಕೊರತೆ, ಉಸಿರುಸಿಕ್ಕಿಸುವ ಪೈಪೋಟಿ, ಕ್ಲಿಷ್ಟಶಾಸನಗಳು, ನಿರ್ವಹಣೆ ತಾಪತ್ರಯಗಳು

—ಇವೆಲ್ಲ ಕೆಲವು ಅನುಭವಿ ಸಂಸ್ಥೆಗಳನ್ನು ಪೀಡಿಸುತ್ತಿವೆ. ಅವು ವ್ಯತ್ಯಸ್ತವಾಗುವಂತೆ ಬಲಾತ್ಕರಿಸುತ್ತಲಿವೆ ಎಂದರೂ ತಪ್ಪಾಗಲಾರದು.

೨) ಅನೇಕ ಸಿ.ಎ.ಗಳು ಕೈಗೊಂಡು ನಡೆಸಿಕೊಂಡು ಬರುತ್ತಿರುವ ವ್ಯಕ್ತಿಯ ಮಾರ್ಪಾಡನ್ನು ಪ್ರಚೋದಿಸುವ ಅಂಶಗಳಿವು; ಬದಲಾಗುತ್ತಿರುವ ಖಾಸಗಿ ಹಾಗೂ ಸರ್ಕಾರಿ ಘಟಕಗಳ ಹೊಂದಾಣಿಕೆ ಸಂಬಂಧ ಹಾಗೂ ಚಟುವಟಿಕೆಗಳು, ಬಹು ಮುಂದುವರಿದ ಗಣಕಯಂತ್ರ ಹಾಗೂ ದೂರವಾರ್ತಾಪ್ರಸಾರ ಯಂತ್ರಗಳನ್ನು ಅನ್ವೇಷಿಸಲು ಸಾಧ್ಯವಾದ ತಾಂತ್ರಿಕ ಪ್ರಗತಿ, ಸಿ.ಎ.ಗಳು ಜನಸೇವಾನಿರತರಾಗಬೇಕೆಂಬ ಪ್ರಜ್ಞೆ, ಜನತೆಯೊಂದಿಗೆ ವ್ಯವಹಾರದ ಹೊಣೆಗಾರಿಕೆಯ ಕರ್ತವ್ಯ ಪಾಲನೆ.

ಮುಂದಿನ ದಿನಗಳಲ್ಲಿ ಸಿ.ಎ. ಗಳು ಘಟಕಗಳ ಸಾಮಾನ್ಯ ಸಾಮಾಜಿಕ ನಿರ್ವಹಣೆಯ ಬಗ್ಗೆ —ಉದಾಹರಣೆಗೆ ಮೂಲಸಂಪತ್ತು ಶೇಖರಣೆ, ವಿವಿಧ ಸಾಮಾಜಿಕ ಗಣಗಳ ಸಂಬಂಧ, ವ್ಯವಸ್ಥಾಪಕ ಮಂಡಲಿಯ ಕಾರ್ಯನಿರ್ವಹಣೆ ಹಾಗೂ ಕಂಪನಿಗಳ ಆರ್ಥಿಕ ಚಟುವಟಿಕೆಗಳ ಬಗ್ಗೆ— ವರದಿ ಸಲ್ಲಿಸಬೇಕಾಗಿ ಬರಬಹುದು. ಮಾರ್ಪಾಡುಗೊಂಡ ವೃತ್ತಿಗೆ ಭವಿಷ್ಯದ ದಿನಗಳು ಆರಾದಾಯಕವಾಗಿವೆ.

(ಅನುಬಂಧಗಳು ಮುಂದಿನ ಪುಟಗಳಲ್ಲಿ)

ಅನುಬಂಧ ೧

ಲೆಕ್ಕಪರಿಶೋಧನ ತಜ್ಞರ ರಚನೆ : ವಲಯ ರೀತ್ಯ (1973–1974)

ವಲಯ	ಫೆಲೋಗಳು						ಅಸೋಸಿಯೇಟ್‌ಗಳು					
	ವೃತ್ತಿನಿರತರು		ವೃತ್ತಿಯಲ್ಲಿಲ್ಲದವರು		ಒಟ್ಟು		ವೃತ್ತಿನಿರತರು		ವೃತ್ತಿಯಲ್ಲಿಲ್ಲದವರು		ಒಟ್ಟು	
	1973	1974	1973	1974	1973	1974	1973	1974	1973	1974	1973	1974
ಪ. ಭಾರತ	1326	1454	123	137	1449	1591	1986	2199	1380	1410	3366	3609
ದ. ಭಾರತ	934	1009	63	65	997	1074	966	1042	1062	1129	2028	2171
ಪೂ. ಭಾರತ	763	814	51	39	814	873	968	998	1039	1039	2002	2037
ಮಧ್ಯ ಭಾರತ	303	349	15	17	318	366	447	472	282	311	729	783
ಉ. ಭಾರತ	411	493	38	39	449	532	792	854	460	463	1253	1319

ಅನುಬಂಧ ೩

ಲೆಕ್ಕಪರಿಶೋಧನ ತಜ್ಞರ ರಚನೆ : ಕೈಗಾರಿಕಾರೀತ್ಯ

	ಇಂಜಿನಿಯರಿಂಗ್	ಇತರ ಜವಳಿ	ರಾಸಾಯನಿಕ	ಸಿಮೆಂಟ್	ಕಾಗದ	ಸೆಣಬು ಜವಳಿ	ಹತ್ತಿ	ರಬ್ಬರ್ ಸಾಮಗ್ರಿ	ಸಕ್ಕರೆ	ಇತರ ಕೈಗಾರಿಕೆಗಳು	ಒಟ್ಟು
ಎ.ಎಫ್. ಫರ್ಗ್ಯುಸನ್	20	–	10	–	–	–	1	1	–	19	51
ಪ್ರೈಸ್‌ವಾಟರ್‌ಹೌಸ್ ಮತ್ತು ಪೀಟ್	5	–	5	–	3	2	3	–	–	8	26
ಲೊವ್‌ಲಾಕ್ ಮತ್ತು ಲ್ಯೂವಿಸ್	5	1	2	–	–	5	3	–	3	5	24
ಕೆ.ಎಸ್ ಐಯರ್	5	1	2	–	–	–	3	1	2	5	19
ಬಾಟ್ಲಿಬಾಯ್ ಮತ್ತು ಪುರೋಹಿತ್	–	1	2	1	2	–	3	–	1	1	11
ದಲಾಲ್ ಮತ್ತು ಷಾ	5	1	1	–	–	–	1	–	2	–	10
ಸಿ.ಸಿ. ಚೋಕ್ಸಿ	2	–	2	–	1	–	3	–	1	1	10
ಎಸ್. ಬಿ. ಬಿಲ್ಲಿಮೊರಾ	2	1	1	–	–	–	2	–	–	3	9
ಎಸ್.ಆರ್. ಬಾಟ್ಲಿಬಾಯ್	4	–	–	–	–	1	2	–	1	1	9
ಸರಾಬ್ ಎಸ್. ಇಂಜನೀಯರ್	–	–	–	–	–	–	7	–	–	2	9
ಫ್ರೇಸರ್ ಮತ್ತು ರಾಸ್	–	–	2	–	–	–	2	–	–	4	8
ಫೋರ್ಡ್ ರೊಡ್ಸ್ ಪಾರ್ಕ್ಸ್	1	–	1	–	1	–	1	2	–	1	7
ಬ್ರಹ್ಮಯ್ಯ ಮತ್ತು ಕಂ.	1	–	1	2	–	–	3	–	–	1	8
ಸುರಿ ಮತ್ತು ಕಂ.	–	–	–	–	–	–	2	–	–	1	3
ಉಳಿದ ತಜ್ಞರು	38	4	9	5	7	–	15	2	11	38	129
ಒಟ್ಟು	88	9	38	8	14	8	51	6	21	90	333

ಅರ್ಥಶಾಸ್ತ್ರ ಮತ್ತು ಹಣಕಾಸಿನ ಕ್ಷೇತ್ರಗಳಲ್ಲಿ ಯಾವುದನ್ನೂ ಭೌತವಿಜ್ಞಾನಗಳಷ್ಟು ನಿಖರವಾಗಿ ಮಾಪಿಸುವುದು ಸಾಧ್ಯವಿಲ್ಲ. ಆದರೆ ಒಂದು ಕಾಲದಲ್ಲಿ ಮಾಪನ ವಿಧಾನ ಸ್ಥೂ ವಾಗಿ ಬದಲಾಗದೆ ಇರುವವರೆಗೂ ಸ್ಥೂಲಮಾಪನವೇ ಸಾಕಾಗುತ್ತದೆ.

ಈ ವಿಚಾರ ಲೆಕ್ಕಬರಹದಲ್ಲಿ ಸ್ಪಷ್ಟವಾಗುವುದಕ್ಕಿಂತ ಚೆನ್ನಾಗಿ ಬೇರೆಲ್ಲೂ ಸ್ಪಷ್ಟವಾಗುವುದಿಲ್ಲ. ಒಂದು ಕಂಪನಿ ತನ್ನ ಲೆಕ್ಕ ವರದಿಗಳನ್ನು ಸರಿಯಾಗಿ ತಯಾರಿಸಿದೆಯೆಂದು ಅದರ ಲೆಕ್ಕ ಪರಿಶೋಧಕರು ಪ್ರಮಾಣಿಸಿದಾಗ, ಎಲ್ಲ ಮಾಪನಗಳೂ ನೂರಕ್ಕೆ ನೂರರಷ್ಟು ನಿಖರವಾಗಿವೆಯೆಂದು ಅವರು ನಿಜವಾಗಿಯೂ ಶಪಥಮಾಡಿ ಹೇಳಲಾರರು. ಆದರೆ ಆ ಕಂಪನಿಯ ವಾಡಿಕೆಯ ಲೆಕ್ಕ ಬರಹ ವಿಧಾನಗಳನ್ನು ಅನುಸರಿಸಲಾಗಿದೆಯೆಂಬುದನ್ನು ಆ ಕಂಪನಿಯ ಬಂಡವಾಳವನ್ನು ಕೊಳ್ಳಲು ಯೋಚಿಸುತ್ತಿರುವ ಯಾವನಾದರೂ ಅರಿತುಕೊಳ್ಳಬಹುದು—ಎಂಬುದು ಮುಖ್ಯವಾದ ಅಂಶ. ಉದಾಹರಣೆಗೆ, ಹಿಂದಿನ ವರ್ಷದಲ್ಲಿ ಆ ಕಂಪನಿಯ ಸಂಪಾದನೆಯು ಸೇಕಡ 10ರಷ್ಟು ಏರಿಕೆಯಾಗಿದೆಯೆಂದು ಅದು ವರದಿ ಮಾಡಿದ್ದ ಪಕ್ಷದಲ್ಲಿ, ಪ್ರತಿಯೊಂದು ವರ್ಷದ ಉಚಿತವಾದ ಅಂಕಿಗಳಲ್ಲಿ ಸ್ವಲ್ಪ ಅನಿಶ್ಚಯತೆ ಇದ್ದಾಗ್ಯೂ, ಅದರ ಪ್ರಗತಿಯ ದಿಕ್ಕಿನ ವಿಚಾರದಲ್ಲಿ ಸಂದೇಹ ಇರಲಾರದು.

—ಪಾಲ್ ಎ. ಸ್ಯಾಮ್ಯುಯೆಲ್ಸನ್*

**Economics (1970), p. 103*

ಸಣ್ಣನಂಜೇಗೌಡ

ವಿಜಯನಗರ ಕಾಲದಲ್ಲಿ ರಾಯಚೂರು ದೋಆಬ್

ವಿಜಯನಗರ ಸ್ಥಾಪನೆ (1336) ದಕ್ಷಿಣ ಭಾರತದ ಇತಿಹಾಸಕ್ಕೆ ಒಂದು ಹೊಸ ಆಯಾಮವನ್ನು ದೊರಕಿಸಿಕೊಟ್ಟಿತು. ಧಾರ್ಮಿಕ, ರಾಜಕೀಯ, ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಪ್ರಕ್ಷುಬ್ಧ ಸ್ಥಿತಿ ತಲೆದೋರಿದ್ದ ಸಮಯದಲ್ಲಿ ಸ್ಥಾಪಿತವಾದ ವಿಜಯನಗರ ಮುನ್ನೂರು ವರ್ಷಗಳ ಕಾಲ ತನ್ನ ಸಾರ್ಥಕ ವೈಭವವನ್ನು ವ್ಯಕ್ತಪಡಿಸಿ, ಹಿಂದೂ ಸಂಸ್ಕೃತಿಯ ಪುನರುಜ್ಜೀವನಕ್ಕೆ ಕಾರಣವಾಯಿತು.

ಸಮಕಾಲೀನ ಶಾಸನಗಳು ಮತ್ತು ಬರವಣಿಗೆಗಳು ವಿಜಯನಗರ ವೈಭವವನ್ನು ಉತ್ಕೃಷ್ಟವಾಗಿ ಚಿತ್ರಿಸಿವೆ. ಆದರೆ ಇತಿಹಾಸವನ್ನು ಒಳಹೊಕ್ಕು ನೋಡಿದರೆ ಅದು ತನ್ನ ಅಸ್ತಿತ್ವಕ್ಕೆ ಸತತವಾಗಿ ನಡೆಸಿದ ಹೋರಾಟಗಳ ತೀವ್ರತೆ ಅರಿವಾಗುತ್ತದೆ. ಸಾಮ್ರಾಜ್ಯದ ಸುತ್ತಮುತ್ತ ಶತ್ರುಗಳೇ ಹೆಚ್ಚಾಗಿದ್ದು ಯುದ್ಧಗಳು ಪದೇಪದೇ ಸಂಭವಿಸುತ್ತಿದ್ದುವು. ಆದ್ದರಿಂದ ಪ್ರಕ್ಷುಬ್ಧ ಸ್ಥಿತಿಗಳಿಗೆಲ್ಲಾ ಮೈಯೊಡ್ಡಿ ನಿಲ್ಲುವ ಶಕ್ತಿಯುಳ್ಳಂಥವನಿಗೇ ಸಾಮಾನ್ಯವಾಗಿ ಇದರ ಒಡೆತನ ಲಭಿಸುತ್ತಿತ್ತು.

ವಿಜಯನಗರ ಸ್ಥಾಪನೆಯೊಂದಿಗೇ ದಕ್ಷಿಣದಲ್ಲಿ ಕಾಣಿಸಿಕೊಂಡ ಬಹಮನೀ ರಾಜ್ಯ ವಿಜಯನಗರಕ್ಕೆ ಶಾಶ್ವತ ಸವಾಲಾಗಿ ಪರಿಣಮಿಸಿತು. ರಾಜ್ಯ ಸ್ಥಾಪನೆಯಾದಾಗಿನಿಂದ ತಾಳಿಕೋಟೆ ಯುದ್ಧದ ಪರಿಣಾಮವಾಗಿ ವೈಭವ ಪರ್ಯಾವಸಾನವಾಗುವವರೆಗೂ ಈ ಎರಡೂ ರಾಜ್ಯಗಳಿಗೆ ನಡೆದ ಪರಸ್ಪರ ಹೋರಾಟಗಳು ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖವಾದವು. ರಾಯಚೂರು ದೋಆಬ್ ಪ್ರದೇಶ ಹೊಂದಿದ್ದ ಪ್ರಾಮುಖ್ಯವೇ ಅದರ ಮೇಲಿನ ಒಡೆತನವನ್ನು ಗಳಿಸುವ ಆಸೆಮೂಡಿಸಿ ಸತತ ಹೋರಾಟಕ್ಕೆ ಕಾರಣವಾಯಿತು.

ಪ್ರಾಚೀನತೆ

ತುಂಗಭದ್ರಾ ಮತ್ತು ಕೃಷ್ಣಾ ನದಿಗಳ ನಡುವಿನ ದೋಆಬ್ ಪ್ರದೇಶ ತನ್ನದೇ ಆದ ಪ್ರಾಚೀನತೆ ಹೊಂದಿದೆ. ಇತ್ತೀಚಿನ ಸಂಶೋಧನೆಗಳಿಂದ ಅದು ಇತಿಹಾಸಪೂರ್ವ ಯುಗದಲ್ಲೂ ಮಾನವನ ಆವಾಸಸ್ಥಾನವಾಗಿತ್ತೆಂದು ತಿಳಿದುಬರುತ್ತದೆ. ಕರ್ನಲ್ ಮೆಡೋಸ್ ಟೇಲರ್, ರೆ. ಜಿ. ಕೇಸ್, ಯಾಜ್‌ದಾನಿ ಮುಂತಾದವರು ಆ ಪ್ರದೇಶದಲ್ಲಿ ಕೈಗೊಂಡ ಭೂ ಸಂಶೋಧನೆಗಳು ಪ್ರಾಗಿತಿಹಾಸದ ಘಟ್ಟಗಳನ್ನು ಗುರುತಿಸಲು ಸಹಾಯಕವಾಗಿವೆ.

ಮೌರ್ಯರ ಆಳ್ವಿಕೆಯಲ್ಲಿ ಈ ಪ್ರದೇಶ ಸುವರ್ಣಗಿರಿ ಎಂಬ ಹೆಸರಿನ ಎರಡು ಪ್ರಮುಖ ರಾಜ ಪ್ರತಿನಿಧಿ ಕೇಂದ್ರಗಳಲ್ಲಿ ಒಂದಾಗಿತ್ತೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

(ಮತ್ತೊಂದು ಕಳಿಂಗದ ತೊಸಲಿ). ಈಗಿನ ಕನಕಗಿರಿಯೇ ಸುವರ್ಣಗಿರಿಯಾಗಿದ್ದಿರಬಹುದೆಂದೂ ಅಲ್ಲಿ ಹೇರಳವಾಗಿ ಚಿನ್ನ ದೊರೆಯುತ್ತಿತ್ತೆಂದೂ ಹೇಳಿದೆ.[1]

ದೋಆಬ್ ಪ್ರದೇಶ ಬಹು ಹಿಂದಿನಿಂದಲೂ ಕಲಹ ಕಾರಣ ಪ್ರದೇಶವಾಗಿಯೇ ಉಳಿದು ಬಂದಿದೆ. ಚೋಳ-ಚಾಲುಕ್ಯರಿಗೆ, ಹೊಯ್ಸಳ-ಯಾದವರಿಗೆ, ಕಾಕತೀಯರಿಗೆ, ಈ ಪ್ರದೇಶದ ಒಡೆತನಕ್ಕೋಸ್ಕರ ಆಗಾಗ್ಗೆ ಯುದ್ಧಗಳು ನಡೆಯುತ್ತಿದ್ದುವು.[2] ಕ್ರಿ. ಶ. 1196ರಲ್ಲಿ ಯಾದವರ ಜೈತುಗಿ ಆಳ್ವಿಕೆಗೆ ಬಂದಾಗ ಹೊಯ್ಸಳರ ವಶದಲ್ಲಿದ್ದ ದೋಆಬ್ ಪ್ರದೇಶವನ್ನು ಆಕ್ರಮಿಸಿಕೊಂಡ. ಅನಂತರ ಅದು ಓರಂಗಲ್ಲಿನ ಕಾಕತೀಯ ಮಹದೇವನ ಕೈಸೇರಿತು. ಹೊಯ್ಸಳ, ಯಾದವ ಮತ್ತು ಕಾಕತೀಯ — ಈ ಮೂರು ರಾಜ್ಯಗಳು ರಾಜ್ಯ ವಿಸ್ತರಣ ಕ್ರಿಯೆಯಲ್ಲಿ ತೊಡಗಿದಾಗ, ಈ ಪ್ರದೇಶ ಪದೇಪದೇ ಅನೇಕ ಕಷ್ಟನಷ್ಟಗಳಿಗೆ ಗುರಿಯಾಗುತ್ತಿತ್ತಲ್ಲದೆ ಅಲ್ಲಿಯ ಜನಜೀವನ ಸಂದಿಗ್ಧವೂ, ಅನಿಶ್ಚಿತವೂ ಆಗಿತ್ತು.

ಕಲಹ ಕಾರಣ ಪ್ರದೇಶವಾಗಿದ್ದ ರಾಯಚೂರು ದೋಆಬ್ ಬಗ್ಗೆ ಮೇಜರ್ ಹೇಗ್ ಬರೆಯುತ್ತ, "ರಾಯಚೂರು ದೋಆಬ್‌ನ ಇತಿಹಾಸ ದಖ್ಖನಿನ ಮಹಮ್ಮದೀಯರಿಗೆ ಮತ್ತು ಹಿಂದೂಗಳಿಗೆ ದಕ್ಷಿಣ ಭಾರತದಲ್ಲಿ ಪರಮಾಧಿಕಾರವನ್ನು ಸ್ಥಾಪಿಸಲು ನಡೆಸಿದ ಹೋರಾಟಗಳ ಇತಿಹಾಸವೇ ಆಗಿದೆ."[3] ಎಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಹೋರಾಟಗಳಲ್ಲಿ ದೋಆಬ್ ಪ್ರದೇಶ ಒಬ್ಬರಿಂದ ಮತ್ತೊಬ್ಬರಿಗೆ ಹೋಗುತ್ತಿದ್ದುದರಿಂದ ಕೆಲವೊಮ್ಮೆ ಅದು ಯಾರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ನಿಖರವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಈ ಎರಡೂ ರಾಜ್ಯಗಳ ನಡುವೆ ವಾದಗ್ರಸ್ತವಾಗಿಯೇ ಉಳಿದ ದೋಆಬ್ ಪ್ರದೇಶ ಕೊನೆಗೆ ತಾಳೀಕೋಟೆ ಯುದ್ಧದ ಅನಂತರ ಅಲಿ ಆದಿಲ್ ಷಾನ ಕೈಸೇರಿತು. ಈ ಪ್ರದೇಶಕ್ಕೆ ಸಂಬಂಧಿಸಿದ ಕದನಗಳ ವಿವರಗಳನ್ನು ಹೀಗೆ ಪಟ್ಟಿಮಾಡಬಹುದು :

(ಮುಂದಿನ ಪುಟ ನೋಡಿ)

---

1 *Mysore Gazetteer, Raichur District,* P. 38

2 Gurti Venkata Rao : *Bahamani – Vijayanagara Relations,* in *The Proceedings of Allahabad Indian History Congress,* p. 264

3 Haig, T. M. : *Historic Landmarks of the Deccan,* Chap. VI, p. 105

ಯುದ್ಧ ನಡೆದ ವರ್ಷ	ವಿಜಯನಗರದ ಅರಸ	ಬಹಮನಿ ಸುಲ್ತಾನ	ದೋಆಬ್ ಪ್ರದೇಶ ವಶವಾದ್ದು
1361 ಮತ್ತು 1375	ಬುಕ್ಕ I	ಮಹಮದ್ 1	ವಿಜಯನಗರಕ್ಕೆ
1398	ಹರಿಹರ II	ಫಿರೋಜ್ ಷಾ	,,
1406	ದೇವರಾಯ I	ಫಿರೋಜ್ ಷಾ	,,
1424	ದೇವರಾಯ II	ಅಹಮದ್ ಷಾ	,,
1435-36	ದೇವರಾಯ II	ಅಲ್ಲಾವುದ್ದೀನ್ II	,,
1443	ದೇವರಾಯ II	ಮಹಮದ್ II	,,
	ಬಹುಮನಿ ರಾಜ್ಯ ವಿಭಜನೆ		
1509	ಕೃಷ್ಣದೇವರಾಯ	ಆದಿಲ್ ಷಾ ಮತ್ತು ಮಹಮದ್ II	ವಿಜಯನಗರಕ್ಕೆ
1520	ಕೃಷ್ಣದೇವರಾಯ	ಇಸ್ಮೈಲ್ ಆದಿಲ್ ಷಾ	,,
1523	ಕೃಷ್ಣದೇವರಾಯ	ಇಸ್ಮೈಲ್ ಆದಿಲ್ ಷಾ	,,
1530	ಅಚ್ಯುತರಾಯ	ಇಸ್ಮೈಲ್ ಆದಿಲ್ ಷಾ	ಬೀಜಪುರದ ಸುಲ್ತಾನನಿಗೆ
1534	ಅಚ್ಯುತರಾಯ	ಮಲ್ಲು ಆದಿಲ್ ಖಾನ್	ವಿಜಯನಗರಕ್ಕೆ
1565	ರಾಮರಾಯ	ಅಲಿ ಆದಿಲ್ ಷಾ ಮತ್ತು ಇತರ ಸುಲ್ತಾನರು	ತಾಳಿಕೋಟೆ ಯುದ್ಧ ವಿಜಯನಗರದ ಪತನ ದೋ ಅಬ್ ಸಂಪೂರ್ಣ ವಾಗಿ ಸುಲ್ತಾನರ ವಶ

ದೋಆಬ್ ಕದನಗಳಿಗೆ ಅನೇಕ ಕಾರಣಗಳಿವೆ. ಧಾರ್ಮಿಕ ಭಿನ್ನಾಭಿಪ್ರಾಯಗಳು ಪ್ರಮುಖ ಕಾರಣವಾಗಿರದೆ, ಆ ಪ್ರದೇಶ ಹೊಂದಿದ್ದ ರಾಜಕೀಯ ಹಾಗೂ ಆರ್ಥಿಕ ಸ್ಥಿತಿಗಳೇ ಕಾರಣವೆಂದು ಗುರ್ತಿ ವೆಂಕಟರಾವ್ ಅಭಿಪ್ರಾಯಪಟ್ಟಿದ್ದಾರೆ.[4] ಅವರು ಹೇಳುವುದಿದು: ವಿಜಯನಗರದ ಅರಸರ ಬೊಕ್ಕಸ ವಜ್ರವೈಡೂರ್ಯಗಳಿಂದ ತುಂಬಿರುತ್ತಿತ್ತು. ದೇವಸ್ಥಾನ ಗಳಲ್ಲಿ ಅಪೂರ್ವ ಲೋಹಗಳಾದ ಚಿನ್ನ ಬೆಳ್ಳಿಗಳಿಂದ ಮಾಡಿದ ವಸ್ತುಗಳು, ಬೆಲೆಬಾಳುವ ಹರಳು ಗಳು ದೊರೆಯುತ್ತಿದ್ದುವು. ಅವನ್ನು ತಮ್ಮದಾಗಿಸಿಕೊಳ್ಳುವ ಆಸೆಯಿಂದ ಬಹಮನೀ ಅರಸರು ವಿಜಯನಗರದ ಅರಸರೊಡನೆ ಯುದ್ಧಗಳನ್ನು ಕೈಗೊಳ್ಳುತ್ತಿದ್ದರು. ಆದ್ದರಿಂದ ದೋಆಬ್ ಯುದ್ಧಗಳು ಕೇವಲ ಧಾರ್ಮಿಕ ಸಂಬಂಧವುಗಳಲ್ಲ. ಐಶ್ವರ್ಯ ಮತ್ತು ಭೂಮಿಗಾಗಿ

[4] Gurti Venkatarao, *Op. cit.*, p. 264

ಎಂಬುದು ಗುರ್ತಿ ವೆಂಕಟರಾವ್ ಅವರ ಅಭಿಪ್ರಾಯ. ಆದರೆ ಇಲ್ಲಿ ಧರ್ಮವೂ ಉಳಿದ ಎಲ್ಲ ಕಾರಣಗಳಷ್ಟೇ ಪ್ರಮುಖವಾಗಿದೆ ಎಂಬುದು ಗಮನಾರ್ಹ. ಧಾರ್ಮಿಕ ಸಂಸ್ಥೆಗಳ ನಾಶ, ಮತಾಂತರ ಸಂಬಂಧ ವಿಷಯಗಳು ಮುಹಮ್ಮದೀಯ ಬರವಣಿಗೆಯಲ್ಲಿ ಹೆಚ್ಚಾಗಿ ಉಕ್ತವಾಗಿರುವುದು ಈ ಹೇಳಿಕೆಗೆ ಹೆಚ್ಚು ಇಂಬುಕೊಡುತ್ತವೆ.

ಪ್ರಾಮುಖ್ಯ

ಸಾವಿರಾರು ವರ್ಷಗಳಿಂದ ಹರಿದ ನದಿಯ ಮುಖಜ ಭೂಮಿಯಲ್ಲಿ ಮೆಕ್ಕಲು ಮಣ್ಣು ತುಂಬಿ ಭೂಮಿ ಫಲವತ್ತಾಗಿತ್ತು. ಗಂಗಾವತಿ, ಮುದಗಲ್ ಪ್ರದೇಶಗಳಲ್ಲಿ ಕೆಂಪು ಮಿಶ್ರಿತ ಮರಳು ಭೂಮಿಯಿದ್ದು ಉಳುಮೆಗೆ ಯೋಗ್ಯವಾಗಿತ್ತು. ಉಳಿದ ಭಾಗ ಫಲವತ್ತಾದ ಕಪ್ಪು ಮಣ್ಣಿನ ನೆಲವಾಗಿದ್ದು ಹತ್ತಿ ಗೋದಿ ಮುಂತಾದ ಬೆಳೆ ಬೆಳೆಯಲು ಉತ್ಕೃಷ್ಟವಾಗಿತ್ತು. ಈ ಪ್ರದೇಶದಲ್ಲಿ ಚೆನ್ನಾಗಿ ಮಳೆ ಆಗುತ್ತಿತ್ತಲ್ಲದೆ, ವಾಸಿಸಲು ಯೋಗ್ಯ ವಾಯುಗುಣವೂ ಇತ್ತು.

ದೋಆಬ್ ಪ್ರದೇಶದಲ್ಲಿ ಉಪಯುಕ್ತ ಲೋಹಗಳಾದ ಕಬ್ಬಿಣ, ಚಿನ್ನ ಮತ್ತು ತಾಮ್ರ ವಿಶೇಷವಾಗಿ ದೊರೆಯುತ್ತಿದ್ದುವು. ಕಬ್ಬಿಣ ಹೇರಳವಾಗಿ ದೊರೆಯುತ್ತಿದ್ದುದರಿಂದ ಅದರ ಒಡೆತನವನ್ನು ಗಳಿಸಿದವರು ಯುದ್ಧ ಸಾಮಗ್ರಿಗಳನ್ನು ತಯಾರಿಸಬಹುದೆಂಬ ಆಸೆ ಬಲವಾಗಿತ್ತು. ಅಲ್ಲದೆ ಆ ಪ್ರದೇಶದಲ್ಲಿ ಅನೇಕ ಚಿನ್ನದ ಗಣಿಗಳಿದ್ದುವು ಎಂಬುದು ಅಲ್ಲಿಯ ಕೆಲವು ಅವಶೇಷಗಳಿಂದ ತಿಳಿಯುತ್ತದೆ.[5] ಈಗಲೂ ಈ ಪ್ರದೇಶದ ಹಟ್ಟಿ ಹಿಂಬಲ್ಲಿ ಚಿನ್ನ ದೊರಕುತ್ತಿರುವುದು ಇಲ್ಲಿ ಗಮನಾರ್ಹ ಸಂಗತಿ. ಇದಕ್ಕಿಂತ ಮಿಗಿಲಾಗಿ ದೋಆಬ್ ಪ್ರದೇಶದಲ್ಲಿ ವಜ್ರದ ಗಣಿಗಳಿದ್ದುವು ಎಂಬುದಕ್ಕೆ ಆಧಾರಗಳಿವೆ. ಈ ಬಗ್ಗೆ ವಿದೇಶೀಯರ ಬರವಣಿಗೆಗಳು, ಸಮಕಾಲೀನ ಗ್ರಂಥಗಳು ಸಾಕಷ್ಟು ಬೆಳಕು ಚೆಲ್ಲುತ್ತವೆ. 1470ರಲ್ಲಿದ್ದ ವಿದೇಶೀಯ ಸಂದರ್ಶಕ ನಿಕೋಲೊ ಕಾಂಟಿ, ರಾಯಚೂರಿನಲ್ಲಿ ವಜ್ರಗಳ ಉತ್ಪಾದನೆಯಾಗುತ್ತಿತ್ತು ಎಂದಿದ್ದಾನೆ.[6] ಬಿಜಾಪುರದ ಸುಲ್ತಾನನ ಆಸ್ಥಾನದಲ್ಲಿದ್ದ ರಫಿ ಉದ್ದೀನ್ ಶಿರಾಜಿ ಎಂಬ ಇತಿಹಾಸಕಾರ ರಾಯಚೂರಿಗೆ ಹತ್ತಿರವಿದ್ದ ವಜ್ರದ ಗಣಿಗಳು ಆದಿಲ್ ಶಾಹಿಯ ರಾಜ್ಯಕ್ಕೆ ಸೇರಿದ್ದುವೆಂದು ಹೇಳಿದ್ದಾನೆ. 1675ರಲ್ಲಿ ಅಲ್ಲಿಗೆ ಬಂದಿದ್ದ ಆಂಗ್ಲ ವಜ್ರ ವ್ಯಾಪಾರಿಯೊಬ್ಬ ರಾಯಚೂರಿಗೆ ಹತ್ತಿರವಿದ್ದ ಪ್ರದೇಶಗಳಾದ ಬಿಜಾಪುರ ಮತ್ತು ಗೋಲ್ಕೊಂಡಗಳಲ್ಲಿಯ ವಜ್ರದ ಗಣಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ 1677ರಲ್ಲಿ ರಾಯಲ್ ಸೊಸೈಟಿಗೆ ಒಪ್ಪಿಸಿದನೆಂದು ತಿಳಿಯುತ್ತದೆ. ಅಲ್ಲದೆ ಕೃಷ್ಣಾ ಮತ್ತು ತುಂಗಭದ್ರಾ ನಡುವಿನ ದೋಆಬ್ ಪ್ರದೇಶದಲ್ಲಿ ಎರಡು ವಜ್ರದ ಗಣಿಗಳಿದ್ದುವೆಂದು ಗುರುತಿಸಿದ್ದಾನೆ.[7] ಶಾಸನಗಳಲ್ಲಿ, ವಿದೇಶಿ ಬರವಣಿಗೆಗಳಲ್ಲಿ ವಿಜಯನಗರ ಕಾಲದಲ್ಲಿ ಸಂಪತ್ತನ್ನು ಕುರಿತ

---

[5] *Mysore Gazetteer, Raichur District*, p. 14

[6] *India in the Fifteenth Century*, quoted in *JOIH Vol. XXXVI*, p. 380

[7] *The Geological survey of India*, Vol. VII, p. 106

ವಿವರಣೆಗಳು ದೊರೆಯುವುದರಿಂದ ಸುತ್ತಮುತ್ತಲ ಪ್ರದೇಶಗಳಲ್ಲಿ ಚಿನ್ನ, ವಜ್ರ ಹೇರಳವಾಗಿ ದೊರೆಯುತ್ತಿದ್ದುವೆಂದು ಊಹಿಸಬಹುದು. ಆದ್ದರಿಂದ ಸಂಪತ್ತಿನ ಆಕರವಾಗಿದ್ದ ದೋಆಬ್ ಪ್ರದೇಶವ ಒಡೆತನ ಬೊಕ್ಕಸಕ್ಕೆ ಆದಾಯ ತರುತ್ತಿದ್ದದ್ದರಿಂದ ಅದನ್ನು ವಶಪಡಿಸಿಕೊಳ್ಳಲು ನಡೆಸಿದ ಹೋರಾಟಗಳು ಸಹಜವೇ ಆಗಿವೆ.

ದೋಆಬ್ ಪ್ರದೇಶ ವಿಜಯನಗರ ಅರಸರ ಸೈನಿಕ ಕಾರ್ಯಾಚರಣೆಗಳಿಗೆ ಅನುಕೂಲವಾಗಿದ್ದು, ರಾಜ್ಯರಕ್ಷಣೆಗೆ ನೈಸರ್ಗಿಕ ಕೋಟೆಯಂತಿತ್ತು. ಆ ಪ್ರದೇಶವನ್ನು ವಶಪಡಿಸಿಕೊಂಡರೆ ಬಹಮನಿ ಸೈನ್ಯವನ್ನು ತಡೆಗಟ್ಟುವ ಸಾಧ್ಯತೆಗಳು ಹೆಚ್ಚುತ್ತಿದ್ದುವಲ್ಲದೆ ಕರ್ನೂಲಿನ ವಜ್ರ ಗಣಿಗಳ ಸಂಬಂಧ ಕಾರ್ಯಾಚರಣೆಗಳನ್ನು ನೋಡಿಕೊಳ್ಳಲು ಅನುಕೂಲವಾಗುತ್ತಿತ್ತು. ಅಲ್ಲದೆ ಪ್ರಮುಖ ಸ್ಥಳಗಳಾದ ರಾಯಚೂರು, ಮುದಗಲ್ಲುಗಳಲ್ಲಿ ಸೈನ್ಯವನ್ನಿಟ್ಟರೆ ಬಹಮನಿ ಸೈನ್ಯ ಎರಡೂ ನದಿಗಳನ್ನು (ತುಂಗಾ, ಕೃಷ್ಣಾ) ದಾಟಿ ಕರ್ನೂಲನ್ನಾಗಲಿ ವಿಜಯನಗರವನ್ನಾಗಲಿ ಮುತ್ತಿಗೆ ಹಾಕುವುದು ಕಠಿಣವಾಗುತ್ತಿತ್ತು. ಎರಡೂ ನದಿಗಳನ್ನು ದಾಟಬಹುದಾದ ಸ್ಥಳಗಳಲ್ಲಿ ಸೈನ್ಯವನ್ನಿಟ್ಟರೆ ಹೊರಗಿನ ಶತ್ರುಗಳು ದೋಆಬ್ ಪ್ರದೇಶವನ್ನು ಸುಲಭವಾಗಿ ಹಾದು ವಿಜಯನಗರವನ್ನು ಮುತ್ತಿಗೆ ಹಾಕುವಂತಿರಲಿಲ್ಲ. ಈ ಎಲ್ಲಾ ಪ್ರಬಲ ಕಾರಣಗಳಿಂದ ದೋಆಬ್ ಪ್ರದೇಶವನ್ನು ಸ್ಥಿರವಾಗಿ ಉಳಿಸಿಕೊಳ್ಳುವ ಆಸೆ ವಿಜಯನಗರದ ಅರಸರದಾಗಿತ್ತು.[8] 1565ರಲ್ಲಿ ಮಹಮದೀಯ ಸೈನ್ಯ ಕೃಷ್ಣಾ ನದಿಯನ್ನು ದಾಟಲು ಯತ್ನಿಸಿದಾಗ ಕಾರ್ಯಾಚರಣೆಯಲ್ಲಿದ್ದ ವಿಜಯನಗರ ಸೈನ್ಯದಿಂದಾಗಿ ಅದು ಹಿಮ್ಮೆಟ್ಟಿತು. ಆದರೂ ಕೆಲವೊಮ್ಮೆ ಅಸಮರ್ಥ ಮಾರ್ಗದರ್ಶನ, ಉದಾಸೀನ ಮನೋಭಾವ, ಯುಕ್ತಿರಹಿತ ಕಾರ್ಯಾಚರಣೆ — ಇವೇ ಮುಂತಾದ ಕಾರಣಗಳಿಂದಾಗಿ ಹಿಂದೂ ಸೈನ್ಯ ಹಿಮ್ಮೆಟ್ಟಿ ದೋಆಬ್ ಪ್ರದೇಶ ಬಹಮನಿ ಅರಸರ ಕೈವಶವಾಗುತ್ತಿತ್ತು.

ಮೇಲೆ ಹೇಳಿದ ಕಾರಣಗಳ ಜೊತೆಗೆ ಧಾರ್ಮಿಕ ಸಂಬಂಧ ವಿಷಯಗಳೂ ಈ ಯುದ್ಧಗಳಿಗೆ ಕಾರಣಗಳಾಗಿವೆ. ಸ್ವಾಭಿಮಾನ, ಸ್ವಧರ್ಮ ಇವು ಹೋರಾಟಗಳ ಜೊತೆ ಬೆರೆತರೆ ಅಳಿವು–ಉಳಿವಿನ ಪ್ರಶ್ನೆಯಾಗುವುದು ಸಾಮಾನ್ಯ. ಹಿಂದೂ–ಇಸ್ಲಾಂ ಧರ್ಮಗಳಿಗೆ ಆಚಾರ ವಿಚಾರಗಳಲ್ಲಿ ಸಾಕಷ್ಟು ಅಂತರವಿದ್ದು, ಹಿಂದೂ ಧರ್ಮ, 'ಜಿಹಾದ್' ವಿರುದ್ಧವಾಗಿದೆ. ಈ ಭಾವನೆಗಳು ಮೊದಲು ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳದಿದ್ದರೂ ರಾಮರಾಯನ ಕಾಲದಲ್ಲಿ ಸ್ಫೋಟಗೊಂಡು ಪ್ರಬಲವೆನಿಸಿ ದಖ್ಖನ ಸುಲ್ತಾನರೆಲ್ಲರನ್ನೂ ಒಟ್ಟುಗೂಡುವಂತೆ ಮಾಡಿತು. ಧರ್ಮದಿಂದ ಸುಲ್ತಾನರೆಲ್ಲರೂ ಒಟ್ಟುಗೂಡುವಂತೆ ಆದಾಗ ರಾಮರಾಯ ದಕ್ಷಿಣ ಮಹಮದೀಯರೆಲ್ಲರ ಶತ್ರುವಾಗಿ ಪರಿಣಮಿಸಿದ. ರಾಮರಾಯನ ರಾಜಕೀಯ ನೀತಿಯೇ ಅವನಿಗೆ ಅಳಿವನ್ನು ತಂದಿತೆಂಬ ಅಭಿಪ್ರಾಯವಿದೆ. ಆತ, ಸುಲ್ತಾನರ ಒಳಜಗಳದಲ್ಲಿ ಹಸ್ತಕ್ಷೇಪ ಮಾಡಿ ಕೊನೆಗೆ ಎಲ್ಲರ ಕೋಪಕ್ಕೂ ಒಳಗಾದ. ಅಲ್ಲದೆ ಇಸ್ಲಾಂ ಧರ್ಮಕ್ಕೆ ಅಗೌರವ ತೋರಿಸಿದ

---

[8] *Journal of Indian History*, Vol. XXI, 381

ನೆಂಬ ಅಪವಾದವನ್ನು ಹೊತ್ತು ತಾಳಿಕೋಟೆ ಕದನದಲ್ಲಿ ಸುಲ್ತಾನರನ್ನು ಎದುರಿಸಬೇಕಾಯಿತು.

ದೋಆಬ್ ಒಡೆತನವನ್ನು ಗಳಿಸುವ ಪ್ರಯತ್ನ ಕೊನೆಗೆ ತಾಳಿಕೋಟೆ ಯುದ್ಧದ ಮೂಲಕ ವಿಜಯನಗರ ಸಾಮ್ರಾಜ್ಯದ ಪರ್ಯವಸಾನಕ್ಕೆ ಎಡೆಕೊಟ್ಟಿತು. ವಿಜಯನಗರದ ವೈಭವವನ್ನು ಅಂತ್ಯಗೊಳಿಸಿದ ದೋಆಬ್ ಯುದ್ಧಗಳ ಕೂಲಂಕಷ ಅಧ್ಯಯನ ಸಾಕಷ್ಟು ನಡೆಯಬೇಕಾಗಿದೆ.

ಜಿ. ಟಿ. ನಾರಾಯಣರಾವ್

ಸವಾಲನ್ನು ಎದುರಿಸುವ ಛಲ

೧

ಅನೇಕ ಮಂದಿ ವಿದ್ಯಾರ್ಥಿಗಳು, ಪದವೀಧರರು ಮತ್ತು ಅವರ ತಂದೆ ತಾಯಂದಿರು ನನ್ನಲ್ಲಿ ಬರುವುದು ವಾಡಿಕೆ ಆಗಿಹೋಗಿದೆ. ಇದು ನನ್ನ ಉದ್ಯೋಗದ ಸಂಬಂಧವಾಗಿ ಅಥವಾ ಅವರ ಹಾಗೂ ನನ್ನ ಮೈತ್ರಿಯ ಫಲವಾಗಿ ಖಂಡಿತ ಅಲ್ಲ. ನಾನೇನೋ ಭಾರೀ ಪ್ರಭಾವ ಮತ್ತು ವರ್ಚಸ್ಸು ಇರುವ ವ್ಯಕ್ತಿ, ಹಿರಿಕುಳಗಳೊಡನೆ ನಿಕಟ ಸಂಪರ್ಕ ಇರುವ "ಜನ", ನನ್ನ ಮಾತಿನ ಯಾ ಪತ್ರದ ಹೆರೆಯೆಣ್ಣೆಯಿಂದ ಆಡಳಿತ ಯಂತ್ರದ ಗಾಲಿ ಉರುಳಿ ತಮ್ಮ ಕೆಲಸ ಸಲೀಸು ಆಗುತ್ತದೆ ಎಂಬ ಪ್ರಾಮಾಣಿಕ ನಂಬಿಕೆಯಿಂದ ಅವರು ನನ್ನಲ್ಲಿಗೆ ಬರುತ್ತಾರೆ. ಇಂಥ "ಬಿಟ್ಟಿ ಕೆಲಸ" ಅಥವಾ "ಬಿಟ್ಟಿ ಭೇಟಿ"ಗಳ ಪೈಕಿ ಇಲ್ಲಿ ನಾನು ನಿರುದ್ಯೋಗಿ ಪದವೀಧರರ ಸಮಸ್ಯೆಯನ್ನು ಮಾತ್ರ ಆಯ್ದು ಚರ್ಚಿಸುತ್ತೇನೆ.

ನನ್ನಲ್ಲಿಗೆ ಬರುವಂಥ ನಿರುದ್ಯೋಗಿ ಪದವೀಧರರ ಪೈಕಿ ಹೆಚ್ಚಿನವರು ನನ್ನ ಮಿತ್ರರ ಒಂದು ಪರಿಚಯಪತ್ರವನ್ನು ತರುವುದು ವಾಡಿಕೆ. ಈ "ವಿಭೀಷಣ ಪತ್ರ"ದಿಂದ ಅವರಿಗೆ ಅದೆಷ್ಟರ ಮಟ್ಟಿನ "ಧೈರ್ಯ" ಪ್ರಾಪ್ತವಾಗಿರುವುದೆಂದರೆ ಅವರು ಖುದ್ದು ಯಾರಿಂದ ನೆರವನ್ನು ನಿರೀಕ್ಷಿಸುವರೋ ಆ ನನಗೇ ಪ್ರಾಥಮಿಕ ಮರ್ಯಾದೆಯನ್ನು ಸಲ್ಲಿಸಲು ಕೂಡ ಮರೆತುಬಿಡುತ್ತಾರೆ. ಅವರು ಬಾಣದಂತೆ ನೇರ ನನ್ನ ಕೊಠಡಿಗೆ ನುಗ್ಗಿ ಅರೆ ಹಲ್ಕಿರಿದು ಲಕ್ಕೋಟೆಯನ್ನು ನನಗೆ ಒಪ್ಪಿಸುವರು. ಇಂಥ ಓರ್ವ ಅಭ್ಯರ್ಥಿಗೆ ಆ ಕ್ಷಣವೇ "ಪೀಜೀ ಮೂಡ್, ದೌಡ್ಕೇ ಚಲ್" ಎಂಬ ಹುಕುಮನ್ನು "ಅನುಗ್ರಹಿಸಬೇಕು" ಎಂಬುದು ನನ್ನ ಪ್ರಥಮ (ಆಂತರಂಗಿಕ) ಪ್ರತಿಕ್ರಿಯೆ ಆದರೂ ಅವನು ತಿಳಿದು ಮಾಡಿದ ತಪ್ಪು ಇದಲ್ಲ, ಅವನಿಗೆ ತಿಳಿಯದೆ ಘಟಿಸಿದ ಅಪಚಾರವಿದು ಎಂಬುದಾಗಿ ಅನುಭವದಿಂದ ನಾನು ಅರಿತುಕೊಂಡಿರುವುದರಿಂದ ಅವನನ್ನು ಕೂರ ಹೇಳಿ ನೇರ ಕೂರಂಬುಗಳನ್ನು ತೂರುತ್ತೇನೆ.

"ಅಪ್ಪಾ ! ನೀನಾಗಿ ನಿನ್ನ ಕೆಲಸಕ್ಕೋಸ್ಕರ ಇಲ್ಲಿವರೆಗೆ ಬಂದಿರುವೆ, ನಾನು ಕರೆದು ಅಲ್ಲ, ಹೌದಪ್ಪ ?"

"ಹೌದು, ಸರ್."

"ಇಂಥ ಸನ್ನಿವೇಶಗಳಲ್ಲಿ, ಅದೂ ವಯಸ್ಸಿನಲ್ಲಿ ನಿನಗಿಂತ ಹಿರಿಯರನ್ನು ನೋಡುವ ಸಂದರ್ಭದಲ್ಲಿ, ಪಾಲಿಸಬೇಕಾದ ನಡತೆಯ ಕೆಲವು ನಿಯಮಗಳು ಇವೆಯೆಂದು ನಿನಗೆ ತಿಳಿದಿದೆಯೋ ?"

ಅವನು ಪೆಂಗನಂತೆ ಬಾಯಿ ಕಳೆಯುತ್ತಾನೆ. ನಾನೇ ವಿವರಿಸಿ ಹೇಳುತ್ತೇನೆ: "ಅನುಮತಿಯನ್ನು ಪಡೆದು ಕೊಠಡಿಯೊಳಗೆ ಬರಬೇಕು. ವಿನಯಪೂರ್ವಕವಾಗಿ ನಮಸ್ಕಾರವಿತ್ತು ಸುಮ್ಮನೆ ನಿಂತಿರಬೇಕು. ಮಾತನಾಡಿಸಿದ ವಿನಾ ಮಾತಾಡಬಾರದು. ಮಾತಾಡಿಸಿದಾಗ ಹೇಳಬೇಕಾದ್ದನ್ನು ಸ್ಪಷ್ಟವಾಗಿಯೂ ನೇರವಾಗಿಯೂ ಪೂರ್ಣವಾಗಿಯೂ ನುಡಿಯಬೇಕು. ಕೆಲಸ ಮುಗಿದೊಡನೆ ಕೃತಜ್ಞತೆ ಮತ್ತು ವಂದನೆಗಳನ್ನು ಸಲ್ಲಿಸಿ ಹಿಂತಿರುಗಬೇಕು. ಮುಂದೆ ಈ ಕೆಲಸದ ಫಲಿತಾಂಶ ತಿಳಿದಾಗ ನನಗೊಂದು ಕಾಗದ ಹಾಕಬೇಕು."

ಅಧಿಕಾರ, ಕುಲಮದ, ದರ್ಪ, ದುರಭಿಮಾನ ಇವೇ ಮುಂತಾದ ಬೃಹತ್ ಕ್ರೇನ್ ಯಂತ್ರಗಳು ಜಗ್ಗಿಸಲಾರದ ಯಮಭಾರವನ್ನು ನಚಿಕೇತ ವಿನಯವಂತಿಕೆ ಬಲು ಸುಲಭವಾಗಿಯೂ ಲಘುವಾಗಿಯೂ ಅಲುಗಿಸಬಲ್ಲುದು. ನಚಿಕೇತ ಪ್ರಯತ್ನ ಮತ್ತು ಸಿದ್ಧಿಯ ತಳದ ಪ್ರಧಾನ ಶ್ರುತಿ ವಿನಯ. ಇಂಥ ವಿನಯ ಒಬ್ಬ ಮನುಷ್ಯನ ಸಹಜ ಅಂಶವಾಗಿರಬೇಕು, ಆತನ ಸಮಗ್ರ ಜೀವನದ ಅವಿಭಾಜ್ಯ ಅಂಗವಾಗಿರಬೇಕು.

ವಾಹನಗಳ ಪೋಲೀಸ್ ಇನ್ಸ್‌ಪೆಕ್ಟರ್ ಕುಟ್ಟಪ್ಪ ಎಂದರೆ ಅಶಿಸ್ತುವಂತ ಚಾಲಕರಿಗೆ ಸಿಂಹ ಸ್ವಪ್ನ. ರಾಜ ಮಹಾರಾಜರೇ ಆಗಲಿ ಮಂತ್ರಿ ಮಹೋದಯರೇ ಆಗಲಿ ಕುಟ್ಟಪ್ಪ ಸದಾ ಕರ್ತವ್ಯ ನಿಷ್ಠ. ಯಾವ ವಿಧವಾದ ಆಸೆ ಆಮಿಷಗಳಿಗೂ ಬಗ್ಗುವ ಕುಳ ಇವರಲ್ಲ. ಅದೇ ವೇಳೆ ನಿಯಮ ಬದ್ಧ ಚಾಲಕರಿಗೆ ಸ್ವತಃ ಮಾರ್ಗದರ್ಶಿಯಾಗಿ ಉಪಕಾರವೆಸಗುವ ಹಿರಿಯ ಮಾನವ ಕುಟ್ಟಪ್ಪ. ದಸರಾದಿನಗಳ ಒಂದು ಸಂಜೆ ಮೈಸೂರಿನಿಂದ ಮಡಿಕೇರಿಗೆ ಖಾಸಗಿ ವಿಶೇಷ ಬಸ್ಸೊಂದು ಹೊರಟಿತು. ಅದರಲ್ಲಿ ಇದ್ದವರು 49 ಮಂದಿ ಎನ್‌ಸಿಸಿ ಕ್ಯಾಡೆಟುಗಳು ಮತ್ತು ಅವರ ಅಧಿಕಾರಿ. ಇವರೆಲ್ಲರೂ ಸಮವಸ್ತ್ರಧಾರಿಗಳು. ಬೆಂಗಳೂರಿನಲ್ಲಿ ನಡೆದ ಒಂದು ಶಿಬಿರದಲ್ಲಿ ಇವರು ಭಾಗವಹಿಸಿ ಊರಿಗೆ ಮರಳುತ್ತಿದ್ದರು. ಇವರನ್ನು ಸ್ವಾಗತಿಸಲೋಸ್ಕರ ಮಡಿಕೇರಿಯಿಂದ ಇದೇ ವಿಶೇಷ ಬಸ್ಸಿನಲ್ಲಿ ಆಗಮಿಸಿದ್ದ ಎನ್‌ಸಿಸಿ ಮುಖ್ಯಸ್ಥರೂ ಆ ಬಸ್ಸಿನಲ್ಲಿ ಇದ್ದರು. ಅವರು ಮಾತ್ರ ಸಮವಸ್ತ್ರಧಾರಿಗಳಾಗಿರಲಿಲ್ಲ : ನಾಗರಿಕ ಉಡುಪನ್ನು ತೊಟ್ಟಿದ್ದರು. ಹೀಗೆ ಬಸ್ಸಿನ ಒಟ್ಟು ಪ್ರಯಾಣಿಕರ ಸಂಖ್ಯೆ ೫೧ನ್ನು ಮುಟ್ಟಿತ್ತು. ಆದರೆ ಅದಕ್ಕೆ ಪರವಾನಿಗೆ ದೊರೆತಿದ್ದುದು ೫೦ ಮಂದಿಗೆ ಮಾತ್ರ.

ಬಸ್ಸು ಮೈಸೂರು ರೇಲ್ವೇನಿಲ್ದಾಣವನ್ನು ಬಿಡುವ ಮುನ್ನ ಚಾಲಕ ಹೇಳಿದ: "ಸ್ವಾಮಿ! ಒಬ್ಬ ಪ್ರಯಾಣಿಕ ಹೆಚ್ಚಾಗಿದ್ದಾರೆ. ಹಾದಿಯಲ್ಲಿ ಕುಟ್ಟಪ್ಪ ಕಾದಿದ್ದಾರೆ."

"ನಾವಿದ್ದೇವಲ್ಲ. ಪರವಾ ಇಲ್ಲ" ಎಂದು ಸಮವಸ್ತ್ರಧಾರಿ ಅಧಿಕಾರಿ ಧೈರ್ಯ ನೀಡಿದರು.

ಮೈಸೂರಿನ ಗಡಿ ದಾಟುವ ಮೊದಲೇ ಕುಟ್ಟಪ್ಪದೂತರು ಯಮದೂತರಂತೆ ಪ್ರತ್ಯಕ್ಷರಾದರು. ಬಸ್ಸು ನಿಂತಿತು. ಎಲ್ಲವೂ ನಿಶ್ಯಬ್ದ, ಯಾಂತ್ರಿಕ, ಅತಿಕ್ಷಿಪ್ರ. ಕುಟ್ಟಪ್ಪ ಕಾಗದ ಪತ್ರ ತಪಾಸಣೆ ಮಾಡಿದರು, ಚಾಲಕನ ವಿರುದ್ಧ ಫಿರ್ಯಾದಿ ಮಾಡಲು ಆತನ ಲೈಸೆನ್ಸ್ ಪುಸ್ತಕವನ್ನು ಕೇಳಿದರು. ಚಾಲಕ ಎನ್‌ಸಿಸಿ ಅಧಿಕಾರಿಯತ್ತ ನೋಡಿದ. ಕ್ಯಾಪ್ಟನ್ ದರ್ಜೆಯ ಸಮವಸ್ತ್ರಧಾರಿ ಅಧಿಕಾರಿ ಬಸ್ಸಿನಿಂದ ಇಳಿದರು. ಜಬರದಸ್ತಿನಿಂದ ಕುಟ್ಟಪ್ಪನವರೆಡೆಗೆ ನಡೆದರು. ಇನ್ಸ್‌ಪೆಕ್ಟರ್ ಕುಟ್ಟಪ್ಪ ಕ್ಯಾಪ್ಟನ್ ದರ್ಜೆಗೆ ಗೌರವ ಸೂಚಿಸಲು ಪೋಲೀಸ್ ಸಲಾಮನ್ನು ನೀಡಿದರು,

ಅಧಿಕಾರಿ ಬಲು ಗತ್ತಿನಿಂದಲೇ ಮಾತು ತೊಡಗಿದರು : "ಕುಟ್ಟಪ್ಪನವರೇ ! ನೀವು ಹೀಗೆಲ್ಲ ಮಾಡಬಾರದು. ಇದು ತಪ್ಪು. ಈ ಬಸ್ಸು ಎನ್‌ಸಿಸಿ ಕ್ಯಾಡೆಟುಗಳನ್ನು ಕೊಂಡೊಯ್ಯುತ್ತಿದೆ."

"ಮನ್ನಿಸಬೇಕು ಸರ್ ! ವ್ಯಾಜ್ಯವಿರುವುದು ಸರಕಾರಕ್ಕೂ ಈ ಬಸ್ಸಿನ ಚಾಲಕನಿಗೂ ನಡುವೆ. ನೀವು ತಿಳಿದವರು ಇಲ್ಲಿ ಬರಬಾರದು."

"ಹಾಗೆಂದರೇನು ಅರ್ಥ ? ನಾನು ಕೇಂದ್ರ ಸರಕಾರದ ಗಝೆಟೆಡ್ ಆಫಿಸರ್..."

"ಕ್ಷಮಿಸಬೇಕು ಸರ್ ! ನನಗೆ ಪುರಸೊತ್ತಿಲ್ಲ."

ಪರಿಸ್ಥಿತಿ ಹೀಗೆ ಬಿಗಡಾಯಿಸಿದಾಗ, ಬಸ್ಸಿನ ಒಳಗೆ ಆ ವರೆಗೂ ಕುಳಿತುಕೊಂಡಿದ್ದ, ಮುಖ್ಯಸ್ಥರು ಹೊರಬಂದರು : ''ನಮಸ್ಕಾರ ಕುಟ್ಟಪ್ಪನವರೇ ! ಕಾನೂನನ್ನು ಉಲ್ಲಂಘನೆ ಮಾಡಿದಂಥ ಅಧಿಕಪ್ರಯಾಣಿಕ ನಾನು. ನಾನಿಲ್ಲಿ ಅಪರಾಧಿ. ಆದ್ದರಿಂದ ನೀವು ಫಿರ್ಯಾದಿಯನ್ನು ದಯವಿಟ್ಟು ನನ್ನ ವಿರುದ್ಧ ದಾಖಲು ಮಾಡಬೇಕು" ಎಂದು ಹೇಳಿ ತಮ್ಮ ಮಿಲಿಟರಿ ಗುರುತು ಪತ್ರವನ್ನು (ಅವರು ಮೇಜರ್ ದರ್ಜೆಯವರು) ಕುಟ್ಟಪ್ಪನವರಿಗೆ ತೋರಿಸಿದರು: ''ನೀವು ಹೇಳಿದಲ್ಲಿಗೆ ಹೇಳಿದ ದಿನ ನಾನು ಬಂದು ನ್ಯಾಯಾಲಯ ವಿಧಿಸುವ ಶಿಕ್ಷೆಯನ್ನು ಒಪ್ಪಿಕೊಳ್ಳುತ್ತೇನೆ. ಈ ನಿರಪರಾಧಿ ಚಾಲಕನ ಮೇಲೆ ಮಾತ್ರ ಕೈಫಿಯತ್ತು ಹೂಡಬೇಡಿ.''

ಇನ್ಸ್ಪೆಕ್ಟರ್ ಕುಟ್ಟಪ್ಪ ಮೇಜರ್ ಸಾಹೇಬರಿಗೆ ಸಲಾಮು ನೀಡಿ ''ಕುಟ್ಟಪ್ಪ ಕೂಡ ಮನುಷ್ಯ, ಸರ್ ! ನೀವು ಮುಂದುವರಿಸಿ. ನಿಮ್ಮ ಪ್ರಯಾಣ ಸುಖಪ್ರದವಾಗಲಿ'' ಎಂದರು ನಗುಮೊಗದಿಂದ. ದರ್ಪ ಅಲುಗಿಸಲಾರದ್ದನ್ನು ವಿನಯ ಬಾಗಿಸಿತ್ತು.

ವಿನಯ ಅಂದರೇನು ?

ನಮ್ಮ ವ್ಯಕ್ತಿತ್ವ ಬಾಹ್ಯಪ್ರಪಂಚಕ್ಕೆ ಪ್ರಕಟವಾಗುವ ರೀತಿ ವಿನಯ. ನಮ್ಮ ಅಂತರಂಗಿಕ ಸಂಸ್ಕೃತಿಯ ಪ್ರತ್ಯಕ್ಷರೂಪ ವಿನಯ. ನಾವು ಇತರರಿಗೆ ವ್ಯಕ್ತಪಡಿಸುವ ಗೌರವ ವಿನಯ. ಇತರರಿಂದ ನಾವು ನಿರೀಕ್ಷಿಸುವ ವರ್ತನೆ ಇತರರನ್ನು ಕುರಿತು ನಮ್ಮ ವರ್ತನೆ ಆದಾಗ ಅದು ವಿನಯವೆನ್ನಿಸುವುದು. ವ್ಯಕ್ತಿ–ವ್ಯಕ್ತಿ, ವ್ಯಕ್ತಿ-ಸಮಾಜ, ಸಮಾಜ–ವ್ಯಕ್ತಿ, ಸಮಾಜ–ಸಮಾಜ ನಡುವಿನ ಸಮಸ್ತ ನಡವಳಿಕೆಗಳಲ್ಲಿಯೂ ವಿನಯ ಸಹಜವಾಗಿ ಪ್ರಕಟವಾದಾಗ ಹಿಮಾಲಯ ಸದೃಶ ಸಮಸ್ಯೆಗಳೂ ಸಹೃದಯ ವಾತಾವರಣದಲ್ಲಿ ಮೇಲ್ಮೈಗೆ ಬಂದು ಹೂವಿನ ರೇಕುಗಳಂತೆ ಹಗುರವಾಗಿ ಪರಿಹಾರಗೊಳ್ಳುತ್ತವೆ. ಹಾಗಲ್ಲದೆ ಇಂಥ ನಡವಳಿಕೆಗಳಲ್ಲಿ ವಿನಯ ಗೈರುಹಾಜರಾಗಿದ್ದಲ್ಲಿ, ಇಲ್ಲದ ಹೊಸ ಸಮಸ್ಯೆಗಳು ಉದ್ಭವವಾಗಿ ಮೇರುಭಾರದಿಂದ ಎಲ್ಲರನ್ನೂ ಕೆಳಜಗ್ಗುವುವು.

೨

ಇದು ಹಾಗಿರಲಿ. ಈ ಎಂ.ಎ., ಎಂ.ಎಸ್‌ಸಿ., ಎಂ. ಕಾಂ., ಬಿ. ಇ., ಪಿಎಚ್.ಡಿ. ಮುಂತಾದ ಉನ್ನತ ಪದವೀಧರ ತರುಣ ನಿರುದ್ಯೋಗಿಗಳ ಘನಾಶಯವೇನು ? ಬ್ಯಾಂಕಿನಲ್ಲಿ ಇಲ್ಲವೇ ಎಲ್.ಐ.ಸಿ.ಯಲ್ಲಿ ಗುಮಾಸ್ತಿಕೆ, ಸರಕಾರದ ಯಾವುದೋ ಒಂದು ಖಾತೆಯಲ್ಲಿ ಕೆಲಸ, ಖಾಸಗಿ ಸಂಸ್ಥೆಯೊಂದರಲ್ಲಿ ಹುದ್ದೆ ಮುಂತಾದವು ಮಾತ್ರ. ಇಲ್ಲೆಲ್ಲ ಬಹುತೇಕವಾಗಿ ಅವರು ಕಲಿತ ವಿಷಯಕ್ಕೂ ಅರಸುವ ಉದ್ಯೋಗಕ್ಕೂ ಯಾವ ಸಂಬಂಧವೂ ಇರುವುದಿಲ್ಲ. ಅವರು ಈ

ವಿಚಾರದಲ್ಲಿ ತೀರ ನಿರ್ಲಿಪ್ತರು, ನಿರಾಸಕ್ತರು, ನಿಷ್ಪಕ್ಷಪಾತಿಗಳು. "ವಿದ್ಯೆ ಜ್ಞಾನಾರ್ಜನೆಗಾಗಿ, ಹುದ್ದೆ ಹೊಟ್ಟೆಪಾಡಿಗಾಗಿ. ವಿದ್ಯೆಗೂ ಹೊಟ್ಟೆಪಾಡಿಗೂ ನಂಟುಹಾಕುವುದು ಶತಮೂರ್ಖತನ" ಎಂದು ಇವರ ವರ್ತನೆಯಿಂದ ನಿಚ್ಚಳವಾಗುವುದು.

"ಅಯ್ಯಾ ಪ್ರಸ್ನಾತ್ರ ! ನೀನು ರಸಾಯನವಿಜ್ಞಾನದಲ್ಲಿ ಎಂ.ಎಸ್‌ಸಿ. ಪಡೆದಿರುವೆ. ಬ್ಯಾಂಕಿನಲ್ಲಿ ಗುಮಾಸ್ತನಾದಾಗ ಈ ಕಲಿಕೆಯಿಂದ ಉಪಯೋಗವೇನು ?"

ಅವನ ಉತ್ತರ ವಾದಾತೀತವಾಗಿರುತ್ತದೆ : "ಸರ್ ! ನಿಮ್ಮ ಪ್ರಶ್ನೆ ಏನೋ ಸರಿ. ಆದರೆ ನನ್ನ ಅಧ್ಯಯನಕ್ಕೆ ಅನುಗುಣವಾದ ಕೆಲಸ ನನಗೆ ದೊರೆಯುವುದಿಲ್ಲವಲ್ಲ ? ಹತ್ತು ಸಂಶೋಧನ ಮಂದಿರಗಳಿಗೆ ಇಪ್ಪತ್ತು ಕಾಲೇಜುಗಳಿಗೆ, ಕೊನೆಗೆ ಪ್ರೌಢಶಾಲೆಗಳಿಗೂ ಅರ್ಜಿ ಗುಜರಾಯಿಸಿದ್ದಾಯಿತು. ಎಲ್ಲೆಡೆಯೂ ಕತ್ತಲೆ. ಮತ್ತೇನು ಮಾಡಲಿ ?"

ಈ ಬ್ರಹ್ಮಗಂಟನ್ನು ಬಿಡಿಸುವುದು ಯಾ ಅಲೆಗ್ಝಾಂಡರ್ ಮಹಾಶಯ ಗಾರ್ಡಿಯನ್ ಗಂಟಿಗೆ ಮೋಕ್ಷ ಕಾಣಿಸಿದಂತೆ ಕತ್ತರಿಸುವುದು ಹೇಗೆ ? ನಮ್ಮ ದೇಶದ ಸದ್ಯದ ಪರಿಸ್ಥಿತಿಯಲ್ಲಿ ಇದು ಸಾಧ್ಯವಿಲ್ಲ. ವಿದ್ಯೆಗೂ ಹುದ್ದೆಗೂ ಸಂಬಂಧವಿರಬೇಕು. ಮೇಲಾಗಿ ಕಲಿವಾತನ ಒಲವಿಗೆ ಅನುಗುಣವಾದ ವಿದ್ಯೆಯನ್ನು ಆತ ಕಲಿಯಬೇಕು, ವಿದ್ಯೆ ಎಂದರೆ ಸಾಂಪ್ರದಾಯಿಕ ಶಾಲೆ ಕಾಲೇಜು ಕರ್ಮಾಗಾರಗಳು ಮಾತ್ರ ಒದಗಿಸುವ ಘನ ವಸ್ತು ಅಲ್ಲ ಎಂಬಿವೇ ಮುಂತಾದವು ಆದರ್ಶದ ಮೋಡದಿಂದ ವಾಸ್ತವತೆಯ ನೆಲಕ್ಕೆ ಇಳಿದಿರದ ಸತ್ಯಗಳು. ಸರಳವಾಗಿ ಹೇಳುವುದಾದರೆ ನಮಗಿಲ್ಲಿ ಎಲ್ಲರಿಗೂ ವಿತರಿಸಲು ಬೇಕಾಗುವಷ್ಟು ಹುದ್ದೆಗಳೇ ಇಲ್ಲ. ನಮ್ಮ ತರುಣ ನಿರುದ್ಯೋಗಿ ಪದವೀಧರನ ಎದುರು ಇರುವ ಸವಾಲು ಇದು: ಕಡಿಮೆ ರೊಟ್ಟಿಗಳನ್ನು ಹೆಚ್ಚು ಹೊಟ್ಟೆಗಳಿಗೆ ಹಂಚುವುದು ಹೇಗೆ ? ಗಣಿತ ಈ ಸಮಸ್ಯೆಗೆ ಎರಡು ಪರಿಹಾರಗಳನ್ನು ಸೂಚಿಸುವುದು : ಒಂದು, ಹುದ್ದೆಗಳನ್ನು ಅಭ್ಯರ್ಥಿಗಳ ಸಂಖ್ಯೆಯ ತನಕ ಏರಿಸುವುದು ; ಎರಡು, ಅಭ್ಯರ್ಥಿಗಳ ಸಂಖ್ಯೆಯನ್ನು ಹುದ್ದೆಗಳ ಸಂಖ್ಯೆಯ ವರೆಗೆ ಇಳಿಸುವುದು. ಇಲ್ಲಿ ಕರ್ತಾರರು ಯಾರಾಗಬೇಕು ? ಸುಲಭ ಉತ್ತರ ಸರಕಾರ. ಹುದ್ದೆಗಳನ್ನು ಹಿಗ್ಗಿಸಿದ ಸರಕಾರ ದಿವಾಳಿ ಎದ್ದರೆ ಅಭ್ಯರ್ಥಿಗಳ ಸಂಖ್ಯೆಯನ್ನು ತಗ್ಗಿಸಿದ ಸರಕಾರ ಸ್ವಜನಾಂಗ ಹತ್ಯೆಯ ದೋಷಕ್ಕೆ ಈಡಾಗುತ್ತದೆ. ಆದ್ದರಿಂದ ಈ ಸಾಂಪ್ರದಾಯಿಕ ಪರಿಹಾರ ಅಪ್ರಾಯೋಗಿಕ. ಸಂಪ್ರದಾಯದ ಚೌಕಟ್ಟಿನಿಂದ ಹೊರಕ್ಕೆ ಸಾಗಿ ಸಮಸ್ಯೆಯನ್ನು ಈಗ ಪರಿಶೀಲಿಸೋಣ.

ಸರಕಾರ ಅಥವಾ ಯಾವುದೇ ಒಂದು ಸಂಸ್ಥೆ ಉದ್ಯೋಗಗಳನ್ನು ಒದಗಿಸುವ ಒಂದು ಆಕರ ಎಂಬುದು ನಿಜ. ಇವೆಲ್ಲವೂ ವ್ಯಕ್ತಿಗಳ ಸಮುದಾಯದಿಂದ ಉದ್ಭವಿಸಿದಂಥವು. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಉದ್ಯೋಗಗಳನ್ನು ನಿರ್ಮಿಸುವಂಥ ಸಾಮರ್ಥ್ಯ ಸುಪ್ತವಾಗಿ ಆದರೂ ಇದೆ ಎಂದು ಅಂಗೀಕರಿಸಬಹುದು. ಈ ಸಾಮರ್ಥ್ಯವನ್ನೇ ಅಭಿವೃದ್ಧಿಗೊಳಿಸಿ ವ್ಯಕ್ತಿ ತನಗೆ ತಾನೇ ಹುದ್ದೆ ಒದಗಿಸಿಕೊಳ್ಳುವಂತೆ ಮಾಡುವುದು ಮತ್ತು ಅಂಥ ಪರಿಸರವನ್ನು ಸೃಷ್ಟಿಸುವುದು ಸಾಧ್ಯವಾದರೆ ಆಗ ನಿರುದ್ಯೋಗ ಸಮಸ್ಯೆ ಹೇಳಹೆಸರಿಲ್ಲದೇ ಹೋಗುವುದು. ವ್ಯಕ್ತಿ ಬೇರೆ ಒಂದು ಸಂಸ್ಥೆ ಎಡೆಗೆ ಉದ್ಯೋಗಾಕಾಂಕ್ಷಿಯಾಗಿ ದಿಟ್ಟಿ ಹಾಯಿಸುವ ಬದಲು ತನಗೆ ತಾನೇ ಉದ್ಯೋಗ ಒದಗಿಸಿಕೊಳ್ಳುವ ನಿಪುಣನಾಗುವುದು ಇಲ್ಲಿನ ಮರ್ಮ. ಇಲ್ಲಿ ತನ್ನ ಬಾಳ ಬಟ್ಟೆ

ಯನ್ನು ಅವನೇ ಅರಸುತ್ತಾನೆ. ಅವನೇ ಕಾಣುತ್ತಾನೆ. ಹೀಗೆ ನಿರುದ್ಯೋಗದ ಸವಾಲನ್ನು ವ್ಯಕ್ತಿ ಸ್ವೋದ್ಯೋಗದಿಂದ ಎದುರಿಸುವನು. ಇದು ಹೇಳಿದಷ್ಟು ಸುಲಭ ಸುತರಾಂ ಅಲ್ಲ. ಇಂಥ ಒಂದು ನಿಲುವನ್ನು ತಳೆಯಲು ವ್ಯಕ್ತಿಯಲ್ಲಿ ಸಾಕಷ್ಟು ದಿಟ್ಟತನ ಇರಬೇಕು. ಈ ಹಾದಿಯಲ್ಲಿ ಗಮಿಸಲು ಸಾಕಷ್ಟು ಛಲ ಇರಬೇಕು. ನಿರಂತರವಾಗಿ ಎದುರಾಗುವ ವೈಫಲ್ಯ ಹತಾಶೆಗಳಿಂದ ಎದೆಗುಂದದೆ ಮುಂದುವರಿಯುವ ಕೆಚ್ಚು ಇರಬೇಕು. ಅತ್ಯುನ್ನತ ಮಟ್ಟದ ಶಿಸ್ತು ಪ್ರತಿಯೊಂದು ರಂಗದಲ್ಲಿಯೂ ಅನಿವಾರ್ಯ.

೩

ಶಿಸ್ತು ಅಂದರೇನು ?

ಪರಿಸರದ ಬಲಗಳಿಗೆ ಅನುವರ್ತಿಯಾಗಿ ನಮ್ಮ ಬದುಕನ್ನು ರೂಪಿಸಿಕೊಳ್ಳುವ ವಿಧಾನಕ್ಕೆ ಶಿಸ್ತು ಎಂದು ಹೆಸರು. ಶಿಲಾವರೋಹಣ ಎನ್ನುವ ಕ್ರೀಡೆಯಲ್ಲಿ ಭಾಗವಹಿಸಲು ನಾವು ಉದ್ದೇಶಿಸಿರುವೆವೆಂದು ಭಾವಿಸೋಣ. ಕಡಿದಾದ ಮತ್ತು ಎತ್ತರವಾದ ಒಂದು ಬಂಡೆ ಉಂಟು. ಅದರ ಮಂಡೆಯ ಮೇಲೆ ಅಂಚಿನ ವರೆಗೆ ಬಂದು ಕೆಳಗಿನ ಆಳವಾದ ಪ್ರಪಾತಕ್ಕೆ ಜಿಗಿಯುವ ಆಟವಿದು. ಹಿಂದೆ ಮುಂದೆ ನೋಡದೆ ನೇರವಾಗಿ ನೆಗೆದೇ ಬಿಟ್ಟೆವಾದರೆ ನಮಗೆ "ಶಾಶ್ವತ ಸಂತೋಷ" ಪ್ರಾಪ್ತವಾಗುವುದರ ಜೊತೆಗೆ ಇತರ ಭಾಗಿಗಳಿಗೆ ಸಾಕಷ್ಟು ತಾಪತ್ರಯವನ್ನೂ ಈ ಹುಚ್ಚು ಸಾಹಸ ಒದಗಿಸುತ್ತದೆ ಎನ್ನುವುದು ಸ್ಪಷ್ಟ. ಇಂಥ ದುರಂತಕ್ಕೆ ನಾವು ತುತ್ತಾಗಬಾರದು, ಆದರೆ ಅವರೋಹಣ ಕ್ರೀಡೆಯ ಸಂತೋಷ ನಮಗೆ ಲಭಿಸಬೇಕು ಎನ್ನುವುದು ನಮ್ಮ ಉದ್ದೇಶ. ಇದರ ಸಿದ್ಧಿಗಾಗಿ ನಾವು ಪರಿಸರದ ಬಲಗಳು ಏನು, ನಮ್ಮ ಇತಿಮಿತಿಗಳೇನು ಎಂಬೀ ವಿವರಗಳನ್ನು ಕೂಲಂಕಷವಾಗಿ ಅಧ್ಯಯಿಸಬೇಕಾಗುವುದು. ಸ್ಥೂಲವಾಗಿ ಇವು ಹೀಗಿವೆ. ತಳದೆಡೆಗೆ ನಮ್ಮನ್ನು ಆಕರ್ಷಿಸುವ ಭೂಗುರುತ್ವ ಬಲ, ಬಂಡೆಯ ರಚನೆ—ಇವಿಷ್ಟು ಪರಿಸರದ ಬಲಗಳು. ನಮ್ಮ ದೇಹ ಬಲು ಜಟಿಲವಾದ ಮತ್ತು ನವುರಾದ ಒಂದು ವ್ಯವಸ್ಥೆ. ಇದು ಅತಿ ವೇಗವನ್ನಾಗಲಿ ತೀವ್ರ ಧಕ್ಕೆಯನ್ನಾಗಲಿ ಎದುರಿಸಿ ಉಳಿಯಲಾರದು. ಇದರ ಪ್ರತಿಯೊಂದು ಚಟುವಟಿಕೆಯ ಮೇಲೆಯೂ ನಮ್ಮ ಹತೋಟಿಯನ್ನು ಕಾಯ್ದುಕೊಂಡಿರಬೇಕಾದದ್ದು ಆವಶ್ಯಕ—ಇವಿಷ್ಟು ನಮ್ಮ ಇತಿಮಿತಿಗಳ ವಿವರಣೆ. ಇವೆರಡನ್ನು ಅನುಲಕ್ಷಿಸಿ ಸ್ವರಕ್ಷಣೆಯನ್ನು ಸಾಧಿಸಲು ನಾವು ಅನುಸರಿಸಬೇಕಾದ ವಿಧಾನ ಶಿಲಾವರೋಹಣ ಕ್ರೀಡೆಯಲ್ಲಿನ ಶಿಸ್ತು ಆಗುತ್ತದೆ. ನೈಲಾನ್ ದಾರಗಳು, ಲೋಹದ ಕೊಣಿಕೆಗಳು, ಜಿಲೇಕಾರ, ಜಗಿವಾತನ ದೇಹ ವಿನ್ಯಾಸ ಇವೆಲ್ಲವೂ ಈ ಶಿಸ್ತಿನ ಅಂಗಗಳಾಗಿ ಒದಗಿ ಬರುತ್ತವೆ. ಇದರಲ್ಲಿನ ಯಾವುದೇ ಅಂಗದ ಅಲಕ್ಷ್ಯವೂ ಶಿಸ್ತಿನ ಉಲ್ಲಂಘನೆ ಆಗುತ್ತದೆ. ಆಗ ನಮಗೆ ಅಪಾಯ ತಪ್ಪಿದ್ದಲ್ಲ. ಮನುಷ್ಯ ಪರಿಸರದ ಶಿಶು. ಆದ್ದರಿಂದ ಆತನ ಯಾವುದೇ ಉದ್ಯಮದಲ್ಲಿ ಪರಿಸರವನ್ನು ಅಸಡ್ಡೆ ಮಾಡಿದ್ದೇ ಆದರೆ ಅಂಥ ಕ್ರಿಯೆ ಶಿಸ್ತಿನ ಉಲ್ಲಂಘನೆ ಎನ್ನಿಸುತ್ತದೆ. ಇದರಿಂದ ಅವನ ಉದ್ಯಮದಲ್ಲಿ ವೈಫಲ್ಯ ಸ್ವತಸ್ಸಿದ್ಧ.

ವ್ಯಕ್ತಿಯ ಸಾಮರ್ಥ್ಯವನ್ನು ಒಂದು ನಿರ್ದಿಷ್ಟ ಉದ್ದೇಶದೆಡೆಗೆ ಪ್ರವರ್ತಿಸುವ ಗುಣವೇ ಶಿಸ್ತು. ನಿತ್ಯಜೀವನದ ಅವಿಭಾಜ್ಯ ಅಂಗವಾಗಿ ಶಿಸ್ತು ಪ್ರತಿಯೊಬ್ಬನಲ್ಲಿಯೂ ಇರಲೇಬೇಕು. ಶಿಸ್ತುಗಾರನೊಬ್ಬ ಅತ್ಯಂತ ಪ್ರಾಮಾಣಿಕ ವ್ಯಕ್ತಿ. ಕರ್ತವ್ಯ ನಿರ್ವಹಣೆ ಒಂದೇ ಶಿಸ್ತುಗಾರನ

ಆದರ್ಶ. ''ಕರ್ತವ್ಯದ ಕ್ಷೇತ್ರ ಅನಂತವಾಗಿದೆ. ಜೀವನದ ಪ್ರತಿಯೊಂದು ರಂಗವನ್ನೂ ಅದು ವ್ಯಾಪಿಸಿದೆ. ನಾವು ಧನವಂತರಾಗಿರುವುದಾಗಲಿ ಬಡವರಾಗಿರುವುದಾಗಲಿ ಸಂತೋಷಿಗಳಾಗಿರುವುದಾಗಲಿ ದುಃಖಿಗಳಾಗಿರುವುದಾಗಲಿ ನಮ್ಮ ಆಯ್ಕೆಯಿಂದ ಅಲ್ಲ. ಆದರೆ ನಮ್ಮನ್ನು ಎಲ್ಲ ಕಡೆಗಳಲ್ಲಿಯೂ ಸುತ್ತುವರಿದುಕೊಂಡಿರುವ ಕರ್ತವ್ಯವನ್ನು ನಿರ್ವಹಿಸುವುದು ನಮ್ಮ ಪಾತ್ರ ಎನ್ನುವುದಂತೂ ಖಂಡಿತ. ಎಷ್ಟೇ ತ್ರಾಸದಾಯಕವಾಗಲಿ ಮತ್ತು ಅಪಾಯಕಾರಿ ಆಗಲಿ ಪರಮೋಚ್ಚ ನಾಗರಿಕ ಜೀವನದ ತಿರುಳು ಕರ್ತವ್ಯಕ್ಕೆ ತಲೆಬಾಗುವುದೇ ಆಗಿದೆ. ಮಹಾಸಾಧನೆಗಳಿಗಾಗಿ ಈಗಲೂ ಗತಕಾಲದಂತೆಯೇ ಕಾರ್ಯ ಎಸಗಲೇ ಬೇಕು. ಆಶಿಸಲೇ ಬೇಕು, ಸಾಯಲೇ ಬೇಕು" ಎಂಬುದಾಗಿ ಸ್ಯಾಮ್ಯುಯಲ್ ಸ್ಮೈಲ್ಸ್ ಹೇಳಿರುವ (1880) ಮಾತು ಚಿರಂತನ ಸತ್ಯ. ಸೀತಾನ್ವೇಷಣೆಗಾಗಿ ಸಾಗರೋಲ್ಲಂಘನ ಮಾಡುತ್ತಿದ್ದ ಹನುಮಂತನ ಹಾದಿಗೆ ಎದುರಾಗಿ ಮೈನಾಕ ಪರ್ವತರಾಜ ಜಲರಾಶಿಯಿಂದ ಮೇಲೆದ್ದು ತನ್ನ ಆತಿಥ್ಯವನ್ನು ವಾಯುಸುತ ಸ್ವೀಕರಿಸಿ ಮುಂದೆ ಸಾಗಬೇಕೆಂದು ಬಿನ್ನವಿಸಿಕೊಂಡ. ಆಗ ಹನುಮಂತ ನೀಡಿದ ಉತ್ತರ ಬಲು ಸಾಂಕೇತಿಕವಾಗಿದೆ: "ನಾನು ಸಂತುಷ್ಟನಾದೆನು. ಆತಿಥ್ಯವನ್ನು ನೀನು ಮಾಡಿದ್ದಾಯಿತು. ಕೋಪಿಸಿಕೊಳ್ಳಬೇಡ, ಕಾರ್ಯಸಾಧನೆಯಾಗಬೇಕಾದ ಕಾಲವು ನನ್ನನ್ನು ತ್ವರೆ ಪಡಿಸುತ್ತಿದೆ. ಹಗಲೂ ಕಳೆದು ಹೋಗುತ್ತಿದೆ. ಎಲ್ಲಿಯೂ ಮಧ್ಯಮಾರ್ಗದಲ್ಲಿ ನಾನು ನಿಲ್ಲುವುದಿಲ್ಲವೆಂದು ಭಾಷೆ ಕೊಟ್ಟಿರುವೆನು." (ಸಿ. ಎನ್. ಶ್ರೀನಿವಾಸ ಅಯ್ಯಂಗಾರ್ ಬರೆದಿರುವ ಕನ್ನಡ ವಾಲ್ಮೀಕಿ ರಾಮಾಯಣ). ಕರ್ತವ್ಯ ಪ್ರಜ್ಞೆಗೆ ಶಾಶ್ವತ ಪ್ರತೀಕ ರಾಮನ ಬಂಟ ಹನುಮಂತ.

ಕಾಲನಿಷ್ಠೆ ಶಿಸ್ತುಗಾರನ ಬದುಕಿನ ಉಸಿರು. ನಮ್ಮ ಯಾವ ಪ್ರಯತ್ನವೂ ಇಲ್ಲದೆ ಸ್ಥಿರದರದಿಂದ ಜಗುಳಿ ಹೋಗುವ ಮತ್ತು ಎಂದೆಂದೂ ಮರಳಿ ಬರದಿರುವ ಏಕೈಕ ಪರಿಮಾಣವೆಂದರೆ ಕಾಲ. ಸರ್ವಕಾಲಗಳಲ್ಲಿಯೂ ಸರ್ವರಿಗೂ ಸಮವಾಗಿ ಅನ್ವಯಿಸುವ ನಿಯಮವಿದು. ಆದ್ದರಿಂದ ನಾವು ಏನನ್ನಾದರೂ, ಲೋಕದ ಮಾತಂತಿರಲಿ ಕನಿಷ್ಠ ಪಕ್ಷ ನಮ್ಮ ಒಳಿತಿಗಾಗಿ ಆದರೂ, ಸಾಧಿಸಬೇಕೆಂದಿದ್ದರೆ ಅದು ವರ್ತಮಾನ ಕಾಲದ ಸದುಪಯೋಗವೊಂದರಿಂದಲೇ ಸಾಧ್ಯ. ಗತಕಾಲದಿಂದ ಪಡೆದ ಅನುಭವದಿಂದ ಭವಿಷ್ಯತ್ತನ್ನು ರೂಪಿಸುವುದಕ್ಕೋಸ್ಕರ ವರ್ತಮಾನ ಕಾಲದಲ್ಲಿ ತೀವ್ರವಾಗಿ ಬಾಳಬೇಕು. ಕಾಲನಿಷ್ಠೆ ಇಲ್ಲದ ಸೇನಾನಿಗಳ ಬೇಜವಾಬ್ದಾರಿಕೆಯಿಂದಾಗಿ ಯುದ್ಧಗಳಲ್ಲಿ ಸಾವು ಸೋಲು ಉಂಟಾಗಿವೆ. ಕಾಶ್ಮೀರದ ವೀರ ಎಂಬ ಬಿರುದನ್ನು ಪಡೆದ ಜನರಲ್ ತಿಮ್ಮಯ್ಯನವರು ಒಮ್ಮೆ ಒಂದು ಭಾಷಣದಲ್ಲಿ ಹೇಳಿದ ಮಾತುಗಳು ಬಲು ಅರ್ಥಪೂರ್ಣವಾಗಿವೆ: '' ಯಾವುದೇ ಯಶಸ್ವೀ ಕಾರ್ಯದ ಅಡಿಪಾಯ ಶಿಸ್ತು. ಇಂಥ ಶಿಸ್ತು ನಮ್ಮ ಸಮಸ್ತ ಚಟುವಟಿಕೆಗಳಲ್ಲಿಯೂ ಹಾಸುಹೊಕ್ಕಾಗಿ ಪಸರಿಸಬೇಕಾದರೆ ನಾವು ಕಲಿಯಬೇಕಾದ ಮೊದಲ ಪಾಠ ಕಾಲಪ್ರಜ್ಞೆಯನ್ನು ಕುರಿತದ್ದು.'' ಓರ್ವ ಶಿಸ್ತುಗಾರ ಸ್ವಂತ ಜೀವನದಲ್ಲಿ ಕಾಲನಿಷ್ಠೆಯನ್ನು ಬಲು ಸಹಜವಾಗಿ ರೂಢಿಗೆ ತಂದಿರುತ್ತಾನೆ. ತನ್ನ ವೇಳೆಗೆ ತುಂಬ ಬೆಲೆಯನ್ನು ಕೊಡುವ ಆತ ಇತರರ ವೇಳೆಗೆ ಅದಕ್ಕಿಂತಲೂ ಹೆಚ್ಚಿನ ಮಹತ್ತ್ವವನ್ನು ಕೊಡುವನು,

೪

ನನ್ನಲ್ಲಿಗೆ ಬರುವ ತರುಣರಿಗೆ ಈ ಸಂಗತಿಗಳನ್ನು ನಾನು ವಿವರಿಸಿ ಹೇಳುವಾಗ ಸಿದ್ಧಾಂತದ ಮಟ್ಟದಲ್ಲಿ ಅವರು ಪೂರ್ಣವಾಗಿ ನನ್ನನ್ನು ಅನುಮೋದಿಸುತ್ತಾರೆ. ಹಾಗಾದರೆ ಕಾರ್ಯರಂಗಕ್ಕೆ ಇಳಿಯೋಣ ಎನ್ನುವಾಗ ನಾನಾ ಕಾರಣಗಳಿಂದ ಹಿಂದೇಟು ಹೊಡೆಯುತ್ತಾರೆ. ಕೆಲವು ಪ್ರರೂಪೀ ಉದಾಹರಣೆಗಳನ್ನು ಪರಿಶೀಲಿಸೋಣ.

ಬಿ. ಇ. ಪದವೀಧರನೊಡನೆ ಮಾತು ಬೆಳೆಸುತ್ತೇನೆ: "ನೀನು ಸ್ವತಂತ್ರವಾಗಿ ಏನಾದರೂ ಉದ್ಯಮವನ್ನು ಏಕೆ ತೊಡಗಬಾರದು ? ಸಿವಿಲ್ ಎಂಜಿನಿಯರಿಂಗ್ ಬೇರೆ ಓದಿರುವೆ. ಉದಾಹರಣೆಗೆ ಚಿಕ್ಕಪುಟ್ಟ ಮನೆಗಳನ್ನು ಕಟ್ಟಿಸುವ ಇಲ್ಲವೇ ಹಳೇ ಮನೆಗಳಿಗೆ ಸುಣ್ಣಬಣ್ಣ ಬಳಿಸುವ ಹೊಣೆಗಾರಿಕೆ."

"ಬಂಡವಾಳ ಎಲ್ಲಿಂದ ತರಲಿ ?"

"ಯಾವ ಒಳ್ಳೆ ಕೆಲಸವೂ ಬಂಡವಾಳದ ಕೊರತೆಯಿಂದಾಗಿ ನಿಂತದ್ದಿಲ್ಲ. ಮುಖ್ಯವಾಗಿ ಬೇಕಾದದ್ದು ಕೆಲಸವನ್ನು ಶ್ರದ್ಧೆಯಿಂದ ನಡೆಸಬಲ್ಲೆ ಎನ್ನುವ ದೃಢ ಮನಸ್ಸು."

"ನನಗೆ ಅಂಥ ಧೈರ್ಯವೇ ಇಲ್ಲ, ಸರ್. ನಿಜ ಹೇಳುವುದಾದರೆ ನಮ್ಮ ಕೆಲಸಕ್ಕೂ ಇಂಥ ಕೆಲಸ ಬೇಡುವ ಅನುಭವಕ್ಕೂ ಏನೇನೂ ಸಂಬಂಧ ಇರುವುದಿಲ್ಲ. ಆದ್ದರಿಂದ ನೀವು ಸೂಚಿಸಿದಂಥ ಕೆಲಸವನ್ನು ನಾನು ನಿಭಾಯಿಸಲಾರೆ."

ದಂಡೆಯ ಮೇಲೆ ನಿಂತು ಈಸುವುದರ ವಿಚಾರ ನಿರರ್ಗಳ ವಾಗ್ಝರಿ ಹರಿಸಬಲ್ಲ ಈ ನಿಸ್ಸೀಮ ವಾಕ್ಪಟು ನೀರಿನ ಅಂಚನ್ನು ಸೋಂಕಲು ಕೂಡ ತಯಾರಿಲ್ಲ.

ನಿಜ ಸಕಲುಗಳಿಗೆ ರುಜುಮಾಡಿಸಲು ಓರ್ವ ನಿರುದ್ಯೋಗಿ ಪದವೀಧರ ನನ್ನಲ್ಲಿಗೆ ಬಿಜಯಂಗೈಯ್ಯುತ್ತಾನೆ. ಮೂರು ವರ್ಷಗಳಿಂದಲೂ ಅವನನ್ನು ನೋಡುತ್ತಿದ್ದೇನೆ ಯಾವ ದಂಧೆಯೂ ಇಲ್ಲದೆ ಉಡಾಳನಾಗಿಯೇ ಅಡ್ಡಾಡುತ್ತಿದ್ದಾನೆ. ಅವನ ಮೇಲೆ ಒಂದು ಬಾಣ ಎಸೆಯುತ್ತೇನೆ. "ಈಗ ನೀನು ನಾನು ಎಲ್ಲರೂ ಇರುವ ನಮ್ಮ ಬಡಾವಣೆ ಉಂಟು. ಇಲ್ಲಿರುವ ಹೆಚ್ಚಿನ ಜನರು ಮಧ್ಯಮ ವರ್ಗದ ನೌಕರರು. ನಮಗೆಲ್ಲರಿಗೂ ಏಕಪ್ರಕಾರವಾಗಿ ಅನ್ವಯವಾಗುವ ಕೆಲವು ತೊಂದರೆಗಳಿವೆ—ಮನೆಗೆ ಬೇಕಾಗುವ ಉತ್ತಮ ಸಾಮಗ್ರಿಗಳನ್ನು ಸಕಾಲದಲ್ಲಿ ಪೂರೈಸಿಕೊಳ್ಳುವುದು, ವಿವಿಧ ಬಗೆಯ ಬಿಲ್ಲುಗಳನ್ನು ಪಾವತಿ ಮಾಡುವುದು, ವಿದ್ಯುದುಪಕರಣಗಳ ಮತ್ತು ಮನೆಗಳ ಸಣ್ಣ ಪುಟ್ಟ ರಿಪೇರಿಗಳು, ಇತ್ಯಾದಿ. ಮೊದಲು ಆಯ್ದ ನಾಲ್ಕೋ ಐದೋ ಮನೆಗಳಿಂದ ಮಾತ್ರ ತೊಡಗು. ಒಂದು ನಿರ್ದಿಷ್ಟ ಕ್ರಮದಲ್ಲಿ ಅವರಿಗೆ ಈ ಅವಶ್ಯಕತೆಗಳನ್ನು ನ್ಯಾಯಬೆಲೆಯಲ್ಲಿ ಒದಗಿಸುವ ದಿಶೆಯಲ್ಲಿ ನೀನು ದುಡಿದು ನೋಡು. ಇಂಥ ಸೇವೆಗೆ ನಿಗದಿಯಾದ ಶುಲ್ಕವನ್ನು ಸಂತೋಷವಾಗಿ ತೆರಲು ಅವರು ಸಿದ್ಧರಾಗಿರುತ್ತಾರೆ. ಕ್ರಮೇಣ ನಿನ್ನ ಸೇವಾ ಕ್ಷೇತ್ರವನ್ನೂ ವಿಧಗಳನ್ನೂ ವಿಸ್ತರಿಸು. ಖಂಡಿತವಾಗಿಯೂ ನೀನು ಉತ್ಕರ್ಷ ಪಡೆಯುವೆ."

ಈ ಮಹಾಶಯ ಮೊದಲು ನನ್ನ ಮನೆಯಿಂದಲೇ ತೊಡಗುತ್ತಾನೆ. ನನ್ನ ಪರಿಚಯದ ಎರಡು ಮೂರು ಮನೆಗಳವರೂ ಇವನ ಸೇವೆಯನ್ನು ಸ್ವೀಕರಿಸಲು ಮುಂಬರುತ್ತಾರೆ. ಒಂದು ವಾರ ದುಡಿಯುವಾಗ ಇವನು ಖಪಡಾಸಿ, ನಮಗೆ ಮೋಸ ಮಾಡುತ್ತಿದ್ದಾನೆ ಎಂಬ ಶಂಕೆ

ಮೂಡಿ ದೃಢವಾಗುತ್ತದೆ. ಅಲ್ಲಿಗೆ ಈ ಕೂಸು ಕಣ್ಣುಬಿಡುವ ಮೊದಲೇ ಮಡಿಯುವುದು.

೫

ಒಂದು ಸಲ ನಾನೇ ಒಂದಷ್ಟು ಮಂದಿಯನ್ನು ಕಲೆ ಹಾಕಿ ಅವರ ಸಮಸ್ಯೆಯನ್ನೂ ಅದಕ್ಕೆ ನಾನು ಸೂಚಿಸಲಿರುವ ಪರಿಹಾರವನ್ನೂ ವಿವರಿಸಿದೆ. ಅವರು ಇವರು ನನಗೆ ಕೆಲಸ ಕೊಡಲಿಲ್ಲ ಎಂಬುದಾಗಿ ಗಂಟು ಮೋರೆಯನ್ನು ಸಿಂಡರಿಸುವುದಕ್ಕಿಂತ ನಾನೇ ನನಗೆ ಕೆಲಸ ಕೊಟ್ಟುಕೊಳ್ಳಲಿಲ್ಲ ಎಂಬುದಾಗಿ ಆ ಆರೋಪವನ್ನು ನನ್ನ ಮೇಲೆಯೇ ಏಕೆ ಹೇರಿಕೊಳ್ಳಬಾರದು ? ನಾನೇ ನನಗೆ ಕೆಲಸ ಕೊಟ್ಟು ಕೊಳ್ಳುವುದೆಂದರೇನು? ಇದಕ್ಕೆ ಮಾನಸಿಕವಾಗಿ ನನ್ನಲ್ಲಿ ಕೆಲವು ಪೂರ್ವಸಿದ್ಧತೆಗಳಿರಬೇಕು.

ಒಂದನೆಯದು, ಯಾವ ಕಾರ್ಯವೂ ನನ್ನ ಘನತೆಗೆ ಕಡಿಮೆಯದಲ್ಲ. ವಾಸ್ತವವಾಗಿ ಕಾರ್ಯನಿರ್ವಹಣೆಯಲ್ಲಿನ ನನ್ನ ಪಾತ್ರದಿಂದಾಗಿ ನನಗೆ ಘನತೆ ಪ್ರಾಪ್ತವಾಗುವುದೇ ಶಿವಾಯಿ ಬೇರೆ ಯಾವುದೇ ಒತ್ತುಗಂಬಗಳಿಂದ ಅಥವಾ ಅಟ್ಟಳೆಗೆಗಳಿಂದ ಅಲ್ಲ. ಕಾರ್ಯ ಎಂಬ ವಿದ್ಯುತ್ತು ಪ್ರವಹಿಸುವಾಗ ನನ್ನ ವ್ಯಕ್ತಿತ್ವದ ಹಸಿ ಕಬ್ಬಿಣಕ್ಕೆ ಕಾಂತತ್ವ ಎಂಬ ಪ್ರಭಾವ ಒದಗಿ ಬರುತ್ತದೆ. ಆದ್ದರಿಂದ ಕಾರ್ಯವನ್ನು ನೆರವೇರಿಸಲು ನನ್ನನ್ನು ನಾನು ಹೇಗೆ ತಯಾರು ಮಾಡಿಕೊಳ್ಳುತ್ತೇನೆ ಎನ್ನುವ ಕಡೆ ಪ್ರಧಾನ ಲಕ್ಷ್ಯ ಇರಬೇಕು.

ಎರಡನೆಯದು, ಯಾವ ಕಾರ್ಯವೂ ನನ್ನ ಅಳವಿಗೆ ಮೀರಿದ್ದಲ್ಲ. ದೃಢ ನಿರ್ಧಾರವಿದ್ದ ಸಾವಿತ್ರಿ ಕಾಲಪುರುಷನನ್ನೇ ಒಲಿಸಿ ಪತಿಜೀವವನ್ನು ಮರುಪಡೆದಳು. ಏಕಾಗ್ರಚಿತ್ತದಿಂದ ಪ್ರತ್ಯಕ್ಷ ಪ್ರಯತ್ನ ಮಾಡಿದ್ದೇ ಆದರೆ ನನ್ನ ಸಾಮರ್ಥ್ಯಕ್ಕೆ ಮಣಿಯದ ಹಿಮಾಲಯ ಪರ್ವತವೇ ಇರುವುದಿಲ್ಲ.

ಮೂರನೆಯದು, ಕಾರ್ಯ ಯಾವುದೇ ಇರಲಿ, ಅದನ್ನು ಸಮರ್ಪಕವಾಗಿ ನಿಭಾಯಿಸುವುದರಲ್ಲಿಯೇ ನಾನು ಪರಮಾನಂದವನ್ನು ಪಡೆಯುತ್ತೇನೆ. ಒಂದು ಕೆಲಸವನ್ನು ತೊಡಗುವಾಗ ಅದರ ಹೊಸತನದಿಂದಾಗಿ ನಾನು ಉತ್ಸಾಹಿ ಆಗಿರುವುದು ಸಹಜ. ಆದರೆ ದಿನ ಉರುಳಿದಂತೆ ಕೆಲಸದ ಏಕತಾನ ವಿಶಾಸದಿಂದ, ಇಲ್ಲವೇ ಪದೇ ಪದೇ ಎದುರಾಗುವ ಅಡೆತಡೆಗಳಿಂದ, ನನ್ನಲ್ಲಿ ನಿರುತ್ಸಾಹ ಉದ್ವೇಗ ಒತ್ತಡ ಮುಂತಾದವು ತಲೆದೋರಿ ಹೊಲಬು ತಪ್ಪಿ ಅಂಡಲೆಯುವುದು ವಿರಳವೇನಲ್ಲ. ಆದ್ದರಿಂದ ಕಾರ್ಯನಿರ್ವಹಣೆಯ ಹಾದಿಯಲ್ಲಿ ಎದುರಾಗುವ ಮೈನಾಕ ಸುರಸೆ ಸಿಂಹಿಕೆಯರಿಂದ ನಾನು ವಿಚಲಿತನಾಗುವುದಿಲ್ಲ ಎಂಬ ದೃಢ ನಿರ್ಧಾರ ಅಗತ್ಯ.

ನಾಲ್ಕನೆಯದು, ಕಾಲದ ಸದ್ವಿನಿಯೋಗದಲ್ಲಿ ನಾನು ಪರಮ ಕಟ್ಟುನಿಟ್ಟಿನವನಾಗಿರುತ್ತೇನೆ. ಸರಿದ ಕಾಲ ಮತ್ತು ಹರಿದ ಜಲ ಮತ್ತೆ ಎಂದೆಂದೂ ದೊರೆಯವು ಎಂಬುದು ನನಗೆ ಚೆನ್ನಾಗಿ ತಿಳಿದಿದೆ. ನನ್ನ ಕಾಲ ಎಂತೋ ಹಾಗೆ ಇತರರ ಕಾಲವೂ ಅಪವ್ಯಯವಾಗದಂತೆ ನಾನು ಬಲು ಎಚ್ಚರ ವಹಿಸುತ್ತೇನೆ.

ಐದನೆಯದು, ಹಣದ ಅಂತೆಯೇ ವಸ್ತುಗಳ ನಿರ್ವಹಣೆಯಲ್ಲಿ ನಾನು ಅತ್ಯಂತ ಪ್ರಾಮಾಣಿಕನಾಗಿರುತ್ತೇನೆ. ಇತರರಿಗೆ ಸಲ್ಲಬೇಕಾದದ್ದನ್ನು ಮೊದಲು ಪಾವತಿಸಿಬಿಡುವೆನು. ನನ್ನ ಸಮಸ್ತ ವ್ಯವಹಾರಗಳೂ ಒಂದು ತೆರೆದ ಪುಸ್ತಕವಾಗಿರುವಂತೆ ಆರ್ಥಿಕ ದೃಷ್ಟಿಯನ್ನು ರೂಪಿಸಿ

ಕೊಳ್ಳುತ್ತೇನೆ. ಸವಾಲನ್ನು ಎದುರಿಸಿ ನೇರ ಬದುಕನ್ನು ಬಾಳಿ ಸಂತೋಷಪಡಲು ಹಣ ಒಂದು ಸಾಧನೆಯೇ ಹೊರತು ಅದರ ಗಳಿಕೆಯೇ ಜೀವನದ ಉದ್ದೇಶವಲ್ಲ. ಇಂದಿನ ತೀವ್ರ ಮತ್ತು ರಭಸದ ಸಾರ್ವಜನಿಕ ಜೀವನದಲ್ಲಿ ಆರ್ಥಿಕ ಪಾರಿಶುದ್ಧ್ಯ ಮಿಕ್ಕೆಲ್ಲವುಗಳಿಗಿಂತಲೂ ಅತಿ ಹೆಚ್ಚಿನ ರಚನಾತ್ಮಕ ಪಾತ್ರವನ್ನು ವಹಿಸುತ್ತದೆ. ಎಂಥೆಂಥ ಬೃಹತ್ ಸಂಘಟನೆಗಳೂ ಮಹಾ ನೌಕೆಗಳೂ ಸೋರಿ ಮುಳುಗಿ ಹೋಗಲು ಒಂದು ಮುಖ್ಯ ಕಾರಣ ಎಂದರೆ ಆರ್ಥಿಕ ರಂಗದಲ್ಲಿನ ಐಬು.

ಆರನೆಯದು, ನಾನು ಸದಾ ಸಚ್ಛೀಲವಂತನಾಗಿರುತ್ತೇನೆ. ಶೀಲ ಎಂದರೇನು? ಪರಿಸರ ದೊಡನೆ ವ್ಯಕ್ತಿ ವ್ಯವಹರಿಸುವ ರೀತಿಗೆ ಶೀಲ ಎಂದು ಹೆಸರು. ನಿರಂತರವಾಗಿ ಎದುರಾಗುವ ವಿವಿಧ ಸನ್ನಿವೇಶಗಳಿಗೆ ವ್ಯಕ್ತಿಯು ಪ್ರತಿಕ್ರಿಯೆಗಳನ್ನು ನಿರ್ಧರಿಸುವ ಗುಣ ಆತನ ಶೀಲ. ವ್ಯಕ್ತಿಯ ಸಂಸ್ಕಾರದ, ಶಿಕ್ಷಣದ, ಅಂತಿಮವಾಗಿ ವ್ಯಕ್ತಿತ್ವದ, ಪ್ರಕಟಿತರೂಪವೇ ಶೀಲ.

ಏಳನೆಯದು, ಒಂದು ಕಾರ್ಯವನ್ನು ಮನಃಪೂರ್ವಕವಾಗಿ ನಡೆಸುವಾಗ ನನಗೆ ಒದಗುವ ಸಂತೃಪ್ತಿಯೇ ನಿಜವಾದ ಯಶಸ್ಸು. ''ಮನಃಪೂರ್ವಕವಾಗಿ ನಡೆಸುವುದು'' ಎಂಬುದನ್ನು ವಿಶೇಷವಾಗಿ ಗಮನಿಸಬೇಕು. ಹೀಗೆ ಸಾಗುವಾಗ ಮೊದಮೊದಲು, ನಮ್ಮ ಅನುಭವರಾಹಿತ್ಯ ದಿಂದ ಇಲ್ಲವೇ ಅತ್ಯುತ್ಸಾಹದಿಂದ, ಕಷ್ಟನಷ್ಟಗಳು ಪ್ರಾಪ್ತವಾಗುವುದು ಸಾಮಾನ್ಯ. ಆಗ ವಿಫಲ ಮನೋಭಾವದಿಂದ ಆ ಕಾರ್ಯವನ್ನೇ ಕೈಬಿಡುವ ಅಳ್ಳೆದೆ ನಾನಾಗುವುದಿಲ್ಲ. ಮತ್ತೆ ಮತ್ತೆ ಪ್ರಯತ್ನ ಮಾಡಿಯೇ ತೀರುತ್ತೇನೆ.

ನನ್ನ ಕಿರಿಯ ಮಿತ್ರರು ಈ ಪ್ರವಚನವನ್ನು ಬಲು ಉತ್ಸಾಹದಿಂದ ಸ್ವಾಗತಿಸುತ್ತಾರೆ. ನಾನು ಮಧ್ಯೆ ಮಧ್ಯೆ ಹೇಳಿದ ಉಪಕತೆಗಳಿಂದ ಸಾಕಷ್ಟು ಉತ್ತೇಜಿತರಾಗುತ್ತಾರೆ. ನಾನು ಯಾವ ಯೋಜನೆಯನ್ನು ಅವರ ಮುಂದೆ ಇಟ್ಟರೂ – ಮಂಗಳಲೋಕದ ಅಂಗಳಕ್ಕೆ ನೆಗೆವುದೇ ಇರಲಿ ಶಾಂತಸಾಗರದ ಪಾತಾಳಕ್ಕೆ ಮುಳುಗುವುದೇ ಇರಲಿ – ತಾವು ಅದನ್ನು ನಿಷ್ಠಾಪೂರ್ವಕವಾಗಿ ಪ್ರಯತ್ನಿಸುವುದು ಖಾತ್ರಿ ಎಂದು ಆಶ್ವಾಸನೆ ನೀಡುತ್ತಾರೆ. ಎರಡು ಬಲು ಸುಲಭದ ಮತ್ತು ಕ್ಷಿಪ್ರವಾಗಿ ಆರ್ಥಿಕ ಗಳಿಕೆಯನ್ನು ನೀಡಬಲ್ಲ ಕಸಬುಗಳನ್ನು ನಾನು ಬುಟ್ಟಿಯಿಂದ ಹೊರತೆಗೆ ಯುತ್ತೇನೆ.

ಒಂದನೆಯದು, ಕೆಲವು ಸುಪ್ರಸಿದ್ಧ ಇಂಗ್ಲಿಷ್ ಹಾಗೂ ಕನ್ನಡ ದೈನಿಕಗಳಿಗೆ ಚಂದಾದಾರ ರನ್ನು ಸೇರಿಸುವುದು. ಇದಕ್ಕೆ ಯಾವ ಬಂಡವಾಳವೂ ಬೇಡ. ಬೇಕಾದದ್ದು ದುಡಿಯಬಲ್ಲ ಸಾಮರ್ಥ್ಯ ಒಂದೇ. ಆಯಾ ದೈನಿಕಗಳ ವ್ಯವಸ್ಥಾಪನೆಗಳೊಂದಿಗೆ ನಾನು ಪತ್ರವ್ಯವಹಾರ ನಡೆಸಿ, ಈ ದುಡಿಮೆಗಾರರಿಗೆ ಅವರ ಕೆಲಸದ ಪ್ರಮಾಣವನ್ನು ಗಮನಿಸಿ ಯುಕ್ತ ಸಂಭಾವನೆ ಯನ್ನು ಕೊಡಿಸಲು ಏರ್ಪಾಡು ಮಾಡಿದ್ದಾಯಿತು. ನನ್ನ ತರುಣ ಮಿತ್ರರು ಬೇರೆಬೇರೆ ದೈನಿಕಗಳ ಮಾದರಿ ಸಂಚಿಕೆಗಳನ್ನು ತಮ್ಮೊಡನೆ ಮನೆಮನೆಗೆ ಒಯ್ದು ಅಲ್ಲಿನ ಜನರಿಗೆ ಇವುಗಳ ವಿಚಾರ ಮನಮುಟ್ಟುವಂತೆ ಮಾತಾಡಿ ಅವರನ್ನು ಚಂದಾದಾರರನ್ನಾಗಿ ದಾಖಲು ಮಾಡುವುದು ಇಲ್ಲಿನ ಕೆಲಸದ ತಂತ್ರ. ಮೊದಲ ಎರಡು ದಿವಸ ನಾನೂ ಅವರೊಡನೆ ಹೋದೆ. ಆದರೆ ಸ್ವತಂತ್ರ ವಾಗಿ ಮುಂದುವರಿಸಿಕೊಂಡು ಹೋಗುವ ಛಾತಿ ಬಹುಮಂದಿಗೆ ಇರಲಿಲ್ಲ. ಹೀಗಾಗಿ, ಮಾಡಿದ

ಕಾರ್ಯಕ್ಕೆ ಅನುಗುಣವಾದ ಆರ್ಥಿಕ ಸಂಭಾವನೆ ಅವರಿಗೆ ಆಗಿಂದಾಗಲೇ ಲಭಿಸಿದರೂ, ಈ ಸಾಹಸ ಕ್ರಮೇಣ ಸಂದಿ ಹೋಯಿತು. ದಿನ ದಿನದ ಸಂಘರ್ಷದಲ್ಲಿ ಎದುರಾಗುವ ಹತಾಶೆಯನ್ನೂ ಮುಖಭಂಗವನ್ನೂ ತಡೆದು ಮುನ್ನುಗ್ಗುವ ಪ್ರವೃತ್ತಿ ಹೆಚ್ಚಿನವರಿಗೆ ಇರಲೇ ಇಲ್ಲ. ಅರ್ಥಾತ್ ಕಷ್ಟಪಡದೇ ಸುಖಫಲವನ್ನು ನಿರೀಕ್ಷಿಸುವುದು ಇವರ ಬಾಳಿನ ದೃಷ್ಟಿ ಮತ್ತು ರೀತಿ ಆಗಿದ್ದಂತಿತ್ತು.

ಎರಡನೆಯದು, ಕನ್ನಡ ಹಾಗೂ ಇಂಗ್ಲಿಷ್ ಪುಸ್ತಕಗಳನ್ನು ಮಾರುವ ಸಂಚಾರಿ ವ್ಯಾಪಾರಿ ವ್ಯವಸ್ಥೆ. ಈ ಕಸಬಿಗೆ ಕೂಡ ಯಾವುದೇ ಮೂಲಧನ ಬೇಕಾಗಿರಲಿಲ್ಲ. ದೊಡ್ಡ ಮಾರಾಟಗಾರರಿಂದ ಮಾಲನ್ನು ರಿಯಾಯಿತಿ ದರದಲ್ಲಿ ಕಡ ಪಡೆದು ಮಾರಾಟವಾದ ಬಳಿಕ ಅವರಿಗೆ ಉಳಿದ ಪುಸ್ತಕಗಳನ್ನೂ ಹಣವನ್ನೂ ಸಲ್ಲಿಸಿ ಲಾಭಾಂಶವನ್ನು ಪಡೆಯುವುದು ಇಲ್ಲಿನ ಕ್ರಮ. ನನ್ನ ಜಾಮೀನಿನ ಮೇಲೆ ಪುಸ್ತಕ ವ್ಯಾಪಾರಿಗಳು ಈ ತರುಣಮಿತ್ರರಿಗೆ ಸುಲಭವಾಗಿ ಬಿಕರಿ ಆಗಬಹುದಾದ ಪುಸ್ತಕಗಳನ್ನು ಸಾಲವಾಗಿ ಒದಗಿಸಿದರು. ಮೊದಲ ದಿವಸಗಳಲ್ಲಿ ಇವರ ಪೈಕಿ ಕೆಲವರು ಕೇವಲ ನಾಲ್ಕು ಗಂಟೆಗಳ "ಮನೆ ಮನೆಗೆ ಸರಸ್ವತಿ" ವ್ಯವಹಾರದಲ್ಲಿ ನೂರು ರೂಪಾಯಿಗಳಷ್ಟು ವ್ಯಾಪಾರ ಮಾಡಿ ಇಪ್ಪತ್ತೈದು ರೂಪಾಯಿಗಳಷ್ಟು ಲಾಭ ಗಳಿಸಿದರು. ಆದರೆ ಇಲ್ಲಿಯೂ ಪಾಠಯ ಮುಗಿದ ಬಳಿಕ ಮುಂದೆ ಸಾಗಲು ಬೇಕಾದ ತಾಕತ್ತು ಇವರಿಗೆ ಇದ್ದಂತೆ ತೋರಲಿಲ್ಲ. ಅನವರತ ಸ್ವಂತ ಪ್ರಯತ್ನವನ್ನು ಪ್ರಯುಕ್ತಿಸದ ವಿನಾ ಇಂಥ ಯಾವ ಸಾಹಸವೂ ಮುಂದುವರಿಯಲಾರದು.

೩

ಈ ಕಾಲು ಶತಮಾನಕ್ಕೂ ಮಿಕ್ಕಿದ ನನ್ನ ವಿವಿಧ ಪ್ರಯೋಗಗಳಲ್ಲಿ ನಾನು ಒಂದು ಅಂಶವನ್ನಂತೂ ಚೆನ್ನಾಗಿ ಕಂಡುಕೊಂಡಿದ್ದೇನೆ : ನಮ್ಮ ತರುಣ ನಿರುದ್ಯೋಗಿ ಪದವೀಧರರಿಗೆ ಸವಾಲನ್ನು ಎದುರಿಸುವ ಛಲ ಬಹುತೇಕವಾಗಿ ಇರುವುದಿಲ್ಲ ; ಸ್ವೋದ್ಯೋಗ ಮಾಡಿ ಗಟ್ಟಿ ಕುಳ ಆಗಿ ಬಾಳೋಣ ಎನ್ನುವ ಆಕಾಂಕ್ಷೆ ಇವರಲ್ಲಿ ಬಲು ಕಡಿಮೆ. ಇದರ ಬದಲು ದೊಡ್ಡ ಸಂಬಳದ ಕಡಿಮೆ ಕೆಲಸದ ಹೆಚ್ಚು ಅಧಿಕಾರದ ತಾಬೆದಾರಿಕೆಯೇ ಇವರಿಗೆ ಅಧಿಕಾಕರ್ಷಣೆ. ಎಂಜಿನಿಯರಿಂಗ್, ವೈದ್ಯ, ವ್ಯವಸಾಯಗಳಂಥ ವೃತ್ತಿ ಶಿಕ್ಷಣಗಳನ್ನು ಪಡೆದವರು ಕೂಡ ನೌಕರಿಗಳನ್ನು ಗಿಟ್ಟಿಸಿಕೊಳ್ಳಲು ಬಲು ವಿಧವಾದ ದೊಂಬರಾಟಗಳನ್ನು ಹೂಡುವುದೂ ಆಡುವುದೂ ಕಾಣುವಾಗ ಸಾಹಸಪ್ರಿಯತೆಯ ಸೆಲೆಯೇ ಇವರಲ್ಲಿ ಹಿಂಗಿ ಹೋಗಿದೆಯೇ ಎಂಬ ಸಂದೇಹ ಮೂಡುವುದು.

ತಾಬೆದಾರಿಕೆ ಎಂದರೆ ಇತರರ (ವ್ಯಕ್ತಿ ಆಗಬಹುದು, ಸಂಸ್ಥೆ ಆಗಬಹುದು, ಸರಕಾರ ಆಗಬಹುದು) ಆಶ್ರಯದಲ್ಲಿ ಗೊತ್ತಾದ ಒಂದು ಹುದ್ದೆಯನ್ನು ಪಡೆದು ಆ ಸೇವೆಗೆ ಪ್ರತಿಫಲವಾಗಿ ಗೊತ್ತಾದ ಒಂದು ಸಂಬಳವನ್ನು ಹೊಂದಿಕೊಳ್ಳುವುದು ಎಂದು ಅರ್ಥ. ಆದ್ದರಿಂದ ಈ ಅರ್ಥದಲ್ಲಿ ಇಂದಿನ ಯುವಜನಾಂಗದ ದಿವ್ಯಾದರ್ಶಗಳಾದ ವಾಣಿಜ್ಯಸಂಸ್ಥೆಗಳಲ್ಲಿನ ವ್ಯವಸ್ಥಾಪಕರ ಹುದ್ದೆಗಳು, ಬೃಹತ್ ಎಂಜಿನಿಯರಿಂಗ್ ಸಂಸ್ಥೆಗಳಲ್ಲಿನ ಹಿರಿಯ ಎಂಜಿನಿಯರರ ಹುದ್ದೆಗಳು, ವಿಶ್ವವಿದ್ಯಾಲಯಗಳಲ್ಲಿನ ಪ್ರಾಧ್ಯಾಪಕರ ಹುದ್ದೆಗಳು, ಅಖಿಲ ಭಾರತೀಯ ಸೇವಾ ಹುದ್ದೆಗಳು, ರಕ್ಷಣಾಬಲಗಳಲ್ಲಿ ಕಮಿಷನ್ ಪಡೆದ ಹುದ್ದೆಗಳು ಮುಂತಾದವು ಕೂಡ ತಾಬೆದಾರಿಕೆಗಳೇ. ಅಂತೆಯೇ ತಾಲೂಕು ಕಛೇರಿಯಲ್ಲಿ ಗುಮಾಸ್ತರ ಹುದ್ದೆಗಳು, ಅಂಗಡಿಗಳಲ್ಲಿ ಕಾರಕೂನರ ಹುದ್ದೆ

ಗಳು, ಬಸ್‌ಗಳಲ್ಲಿ ಕಂಡಕ್ಟರರ ಹುದ್ದೆಗಳು ಮುಂತಾದವು ಕೂಡ ತಾಬೆದಾರಿಕೆಗಳು. ತಾಬೆದಾರಿಕೆಯಲ್ಲಿ ವ್ಯಕ್ತಿಯ ಬದುಕಿಗೆ ಒಂದು ವಿಧವಾದ ರಕ್ಷಣೆ ಒದಗುತ್ತದೆ. ಆತ ನಾಳೆಯನ್ನು ಕುರಿತು ಚಿಂತೆ ಮಾಡಬೇಕಾಗುವುದಿಲ್ಲ. ಅವನಿಗೆ ಹಲವಾರು ವಿಧದ ಸೌಕರ್ಯಗಳು ತಾಬೆದಾರಿಕೆಯ ಮಿತಿಯೊಳಗೆ ಮಂಜೂರಾಗಿರುವುದರಿಂದ ಅನೇಕ ವೇಳೆ ಕೆಲಸ ಮಾಡದೆಯೂ ಅದರ ಪ್ರತಿಫಲವನ್ನು ಆತ ಪಡೆಯಬಲ್ಲ. ಅವನ ಸಮಾಜದ ದೃಷ್ಟಿಯಲ್ಲಿ ಅವನೊಬ್ಬ "ಜನ" ಎನ್ನಿಸಿಕೊಳ್ಳುತ್ತಾನೆ. ಆದ್ದರಿಂದ ಇಂಥ ಹೊಣೆಗಾರಿಕೆ ಇಲ್ಲದ ಆದರೆ ಸವಲತ್ತು ಮತ್ತು ದವಲತ್ತು ವಿಪುಲವಾಗಿ ಲಭಿಸುವ ಒಂದು ಕೃಪಾಶ್ರಯದ ನೆರಳಿನಲ್ಲಿ ಬಾಳಲು ನಮ್ಮ ತರುಣ ತರುಣಿಯರು ಧಾವಿಸುವುದು ಖಂಡಿತವಾಗಿಯೂ ಅಪರಾಧವಲ್ಲ, ಇದೇ ಸಹಜವಾದ ನಡವಳಿಕೆ ಎಂದರೂ ತಪ್ಪಿಲ್ಲ. ಆದರೆ ಇದು ನಮ್ಮ ರಾಷ್ಟ್ರೀಯ ಮನೋಧರ್ಮ ಮತ್ತು ನಮ್ಮ ತರುಣ ಜನಾಂಗದ ಪ್ರವೃತ್ತಿ ಆಗಿರುವುದು ಖಂಡಿತ ಸಾಹಸಪ್ರಿಯತೆಯ ಅಭಾವದ ದ್ಯೋತಕ. ಇಂಥ ಒಂದು ಜನಾಂಗ ಅಂತಾರಾಷ್ಟ್ರೀಯವಾಗಿ ಹೆಚ್ಚಿನ ಎತ್ತರವನ್ನು ಏರಲಾರದು. ಅಧಿಕ ಜನಸಂಖ್ಯೆ, ಸಮೃದ್ಧ ನೈಸರ್ಗಿಕ ಸಂಪನ್ಮೂಲಗಳು, ಸಾಹಸಪ್ರಿಯರನ್ನು ಆಕರ್ಷಿಸುವ ಅಸಂಖ್ಯಾತ ನವ ಕ್ಷೇತ್ರಗಳು, ಸ್ಥಿರ ಸರಕಾರದ ಹಾಗೂ ಆಂತರಿಕ ಶಾಂತಿಯ ಸುದೀರ್ಘ ಪರಂಪರೆ ಇರುವಂಥ ರಾಷ್ಟ್ರಗಳ ಪೈಕಿ ಭಾರತಕ್ಕೆ ಪ್ರಪಂಚದಲ್ಲಿ ಗಣ್ಯಸ್ಥಾನವಿದ್ದರೂ ಕೈಗಾರಿಕೋದ್ಯಮ ರಂಗದಲ್ಲಿ ನಾವಿನ್ನೂ ಅಭಿವೃದ್ಧಿಶೀಲ ರಾಷ್ಟ್ರವಾಗಿರುವುದು, ವಿಜ್ಞಾನ ಸಂಶೋಧನೆಯ ರಂಗದಲ್ಲಿ ನಾವು ಯಾವುದೇ ಗಮನಾರ್ಹ ಸಿದ್ಧಿಯನ್ನು ಸಾಧಿಸದೆ ಇರುವುದು ಮತ್ತು ನಮ್ಮ ರಾಷ್ಟ್ರೀಯ ಕಸಬಾದ ಕೃಷಿರಂಗದಲ್ಲಿ ಕೂಡ ನಾವು ಕೆಂಪು-ನೀಲಿಗಳ ನಡುವೆ ಓಲಾಡುತ್ತಿರುವುದು ನಾನು ಮೇಲೆ ಬರೆದಿರುವ ಮಾತಿಗೆ ವೇದನಾಯುಕ್ತ ನಿದರ್ಶನಗಳು. ಎರಡನೆಯ ಮಹಾಯುದ್ಧದ ವೇಳೆ ಧೂಳಿ ದೂಸರಿತವಾದ ಜಪಾನು ಜರ್ಮನಿಗಳ ಕ್ಷಿಪ್ರ ಪ್ರಗತಿಯನ್ನು ಕಾಣುವಾಗ ಅಂಥ ಯಾವ ಘಾಸಿಗೂ ಈಡಾಗದ ನಾವು ಇನ್ನೂ ಕುಂಟುತ್ತ ತೆವಳುತ್ತ ಇರುವುದನ್ನು ನೋಡುವಾಗ ನಮ್ಮ ಪ್ರಧಾನ ಕೊರತೆ ಇರುವುದು ಸಾಹಸಪ್ರಿಯತೆಯ ಗೈರುಹಾಜರಿಯಲ್ಲಿ ಎಂದು ಯಾರಿಗೂ ಹೊಳೆಯದಿರದು. ಇಂಥ ಪರಾವೃತ್ತ ಮನೋಧರ್ಮ ನಮ್ಮನ್ನು ಸಿಂದಬಾದನ ಮುದುಕನಂತೆ ಬೆನ್ನೇರಿರುವುದರ ಕಾರಣವನ್ನು ಗುರುತಿಸುವುದು ಕಷ್ಟವಲ್ಲ. ಸುದೀರ್ಘ ಬ್ರಿಟಿಷ್ ಆಳ್ವಿಕೆಯ ಪ್ರಮುಖ ಉಪೋತ್ಪನ್ನವಿದು, ವಿಷಫಲವಿದು. ನನ್ನ ಪೀಳಿಗೆಯವರನ್ನು (ಅಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಪದವಿ ಪಡೆದಂಥವರು) ಪ್ರಕಟಿತವಾಗಿಯೇ ಆಡಳಿತದ ನೊಗ ಹೊರಲೆಂದು ತಯಾರು ಮಾಡುತ್ತಿದ್ದುದು ವಾಡಿಕೆ. "ಒರತೆ ನೀರಿನಂತೆ ಸತತವಾಗಿ ಸಂಬಳ, ಸಮಾಜದಲ್ಲಿ ಅಪಾರ ಅಧಿಕಾರ ಗೌರವ" ಒದಗಿಸುವಂಥ ಸರಕಾರದ ಸೇವೆಯನ್ನು ಸೇರುವುದೊಂದೇ ಜೀವನದ ಸಾರ್ಥಕ್ಯ ಎಂದು ಅಂದಿನವರು ಪ್ರಾಮಾಣಿಕವಾಗಿ ನಂಬಿ ಅನುಷ್ಠಾನಕ್ಕೆ ತಂದಿದ್ದರು. ಶ್ರೀನಿವಾಸ ರಾಮಾನುಜನ್ (1887-1920) ಮತ್ತು ಸರ್ ಸಿ. ವಿ. ರಾಮನ್ (1888-1970) ಇವರಂಥ ಯುಗಪುರುಷರೇ ತಮ್ಮ ಬದುಕಿನ ಆರಂಭದ ದಿನಗಳಲ್ಲಿ ತಾವು ಕಲಿತ ವಿದ್ಯೆಗೆ ಯಾವುದೇ ಸಂಬಂಧವಿಲ್ಲದಂಥ ನೌಕರಿಗಳನ್ನು ಹಿಡಿಯಬೇಕಾಯಿತು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಅಂದಿನ ಸ್ಥಿತಿ ಗತಿ, ಉದ್ಯೋಗ ವಿಭವಗಳು, ಸಾರ್ವಜನಿಕ ಪರಿಸರ, ಆಸೆ ಆಕಾಂಕ್ಷೆಗಳು ಏನೇ ಇರಲಿ ಸ್ವಾತಂತ್ರ್ಯ ಬಂದು ಇಪ್ಪತ್ತೊಂಬತ್ತು ವರ್ಷಗಳು ಉರುಳಿದ ಬಳಿಕವೂ

(1976) ಅದೇ ಮನೋಧರ್ಮ ಮುಂದುವರಿಯುತ್ತಿರುವುದನ್ನು ಗಮನಿಸುವಾಗ ಇದೊಂದು ತಳಿಸಂಬಂಧೀ ಬೇನೆ ಎಂದು ನಿದಾನಿಸದೆ ಗತ್ಯಂತರವಿಲ್ಲ. ಪ್ರಯತ್ನ ಪೂರ್ವಕವಾಗಿ ಇದರ ಹುಟ್ಟಳಿಸುವುದೊಂದೇ ಹಾದಿ.

೨

ತಾಬೆದಾರಿಕೆಯೂ ವ್ಯಕ್ತಿತ್ವ ವಿಕಾಸವೂ ಪರಸ್ಪರ ವ್ಯಸ್ತಾನುಪಾತದಲ್ಲಿ ಇರುವುದು ಬದುಕಿನ ಒಂದು ಕಠೋರ ಸತ್ಯ. ತಾಬೆದಾರಿಕೆಯಲ್ಲಿ ಒದಗುವ ವಿವಿಧ ಬಗೆಯ ರಕ್ಷಣೆಗಳ ಪರಿಣಾಮವಾಗಿ ವ್ಯಕ್ತಿ ಕನಿಷ್ಠ ಕಾರ್ಯ ಪ್ರವೃತ್ತನಾಗುವುದು ಅಪರೂಪವೇನಲ್ಲ. ತಾನು ಕೆಲಸ ಮಾಡಿದರೂ ಮಾಡದಿದ್ದರೂ ನೌಕರಶಾಹಿಯ ಸಾಗುಪಟ್ಟಿ ತನ್ನನ್ನು ಮುಂದೆ ಮುಂದೆ ಕೊಂಡೊಯ್ಯೇ ಒಯ್ಯುತ್ತದೆ, ತನ್ನ ಸಂಬಳ ಮುಂತಾದ ಸವಲತ್ತುಗಳು ನಿಗದಿ ಆದಂತೆ ಬಂದೇ ಬರುವುವು ಎಂಬ "ತೃಪ್ತ" ಮನೋಭಾವವನ್ನು ಆತ ತಳೆಯುತ್ತಾನೆ. ಇದು ಅವನಲ್ಲಿ ಸಾಮಾನ್ಯವಾಗಿ ಜಡತ್ವವನ್ನು ಪ್ರೇರಿಸುವುದು. ಹೀಗಾಗಿ ಅವನಿಗೆ ಸವಾಲುಗಳು ಎದುರಾಗುವುದಿಲ್ಲ. ಆದ್ದರಿಂದ ಅವನ್ನು ಜಯಿಸುವ ಮತ್ತು ತನ್ಮೂಲಕ ತನ್ನ ವ್ಯಕ್ತಿತ್ವವನ್ನು ಅಭಿವರ್ಧಿಸುವ ಅವಕಾಶಗಳೇ ಅವನಿಗೆ ಒದಗಲಾರವು. ನೌಕರಶಾಹಿ ಒದಗಿಸುವ ರಕ್ಷಣೆಗೆ ವ್ಯಕ್ತಿ ತನ್ನ ವಿಕಾಸ ರಾಹಿತ್ಯವನ್ನು ಶುಲ್ಕವಾಗಿ ತೆರಬೇಕಾಗುತ್ತದೆ. ತಾಬೆದಾರಿಕೆಯ ಗಾಣಕ್ಕೆ ಹೆಗಲನ್ನು ಒಡ್ಡಿರುವ ಪ್ರತಿಯೊಂದು "ಎತ್ತಿ"ನ ಅನುಭವವಾದರೂ ಏನು ? ಮುಖಭಂಗ, ಆತ ಸ್ಪಷ್ಟವಾಗಿ ತಪ್ಪು ಎಂದು ತಿಳಿದಿರುವ ಹಾದಿಯಲ್ಲಿ ನಡೆಯಲೇಬೇಕಾಗುವ ಧರ್ಮಸಂಕಷ್ಟ. ಕ್ರಮೇಣ ಅವನು ಕನಿಷ್ಠರೋಧ ಪಥವನ್ನು ಅನುಸರಿಸಿ, ಅಷ್ಟರಮಟ್ಟಿಗೆ ಸ್ವಪ್ರತಿಷ್ಠೆ ಸ್ವಂತ ವ್ಯಕ್ತಿತ್ವಗಳನ್ನು ಕಳೆದುಕೊಂಡು, ಲಾಭೋತ್ಕರ್ಷಗಳನ್ನು ಪಡೆಯುವುದು ಅಪರೂಪವೇನಲ್ಲ.

ಸ್ವೋದ್ಯೋಗದಲ್ಲಿ ವ್ಯಕ್ತಿಗೆ ಪ್ರಕಟಿತವಾಗಿ ಯಾವ ರಕ್ಷಣೆಯೂ ಇರುವುದಿಲ್ಲ. ಅವನು ತಿಳಿದು ದುಡಿದರೆ ಉಂಟು, ದುಡಿಯದಿದ್ದರೆ ಇಲ್ಲ. ಅದೃಷ್ಟವನ್ನು ನಂಬಿ ಕ್ರಿಯಾಹೀನರಾಗುವಂಥ ಮತಿಗೇಡಿಗಳ ವಿನಾ ಉಳಿದವರು ಕನಿಷ್ಠ ಪಕ್ಷ ತಮ್ಮ ಹೊಟ್ಟೆಯ ತಪ್ಪು ತಾಳವನ್ನೂ ತಮ್ಮನ್ನು ನಂಬಿದವರ ಅಪಸ್ವರ ಪಿಟೀಲುವಾದನವನ್ನೂ ಹತೋಟಿಯಲ್ಲಿ ಇಡಲೋಸ್ಕರವಾದರೂ ದುಡಿಮೆಗೆ ಕೈಹಚ್ಚಬೇಕಾಗುತ್ತದೆ. ಆದ್ದರಿಂದ ಸುಗಮವಾಗಿ ಬದುಕಬಲ್ಲಂಥ ಬೇರೆ ಬೇರೆ ಹಾದಿಗಳನ್ನು ಅವರು ಅರಸುವುದು ಅನಿವಾರ್ಯವಾಗುವುದು. ಇಂಥಲ್ಲಿ ದಿನದಿನವೂ ಹೊಸ ಹೊಸ ಸವಾಲುಗಳು, ಅನೇಕ ವೇಳೆ ಹಲವಾರು ಬಾಹ್ಯಕಾರಣಗಳ ಪರಿಣಾಮವಾಗಿ ಊಹಾತೀತ ಸಮಸ್ಯೆಗಳು ಎದುರಾಗುತ್ತವೆ. ಯಾವಾತ ಇವನ್ನು ಸ್ಥಿತಪ್ರಜ್ಞನಾಗಿ ಅವಿಚಲಿತ ಮನಸ್ಕನಾಗಿ ಕಾರ್ಯಕಾರಣಸಂಬಂಧ ಗ್ರಾಹಿಯಾಗಿ ಪರಿಗ್ರಹಿಸಿ ಪರಿಹರಿಸುತ್ತಾನೋ ಆತ ಹೊಸ ಎತ್ತರಗಳನ್ನು ಏರುತ್ತಾನೆ, ಹೊಸ ಹಸಿರುಗಳನ್ನು ಕಾಣುತ್ತಾನೆ, ಇತರರಿಗೆ ಮುಂದಾಳು ಆಗುತ್ತಾನೆ. ಹೀಗೆ ಮಾಡಲಾಗದವರಿಗೆ ನೌಕರ ಶಾಹಿಯ ಕೃಪಾಶ್ರಯವನ್ನು ಪಡೆಯಲು ನಿರ್ಗಮದ್ವಾರ ಸದಾ ತೆರೆದೇ ಇದೆ. (ಆದರೆ ಅಲ್ಲಿನ ಆಗಮದ್ವಾರದಲ್ಲಿ ಸ್ವಾಗತ ಕಾದಿದೆಯೇ ಎಂಬ ಪ್ರಶ್ನೆ ಮಾತ್ರ ಬೇರೆ!) ಸವಾಲನ್ನು ಎದುರಿಸುವಾತ ಅನುಭವಿಸುವ ಒಂದೊಂದು ಸೋಲೂ, ಗೆಲುವಿಗಿಂತಲೂ ಹೆಚ್ಚು, ಪ್ರಯೋಜನಕಾರಿ. "ಏಕೆಂದರೆ, ಒಂದು ತಕ್ಕಡಿಯಲ್ಲಿ

ತನ್ನ ಆವರಣದ ಭಾರವು ಒಂದು ಕಡೆಯಿರುವಾಗ, ವ್ಯಕ್ತಿಯ ತೂಕವು ಮತ್ತೊಂದು ಕಡೆ ಇದ್ದು ಮೊದಲಿನವರ ಭಾರಕ್ಕೆ ವ್ಯಕ್ತಿಯು ಕಡಿಮೆ ತೂಕದವನಾಗಿ ಕಾಣಿಸುತ್ತಾನೆ. ಯಶಸ್ಸು-ನಮ್ಮಂತೆ ಹೋರಾಡುವ ಇತರ ಪ್ರಾಣಿಗಳ ಮುಂದೆ ನಮ್ಮ ಹಿರಿಮೆಯನ್ನು ತೋರಿಸಬಹುದಾದರೂ, ಆ ಹಿರಿಮೆಯಿಂದ ಹೆಮ್ಮೆ ಉದಯಿಸಬಹುದಾದರೂ, ವ್ಯಕ್ತಿಯ ತೂಕವನ್ನು ಅದೊಂದೇ ಹೇಳಲಾರದು. ಸಮಾಜದ ಪ್ರವಾಹಕ್ಕೆ ಅನುಕೂಲವಾಗಿ ಹೋಗುವವನಿಗೆ, ಗಾಳಿಗೆ ತಕ್ಕಂತೆ ಕೊಡೆಯನ್ನು ಹಿಡಿಯಬಲ್ಲವನಿಗೆ, ಯಶಸ್ಸು ಸಾಧ್ಯವಾಗುವಷ್ಟು ಇತರರಿಗೆ ಆಗಲಾರದು. ಲೌಕಿಕದ ಯಾವ ಯಶಸ್ಸೇ ಆಗಲಿ ಬರಿಯ ನಮ್ಮನ್ನು ಹೊಂದಿಲ್ಲ ಎಂಬುದನ್ನೂ ಮನಗಂಡಿದ್ದೇನೆ. ವಿಧಿಯೋ ಅದೃಷ್ಟವೋ ಅನುಕೂಲ ಸಂದರ್ಭವೋ ಹೇಳ ಹೆಸರಿಲ್ಲದ ಇನ್ನೇನೋ—ಕೆಲವು ವೇಳೆ ನಮ್ಮ ಪ್ರಯತ್ನಕ್ಕೆ ಮೀರುವ ಯಶಸ್ಸನ್ನು ದೊರಕಿಸಿ ಕೊಡುತ್ತದೆ. ನಾವು ಅತ್ಯಂತ ಶ್ರಮಪಟ್ಟಾಗಲೂ ಅದೇ ಯಶಸ್ಸು ನಮ್ಮನ್ನು ಕುಕ್ಕಿ ಮೂದಲಿಸಿ ಹೊರಟು ಹೋಗುವುದುಂಟು. ಆದರೆ ಒಂದು ನಿಜ. ಸೋತವನಿಗೆ ತಿರುತಿರುಗಿ ಕೆಲಸ ಮಾಡಲು ಅವಕಾಶವಿದೆ. ಗೆದ್ದವನಿಗೆ ಆ ಕೆಲಸ ಮುಗಿದಂತೆಯೇ. ಎಲ್ಲಿಯ ತನಕ ನಾವು ಕೆಲಸದಲ್ಲಿ ಆಸಕ್ತಿಯನ್ನು ವಹಿಸುತ್ತೇವೋ ಅದರ ಆವಶ್ಯಕತೆಯನ್ನೂ ಚೆಲುವನ್ನೂ ಮನಗಾಣುತ್ತೇವೋ ಅಲ್ಲಿಯ ತನಕ ಕೆಲಸವೇ ಆನಂದ. ಸೋಲು ತಂದು ಕೊಡುವ ವಸ್ತುಪ್ರಪಂಚದ ಅರಿವೆಂಬುದು ಕೂಡ ಒಂದು ಆನಂದವೇ. ವ್ಯಕ್ತಿಯು ಎಚ್ಚರವುಳ್ಳವನಾದರೆ ಸೋಲು ದೊರಕಿಸಿಕೊಡುವ ಅನುಭವಗಳೂ ವ್ಯರ್ಥವಾಗವು. ಮುಂದಿನ ಬದುಕಿಗೆ ಅವು ಸಹಾಯ" (ಶಿವರಾಮ ಕಾರಂತ—ಹುಚ್ಚು ಮನಸ್ಸಿನ ಹತ್ತು ಮುಖಗಳು).

ತಾಬೆದಾರಿಕೆಯ ಕೃಪಾಶ್ರಯವನ್ನು ಪಡೆಯುವುದು ಅಪರಾಧ ಎಂದಾಗಲಿ ಸ್ವೋದ್ಯೋಗದ ಕಂಟಕಾಶ್ರಯವನ್ನು ಸ್ವೀಕರಿಸುವುದು ಪುಣ್ಯಕಾರ್ಯ ಎಂದಾಗಲಿ ಸಾಧಿಸಲು ನಾನು ಹೊರಟಿಲ್ಲ. ದೇಶದ ಬಂಡಿ ಸಾಗಲು, ಅಂತಿಮವಾಗಿ ಪ್ರಾಯಶಃ, ನೂಕುವವರ ಹಾಗೂ ಎಳೆಯುವವರ ಸಂಖ್ಯೆಯೇ ಅಧಿಕವಾಗಿ ಬೇಕಾದೀತು. ಇನ್ನು ತಾಬೆದಾರಿಕೆಯಲ್ಲಿ ವ್ಯಕ್ತಿತ್ವ ವಿಕಾಸಗೊಳ್ಳುವುದೇ ಇಲ್ಲವೆಂದಾಗಲಿ ಅಂತೆಯೇ ಸ್ವೋದ್ಯೋಗದಲ್ಲಿ ಅದು ಪರಿಪೂರ್ಣ ವಿಕಾಸಗೊಂಡೇ ತೀರುವುದು ಎಂದಾಗಲಿ ಕೂಡ ನಾನು ಸಾಧಿಸಲು ಹೊರಟಿಲ್ಲ. ಮನುಷ್ಯಬಲವಿಜ್ಞಾನದಲ್ಲಿ ಇಂಥ ಯಾವ ನಿಯಮಗಳೂ ಸಾಧು ಆಗಲಾರವು. ನನ್ನ ವಾದದ ಸಾರಾಂಶ ಇಷ್ಟು : ವ್ಯಕ್ತಿಯ ಮನಸ್ಸು ಬಹು ಪುಟಿತತೆಯಿಂದ ಕೂಡಿದೆ. ಚೆಂಡನ್ನು ಎಷ್ಟೆಷ್ಟು ಹೆಚ್ಚು ಬಲಯುತವಾಗಿ ನೆಲಕ್ಕೆ ಬಡಿಯುವಿರೋ ಅಷ್ಟಷ್ಟು ಹೆಚ್ಚು ಎತ್ತರಕ್ಕೆ ಅದು ಪುಟ ನೆಗೆಯುವಂತೆ ಈ ಮನಸ್ಸಿನ ಸಾಮರ್ಥ್ಯ ಉಂಟು. ಅದನ್ನು ಎಳವೆಯಿಂದಲೇ ಸಮರ್ಪಕವಾಗಿ ರೂಪಿಸಿದರೆ, ಅಂದರೆ ಅದನ್ನು ಸವಾಲುಗಳೆಂಬ ಬಲದಿಂದ ಬದುಕೆಂಬ ನೆಲಕ್ಕೆ ಬಡಿದು ಬಡಿದು ಅದರ ಪುಟಿತತೆಯನ್ನು ಕ್ರಮೇಣ ವರ್ಧಿಸಿದರೆ ಅದು ಏರಬಲ್ಲ ಎತ್ತರ ಅಗಾಧವಾಗಿರುತ್ತದೆ. ಹೀಗಲ್ಲದೆ ಅದನ್ನು ಅಜ್ಜಿ ಸಾಕಿದ ಮಗುವಿನಂತೆ ಬೆಳೆಸಿದರೆ ಕಾಲಾನುಕ್ರಮದಲ್ಲಿ ಅದು ಜೊಳ್ಳಕ್ಕೂ ಬಾರದಾಗುವುದು ತಿಳಿದದ್ದೇ. ಚಿಕ್ಕಂದಿನಿಂದಲೇ ಸವಾಲುಗಳನ್ನು ಎದುರಿಸಬಲ್ಲಂಥ, ನವಸಾಹಸಕೃತ್ಯಗಳನ್ನು ಪ್ರದರ್ಶಿಸಬಲ್ಲಂಥ ಹಾಗೂ ಹೊಸ ಜಾಡುಗಳನ್ನು ತುಳಿಯಬಲ್ಲಂಥ ವ್ಯಾಪಕ ವ್ಯಕ್ತಿತ್ವ

ವನ್ನು ರೂಪಿಸಿಕೊಂಡು ಬೆಳೆದು ಬಂದ ತರುಣ ತರುಣಿಯರ ಆದ್ಯ ಲಕ್ಷ್ಯ ಇರುವುದು ಸ್ವಪ್ರತಿಭೆಯನ್ನು ಸ್ವೋದ್ಯೋಗ ಕ್ಷೇತ್ರದಲ್ಲಿ ಬೆಳಗಿಸಲು, ತಾಬೇದಾರಿಕೆಯಲ್ಲಿ ಅದನ್ನು ಮಸುಕುಗೊಳಿಸಲು ಅಲ್ಲ. ಇಂಥವರೇ ನೆಲದ ರಸಧಾತು. ರಾಜ್ಯದ ಪ್ರಾಣವಾಯು, ರಾಷ್ಟ್ರದ ಬುದ್ಧಿಕೇಂದ್ರ. ಇವರಿಗೆ ಶಿಕ್ಷಣ, ವಿದ್ಯಾಭ್ಯಾಸ, ಉದ್ಯೋಗ, ಬದುಕು ಎಲ್ಲವೂ ಒಂದು ಅಖಂಡ ತಪಶ್ಚರ್ಯೆ, ತಾವು ರೂಪಿಸಿಕೊಂಡಿರುವ ಆದರ್ಶದತ್ತ ಸಾಗಲು ಇರುವ ವಿವಿಧ ಸಾಧನೆಗಳು ಮಾತ್ರ.

೮

ಯೋಹಾನ್ ಕೆಪ್ಲರ್ (1571-1630) ಕಡು ಬಡತನದಲ್ಲಿ ಸದಾ ಕಾಯಿಲೆ ಕಸಾಲೆಗಳಿಂದ ಪೀಡಿತನಾಗಿ ಬೆಳೆದ ವಿರ್ವ ಗಣಿತವಿಜ್ಞಾನಿ. ಸೌರವ್ಯೂಹದ ರಚನೆಯ ಬಗ್ಗೆ ಆತನಿಗೆ ಮೂಲಭೂತವಾದ ಒಂದು ಸಂದೇಹ ಮೊಳೆಯಿತು : ಇದರಲ್ಲಿ ಆರು ಗ್ರಹಗಳು ಮಾತ್ರ (ಅಂದು ತಿಳಿದಿದ್ದಂಥವು ಬುಧ, ಶುಕ್ರ, ಭೂಮಿ, ಮಂಗಳ ಗುರು, ಶನಿ) ಏಕೆ ಇರಬೇಕು ? ಗಣಿತಜ್ಞನಾದ ಆತ ಈ 6 ಎಂಬ ಸಂಖ್ಯೆಯ ಮೇಲೆ ಸಹಜವಾಗಿ ತನ್ನ ಲಕ್ಷ್ಯವನ್ನು ನಾಟಿಸಿದ. ಇದರ ಅಪವರ್ತನಗಳ ಮೊತ್ತವೂ ಇದೇ ಆಗುತ್ತದೆ $(1\times2\times3=6=1+2+3)$. ಇಂಥ ಸಂಖ್ಯೆ ಇದೊಂದೇ. ಈ ಸುಂದರ ಹಾಗೂ ಏಕೈಕ ಗುಣದ ಪ್ರಕಟಿತ ರೂಪವಾಗಿ, ಸ್ವತಃ ಮಹಾಗಣಿತ ವಿದ್ವಾಂಸನಾದ ಪರಮಾತ್ಮ ಸೌರವ್ಯೂಹದಲ್ಲಿ 6 ಗ್ರಹಗಳನ್ನು ಸೃಷ್ಟಿಸಿದುದಾಗಿರಬೇಕು ಎಂಬುದಾಗಿ ಕೆಪ್ಲರ್ ತರ್ಕಿಸಿದ. ತನ್ನ ಈ ಗಣಿತ ಚಿಂತನೆಯ ಧಾಟಿಗೆ ಆತ ಇನ್ನೊಂದು ರಸಪುಷ್ಟಿಯನ್ನು ಪಡೆದ: ವಿಶ್ವದಲ್ಲಿರುವ (ನಾವು ರಚಿಸಬಹುದಾದವನ್ನೂ ಒಳಗೊಂಡಂತೆ) ಸಮಘನಾಕೃತಿಗಳು ಕೇವಲ ಐದು ಮಾತ್ರ; ಇವನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಒಂದರ ಹೊರಗೆ ಇನ್ನೊಂದು ಇರುವಂತೆ ಅಳವಡಿಸಿ ಪ್ರತಿಯೊಂದನ್ನೂ ಅಂತಃಸ್ಪರ್ಶಿಸುವಂತೆಯೂ ಪರಿಗೋಲಿಸುವಂತೆಯೂ ಆರು ಏಕಕೇಂದ್ರೀಯ ಗೋಲಗಳನ್ನು ಮಾತ್ರ ರಚಿಸುವುದು ಸಾಧ್ಯ. ಈ ಗೋಲಗಳ ಕೇಂದ್ರವೇ ಸೂರ್ಯನ ಸ್ಥಾನ. ಇವುಗಳ ತ್ರಿಜ್ಯಗಳು ಸೂರ್ಯನಿಂದ ಬೇರೆ ಬೇರೆ ಗ್ರಹದೂರಗಳ ನಿಷ್ಪತ್ತಿಗಳನ್ನು ಕೊಡುತ್ತವೆ. ಕೆಪ್ಲರ್ ನೀಡಿದ ಸೌರವ್ಯೂಹದ ಈ ಸುಂದರ ಪ್ರತಿರೂಪ ಕೇವಲ ಬೌದ್ಧಿಕ ದೊಂಬರಾಟವಾಗಿ ಐತಿಹಾಸಿಕ ಪ್ರಾಮುಖ್ಯ ಗಳಿಸಿತೇ ಹೊರತು ವಾಸ್ತವಿಕತೆಗೆ ಬರೆದ ಭಾಷ್ಯ ಆಗಲಿಲ್ಲ. ಇದನ್ನು ಬಲು ಬೇಗನೆ ಅರಿತುಕೊಂಡ ಕೆಪ್ಲರ್ ಆ ವರೆಗೆ ತಾನು ದೃಢವಾಗಿ ನಂಬಿ ಪೋಷಿಸಿಕೊಂಡು ಬಂದಿದ್ದ ತನ್ನ ತಾರ್ಕಿಕ ವಿಧಾನವನ್ನು ಪೂರ್ಣವಾಗಿ ತ್ಯಜಿಸಿ ಹೊಸತಾಗಿ ವೈಜ್ಞಾನಿಕ ಮಾರ್ಗವನ್ನು ಅನುಸರಿಸಿದ. ಇವನ ಅಸಾಧಾರಣ ಅಧ್ಯಯನ, ಚಿಂತನೆ, ದುಡಿಮೆ ಹಾಗೂ ಪ್ರತಿಭೆಗಳ ಪರಿಣಾಮವಾಗಿ, ಇಂದು ನಾವು ಕೆಪ್ಲರನ ನಿಯಮಗಳು ಎಂದು ಕರೆಯುವ, ಸೌರವ್ಯೂಹದ ಮೂರು ಪ್ರಧಾನ ಮಂತ್ರಗಳು ಆವಿಷ್ಕೃತವಾದವು. ಖಗೋಳ ವಿಜ್ಞಾನವನ್ನು ಅದೊಂದು ವಿವರಣಾತ್ಮಕ ಶಾಸ್ತ್ರವೆಂಬ ದ್ವಿತೀಯಕ ಅಂತಸ್ತಿನಿಂದ ಮೇಲೆತ್ತಿ ಭೌತವಿಜ್ಞಾನದ ಸುಭದ್ರ ತಳಹದಿಯ ಮೇಲೆ ನೆಲೆನಿಲ್ಲಿಸಿ ಅದಕ್ಕೆ ಪ್ರಾಥಮಿಕ ಅಂತಸ್ತನ್ನು ನೀಡಿದ ಏಕಪುರುಷ ಯೋಹಾನ್ ಕೆಪ್ಲರ್ ಆದದ್ದು ಅವನಿಗೆ ಎದುರಾದ ಮಹಾ ಮಹಾ ಸವಾಲುಗಳನ್ನು ಎದುರಿಸುವ ಮತ್ತು ವೈಫಲ್ಯಗಳಿಂದ ಧೃತಿಗೆಡದಿರುವ ಛಲವನ್ನೂ ಛಾತಿಯನ್ನೂ ಪ್ರದರ್ಶಿಸಿದುದರಿಂದ ಮಾತ್ರ.

ಜಗತ್ತಿನ ಅತ್ಯುನ್ನತ ಶಿಖರವಾದ ಗೌರೀಶಂಕರ ಪರ್ವತವನ್ನು ಪ್ರಥಮ ಬಾರಿಗೆ ಏರಿದ ತೇನ್ಸಿಂಗ್ ನಾರ್ಕೇ ಅವರನ್ನು "ಇಂಥ ಅಪಾಯಕಾರೀ ಸಾಹಸವನ್ನು ಕೈಗೊಂಡು ನೀವೇಕೆ ಆ ಪರ್ವತವನ್ನು ಏರಿದಿರಿ ?" ಎಂದು ಪತ್ರಕರ್ತರು ಪ್ರಶ್ನಿಸಿದಾಗ ಅವರ ಉತ್ತರ ತೀರ ಸರಳ, ಆದರೆ ಅದು ಅಷ್ಟೇ ಮಾರ್ಮಿಕವೂ ಆಗಿದೆ: "ಅದು ಅಲ್ಲಿ ಇರುವುದರಿಂದ !" ಯಾವುದೇ ಪರ್ವತಾರೋಹಣದಲ್ಲಿ ಭಾಗಿ ಆಗಿರುವ ಪ್ರತಿಯೊಬ್ಬ ಸಾಹಸಿಗನಿಗೂ ಒಡನೆ ಹೊಳೆಯುವ ಉತ್ತರ ಇದೇ : "ಪರ್ವತ ಅಲ್ಲಿದೆ, ಅದು ನನ್ನ ಪೌರುಷಕ್ಕೆ ಸವಾಲಾಗಿ ದಿಟವಾಗಿಯೂ ದಿಟ್ಟವಾಗಿಯೂ ನಿಂತಿದೆ. ನೀನೇರಬಲ್ಲೆಯಾ ನನ್ನೆತ್ತರಕೆ ಎಂದು ಕರಚಾಚಿ ಕರೆಯುವಂತೆ ಭೂಮಿ ವ್ಯೋಮಗಳನ್ನು ಸೇರಿಸಿ ಸೆಟೆದು ನಿಂತಿದೆ. ಆದ್ದರಿಂದ ನಾನದನ್ನು ಏರಲೇಬೇಕು." ಚಂದ್ರನ ಮೇಲೆ ಪದಾರ್ಪಣೆ ಮಾಡಿದ ಮನುಷ್ಯನ ಚಿಂತನೆಯಾದರೂ ಇದೇ : "ಇದು ಒಬ್ಬ ಮನುಷ್ಯನಿಗೆ ಬಲು ಪುಟ್ಟ ಹೆಜ್ಜೆ. ಆದರೆ ಮಾನವ ಜನಾಂಗಕ್ಕೆ ಹನುಮಂತ ನೆಗೆತ."

೯

ಸವಾಲು ಎಂಬುದು ಭೌತ ವಸ್ತು ಆಗಿರಬಹುದು—ಗೌರೀಶಂಕರ ಪರ್ವತ, ಭೂಮೇರುಗಳು, ಪೆಸಿಫಿಕ್ ಸಾಗರದ ಆಳ, ಆಫ್ರಿಕ ಖಂಡದ ಮೂಲ ಅರಣ್ಯಗಳು, ಉಗಮದಿಂದ ತೊಡಗಿ ಸಮುದ್ರಸಂಗಮದವರೆಗಿನ ಕಾವೇರಿನದಿಯ ಓಟ ಇತ್ಯಾದಿ. ಅದೊಂದು ವಿಜ್ಞಾನವಿಸ್ಮಯ ಆಗಿರಬಹುದು-ಮೇಲುನೋಟಕ್ಕೆ ಯಾವ ವಿಶೇಷತೆಯನ್ನೂ ಪ್ರದರ್ಶಿಸದ ಪಿಚ್‌ಬ್ಲೆಂಡ್ ಎಂಬ ತೀರ ಸಾಮಾನ್ಯ ಅದುರು ದ್ಯುತಿಗ್ರಾಹಕ ಫೊರೆಯ ಮೇಲೆ ಕಪ್ಪುಛಾಯೆಯನ್ನು ಮಾಡಿದ ಘಟನೆ, ಮಂಗಳ ಗ್ರಹದ ವಿಚಿತ್ರ ವರ್ತನೆ, ನೈಜಸಂಖ್ಯೆಗಳ ಪ್ರಪಂಚದಲ್ಲಿ ಕ್ರಮ, ಯೇಸ್ವಿನ ಹುದುಗುವಿಕೆ, ಇತ್ಯಾದಿ. ಅದೊಂದು ಬೌದ್ಧಿಕ ಅಥವಾ ಆಧ್ಯಾತ್ಮಿಕ ಸಮಸ್ಯೆ ಆಗಿರಬಹುದು—ಕಲಾಭಿವ್ಯಕ್ತಿ, ಆತ್ಮ ಪರಮಾತ್ಮಗಳ ಸಂಬಂಧ, ಮರಣೋತ್ತರ "ಜೀವನ", ನಿಷ್ಕಾಮ ಕರ್ಮ, ಇತ್ಯಾದಿ. ಕೊನೆಗೆ ಅದೊಂದು ದೈನಂದಿನ ಜೀವನದ ಜಟಿಲಪ್ರಶ್ನೆಯೂ ಆಗಬಹುದು—ಬದುಕಿಗಾಗಿ ಯಾವ ಕಸಬನ್ನು ಕೈಗೊಳ್ಳಲಿ, ಯಾವ ಹಾದಿಯಲ್ಲಿ ಸಾಗಿದರೆ ನನ್ನ ವ್ಯಕ್ತಿತ್ವ ಪೂರ್ಣವಾಗಿ ವಿಕಾಸಗೊಂಡೀತು, ಇತ್ಯಾದಿ. ಅಲ್ಲಿಗೆ, ಬುದ್ಧಿ ಇರುವ ಪ್ರತಿಯೊಬ್ಬ ಮನುಷ್ಯನಿಗೂ ಸವಾಲು ಆತನ ಬದುಕಿನ ಪ್ರತಿಯೊಂದು ಕ್ಷಣದಲ್ಲಿಯೂ ಎದುರಾಗುವುದು ಎಂದಾಯಿತು. ಅದನ್ನು ಗುರುತಿಸುವ ದೃಷ್ಟಿ, ಸ್ವೀಕರಿಸುವ ಛಲ, ವೈಜ್ಞಾನಿಕವಾಗಿ ಪರಿಹರಿಸುವ ತಾಳ್ಮೆ ಮತ್ತು ಅಂತಿಮವಾಗಿ ಈ ಅನುಭವದಿಂದ ಒದಗುವ ಸೋಲು ಗೆಲವುಗಳನ್ನು ಸಮಚಿತ್ತತೆಯಿಂದ ಅರ್ಥವಿಸುವ ಮನೋಧರ್ಮ ಅವನಿಗೆ ಇರಬೇಕು. ವಿಜ್ಞಾನದ ವಿಧಾನಗಳು ಎಂದು ಕರೆಯುವುದು ಇವನ್ನೇ. ಇವು ಏನೆಂದು ಸ್ವಲ್ಪ ವಿವರವಾಗಿ ನೋಡೋಣ.

ವಿಜ್ಞಾನಿಯ ಎದುರು ಒಂದು ಹೊಸ ಸಮಸ್ಯೆ ಅವನ ಸಂಶೋಧನೆಯ ಹಾದಿಯಲ್ಲಿ ತಲೆದೋರಬಹುದು, ಅಥವಾ ಅವನೇ ಒಂದು ಹೊಸ ಸಮಸ್ಯೆಯನ್ನು ಎತ್ತಿಕೊಳ್ಳಬಹುದು. ಇದರ ಪರಿಹಾರದ ದಿಶೆಯಲ್ಲಿ ಅವನು ಲಭ್ಯ ಮಾಹಿತಿಗಳನ್ನು ಕಲೆಹಾಕುತ್ತಾನೆ ಮತ್ತು ನಿರ್ದಿಷ್ಟ ಪ್ರಯೋಗಗಳನ್ನು ಮಾಡಿ ವಿಶೇಷ ಮಾಹಿತಿಗಳನ್ನು ಒಟ್ಟುಮಾಡುತ್ತಾನೆ. ಇಷ್ಟು ಅವನ ದತ್ತಾಂಶಗಳು. ಇವನ್ನು ಆಧರಿಸಿ ಆತ ಒಂದು ಊಹೆಯನ್ನು ಮಂಡಿಸುತ್ತಾನೆ. ಇದು ದತ್ತ

ಸಮಸ್ಯೆಯ ಪರಿಹಾರವೆಂದು ಅವನು ನಂಬಿ ಇದರ ರೀತ್ಯ ಸಮಸ್ಯೆಯನ್ನು ಪುನಃ ಪರಿಶೀಲಿಸುತ್ತಾನೆ. ಅದು ಯಶಸ್ವಿಯಾಗಿ ಬಗೆಹರಿದರೆ ಆಗ ಈ ಊಹೆ ಸಮಂಜಸ ಎನಿಸುತ್ತದೆ. ಬಗೆಹರಿಯದೆ ಇನ್ನೂ ಕೆಲವು ಅರೆಕೊರೆಗಳು ಉಳಿದಿದ್ದರೆ ಊಹೆಯನ್ನು ಸೂಕ್ತವಾಗಿ ಮಾರ್ಪಡಿಸಿ ಸಮಸ್ಯೆಯನ್ನು ಅದು ಪೂರ್ಣವಾಗಿ ಬಿಡಿಸುವ ವರೆಗೂ ಅವನು ಮುಂದುವರಿಯುತ್ತಾನೆ. ಈ ತರನಾಗಿ ಪುಟಪಾಕಗೊಂಡು ಪರಿಪೂರ್ಣವಾದ ಊಹೆಗೆ ಸಿದ್ಧಾಂತವೆಂದು ಹೆಸರು. ಉದಾಹರಣೆಗೆ ಸೌರವ್ಯೂಹದ ಕ್ರಿಯಾವಿನ್ಯಾಸವನ್ನು ಪರಿಶೀಲಿಸೋಣ. ಮೊದಲಿಗೆ ಮಾನವ ಕಂಡದ್ದು ಮನುಷ್ಯಕೇಂದ್ರ ವಿಶ್ವವನ್ನು — ಅಂದರೆ ಮನುಷ್ಯನ ಸುತ್ತ ಸುತ್ತುತ್ತಿರುವ ಚಂದ್ರ ಸೂರ್ಯ ಗ್ರಹ ನಕ್ಷತ್ರಗಳನ್ನು. ಈ ಊಹೆ ಅಸಾಂಗತ್ಯಗಳನ್ನು ಎದುರೊಡ್ಡಿದಾಗ ವಿಶ್ವದ ಕೇಂದ್ರ ಭೂಮಿ ಎಂಬ ಹೊಸ ವಾದವನ್ನು ಮಂಡಿಸಲಾಯಿತು. ಆದರೆ ಇದರಲ್ಲಿಯೂ ಹುಳುಕುಗಳು ತಲೆದೋರಿದಾಗ ನಿಜಸ್ಥಿತಿ ಬಯಲಾಗುವ ಸನ್ನಿವೇಶ ಒದಗಿತು : ಸೂರ್ಯ ಕೇಂದ್ರದಲ್ಲಿ ಇದೆಯೆಂದೂ ಇದರ ಸುತ್ತ ಭೂಮಿ ಮುಂತಾದ ಗ್ರಹಗಳು ವಿವಿಧ ದೂರಗಳಲ್ಲಿ ವೃತ್ತಕಕ್ಷೆಗಳಲ್ಲಿ ಪರಿಭ್ರಮಿಸುತ್ತಿವೆಯೆಂದೂ ಊಹೆ ಮುಂದುವರಿಯಿತು. ಇಲ್ಲಿಯೂ ಪರಿಪೂರ್ಣತೆ ಲಭಿಸಲಿಲ್ಲ. ಮುಂದೆ ಸೌರವ್ಯೂಹದ ಯಥಾರೂಪವನ್ನು ಕುರಿತ ಸಿದ್ಧಾಂತ ಪ್ರಕಟವಾದಾಗ ಈ ಸಮಸ್ಯೆ ಬಹುಪಾಲು ಅಂತಿಮವಾಗಿ ಪರಿಹಾರವಾದಂತಾಯಿತು. (ಕನಿಷ್ಠ ಪಕ್ಷ 2000 ವರ್ಷಗಳ ಕಾಲ ಮಾನವ ಈ ಸಿದ್ಧಾಂತವನ್ನು ಪಡೆಯಲು ಪ್ರಯೋಗ–ಊಹೆ–ಪ್ರಯೋಗ–ಊಹೆ ಮಾಡುತ್ತ ಸಾಗಿದ್ದಾನೆ ಎಂಬುದನ್ನು ಗಮನಿಸಬೇಕು.) ಇದರ ಪ್ರಕಾರ ಸೂರ್ಯ ಒಂದು ನಾಭಿಯಲ್ಲಿ ಇರುವಂತೆ ಪ್ರತಿಯೊಂದು ಗ್ರಹವೂ ಸೂರ್ಯನ ಸುತ್ತ ಒಂದೊಂದು ದೀರ್ಘವೃತ್ತದ ಮೇಲೆ ಗೊತ್ತಾದ ಕಕ್ಷಾವೇಗದಿಂದ ನಿಯತಕಾಲದಲ್ಲಿ ಪರಿಭ್ರಮಣೆಯನ್ನು ಮುಗಿಸುತ್ತದೆ.

೧೦

ನಮ್ಮ ಮಕ್ಕಳನ್ನು ನಾವು ಎಳವೆಯಿಂದಲೇ ಬದುಕಿನ ಸವಾಲುಗಳನ್ನು ಎದುರಿಸಿ ಬಗೆಹರಿಸುವ ದಿಶೆಯಲ್ಲಿ ತರಬೇತು ಮಾಡಬೇಕು. ಇದನ್ನು ಯೋಜಿಸಿ ಯೋಚಿಸಿ ಕಾರ್ಯರೂಪಕ್ಕೆ ಇಳಿಸುವ ಮುನ್ನ ಒಂದು ವಾಸ್ತವಾಂಶವನ್ನು ತಿಳಿದಿರುವುದು ಅವಶ್ಯಕ. ನಾವು ಯಾವ ಜನಾಂಗದವರೇ ಆಗಿರಲಿ ಯಾವ ಜಾತಿಯವರೇ ಆಗಿರಲಿ ಯಾವ ಕಾಲದವರೇ ಆಗಿರಲಿ ನಮಗೆಲ್ಲ ನಿಸರ್ಗ ಸಮವಾಗಿಯೇ ಜೀವನವನ್ನು ಸ್ವೀಕರಿಸಿ ಅದರ ಸುಖ ದುಃಖಗಳನ್ನು ಅನುಭವಿಸಲು ಶಕ್ತಿ ಸಾಮರ್ಥ್ಯಗಳನ್ನು ನೀಡಿರುವುದು. ಅಂದರೆ ಹಳ್ಳಿಗುಡ್ಡೆಯ ಮುಸುಕು ಮೂಲೆಯಲ್ಲಿ ಕಡುಬಡತನದ ನಲುಗಿಸುವ ಚಳಿಯ ನಡುವೆ ಈಗ ತಾನೇ ಹುಟ್ಟಿದ ಒಂದು ಶಿಶುವಿಗೂ ವಿದ್ಯೆ ನಾಗರಿಕತೆ ಶ್ರೀಮಂತಿಕೆಗಳಲ್ಲಿ ಅತ್ಯಂತ ಮುಂದುವರಿದ ಒಂದು ಕುಟುಂಬದಲ್ಲಿ ಈಗ ತಾನೇ ಜನಿಸಿದ ಒಂದು ಶಿಶುವಿಗೂ ಬಾಳಿನ ನಿಚ್ಚಣಿಕೆಯಲ್ಲಿ ತುತ್ತತುದಿಗೆ ಏರಲು ನಿಸರ್ಗ ಸಮಸಾಮರ್ಥ್ಯವನ್ನು ಒದಗಿಸಿರುವುದು ಎಂದು ಸರ್ವಸಾಮಾನ್ಯವಾಗಿ ಅಂಗೀಕರಿಸಬಹುದು. ಆದರೆ ಈ ಗಳಿಗೆಯಿಂದ ಮುಂದಕ್ಕೆ ಶಿಶುವಿನ ಮೇಲೆ ಪರಿಸರದ ಪ್ರಭಾವ ಬಲು ತೀವ್ರವಾಗಿರುತ್ತದೆ. ಇದರಿಂದಾಗಿ ಒಂದೊಂದರ ಹಾದಿ ಒಂದೊಂದು ತರಹ ಆಗುವುದು. ಆದ್ದರಿಂದ ನಮ್ಮ ಮಕ್ಕಳು ಆರೋಗ್ಯವಂತರಾಗಿ ಕನಿಷ್ಠ ಪಕ್ಷ ನಮಗಿಂತ ಕೊಂಚವಾದರೂ ಹೆಚ್ಚು ಯಶಸ್ಸನ್ನು ಬದುಕಿನಲ್ಲಿ

ಗಳಿಸುವಂತೆ ಮಾಡಲು ನಾವು ಅವರಿಗೆ ಯೋಗ್ಯ ಪರಿಸರವನ್ನು ಒದಗಿಸಿಕೊಡಬೇಕು. ಅವರ ದೇಹಾರೋಗ್ಯ ಮತ್ತು ಬೆಳವಣಿಗೆಗೆ ನಿಗಾ ಕೊಡುವಷ್ಟೇ ಕಾಳಜಿಯಿಂದ ಅವರ ಛಲವಂತಿಕೆಯ ವಿಕಾಸದ ಕಡೆಗೂ ದೃಷ್ಟಿ ಹಾಯಿಸಬೇಕು. ಶಾಲೆಗೆ ಕಳಿಸಿ, ಬೇಕಾದರೆ ಖಾಸಗಿ ಪ್ರವಚನದ ವೈಟಮಿನ್ನನ್ನೋ ಚುಚ್ಚುಮದ್ದನ್ನೋ ಒದಗಿಸಿ (ಸಾಧ್ಯವಾದರೆ ಬುದ್ಧಿವಂತರ ಮಿದುಳಿನ ಅಂಶವನ್ನು ನಾಟಿ ಹಾಕಿಸಿ ಕೂಡ), ಏನಕೇನ ಪ್ರಕಾರೇಣ (ಪರೀಕ್ಷಾ) ಪ್ರಸಿದ್ಧ ಪುರುಷೋತ್ತಮನನ್ನಾಗಿ ಮಾಡಿದರೆ ಸಾಕು ಎನ್ನುವ ಸಾಂಪ್ರದಾಯಿಕ ನಿಲುವನ್ನು ತೊರೆಯಬೇಕು. ತಮ್ಮ ಕುಮಾರ ಕಂಠೀರವ ಎಂ.ಬಿ.ಬಿ.ಎಸ್. ಪದವೀಧರನಾದ ವಿನಾ ಲೋಕಾರೋಗ್ಯ ವೃದ್ಧಿಗೊಳ್ಳದು, ತಮ್ಮ ಪುತ್ರರತ್ನ ಎಂಜಿನಿಯರನಾಗದಿದ್ದರೆ ಪ್ರಪಂಚದ ಮಹಾ ಮಹಾ ಸೌಧಗಳಿಗೆ ಭದ್ರತೆ ಲಭಿಸದು, ತಮ್ಮ ವಂಶೋದ್ಧಾರಕ ಎಂ. ಬಿ. ಎ. ಮಾಡಿ ಹಿರಿಯ ಕೈಗಾರಿಕೋದ್ಯಮವೊಂದರಲ್ಲಿ ಪರಿಷ್ಮಾಧಿಕಾರಿ ಆದಾಗ ಮಾತ್ರ ದೇಶದ ವಾಣಿಜ್ಯ ಪ್ರಗತಿ ಸಾಧ್ಯ ಎಂದು ಮುಂತಾಗಿ ತಮ್ಮ ಮಕ್ಕಳ ಭವಿಷ್ಯವನ್ನು ಕುರಿತು ತಾವೇ ಮುಂದಾಲೋಚನೆ ಮಾಡಿ ಅವರಿಗಾಗಿ ಯೋಜನೆಗಳನ್ನು ರೂಪಿಸುವ, ಈ ಯೋಜನೆಗಳು ದೇಶದ ಬಹುತೇಕ ಇತರ ಯೋಜನೆಗಳಂತೆ ನೆಲಕ್ಕೆ ಇಳಿಯದಾಗ ತೀವ್ರ ಹತಾಶೆಗೊಂಡು ಪರಿತಪಿಸುವ ತಂದೆತಾಯಂದಿರು ಜೀವನದ ಒಂದು ಸತ್ಯವನ್ನು ಖಂಡಿತ ತಿಳಿದಿರುವುದು ಯೋಗ್ಯ : ಅವರ ಇಂಥ ಚಿಂತನೆ ವಿವೇಚನೆ ದೂರಾಲೋಚನೆ ದುರಾಲೋಚನೆ ಎಲ್ಲವೂ ಸುತ್ತುತ್ತಿರುವುದು ಆರ್ಥಿಕವಾಗಿ ತಮ್ಮ ಮಕ್ಕಳು ಸುಭದ್ರವಾಗಿರಬೇಕು, ಬದುಕಿನ ಸಕಲ ಸತ್ಫಲಗಳೂ ಇದರಿಂದ ಅವರಿಗೆ ಲಭಿಸಿ ಅವರು ಯಶಸ್ವೀ ವ್ಯಕ್ತಿಗಳಾಗುತ್ತಾರೆ ಎಂಬ ಕೇಂದ್ರೀಯ ಅಭಿಗೃಹೀತದ ಸುತ್ತ ; ಇದಕ್ಕೆ ಅನುಗುಣವಾಗಿಯೇ ತಮ್ಮ ಮಕ್ಕಳು ಇಂದು ಆರ್ಥಿಕವಾಗಿ ಲಾಭದಾಯಕ ಎಂದು ತೋರುವ ಹುದ್ದೆಗಳಿಗೆ ಹೊಂದಿಕೊಳ್ಳಬೇಕು ಎಂಬ ಏಕೈಕ ಉದ್ದೇಶದಿಂದ ಅವರಿಗೆ ಶಿಕ್ಷಣವನ್ನು ಒದಗಿಸುತ್ತಾರೆ ; ಈ ಪ್ರೊಕ್ರುಸ್ಟಿಯನ್ ಹಾಸಿಗೆಗೆ ತಮ್ಮ ಮಕ್ಕಳು ಪೊರ್ದಿಕೆಗೊಳ್ಳದೆ ವಿಫಲರಾದಾಗ ಬಾನ್ ಹರಿದು ಬಿದ್ದಂತೆ ಕಡಲ್ ಘೂರ್ಣಿಸಿ ಮೊಗೆದಂತೆ ಹುಯ್ಯಲಿಡುತ್ತಾರೆ; ಇದರ ಪ್ರಮುಖ ಉಪೋತ್ಪನ್ನವಾಗಿ ಅವರ ಮಕ್ಕಳ ಜೀವನ ಹತಾಶೆಯ ಅಪಸ್ವರದಿಂದಲೇ, ಗುಂಡು ಕುಹರದಲ್ಲಿ ಚೌಕ ದಾಂಡು ಆಗಿ, ಆರಂಭವಾದರೆ ಆಶ್ಚರ್ಯವೇನೂ ಇಲ್ಲ. ಆದ್ದರಿಂದ ಹೆತ್ತವರ ಪ್ರಧಾನ ಲಕ್ಷ್ಯ ಇರಬೇಕಾದದ್ದು ತಮ್ಮ ಮಕ್ಕಳಿಗೆ ಸ್ವತಂತ್ರವಾಗಿ ಬಾಳನ್ನು ಎದುರಿಸಿ ಮುಂದುವರಿಯಲು ಸಾಕಷ್ಟು ಅವಕಾಶಗಳನ್ನು ಕಲ್ಪಿಸಿಕೊಡುವುದರತ್ತ. ಅಧಿಕ ಜನಸಂಖ್ಯೆ ವಿಶಾಲ ಪ್ರದೇಶ ಹಾಗೂ ವಿಪುಲ ಅವಕಾಶಗಳು ಇರುವ ನಮ್ಮ ದೇಶದಲ್ಲಿ ಎದ್ದು ತೋರುತ್ತಿರುವ ವಿರೋಧಾಭಾಸವೆಂದರೆ ಉದ್ಯೋಗರಹಿತ ವ್ಯಕ್ತಿಗಳ ಹಾಗೂ ವ್ಯಕ್ತಿರಹಿತ ಉದ್ಯೋಗಗಳ ಆಧಿಕ್ಯ. ಭಾರತದಲ್ಲಿ ಸಾಕಷ್ಟು ಕಾಲ ಸಂಚರಿಸಿದ ಅಮೆರಿಕನ್ ಸಹೃದಯನೋರ್ವ ಇಲ್ಲಿರುವ ಸ್ವೋದ್ಯೋಗ ವಿಭವವನ್ನು ಕಂಡು ವಿಸ್ಮಿತನಾಗಿ "ಎಂಥ ಪುಣ್ಯಪುರುಷರು ನೀವು ! ಎಷ್ಟೊಂದು ಹೊಸ ಹೊಸ ಕ್ಷೇತ್ರಗಳಲ್ಲಿ ಹೊಸ ಹೊಸ ಹಾದಿಗಳನ್ನು ಅರಸಿ ದುಡಿಯುವ ಅವಕಾಶಗಳು ನಿಮ್ಮಲ್ಲಿ ಇವೆಯಲ್ಲ! ನಮ್ಮಲ್ಲಿ ಇಂಥ ಒಂದು ಅವಕಾಶವೂ ಕಾಣುತ್ತಿಲ್ಲವಲ್ಲ!" ಎಂದು ಉದ್ಗರಿಸಿದ್ದಾನೆ. ಹಾಲಿನ ಸಮುದ್ರದ ನಡುವೆ ಇರುವ ನಾವು ಹಾಲಿಲ್ಲವೆಂದು ಚಡಪಡಿಸುತ್ತಿದ್ದೇವೆ. ಇದು ಕೇವಲ

ಉದ್ಧಾರವಲ್ಲ. ಕೆಲವು ನಿದರ್ಶನಗಳನ್ನು ಪರಿಶೀಲಿಸೋಣ.

ಗ್ರಾಮಾಂತರ ವಿದ್ಯುದೀಕರಣ, ಯಾಂತ್ರಿಕ ನೇಗಿಲುಗಳ ಬಳಕೆ ಮುಂತಾದವು ಇಂದು ವ್ಯಾಪಕವಾಗಿ ಪ್ರಸಾರವಾಗಿವೆ. ತದನುಗುಣವಾಗಿ ಯಂತ್ರ ಬಿಡಿಭಾಗಗಳ ಸಕಾಲಿಕ ಪೂರೈಕೆ, ಪ್ರಾಮಾಣಿಕ ತಾಂತ್ರಿಕ ಸೇವೆ ಹಾಗೂ ನಿರ್ದೇಶನ ಮುಂತಾದವು ದೊರೆಯುತ್ತಿಲ್ಲ. ಈ ಹಚ್ಚ ಹೊಸ ಪಥವನ್ನು ಅರಸಲು ಎಷ್ಟು ಜನ ಎಂಜಿನಿಯರಿಂಗ್ ಪದವೀಧರರು ಮುಂಬಂದಿದ್ದಾರೆ ?

ಸಾಕ್ಷರತೆ, ವಿದ್ಯಾ ಪ್ರಸಾರ, ಪುಸ್ತಕ ಪ್ರಕಟಣೆ ಮುಂತಾದವು ಇಂದಿನ ಘೋಷಣೆಗಳು. ಹಳ್ಳಿ ಹಳ್ಳಿಯ ಓದುಗರಿಗೆ ಉತ್ತಮ ಪುಸ್ತಕಗಳು ಸಕಾಲದಲ್ಲಿ ದೊರೆಯುವಂಥ ಏರ್ಪಾಡನ್ನು ಮಾಡಲು ಎಷ್ಟು ಜನ ನಿರುದ್ಯೋಗಿಗಳು ಮುಂಬಂದಿದ್ದಾರೆ ?

ವೈದ್ಯರುಗಳ ಪಟಾಲಮ್ಮನ್ನೇ ಟಂಕಿಸುವ ವೈದ್ಯಕೀಯ ಕಮ್ಮಟಗಳು ಇಷ್ಟೊಂದು ಅಧಿಕ ಸಂಖ್ಯೆಯಲ್ಲಿವೆ. ಆದರೆ ಹಳ್ಳಿಗಳಲ್ಲಿ ಹಾಗಿರಲಿ, ಪಟ್ಟಣಗಳಲ್ಲಿ ಸಹ, ಹೆಂಗಸರ ಮೋಹಿನೀ ರೋಗಕ್ಕೂ ಭೂತೋಪದ್ರವಕ್ಕೂ ಸಂಬಂಧ ಏನೇನೂ ಇಲ್ಲ ಎಂದು ಸ್ಥಿರೀಕರಿಸಿ ಜನರ ಆರೋಗ್ಯವನ್ನು ವೈದ್ಯ ವಿಜ್ಞಾನದ ತಳಹದಿಯ ಮೇಲೆ ನಿಲ್ಲಿಸಲು ಎಷ್ಟು ಜನ ವೈದ್ಯರು ಮುಂಬಂದಿದ್ದಾರೆ ?

ಅರಣ್ಯಸಂಪತ್ತಿನ ವಿಚಾರ ಪತ್ರಿಕೆಗಳಲ್ಲಿ ಓದಿ ಇಲ್ಲವೇ ಚಿತ್ರಗಳನ್ನು ನೋಡಿ ಸಂತೋಷ ಪಡುತ್ತೇವೆ. ಇದರ ವ್ಯವಸ್ಥಿತ ಉಪಯೋಗವನ್ನು ಪಡೆದು ಹೊಸ ಹಾದಿ ಹಿಡಿದು ತಮ್ಮ ಬದುಕನ್ನು ರೂಪಿಸಬಲ್ಲಂಥ ಪದವೀಧರರು ಎಷ್ಟು ಮಂದಿ ಮುಂಬಂದಿದ್ದಾರೆ ?

ಈ ಪ್ರಶ್ನಾವಳಿಯನ್ನು ಬೆಳೆಸುವುದು ನನ್ನ ಉದ್ದೇಶವಲ್ಲ. "ಪರಮಾತ್ಮನಾರೆಂದು ತಿಳಿಯಬಯಸುವೆಯ? ಇರುವನವನೆತ್ತಲೆಂದರಿಯಬಳಸುವೆಯ?" ಎಂಬ ಒಂದು ಪದ್ಯವನ್ನು ನಮಗೆ ಚಿಕ್ಕಂದಿನಲ್ಲಿ ಗಟ್ಟಿ ಮಾಡಿಸುತ್ತಿದ್ದರು. ಅದಕ್ಕೆ ಉತ್ತರವಾಗಿ "ಅಣು ರೇಣು ತೃಣ ಕಾಷ್ಠದಲಿ ಸಂಚರಿಸುತಿಹನು, ಕಣುಗಳನು ತೆರೆವರ್ಗೆ ಗೋಚರಿಸುತಿಹನು" ಎಂದು ಹೇಳಿಕೊಟ್ಟಿದ್ದರು. "ಕಣುಗಳನು ತೆರೆ"ವಂಥ ನಮ್ಮ ತರುಣರಿಗೆ ಖಂಡಿತವಾಗಿಯೂ ನೂತನ ಉದ್ಯೋಗಾವಕಾಶಗಳು ಅಧಿಕ ಸಂಖ್ಯೆಯಲ್ಲಿ ಗೋಚರಿಸಿಯೇ ಗೋಚರಿಸುತ್ತವೆ.

೧೧

ಸವಾಲನ್ನು ಎದುರಿಸುವ ಛಲ ಮಕ್ಕಳಲ್ಲಿ ಬಾಲ್ಯದಿಂದಲೇ ವರ್ಧಿಸುವಂತೆ ಮಾಡುವುದು ಹಿರಿಯರ ಕರ್ತವ್ಯ. ಇದರ ವಿಧಿ ವಿಧಾನಗಳು ಹೀಗೆಯೇ ಇರತಕ್ಕದ್ದು ಎಂದು ಕರಾರುವಾಕ್ಕಾಗಿ ಹೇಳುವುದು ಸಾಧ್ಯವಾಗದು. ಏಕೆಂದರೆ ಯಾರ ಜೀವನವೂ ಒಂದು ಗಣಿತಸೂತ್ರದಲ್ಲಿ ಅಳವಡುವುದಿಲ್ಲವಷ್ಟೆ. ಸರ್ವಸಾಧಾರಣವಾದ ಕೆಲವು ರೇಖೆಗಳನ್ನು ಮಾತ್ರ ಇಲ್ಲಿ ಗುರುತಿಸಬಹುದಷ್ಟೆ.

1 ಚಿಕ್ಕಂದಿನಿಂದಲೇ ಮಗುವಿನಲ್ಲಿ ಸ್ವಾವಲಂಬನೆಯ ಗುಣವನ್ನು ರೂಢಿಸಬೇಕು. ಆಯಾ ವಯಸ್ಸಿಗೆ ಅನುಗುಣವಾದ ಕೆಲಸಗಳನ್ನು ಮಕ್ಕಳಿಂದ ಮಾಡಿಸುವುದರಿಂದ ಇದನ್ನು ಸಾಧಿಸಬಹುದು. ಇಲ್ಲೆಲ್ಲ "ಮಗು, ಪಾಪ" ಎಂದು ಕೊಂಡಾಟದಲ್ಲಿ ಉಗುರು ನೀರಿಗೆ ಹಾಕದಂತೆ ಬೆಳೆಸಿದರೆ ಅಂಥ ಮಗು ದೊಡ್ಡದಾದಾಗ ಸದಾ ಪರಾವಲಂಬಿ ಪರಪುಷ್ಟವಾಗಿಯೇ ಇರುವುದು ನಿರೀಕ್ಷಿತವಾದದ್ದೇ.

2 ಕಾರ್ಯ ಯಾವುದೇ ಇರಲಿ, ಆದರ ವಿಚಾರ ಸಮಗೌರವ ಬುದ್ಧಿಯನ್ನು ಮಗುವಿನಲ್ಲಿ ಮೂಡಿಸಬೇಕು. ಓರ್ವ ಪ್ರಾಧ್ಯಾಪಕನ ವೃತ್ತಿ ಓರ್ವ ನಾಪಿತನ ವೃತ್ತಿಗಿಂತ ಶ್ರೇಷ್ಠ ಖಂಡಿತ ಅಲ್ಲ. ಇಬ್ಬರ ಸಮರ್ಥ ಸೇವೆಯೂ ಸಮಷ್ಟಿಗೆ ಆವಶ್ಯಕ. ಪ್ರತಿಯೊಬ್ಬನೂ ಅವನವನ ಪಾತ್ರವನ್ನು ಪ್ರಾಮಾಣಿಕವಾಗಿಯೂ ಮನಃಪೂರ್ವಕವಾಗಿಯೂ ನಿರ್ವಹಿಸುತ್ತಿರುವ ತನಕ ಸಮ ಗೌರವಕ್ಕೆ ಅರ್ಹತೆ ಪಡೆಯುತ್ತಾನೆ. ಯಾವ ಸಮಾಜ ಮೂರನೆಯ ದರ್ಜೆಯ ಪ್ರಾಧ್ಯಾಪಕನನ್ನು ಆತನ ವೃತ್ತಿ ತೂಕವಾದದ್ದೆಂದು ನಂಬಿ ಮರ್ಯಾದೆಯಿಂದ ಕಂಡುಕೊಂಡು ಒಂದನೆಯ ದರ್ಜೆಯ ನಾಪಿತನನ್ನು ಆತನ ವೃತ್ತಿ ಹಗುರವಾದದ್ದೆಂದು ನಂಬಿ ಹೀನಾಯವಾಗಿ ನಡೆಸಿಕೊಳ್ಳುತ್ತದೋ ಆ ಸಮಾಜ ನಶಿಸುತ್ತದೆ. ಏಕೆಂದರೆ ಅದಕ್ಕೆ ನಿಜಯೋಗ್ಯತೆ ಸಾಮರ್ಥ್ಯಗಳನ್ನು ವಿವೇಚಿಸಿ ತಿಳಿಯಬಲ್ಲ ದೃಷ್ಟಿ ಇಲ್ಲ ಎಂದು ಉಭಯ ಸಂದರ್ಭಗಳಲ್ಲಿಯೂ ಪ್ರಕಟವಾಗುವುದು (ಈ ಹೇಳಿಕೆಯ ಭಾವವನ್ನು ಒಂದು ಇಂಗ್ಲಿಷ್ ಪುಸ್ತಕದಲ್ಲಿ ಓದಿದ ನೆನಪು).

3 ಮಗುವಿನ ಪ್ರತಿಭೆ ವಿಕಾಸವಾಗುವಂತೆ ಆದಷ್ಟು ಹೆಚ್ಚಿನ ಅವಕಾಶಗಳನ್ನು ಒದಗಿಸಿ ಕೊಡಬೇಕು. ಈ ಪ್ರತಿಭಾವಿಕಾಸವೊಂದು ಅತಿಜಟಿಲ ವಿದ್ಯಮಾನ. ಹಿರಿಯರು ವಿಧಿಸಿದ ಅಥವಾ ಯೋಚಿಸಿದ ಹಾದಿಯಲ್ಲಿ ಅದು ಸಾಗಿಯೇ ಸಾಗುವುದೆಂದೇನೂ ಇಲ್ಲ. ಇದರ ಬದಲು ಮಗುವಿನ ಒಲವು ಯಾವ ಕಡೆಗೆ ಇದೆ ಎಂಬುದನ್ನು ಪ್ರಯತ್ನಪೂರ್ವಕವಾಗಿ ಅರಿತುಕೊಂಡು ಅದನ್ನು ಪುಷ್ಟೀಕರಿಸಲು ಯುಕ್ತ ಪರಿಸರವನ್ನು ಕಲ್ಪಿಸಿಕೊಡಬೇಕು.

4 ಬದುಕಿನ ಒಂದೊಂದು ಕ್ಷಣದಲ್ಲಿಯೂ ಹೊಸ ಹೊಸ ಸವಾಲುಗಳನ್ನು ಕಾಣುವ ದೃಷ್ಟಿಯನ್ನೂ ಅವನ್ನು ಸಮರ್ಪಕವಾಗಿ ಎದುರಿಸಿ ಮುಂದುವರಿಯುವ ಛಲವನ್ನೂ ಮಗುವಿನಲ್ಲಿ ಬೆಳೆಸಬೇಕು ಚಿಕ್ಕಂದಿನಲ್ಲಿ ಹೊಸ್ತಿಲು ದಾಟುವುದೇ ಮಗುವಿಗೊಂದು ಸವಾಲು. ಮುಂದೆ ಜಗಲಿ ಹಾರುವುದು, ಶಾಲೆಗೆ ಒಂಟಿಯಾಗಿ ಹೋಗಿಬರುವುದು ಎಲ್ಲವೂ ಒಂದೊಂದು ಸವಾಲೇ. ಇಲ್ಲೆಲ್ಲ ಹಿರಿಯರ ನೆರವು ಮತ್ತು ನಿಯಂತ್ರಣ ಆದಷ್ಟು ಕಡಿಮೆ ಇರಬೇಕು.

5 ತಂದೆ ತಾಯಂದಿರ ಗುಣ ನಡತೆಗಳನ್ನು ಮಗು ಅನುಕರಿಸಿ ತನ್ನ ವರ್ತನೆಯನ್ನು ರೂಪಿಸಿಕೊಳ್ಳುವುದು ನಿಸರ್ಗದ ಧರ್ಮ. ಆದ್ದರಿಂದ ನಿಮ್ಮ ಮಗು ಮುಂದೆ ನರಶಾರ್ದೂಲ ಆಗಬೇಕೆಂಬುದು ನಿಮ್ಮ ಬಯಕೆಯಾದರೆ ನೀವು ಕನಿಷ್ಠ ಪಕ್ಷ ಮನುಷ್ಯಶೃಗಾಲವಾದರೂ ಆಗಿರಬಾರದು. ಮನೆಯೇ ಮಗುವಿನ ಮೊದಲ ಶಾಲೆ. ಜನ್ಮದಾತರೇ ಅದರ ಮೊದಲ ಆಚಾರ್ಯರು. ಇಲ್ಲಿ ಕಲಿತ ಮೊದಲ ಪಾಠದ ಗಟ್ಟಿಪಾಯದ ಮೇಲೆ ಮಗುವಿನ ಭವಿಷ್ಯ ಜೀವನದ ಸೌಧ ನಿರ್ಮಿಸಲ್ಪಡುವುದು. ಆದ್ದರಿಂದ ಸುಭದ್ರಪಾಯದ ರಚನೆಯ ವಿಚಾರದಲ್ಲಿ ತಂದೆ ತಾಯಂದಿರ ರಚನಾತ್ಮಕ ಪಾತ್ರವನ್ನು ಕುರಿತು ಎಷ್ಟು ಅವಧರಿಸಿದರೂ ಕಡಿಮೆಯೇ.

6 ಕಾಲ, ಹಣ, ವಸ್ತು, ಸೇವೆ, ನಡವಳಿಕೆ ಮುಂತಾದ ವಿಚಾರದಲ್ಲಿ ಶಿಸ್ತನ್ನೂ ನಿಷ್ಠೆಯನ್ನೂ ಮಗುವಿನಲ್ಲಿ ರೂಪಿಸಬೇಕು. ತಪ್ಪನ್ನು ಆಗಿಂದಾಗಲೇ ತಿಳಿಯಪಡಿಸಿ ತಿದ್ದಿ ಸರಿದಾರಿಯಲ್ಲಿ ಮಗು ನೆಟ್ಟಗೆ ನಡೆಯುವಂತೆ ಮಾಡಬೇಕು.

7 ಯಾವ ಸಾಹಸವೂ ಯುಕ್ತ ಶಿಕ್ಷಣ ಹಾಗೂ ದೃಢನಿರ್ಧಾರ ಇದ್ದಲ್ಲಿ ತನಗೆ ಅಸಾಧ್ಯವಲ್ಲ ಎಂಬ ಆತ್ಮವಿಶ್ವಾಸವನ್ನು ಮಗುವಿನಲ್ಲಿ ಮೊದಲಿನಿಂದಲೂ ಬೆಳೆಸಬೇಕು,

ಒಂದೊಂದು ಮಹಾಸಾಹಸದ ಹಿನ್ನೆಲೆಯಲ್ಲಿಯೂ ದೀರ್ಘ ತಪಸ್ಸು, ಕಠಿನ ಪರಿಶ್ರಮ, ಅಪಾರ ಶಿಸ್ತು, ಚಿಕ್ಕ ವಿವರಗಳನ್ನು ಕುರಿತು ತೀವ್ರ ಜಾಗರೂಕತೆ ಮುಂತಾದವು ತಕ್ಕ ಪ್ರಮಾಣಗಳಲ್ಲಿ ಮೇಳೈಸಿವೆ ಎಂಬುದು ಮಗುವಿಗೆ ಕಾರ್ಯತಃ ತಿಳಿಯುವಂತೆ ಮಾಡಬೇಕು.

೧೨

ಬದುಕು ಬಲು ಸುಂದರವಾದದ್ದು, ಅಪಾರ ಚೆಲುವಿನಿಂದ ಕೂಡಿದ್ದು. ಇದನ್ನು ಚೆನ್ನಾಗಿಯೂ ಪೂರ್ಣವಾಗಿಯೂ ಬಾಳಿ ಇದರ ಸುಖಾನುಭವವನ್ನು ಪ್ರತಿಯೊಬ್ಬ ವ್ಯಕ್ತಿಯೂ ಪಡೆಯಬೇಕು ಎಂಬ ಉದ್ದೇಶದಿಂದ (ಖಗೋಳೀಯ ದೃಷ್ಟಿಯಲ್ಲಿ ಬದುಕಿಗೆ ಏನಾದರೂ ಉದ್ದೇಶ ಇರುವುದಾದರೆ) ಇದು ರೂಪಿತವಾದದ್ದು. ಈ ತೆರನಾಗಿ ವ್ಯಕ್ತಿ ಬಾಳುವಾಗ ಅವನು ಸ್ವತಃ ಸಂತೋಷಿ ಆಗಿರುವುದರ ಜೊತೆಗೆ ಒಂದು ಸಂತೋಷ ವಲಯವನ್ನೇ ತನ್ನ ಸುತ್ತ ಸೃಜಿಸಿಯೂ ಇರುತ್ತಾನೆ. ಇಂಥವರ ಸಂಖ್ಯೆ ಅಧಿಕವಾಗಿರುವಂಥ ರಾಷ್ಟ್ರ ಉತ್ಸರ್ಪಿಣೀ ಸ್ಥಿತಿಯಲ್ಲಿರುತ್ತದೆ. ನಮ್ಮ ಪ್ರಿಯ ದೇಶವನ್ನು ಇಂಥ ಸ್ಥಿತಿಗೆ ಕೊಂಡೊಯ್ಯುವುದು ನಮ್ಮ ಯುವ ಜನಾಂಗದ ಕರ್ತವ್ಯ. ಸವಾಲುಗಳನ್ನು ಅವರು ಎದುರಿಸುವ ಛಲವನ್ನು ರೂಢಿಸಿಕೊಂಡಾಗ ಮಾತ್ರ ಇದು ಸಾಧ್ಯವಾಗುತ್ತದೆ.

ಎಸ್. ನಾರಾಯಣ ಮೂರ್ತಿ

ಮನೆ ಬಿಡಿಸಲು ಕ್ರಮ

"ಶ್ರೀ . . . . ಅವರಿಗೆ—

. . . . ನಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ :

ನೀವು ಈ ಕೆಳಗೆ ವಿವರಿಸಿದ ನನ್ನ ಮನೆಯನ್ನು ತಿಂಗಳುವಾರು ರೂ. 100.00ರಂತೆ ಬಾಡಿಗೆ ಕೊಡುವ ಒಪ್ಪಂದ ಮಾಡಿಕೊಂಡು ಕಳೆದ ಮಾರ್ಚ್ ತಿಂಗಳು ಒಂದನೆಯ ದಿನಾಂಕದಿಂದ ಪಡೆದುಕೊಂಡು ವಾಸಮಾಡುತ್ತಿರುವುದು ಸರಿಯಷ್ಟೆ. ಆದರೆ ನೀವು ಆ ಲಾಗಾಯ್ತಿನಿಂದ ಬಾಡಿಗೆಯನ್ನು ಒಪ್ಪಂದದ ಮೇರೆ ಪಾವತಿಸಿರುವುದಿಲ್ಲ. ಬಾಡಿಗೆ ಬಾಕಿ ನಿಂತಿರುವ ರೂ. . . ನ್ನು ಪಾವತಿಸಬೇಕೆಂದು ಎಷ್ಟು ಸಲ ತಗಾದೆ ಮಾಡಿದರೂ ನೀವು ಆ ಬಾಕಿ ಬಾಡಿಗೆ ತೆರಲು ತಪ್ಪಿರುತ್ತೀರಿ. ಆದ್ದರಿಂದ ಈ ನೋಟೀಸನ್ನು ಕೊಡೋಣಾಗಿದೆ.

"ನೀವು ಮೇಲ್ಕಾಣಿಸಿದ ಬಾಡಿಗೆ ಬಾಕಿಯನ್ನು ಕೂಡಲೆ ಪಾವತಿಸಿ ರಶೀತಿ ಪಡೆಯತಕ್ಕದ್ದು. ತಪ್ಪಿದಲ್ಲಿ, ನೀವು ಮನೆಯ ಸ್ವಾಧೀನವನ್ನು ಈ ತಿಂಗಳ ಆಖೈರಿಯಲ್ಲಿ ಅಥವಾ ಅದರೊಳಗೆ ಬಿಟ್ಟುಕೊಡತಕ್ಕದ್ದು. ನಿಮ್ಮ ನಮ್ಮೊಳಗಿರುವ ಬಾಡಿಗೆ ನಾತೆಯನ್ನು ಈ ತಿಂಗಳು ಆಖೈರಿಗೆ ಅಂತ್ಯಗೊಳಿಸಲಾಗಿದೆ.

"ನೀವು ಮೇಲಿನಂತೆ ವರ್ತಿಸಲು ತಪ್ಪಿದಲ್ಲಿ ಬಾಡಿಗೆ ಬಾಕಿಯ ವಸೂಲಾತಿ ಬಗ್ಗೆಯೂ ಮನೆ ಸ್ವಾಧೀನತೆ ಬಗ್ಗೆಯೂ ತಕ್ಕ ಕೋರ್ಟಿನಲ್ಲಿ ನಿಮ್ಮ ಮೇಲೆ ಪ್ರಕರಣ ಕೊಡಲಾಗುವುದು. ಅಂಥ ಸಂದರ್ಭದಲ್ಲಿ ತಗಲುವ ಎಲ್ಲಾ ಖರ್ಚು ವೆಚ್ಚಗಳಿಗೆ ನೀವೇ ಹೊಣೆಗಾರರಾಗಿರುತ್ತೀರಿ ಎಂದು ಸಹ ತಿಳಿಸಲಾಗಿದೆ."

ಯಾವುದಾದರೂ ಮನೆಯ ಮಾಲೀಕನಾದವನು ತನಗೆ ಬಾಡಿಗೆ ಸಿಗದಿದ್ದಾಗ ಬಾಡಿಗೆ ಬಾಕಿಯ ವಸೂಲಾತಿಗೂ ಮನೆ ಸ್ವಾಧೀನತೆಯನ್ನು ಬೇಡಿಯೂ ನ್ಯಾಯಾಲಯದಲ್ಲಿ ಕ್ರಮ ಜರುಗಿಸಬೇಕಾಗಿದ್ದಲ್ಲಿ ಮೊಟ್ಟಮೊದಲು ಮೇಲಿನಂತೆ ಒಂದು ನೋಟೀಸನ್ನು ಬರೆಸಿ ಬಾಡಿಗೆದಾರನಿಗೆ ಜಾರಿ ಮಾಡಿಸುವ ಅಗತ್ಯವಿದೆ. ಅಂಥ ಒಂದು ನೋಟೀಸನ್ನು ಬಾಡಿಗೆದಾರನಿಗೆ ಕೊಡಿಸದಿದ್ದಲ್ಲಿ ಅಥವಾ ಕೊಡಿಸಿದ ನೋಟೀಸು ಕಾಯಿದೆಗೆ ಅನುಗುಣವಾಗಿ ಇಲ್ಲದಿದ್ದಲ್ಲಿ ಮಾಲೀಕನ ಮನೆ ಬಿಡಿಸುವ ಪ್ರಕರಣ ನ್ಯಾಯಾಲಯದಲ್ಲಿ ಅನೂರ್ಜಿತವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ಮನೆ ಮಾಲೀಕನೂ ತನ್ನ ಬಾಡಿಗೆದಾರನಿಗೆ ನೋಟೀಸನ್ನು ಕೊಡಿಸುವ ವೇಳೆ ಅದರಲ್ಲಿ ಏನೇನು ವಿಷಯಗಳನ್ನು ನಮೂದಿಸಬೇಕೆಂದು ಮೊದಲೇ ತಿಳಿದಿರುವುದು ಅತ್ಯಾವಶ್ಯಕ.

ನೋಟೀಸಿನ ಅಗತ್ಯ

1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ 21ನೆಯ ಕಲಮು ಮತ್ತು ಸ್ವತ್ತು ವರ್ಗಾವಣೆ ಅಧಿನಿಯಮದ 106ನೆಯ ಕಲಮು ಅಂಥ ಸಂದರ್ಭದಲ್ಲಿ ಕೊಡಿಸುವ ನೋಟೀಸಿನ ಕ್ರಮ ಯಾವ ರೀತಿ ಇರತಕ್ಕದ್ದೆಂದು ನಿರೂಪಿಸಿವೆ. ಅಂಥ ನೋಟೀಸನ್ನು ಕೊಡಿಸುವ ಮಾಲೀಕನ ಮತ್ತು ಬಾಡಿಗೆದಾರನ ಹೆಸರು, ವಿಳಾಸ ಸ್ಪಷ್ಟವಾಗಿ ನಮೂದಿಸಿರಬೇಕು. ಅದರಲ್ಲಿ ಬಾಡಿಗೆಗೆ ಕಾರಣೀಭೂತವಾದ ಶರತ್ತುಗಳನ್ನು ವಿವರವಾಗಿ ಬರೆಯಿಸಬೇಕು. ಎಂದರೆ ಬಾಡಿಗೆ ನಾತೆ ಪ್ರಾರಂಭವಾದ ದಿನಾಂಕ, ಬಾಡಿಗೆ ಬಾಕಿ ಮೊತ್ತ ಇವುಗಳ ಬಗ್ಗೆ ವಿವರಗಳು ಅನುಮಾನಾಸ್ಪದವಾಗಿರಬಾರದು. ಎಲ್ಲದಕ್ಕಿಂತಲೂ ಹೆಚ್ಚಾಗಿ ಗಮನಕ್ಕೆ ತೆಗೆದುಕೊಳ್ಳಬೇಕಾದ ವಿಷಯವೇನೆಂದರೆ ಬಾಡಿಗೆ ನಾತೆಯನ್ನು ಅಂತ್ಯಗೊಳಿಸುವ ವಿಚಾರ. ಬಾಡಿಗೆ ನಾತೆ ಯಾವುದಾದರೂ ತಿಂಗಳಿನ ಮೊದಲ ದಿನದಿಂದಲೇ ಪ್ರಾರಂಭವಾಗಿದ್ದರೆ ಅದನ್ನು ನೋಟೀಸು ಕೊಡುವ ತಿಂಗಳ ಆಖೈರಿಗೇ ಅಂತ್ಯಗೊಳಿಸುವುದು ಅನಿವಾರ್ಯ ; ಮತ್ತು ಹಾಗೆ ತಿಂಗಳ ಆಖೈರಿಯಲ್ಲಿ ಬಾಡಿಗೆ ನಾತೆಯನ್ನು ಅಂತ್ಯಗೊಳಿಸುವ ಸಮಯ ಬಾಡಿಗೆದಾರನಿಗೆ ನೋಟೀಸು ಜಾರಿಯಾಗಿ ಪೂರ್ಣ ಹದಿನೈದು ದಿನಗಳು ಸಂದಿರಬೇಕು. ಆದ್ದರಿಂದ ನೋಟೀಸನ್ನು ಕೊಡಿಸುವಾಗ ಈ ಕೆಳಗಿನ ವಿಷಯಗಳ ಕಡೆಗೆ ಗಮನವನ್ನಿಟ್ಟಿರಬೇಕು. ಒಂದು, ಬಾಡಿಗೆ ನಾತೆಯನ್ನು ನೋಟೀಸು ಕೊಡುವ ತಿಂಗಳ ಆಖೈರಿಗೆ ಅಂತ್ಯಗೊಳಿಸಬೇಕು ; ಎರಡು, ಹಾಗೆ ಅಂತ್ಯಗೊಳಿಸಲಾದ ದಿನಾಂಕಕ್ಕೆ ಬಾಡಿಗೆದಾರನಿಗೆ ನೋಟೀಸು ಜಾರಿಯಾಗಿ ಸರಿಯಾಗಿ ಹದಿನೈದು ದಿನಗಳು ಸಂದಿರಬೇಕು. ಉದಾಹರಣೆಗೆ : ಬಾಡಿಗೆದಾರ ಯಾವುದಾದರೂ ವಸತಿಯನ್ನು ತಿಂಗಳ ಒಂದನೆಯ ದಿನಾಂಕದಿಂದಲೇ ಪಡೆಕೊಂಡಿದ್ದರೆ ನೋಟೀಸನ್ನು ಕೊಡುವ ತಿಂಗಳ 15ನೆಯ ದಿನಾಂಕದೊಳಗೇ ಬಾಡಿಗೆದಾರನಿಗೆ ಜಾರಿ ಮಾಡಿಸಬೇಕು ; ಮತ್ತು ಬಾಡಿಗೆ ನಾತೆಯನ್ನು ಅದೇ ತಿಂಗಳ ಆಖೈರಿಗೆ ಅಂತ್ಯಗೊಳಿಸಲಾಗಿದೆಯೆಂದೂ ಅದರಲ್ಲಿ ನಮೂದಿಸಿರಬೇಕು. ಬಾಡಿಗೆ ನಾತೆ 10ನೆಯ ದಿನಾಂಕದಿಂದ ಪ್ರಾರಂಭವಾಗಿದ್ದರೆ ಬಾಡಿಗೆ ನಾತೆಯನ್ನು ನೋಟೀಸು ಕೊಡುವ ತಿಂಗಳ 9ನೆ ದಿನಾಂಕಕ್ಕೇ ಅಂತ್ಯಗೊಳಿಸಲಾಗಿದೆಯೆಂದು ತಿಳಿಸಬೇಕು. ಒಂದು ವೇಳೆ ಬಾಡಿಗೆ ನಾತೆ ಪ್ರಾರಂಭವಾದ ದಿನಾಂಕ ತಿಳಿಯದಿದ್ದ ಪಕ್ಷದಲ್ಲಿ ಬಾಡಿಗೆ ನಾತೆ ಅಂತ್ಯಗೊಳಿಸುವಿಕೆ ಬಗ್ಗೆ ಹೀಗೆ ಬರೆಸಬೇಕು. ''ಈ ತಿಂಗಳಲ್ಲಿ ಬಾಡಿಗೆ ನಾತೆ ಕೊನೆಗೊಳ್ಳುವ ದಿನಾಂಕದಂದು ಅದನ್ನು ಅಂತ್ಯಗೊಳಿಸಲಾಗಿದೆ.'' ಏನೇ ಆದರೂ ಬಾಡಿಗೆ ನಾತೆಯ ಮುಕ್ತಾಯ ಕಾಯಿದೆಗನುಸಾರವಾಗಿ ಆಗದಿದ್ದರೆ ಅದೇ ಕಾರಣದ ಮೇರೆ ಮಾಲೀಕ ತಂದ ಪ್ರಕರಣ ನ್ಯಾಯಾಲಯದಲ್ಲಿ ಬಿದ್ದುಹೋಗುತ್ತದೆ.

ನೋಟೀಸು ಜಾರಿ ವಿಧಾನ

ಮೇಲೆ ಹೇಳಿದಂತೆ ಬರೆಸಿದ ನೋಟೀಸನ್ನು ಬಾಡಿಗೆದಾರನಿಗೆ ಸ್ವತಃ ಜಾರಿ ಮಾಡಿಸಬಹುದು ; ಬಾಡಿಗೆದಾರ ಸ್ವತಃ ಜಾರಿಗೆ ಸಿಗದಿದ್ದರೆ ಅವನ ಮನೆಯವರಲ್ಲಿ ಯಾರಾದರೂ ಪ್ರಾಪ್ತ ವಯಸ್ಕರಿಗೆ ಕೊಟ್ಟು ಜಾರಿ ಮಾಡಬಹುದು ; ಅಥವಾ ಅವನ ಮನೆಯ ಆಳಿಗೆ ಕೊಟ್ಟಾದರೂ ಜಾರಿ ಮಾಡಲು ಬರುತ್ತದೆ. ಅವರು ಯಾರೂ ಸಿಗದಿದ್ದ ಸಂದರ್ಭದಲ್ಲಿ ನೋಟೀಸನ್ನು ಸದರಿ

ವಠಾರದಲ್ಲಿ ಎದ್ದು ಕಾಣುವಂಥ ಸ್ಥಳದಲ್ಲಿ ಹಚ್ಚಿದರೂ ಸಾಕಾಗುತ್ತದೆ. ನೋಟೀಸನ್ನು ಅಂಚೆ ದ್ವಾರ ನೋಂದಾಯಿಸಿ ಬಾಡಿಗೆದಾರನ ಸ್ವತಃ ಹೆಸರಿಗೇ ಕಳುಹಿಸಿದರೆ ಅದು ಉತ್ತಮವಾದ ಜಾರಿ ವಿಧಾನವಾಗುವುದು. ಯಾಕೆಂದರೆ, ಅಂಥ ಸಂದರ್ಭದಲ್ಲಿ ತನಗೆ ನೋಟೀಸು ಜಾರಿಯಾಗ ಲಿಲ್ಲ ಎಂಬ ವಾದ ಬಾಡಿಗೆದಾರನಿಗೆ ಎಂದೆಂದೂ ಸಿಗದು. ನೋಟೀಸನ್ನು ಹೊಂದಿಕೊಳ್ಳಲು ಬಾಡಿಗೆದಾರ ನಿರಾಕರಿಸಿದರೆ ಅಂಚೆ ಬಟವಾಡೆದಾರ ಹಾಗೆಂದು ಹಿಂಬರಹ ಅಥವಾ ಷರಾ ಮಾಡಿ ನೋಟೀಸನ್ನು ಮರಳಿ ಮಾಲೀಕನಿಗೆ ಕಳುಹಿಸುತ್ತಾನೆ. ಅಂಥ ಷರಾ ಇರುವ ನಿರಾಕರಿಸಿದ ನೋಟೀಸು ಕೂಡ ಸರಿಯಾದ ನೋಟೀಸೆಂದೇ ಪರಿಗಣಿಸಲ್ಪಡುತ್ತದೆ.

ಮನೆ ಬಿಡುಗಡೆಗೆ ಕ್ರಮ

ಮೇಲೆ ಹೇಳಿದಂತೆ ನೋಟೀಸನ್ನು ಬಾಡಿಗೆದಾರನ ಮೇಲೆ ಜಾರಿ ಮಾಡಿಸಿದ ಅನಂತರ ಮಾಲೀಕ ಮನೆ ಬಿಡುಗಡೆಗೆ ಬೇಕಾದ ಕ್ರಮ ಕೈಗೊಳ್ಳಬಹುದು. ಬಾಡಿಗೆ ಬಾಕಿ ನಿಂತಿದೆ ಎಂಬ ಕಾರಣದ ಮೇಲೆ ಮನೆ ಸ್ವಾಧೀನತೆಯನ್ನು ಕೇಳಿ ಪ್ರಕರಣ ಹೂಡಬೇಕಾದರೆ ಬಾಡಿಗೆ ದಾರನಿಗೆ ನೋಟೀಸು ಜಾರಿಯಾದ ದಿನಾಂಕದಿಂದ ಎರಡು ತಿಂಗಳ ತನಕ ಕಾಯಬೇಕು. ಅಲ್ಲಿಯ ವರೆಗೂ ಬಾಕಿ ಬಾಡಿಗೆಯನ್ನು ಸಲ್ಲಿಸದಿದ್ದರೆ ಅದರ ಅನಂತರವೇ ಮಾಲೀಕ ಆ ಬಗ್ಗೆ ತಕ್ಕ ಕ್ರಮ ಕೈಗೊಳ್ಳಬಹುದು. ಅಂಥ ಸಂದರ್ಭ ಬಂದಾಗ ಮಾಲೀಕ ಮನೆ ಸ್ವಾಧೀನದ ಬಗ್ಗೆ ಒಂದು ಅರ್ಜಿ ತಯಾರಿಸಿ ಬೆಂಗಳೂರಿನಲ್ಲಾದರೆ ಸಿವಿಲ್ ನ್ಯಾಯಾಧೀಶರಿಗೆ, ಇತರ ಪ್ರದೇಶಗಳಲ್ಲಾದರೆ ಅಲ್ಲಿಯ ಸ್ಥಳೀಯ ಮುನ್ಸೀಫರಿಗೆ ಸಲ್ಲಿಸತಕ್ಕದ್ದು. ಅಂಥ ಅರ್ಜಿಯಲ್ಲಿ ಮಾಲೀಕ, ಬಾಡಿಗೆದಾರ ಇವರ ಹೆಸರು, ಪೂರ್ಣ ವಿಳಾಸ, ಬಾಡಿಗೆಗೆ ಒಳಗಾಗಿರುವ ವಠಾರದ ಪೂರ್ಣ ವಿವರಣೆ, ಯಾವ ಕಾರಣಕ್ಕಾಗಿ ಮನೆ ಸ್ವಾಧೀನ ಕೇಳಲು ಹಕ್ಕು ಪ್ರಾಪ್ತವಾಗಿದೆ ಎಂಬ ವಿವರ, ಬಾಡಿಗೆ ಬಾಕಿ ನಿಂತಿರುವುದರ ವಿವರ, ನೋಟೀಸು ಕೊಟ್ಟು ಅದು ಜಾರಿ ಯಾಗಿರುವ ವಿವರ, ಇವುಗಳನ್ನೆಲ್ಲಾ ಸ್ಪಷ್ಟವಾಗಿ ನಮೂದಿಸಿರಬೇಕು. ಅಂಥ ಅರ್ಜಿಗೆ ರೂ. 10.00ರ ನ್ಯಾಯಾಲಯ ಶುಲ್ಕ ಸ್ಟಾಂಪನ್ನು ಹಚ್ಚಬೇಕು ; ಮತ್ತು ಅರ್ಜಿ ನಕಲನ್ನು ಬಾಡಿಗೆದಾರನಿಗೆ ಮುಟ್ಟಿಸುವ ಬಗ್ಗೆ ಮತ್ತು ಪ್ರಕರಣದ ನೋಟೀಸನ್ನು ಜಾರಿ ಮಾಡುವ ಬಗ್ಗೆ ಸಹ ಸ್ಟಾಂಪನ್ನು ಕೊಡಬೇಕು. ಮಾಲೀಕನ ಅರ್ಜಿ ಕಾನೂನಿಗೆ ಅನುಗುಣವಾಗಿದೆ ಎಂದು ಕಂಡುಬಂದಲ್ಲಿ ಬಾಡಿಗೆದಾರನ ಹಾಜರಾತಿ ಬಗ್ಗೆ ನ್ಯಾಯಾಲಯ ಅದರ ಅನಂತರ ಆದೇಶವನ್ನು ಹೊರಡಿಸುತ್ತದೆ.

ಮನೆ ಬಿಡುಗಡೆ ಕ್ರಮಕ್ಕೆ ಆಕ್ಷೇಪಗಳು

ಮಾಲೀಕ ಮನೆಯ ಸ್ವಾಧೀನಕ್ಕೆ ಜರಗಿಸುವ ಕ್ರಮಕ್ಕೆ ಬಾಡಿಗೆದಾರ ಅದಕ್ಕೆ ವಿರುದ್ಧ ವಾಗಿ ಅನೇಕ ರೀತಿಯ ಆಕ್ಷೇಪಗಳನ್ನು ಎತ್ತಬಹುದು. ತನಗೆ ಪ್ರಕರಣದ ನೋಟೀಸು ಜಾರಿ ಯಾಗಿಲ್ಲ ; ತನಗೆ ಜಾರಿಪಡಿಸಲಾದ ನೋಟೀಸು ಕಾಯಿದೆಗನುಗುಣವಾಗಿಲ್ಲ : ಬಾಡಿಗೆ ನಾತೆ ಸರಿಯಾಗಿ ಅಂತ್ಯಗೊಳಿಸಿಲ್ಲ ; ತನಗೆ 15 ದಿನಗಳ ಅವಕಾಶದ ನೋಟೀಸು ಕೊಡಲಿಲ್ಲ ; ಬಾಡಿಗೆ ಬಾಕಿಯನ್ನು ಪಾವತಿಸಲು ಎರಡು ತಿಂಗಳ ಅವಧಿಯನ್ನು ಕೊಟ್ಟಿರುವುದಿಲ್ಲ ; ತಾನು ಬಾಡಿಗೆಯನ್ನು ಬಾಕಿ ಮಾಡಿಕೊಂಡಿರುವುದಿಲ್ಲ ಎಂದು ಮುಂತಾಗಿ ಆಕ್ಷೇಪಗಳನ್ನೆತ್ತಲು

ಬರುತ್ತದೆ. ಇವೆಲ್ಲ ಕಾರಣಗಳನ್ನೊಡ್ಡಿ ಮಾಲೀಕನಿಗೆ ಮನೆ ಸ್ವಾಧೀನತೆಯನ್ನು ಕೇಳಲು ಹಕ್ಕೇ ಪ್ರಾಪ್ತವಾಗಿಲ್ಲವೆಂದು ತನ್ನ ಪರ ವಾದವನ್ನು ನ್ಯಾಯಾಲಯದ ಮುಂದಿಡಬಹುದು. ಬಾಡಿಗೆ ಪೂರ್ತಿಯಾಗಿ ಮಾಲೀಕನಿಗೆ ಸಂದಾಯವಾಗಿದೆ ಎಂದು ವಾದವಿದ್ದಲ್ಲಿ ಆ ಬಗ್ಗೆ ನ್ಯಾಯಾಲಯಕ್ಕೆ ಬಾಡಿಗೆದಾರನೇ ಸಮಜಾಯಿಷಿ ಕೊಡಬೇಕಾಗುತ್ತದೆ. ಆ ಬಗ್ಗೆ ಬಾಡಿಗೆದಾರ ಮಾಲೀಕನಿಂದ ತಿಂಗಳು ತಿಂಗಳು ಪಡೆದ ರಸೀತಿಯನ್ನು ಹಾಜರುಪಡಿಸಿ ಅಥವಾ ಇತರ ರೀತಿಯಲ್ಲಾದರೂ ತಾನು ಬಾಡಿಗೆ ಬಾಕಿ ಮಾಡಿಕೊಳ್ಳಲಿಲ್ಲವೆಂದು ಕೋರ್ಟಿಗೆ ಸಾಬೀತು ಮಾಡಿ ತೋರಿಸಬೇಕು. ಮಾಲೀಕ ಒಪ್ಪಂದದ ಬಾಡಿಗೆಯ ಆಧಾರದ ಮೇಲೆಯೇ ಬಾಡಿಗೆ ಬಾಕಿಯಾಗಿದೆಯೋ ಇಲ್ಲವೋ ಎಂದು ನಿರ್ಣಯಿಸಬೇಕಲ್ಲದೆ ಅದಕ್ಕಿಂತಲೂ ಹೆಚ್ಚು ಬಾಡಿಗೆಯ ಆಧಾರದ ಮೇಲೆ ಬಾಡಿಗೆ ಬಾಕಿಯನ್ನು ನಿರ್ಧರಿಸಲು ಬರುವುದಿಲ್ಲ. ಮಾಲೀಕನ ಅಂಥ ಕೇಳಿಕೆ ಕೋರ್ಟಿನ ಮುಂದೆ ಮಾನ್ಯವಾಗಲಾರದು. ಮಾಲೀಕನ ಬಾಡಿಗೆ ಬಾಕಿ ಮಾಡಿಕೊಂಡಿರುವುದರ ಬಗ್ಗೆ ಮತ್ತು ಬಾಡಿಗೆದಾರನ ವಾದ ಪ್ರತಿವಾದಗಳನ್ನು ಕೇಳಿ, ವಿಮರ್ಶಿಸಿ, ನ್ಯಾಯಾಲಯ ಆ ಬಗ್ಗೆ ತನ್ನ ತೀರ್ಪನ್ನು ನೀಡುತ್ತದೆ.

ಬಾಡಿಗೆ ಬಾಕಿಯನ್ನು ಪಾವತಿಸದಿದ್ದಲ್ಲಿ ಪರಿಣಾಮ

ಮಾಲೀಕ ಸ್ವಾಧೀನತೆ ಬೇಡಿ ಸಲ್ಲಿಸಿದ ಅರ್ಜಿ ಊರ್ಜಿತದಲ್ಲಿರುವ ಸಮಯ ಬಾಡಿಗೆದಾರ ಒಪ್ಪಂದದ ಮೇರೆ ಕೊಡಬೇಕಾದ ಬಾಡಿಗೆ ಪೂರ್ತಿಯನ್ನು ನ್ಯಾಯಾಲಯಕ್ಕೆ ಅಥವಾ ಮಾಲೀಕನಿಗೆ ಪಾವತಿಸತಕ್ಕದ್ದೆಂದು 1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ 29ನೆಯ ಕಲಮಿನಡಿ ಕೋರ್ಟು ಆದೇಶವನ್ನು ಹೊರಡಿಸಬಹುದು. ಕೋರ್ಟಿನ ಅಂಥ ಆದೇಶಕ್ಕನುಗುಣವಾಗಿ, ನೀಡಲಾದ ಅವಧಿಯೊಳಗೆ ಬಾಡಿಗೆದಾರ ಬಾಡಿಗೆ ಬಾಕಿಯನ್ನು ಪಾವತಿಸಬೇಕಾಗುತ್ತದೆ. ಬಾಡಿಗೆದಾರ ನ್ಯಾಯಾಲಯದ ಆದೇಶವನ್ನು ಪಾಲಿಸದೆ ಇದ್ದರೆ, ಬಾಕಿ ಬಾಡಿಗೆಯನ್ನು ಪಾವತಿಸದೆ ಇದ್ದರೆ ಬಾಡಿಗೆದಾರನ ಯಾವತ್ತೂ ಆಕ್ಷೇಪಗಳು ಗಮನಾರ್ಹವೆನಿಸವು. ಬಾಡಿಗೆದಾರನ ಅಂಥ ಎಲ್ಲಾ ಆಕ್ಷೇಪಗಳನ್ನು ಕಡಿಮೆ ಮಾಡಲು 29ನೆಯ ಕಲಮಿನಡಿ ನ್ಯಾಯಾಲಯಕ್ಕೆ ಅಧಿಕಾರವಿರುತ್ತದೆ. ಅಂಥ ವೇಳೆಯಲ್ಲಿ ನ್ಯಾಯಾಲಯ ಬಾಡಿಗೆದಾರನ ಎಲ್ಲ ಸಮರ್ಥನೆಗಳನ್ನು ತಳ್ಳಿ ಹಾಕಿ ಅವನ ವಿರುದ್ಧ ಆದೇಶವನ್ನು ಹೊರಡಿಸಬಹುದು ; ಮಾಲೀಕನ ಅರ್ಜಿಯನ್ನು ಎತ್ತಿ ಹಿಡಿಯಲೂಬಹುದು. ಬಾಡಿಗೆ ಹಣದ ಬಗ್ಗೆ ಮಾಲೀಕನಿಗೆ ಸಾಕಷ್ಟು ಧೈರ್ಯ, ಭರವಸೆ ಸಿಗುವಂತೆ ಮಾಡುವುದೇ ಈ ಕಲಮಿನಲ್ಲಿ ಅಡಗಿರುವ ತತ್ತ್ವವಾಗಿದೆ. ಇದರಿಂದಾಗಿ ಬಾಡಿಗೆದಾರ ಬಾಡಿಗೆ ಬಾಕಿಯನ್ನು ಪೂರ್ತಿಯಾಗಿ ಪಾವತಿಸುವಂತೆ ಮಾಡಲು ಸಾಧ್ಯವಾಗುತ್ತದೆ ; ಪೂರ್ತಿ ಬಾಡಿಗೆ ಸಂದಾಯ ಮಾಡಿಯೇ ತನ್ನೆಲ್ಲಾ ಆಕ್ಷೇಪಗಳನ್ನು ಕೋರ್ಟಿನ ಮುಂದೊಡ್ಡಬೇಕಾಗುತ್ತದೆ.

ಬಾಡಿಗೆದಾರನಿಗೆ ಅಧಿನಿಯಮ ನೀಡಿರುವ ರಕ್ಷೆ

ಬಾಡಿಗೆ ಬಾಕಿಯಾಗಿದೆ ಎಂಬ ಕಾರಣವನ್ನು ಮುಂದೆ ಮಾಡಿ ಬಾಡಿಗೆದಾರನ ವಿರುದ್ಧ ಮನೆ ಸ್ವಾಧೀನತೆ ಬಗ್ಗೆ ಹೂಡುವ ಪ್ರಕರಣಗಳಲ್ಲಿ ಬಾಡಿಗೆದಾರನಿಗೆ ಅನೇಕ ಸವಲತ್ತುಗಳನ್ನು ಅಧಿನಿಯಮ ಕೊಡಮಾಡಿದೆ. ಬಾಡಿಗೆದಾರ ಯಾವಾಗಲಾದರೂ ಸರಿಯೆ ಬಾಡಿಗೆ ಬಾಕಿ

ನಿಂತಿವೆ ಎನ್ನಲಾದ ಮೊತ್ತವನ್ನು ಮಾಲೀಕನಿಗೆ ಪಾವತಿಸಿದರೆ ನ್ಯಾಯಾಲಯ ಬಾಡಿಗೆದಾರನ ವಿರುದ್ಧ ಆದೇಶವನ್ನೀಯದು. ಬಾಡಿಗೆದಾರ ಹಣ ಪಾವತಿಸಿದ ಕೂಡಲೇ ಮಾಲೀಕನ ಅರ್ಜಿ ಅನೂರ್ಜಿತವಾಗುವುದು. ಮನೆ ಬಿಡುಗಡೆ ಬಗ್ಗೆ ಕೋರ್ಟು ಆದೇಶವನ್ನಿತ್ತಿದ್ದರೂ ಹಣವನ್ನು ಪಾವತಿಸಿದ ಮರುಕ್ಷಣ ಅಂಥ ಆದೇಶ ನಿರ್ವೀರ್ಯಗೊಳ್ಳುತ್ತದೆ. ಇದು ಬಾಡಿಗೆದಾರನನ್ನು ಮನೆಯಿಂದ ಹೊರತಳ್ಳದಂತೆ ಮಾಡಲು ಅವನಿಗಿರುವ ಅಧಿನಿಯಮದ ರಕ್ಷೆಯಾಗಿದೆ. ಅಂತೂ, ಬಾಡಿಗೆ ಬಾಕಿಯಾಗಿದೆ ಎನ್ನುವ ಕಾರಣವನ್ನೊಡ್ಡಿ ಬಾಡಿಗೆದಾರನ ವಿರುದ್ಧ ಕ್ರಮ ತೆಗೆದುಕೊಂಡ ಸಂದರ್ಭದಲ್ಲಿ ಬಾಡಿಗೆದಾರ ಕಾನೂನುಬದ್ಧವಾಗಿ ಬಾಕಿ ನಿಂತ ಬಾಡಿಗೆಯನ್ನು ಮಾಲೀಕನಿಗೆ ಪಾವತಿಸಿದಲ್ಲಿ ವಠಾರದ ಸ್ವಾಧೀನತೆಯನ್ನು ಮತ್ತೆ ಎಷ್ಟು ಮಾತ್ರಕ್ಕೂ ಕೇಳ ಬರುವುದಿಲ್ಲ.

ಮೇಲ್ಮನವಿ ಹಕ್ಕು

1961ರ ಕರ್ನಾಟಕ ಬಾಡಿಗೆ ನಿಯಂತ್ರಣ ಅಧಿನಿಯಮದ 21ನೆಯ ಕಲಮಿನ ಮೇರೆ ಕೊಡಲಾದ ನ್ಯಾಯಾಲಯದ ತೀರ್ಪಿನ ವಿರುದ್ಧ ಅತೃಪ್ತಿಗೊಂಡ ಯಾರೇ ಆದರೂ ಬೆಂಗಳೂರಿನಲ್ಲಾದರೆ ಕರ್ನಾಟಕದ ಉಚ್ಚ ನ್ಯಾಯಾಲಯಕ್ಕೆ, ಇತರ ಪ್ರದೇಶಗಳಲ್ಲಾದರೆ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯಕ್ಕೆ ಮೇಲ್ಮನವಿ ಮಾಡಿಕೊಳ್ಳುವ ಹಕ್ಕನ್ನು ಅದೇ ಅಧಿನಿಯಮದ 50ನೆಯ ಕಲಮಿನಲ್ಲಿ ನಮೂದಿಸಿದೆ. ಹಾಗೆ ತರಲಾಗುವ ಮೇಲ್ಮನವಿ ಅರ್ಜಿಗೆ ರೂ. 15.00ರ ನ್ಯಾಯಾಲಯ ಶುಲ್ಕಸ್ಟಾಂಪನ್ನು ಹಚ್ಚಬೇಕಾಗುತ್ತದೆ. ಹಾಗೆ ಮೇಲ್ಮನವಿ ಪ್ರಕರಣ ಬಂದಾಗ ಕೆಳಗಿನ ನ್ಯಾಯಾಲಯ ನೀಡಿದ ತೀರ್ಪಿನ ಕಾನೂನು ಸಿಂಧುತ್ವ, ತಪ್ಪೊಪ್ಪು ಇವುಗಳ ವಿಷಯ ಮತ್ತೊಮ್ಮೆ ವಿಮರ್ಶೆಯಾಗುತ್ತದೆ ; ಅನಂತರ ಮೇಲ್ಮನವಿ ನ್ಯಾಯಾಲಯ ತನ್ನ ತೀರ್ಪನ್ನು ನೀಡುತ್ತದೆ. ಹಾಗೆ ಕೊಡುವ ಮೇಲ್ಮನವಿ ನ್ಯಾಯಾಲಯದ ತೀರ್ಪು ಮಾಲೀಕ ಮತ್ತು ಬಾಡಿಗೆದಾರನ ಮಟ್ಟಿಗೆ ಅಂತಿಮದ್ದಾಗಿರುತ್ತದೆ.

ಕರ್ನಾಟಕವು ಪ್ರಾಚೀನ ಕಾಲದಿಂದಲೂ ಜನರಾಡುವ ಮಾತಿನಲ್ಲಿಯೇ ಆಡಳಿತವನ್ನು ನಡೆಸುತ್ತ ಬಂದಿದೆ. ಹಿಂದೆ ಕರ್ನಾಟಕದ ಭಾಗಗಳಾಗಿದ್ದು ಈಗ ಮಹಾರಾಷ್ಟ್ರ, ಆಂಧ್ರ ಹಾಗೂ ತಮಿಳು ನಾಡಿನಲ್ಲಿ ಸೇರಿದ ಭಾಗಗಳಲ್ಲಿ ಸಹ ಕರ್ನಾಟಕದ ರಾಜಭಾಷೆಯಾಗಿದ್ದ ಕನ್ನಡ ಶಿಲಾಶಾಸನಗಳು ಸಿಗುತ್ತಿರುವುದೇ ಇದಕ್ಕೆ ನಿದರ್ಶನ. ಇಷ್ಟೇ ಅಲ್ಲದೆ ಕನ್ನಡ ರಾಜರ ಆಳ್ವಿಕೆಗೆ ಸೇರಿದ್ದ ತಮಿಳು ಮತ್ತು ಆಂಧ್ರ ಭಾಗಗಳಲ್ಲಿ ಅಲ್ಲಿಯ ಜನರ ಭಾಷೆಗಳಲ್ಲಿ ಶಿಲಾಶಾಸನಗಳನ್ನು ಕೆತ್ತಿಸಿ ಕೆಳಗೆ ಕನ್ನಡ ರುಜು ಮಾಡಿದ ಅರಸರ ಉದಾಹರಣೆಗಳೂ ಉಂಟು. ಆದರೆ ರಾಜಭಾಷೆ ಕನ್ನಡವಾಗಿದ್ದರೂ ಕನ್ನಡೇತರ ಪ್ರದೇಶ ಕನ್ನಡ ರಾಜರ ವಶಕ್ಕೆ ಬಂದಾಗ ಆ ಪ್ರದೇಶದ ಜನರ ಭಾಷೆಯೇ ಅಲ್ಲಿಯ ಆಡಳಿತ ಭಾಷೆಯೆಂದು ಬಳಕೆಯಾಗುತ್ತಿತ್ತು. ಕರ್ನಾಟಕದಲ್ಲಿ ಇದುವರೆಗೆ ದೊರೆತಿರುವ ಸುಮಾರು ಇಪ್ಪತ್ತೈದು ಸಾವಿರ ಶಾಸನಗಳಲ್ಲಿ ಶೇಕಡಾ ಎಂಬತ್ತಕಿಂತ ಹೆಚ್ಚು ಶಾಸನಗಳು ಕನ್ನಡ ಲಿಪಿ ಹಾಗೂ ಭಾಷೆಯಲ್ಲಿ ಇವೆ. ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಈವರೆಗೆ ದೊರೆತಿರುವ ಸುಮಾರು 5,350 ಶಾಸನಗಳಲ್ಲಿ 2,500 ಶಾಸನಗಳು ಕನ್ನಡದಲ್ಲಿವೆ. ಉಳಿದವು ಕನ್ನಡ ಅರಸರ ಅಧೀನ ಪ್ರದೇಶಗಳ ಪ್ರಜೆಗಳ ಭಾಷೆಗಳಾದ ತಮಿಳು ತೆಲುಗಿನಲ್ಲಿವೆ. ಕೆಲವೇ ಕೆಲವು ಸಂಸ್ಕೃತ ಹಾಗೂ ಪ್ರಾಕೃತದಲ್ಲಿವೆ. ಈ ಶಾಸನಗಳಲ್ಲಿ ಬರುವ ಆಡುಮಾತಿಗೆ ಸಮೀಪವಿರುವ ಕನ್ನಡ ಭಾಷೆ, ವಿವಿಧ ಮಟ್ಟದ ಅಧಿಕಾರ ಸ್ಥಾನಗಳ ಹೆಸರುಗಳು, ಭೂಮಿ, ತೆರಿಗೆ, ನ್ಯಾಯ, ವಾಣಿಜ್ಯ, ದತ್ತಿ, ಜಲಾಶಯ, ಧರ್ಮಶಾಲೆ, ದೇವಾಲಯ, ಅಪರಾಧ, ಶಿಕ್ಷೆ, ಅನುಗ್ರಹ ಇತ್ಯಾದಿ ವ್ಯವಸ್ಥೆಗಳಿಗೆ ಸಂಬಂಧಿಸಿದ ವಿಧಿ-ನಿಷೇಧ ಸೂಚಿಸುವ ಪದಸಮೂಹಗಳನ್ನು ನಮ್ಮ ಕಚೇರಿಯ ಜನ ಅರಿತಾಗ ಆಡಳಿತಭಾಷೆಯಾಗಲು ಕನ್ನಡಕ್ಕಿರುವ ಸಾಮರ್ಥ್ಯದ ಕಲ್ಪನೆ ಬರುತ್ತದೆ.

—ಜಯತೀರ್ಥ ರಾಜಪುರೋಹಿತ*

---

*. ಕನ್ನಡ ತೀರ್ಪುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಪು. 6

ಎಸ್. ಚನ್ನಪ್ಪ

ಕನ್ನಡದಲ್ಲಿ ವಿನೋದ ಪತ್ರಿಕೆಗಳು

'ಕನ್ನಡ ಪತ್ರಿಕೋದ್ಯಮಕ್ಕೆ 130 ವರ್ಷಗಳಿಗೂ ಮೀರಿದ ಇತಿಹಾಸ ಇದೆ. ಭಾರತಕ್ಕೆ ಬಂದ ಪಾಶ್ಚಾತ್ಯ ಕ್ರೈಸ್ತ ಪಾದ್ರಿಗಳ ಪ್ರಯತ್ನದ ಫಲವಾಗಿ ಮೊಳೆತು, ಕನ್ನಡದ ನವೋದಯ ಕಾಲದಲ್ಲಿ ಊರ್ಜಿತಗೊಂಡು, ರಾಷ್ಟ್ರ ಬಿಡುಗಡೆಯ ಮತ್ತು ಜವಾಬ್ದಾರಿ ಸರಕಾರದ ಹೋರಾಟ ಕಾಲದಲ್ಲಿ ಬೃಹದ್ಗಾತ್ರದ್ದಾಗಿ ಪರಿವರ್ತನೆಗೊಂಡು ಬೆಳೆಯುತ್ತಿರುವ ಕನ್ನಡ ಪತ್ರಿಕೆ, ಭಾರತದ ಇತರ ಭಾಷೆಗಳ ಪತ್ರಿಕೆಗಳಂತೆಯೇ ಕನ್ನಡ ಜನಜೀವನದ ನಾನಾ ಮುಖಗಳ ಪ್ರತಿಬಿಂಬವಾಗಿದೆ.'[1]

ಕನ್ನಡ ಸಾಹಿತ್ಯದಲ್ಲಿ ಕಥೆ ಕವನ ಕಾದಂಬರಿ ನಾಟಕ ಪ್ರಬಂಧ ಮುಂತಾದ ನಾನಾ ಪ್ರಕಾರಗಳಿದ್ದು, ಆಯಾ ಪ್ರಕಾರಗಳಿಗೆ ಸಂಬಂಧಿಸಿದ ಲೇಖನಗಳ ಪ್ರಕಟಣೆಗಾಗಿಯೇ ಪ್ರಯತ್ನಿಸಿದ ಪ್ರತ್ರಿಕೆಗಳ ಸಂಖ್ಯೆ ತೀರ ವಿರಳವಾಗಿದ್ದರೂ, ಆ ದಿಶೆಯಲ್ಲಿ ಅವು ಸಲ್ಲಿಸಿದ ಸೇವೆ ಗಮನಾರ್ಹವಾದದ್ದು. ಪ್ರಾಚೀನಸಾಹಿತ್ಯದ ಪ್ರಕಟಣೆ–ಪ್ರಚಾರಗಳಿಗೆಂದೇ ಕಾವ್ಯಕಲಾನಿಧಿ, ಕಾವ್ಯಮಂಜರಿ ಮುಂತಾದ ಪತ್ರಿಕೆಗಳು ಪ್ರಕಟವಾಗುತ್ತಿದ್ದದ್ದನ್ನು ಇಲ್ಲಿ ಸ್ಮರಿಸಬಹುದು. ಹಾಗೆಯೇ ಆಧುನಿಕ ಸಾಹಿತ್ಯದಲ್ಲಿ ಸಣ್ಣ ಕಥೆಗಳ ಪ್ರಕಟಣೆ–ಪ್ರಚಾರಗಳಿಗೆಂದೇ ಕಥಾಂಜಲಿ, ಕಥಾವಳಿ, ಕತೆಗಾರ ಪತ್ರಿಕೆಗಳು ಜನ್ಮತಾಳಿದವು. ಬಹುಶಃ ಇಂಥ ಪ್ರತಿಕೆಗಳ ಪ್ರಕಟಣೆಯಿಂದ ಪ್ರೇರಣೆ ಹೊಂದಿಯೋ ಎಂಬಂತೆ ಈ ಶತಮಾನದ ಮೊದಲ ದಶಕದಲ್ಲಿ ಹಾಸ್ಯ ಸಾಹಿತ್ಯದ ಪ್ರಕಟಣೆಗಾಗಿ ವಿಕಟ ವಿನೋದಿನಿ ಎಂಬ ಪತ್ರಿಕೆ ಜನಿಸಿ (1911) ಕನ್ನಡದಲ್ಲಿ ಹಾಸ್ಯ ಸಾಹಿತ್ಯದ ಪ್ರಕಟಣೆಗೆ ಮತ್ತು ಪ್ರಚಾರಕ್ಕೆ ಓನಾಮವನ್ನು ಬರೆಯಿತೆನ್ನಬಹುದು.

ಬೆಂಗಳೂರು ಅರಳೇಪೇಟೆಯ ಎಸ್.ಜಿ.ಎನ್. ಮುದ್ರಣಾಲಯದಿಂದ ಕ್ರೌನ್ $\frac{1}{4}$ ಆಕಾರದಲ್ಲಿ ಪ್ರಕಟವಾಗುತ್ತಿದ್ದ ವಿಕಟ ವಿನೋದಿನಿಯ ಸಂಪಾದಕ ಮತ್ತು ಮಾಲೀಕರಾಗಿದ್ದವರು ಬಿ. ಶಿವಪ್ಪ. ಈ ಪತ್ರಿಕೆಯಲ್ಲಿ ಕಥೆ ಕವನ ನಾಟಕಗಳು ಪ್ರಕಟವಾಗುತ್ತಿದ್ದುವು. ಎಲ್ಲಕ್ಕೂ ಹಾಸ್ಯದ 'ಗರಂಮಸಾಲ'. ಹಾಸ್ಯ ಹಳೆಯ ಕಾಲದ್ದಾಗಿದ್ದರೂ, ಅಂದಿನ ವಾಚಕರಿಗೆ ಪ್ರಿಯವಾಗಿತ್ತು. ಸು. 53 ವರ್ಷಗಳಷ್ಟು ದೀರ್ಘಕಾಲ ಪ್ರಕಟವಾದ ವಿಕಟ ವಿನೋದಿನಿ ಬಗೆಬಗೆಯ ಹಾಸ್ಯಲೇಖನಗಳ ಸೃಷ್ಟಿಗೆ ಕಾರಣವಾಯಿತಲ್ಲದೆ, ಜನತೆಯಲ್ಲಿ ಹಾಸ್ಯಪ್ರಜ್ಞೆಯನ್ನು ಮೂಡಿಸಲೂ ಪ್ರಯತ್ನಿಸಿತು. ಆದರೆ ಆರ್ಥಿಕ ಅಡಚಣೆ, ಪ್ರೋತ್ಸಾಹದ ಅಭಾವ ಮತ್ತಿತರ ಕಾರಣಗಳಿಂದಾಗಿ ವಿಕಟ ವಿನೋದಿನಿ ತನ್ನ ಕೊನೆಯ ದಿನಗಳಲ್ಲಿ, ದೀಪಾವಳಿ ಸಮಯದಲ್ಲಿ ಮಾತ್ರ, ವಾರ್ಷಿಕ ಸಂಚಿಕೆಯಾಗಿ ಕಾಣಿಸಿಕೊಂಡು ಕೊನೆಯ ಉಸಿರನ್ನೆಳೆಯಿತು (1964).

---

1 ಕನ್ನಡ ವಿಶ್ವಕೋಶ, ಸಂ. 3

'ಸಂತೋಷಂ ಜನಯೇತ್ಪ್ರಾಜ್ಞಃ ತದೇವೇಶ್ವರ ಪೂಜನಂ' ಎಂಬ ಧ್ಯೇಯದೊಂದಿಗೆ ಆರಂಭವಾದ ನಗುವನಂದ (1933) ಕನ್ನಡದಲ್ಲಿ ಹಾಸ್ಯ ಸಾಹಿತ್ಯದ ವಿವಿಧ ಮುಖಗಳನ್ನು ಪರಿಚಯಿಸುವ ಕೆಲಸವನ್ನು ಶ್ರದ್ಧೆಯಿಂದ ನಿರ್ವಹಿಸಿತು. ಸುಬೋಧ ರಾಮರಾಯರ ಪ್ರಯತ್ನದಿಂದ ಪ್ರಾರಂಭವಾಗಿ, ಜಿ.ಎಸ್. ಕೃಷ್ಣರಾಯರ ಸಂಪಾದಕತ್ವದಲ್ಲಿ ಸುಬೋಧ ಮುದ್ರಣಾಲಯದಲ್ಲಿ ಪ್ರಕಟವಾಗುತ್ತಿದ್ದ ನಗುವನಂದದ ಚರಿತ್ರೆ ವೈವಿಧ್ಯಮಯವಾಗಿದೆ, ಸ್ವಾರಸ್ಯವಾಗಿದೆ.

ಪ್ರಾರಂಭದ ಹಲವು ವರ್ಷಗಳ ಕಾಲ ಸುಬೋಧ ರಾಮರಾಯರ ನೇತೃತ್ವದಲ್ಲಿ ಪ್ರಕಟವಾಗುತ್ತಿದ್ದ ನಗುವನಂದ, 1949ರಿಂದ ಪ್ರತ್ಯೇಕಗೊಂಡು ಜಿ.ಎಸ್. ಕೃಷ್ಣರಾಯರ ನೇತೃತ್ವದಲ್ಲಿ ಪ್ರಕಟವಾಗತೊಡಗಿತು. ಆದರೆ ಪತ್ರಿಕೆ ಕಷ್ಟಕ್ಕೊಳಗಾಗಿ, ಕೃಷ್ಣರಾಯರಿಂದ ಬಿಡುಗಡೆ ಹೊಂದಿ, ರಂಗನಾಥರಾಯರ ಸಂಪಾದಕತ್ವದಲ್ಲಿ ಸುಮಾರು ಒಂದು ವರ್ಷ ಕಾಲ ಪ್ರಕಟವಾಗಿ, ಅನಂತರ ಸುಬೋಧ ಪ್ರಹ್ಲಾದರಾಯರ ವಶಕ್ಕೆ ಬಂತು. ಅವರಲ್ಲಿ 1950–1963ರಲ್ಲಿ ಸ್ವಲ್ಪ ನೆಮ್ಮದಿಯ ಸ್ಥಿತಿಯಲ್ಲಿಯೇ ಇದ್ದ ನಗುವನಂದ ನಿರಾಳವಾಗಿ ಉಸಿರಾಡಿದ್ದು ಈ ಸಮಯದಲ್ಲಿಯೇ. ಅನಂತರ ನಗುವನಂದವನ್ನು ರಂಜನಾ ಪಬ್ಲಿಕೇಶನ್ಸ್ ಸಂಸ್ಥೆಯವರು ಕೊಂಡು ಪ್ರಕಟಿಸತೊಡಗಿದರು. ಮೊದಲು ಕೆಲವು ತಿಂಗಳುಗಳ ಕಾಲ ಉತ್ಸಾಹದಿಂದ ಮೈತುಂಬಿಕೊಂಡು ಬರುತ್ತಿದ್ದ ನಗುವನಂದ ಅನಂತರ ದೀಪಾವಳಿ ಸಮಯದಲ್ಲಿ ವಾರ್ಷಿಕ ಸಂಚಿಕೆಯಾಗಿ ಕಾಣಿಸಿಕೊಂಡು, ಕೊನೆಗೆ ಕಣ್ಮರೆಯಾಯಿತು (1968).

ಬೇರೆಬೇರೆಯವರ ಆಶ್ರಯ ಪೋಷಣೆಯಲ್ಲಿ ಸುಮಾರು 35 ವರ್ಷಗಳ ಕಾಲ ಬದುಕಿದ್ದ ನಗುವನಂದ ತನ್ನ ಸ್ವಸುಖವನ್ನು ಮರೆತು, ಜನತೆಗೆ ಧಾರಾಳವಾಗಿ ಹಾಸ್ಯಾಮೃತವನ್ನು ಉಣಬಡಿಸಿ, ಧನ್ಯವಾಯಿತು. ನಗೆಮಲ್ಲಿಗೆ, ಸಮಾಧಿಯ ಅಗ್ನಿಕುಂಡ, ಉಪ ಕಥಾವಳಿ–ಮೊದಲಾದ ಸ್ಥಿರಶೀರ್ಷಿಕೆಗಳಿದ್ದ ನಗುವನಂದದಲ್ಲಿ ಕಥೆ ಕವನ ಚುಟುಕ ಅಣಕವಾಡುಗಳೂ ಪ್ರಕಟವಾಗುತ್ತಿದ್ದುವು. ಸಮಾಜದಲ್ಲಿರುವ ಸ್ವಾರ್ಥ–ಅನ್ಯಾಯಗಳಿಗೆ ಹಾಸ್ಯದ ಮೆರಗನ್ನು ಕೊಟ್ಟು ಚಿತ್ರಿಸುತ್ತಿದ್ದ ಲೇಖನಗಳು ಈ ಪತ್ರಿಕೆಯಲ್ಲಿ ಹೆಚ್ಚಾಗಿ ಪ್ರಕಟವಾಗುತ್ತಿದ್ದುವು. ನಗುವನಂದದ ಬರಹಗಾರರ ಬಳಗದಲ್ಲಿ ಹೆಸರಾಂತ ಹಿರಿಯ ಲೇಖಕರಿದ್ದರಲ್ಲದೆ ಕಿರಿಯ ಲೇಖಕರಿಗೂ ಸ್ಥಾನವಿತ್ತು. ಸುಮಾರು 20 ವರ್ಷಗಳಷ್ಟು ದೀರ್ಘಕಾಲ ಈ ಪತ್ರಿಕೆಗೆ ಅಂಕಣ ಲೇಖಕರಾಗಿದ್ದ ಎ.ಜಿ. ಕೃಷ್ಣಮೂರ್ತಿ, ಗೊರೂರು, ನಾಡಿಗೇರ, ನಾ. ಕಸ್ತೂರಿ, ಹೊಯ್ಸಳ, ಬಿಸ್ರಾ ಮುಂತಾದವರನ್ನು ಹೆಸರಿಸಬಹುದು. ಚಿತ್ರಕಾರ ರಾಘವೇಂದ್ರರ ವ್ಯಂಗ್ಯಚಿತ್ರಗಳು ಪತ್ರಿಕೆಗೆ ವಿಶೇಷ ಕಳೆಯನ್ನೊದಗಿಸಿದ್ದುವು.

ಮುಖಪುಟದಲ್ಲಿ ವ್ಯಂಗ್ಯಚಿತ್ರವನ್ನು ಹೊತ್ತು ಪ್ರತಿ ತಿಂಗಳೂ ತಪ್ಪದೆ ಉತ್ಸಾಹದಿಂದ ಬರುತ್ತಿದ್ದ ನಗುವನಂದ ತನ್ನ ಧ್ಯೇಯ-ಧೋರಣೆಗಳ ಸಾಧನೆಗಾಗಿ ಸಾಕಷ್ಟು ಶ್ರಮಿಸಿತು. ಹಾಸ್ಯಪ್ರಪಂಚದಲ್ಲಿ ಬಗೆಬಗೆಯ ಪ್ರಯೋಗಗಳಿಗೆ ಕ್ಷೇತ್ರವಾಗಿದ್ದ ನಗುವನಂದ, ಕನ್ನಡದಲ್ಲಿ ಹಾಸ್ಯ ಸಾಹಿತ್ಯದ ಬೆಳವಣಿಗೆಗಾಗಿಯೂ ಶ್ರಮಿಸಿದ್ದನ್ನು ಮರೆಯುವಂತಿಲ್ಲ.

'ಜೀವನದಲ್ಲಿ ತಿಳಿಹಾಸ್ಯಕ್ಕಾಗಿ ಅಗತ್ಯವಾದ ಕೊಂಕು ದೃಷ್ಟಿಯನ್ನು ಕನ್ನಡಿಗರಲ್ಲಿ ಪ್ರಚಾರ ಮಾಡಲೆಂದು' ಪ್ರಾರಂಭವಾದ ಕೊರವಂಜಿ (1942) ಕಾಲು ಶತಮಾನ ಕಾಲ

ಹಾಸ್ಯಪ್ರಿಯರನ್ನು ತಣಿಸಿ. ಜನಪ್ರಿಯತೆಯನ್ನು, ಗಳಿಸಿತಾದರೂ 'ವ್ಯಾವಹಾರಿಕ'ವಾಗಿ ನಷ್ಟವನ್ನು ಅನುಭವಿಸಿ ನಿಂತುಹೋಯಿತು (1967).

'ತಿಳಿನಗೆಯ' ಲೇಖನಗಳನ್ನೇ ಪ್ರಕಟಿಸುತ್ತಿದ್ದ ಕೊರವಂಜಿಯ ಸಂಪಾದಕರಾಗಿದ್ದವರು ರಾ.ಶಿ. ಇವರಿಗೆ ನೆರವಾಗಿದ್ದವರು ನಾ. ಕಸ್ತೂರಿ. ಕೊರವಂಜಿಯ ಪ್ರಥಮ ಸಂಚಿಕೆ ಪ್ರಕಟವಾದ್ದು ಚಿತ್ರಭಾನು ಸಂವತ್ಸರದ ಉಗಾದಿಯಂದು.

ಲೋಕದ ಯಾವುದೇ ವಾರ್ತೆಯನ್ನಾಗಲಿ, ಸಮಾಜದ ಯಾವುದೇ ಘಟನೆಯನ್ನಾಗಲಿ, ತಿಳಿಯಾದ ಸವುರಾದ ಹಾಸ್ಯದ ಹಿನ್ನೆಲೆಯಲ್ಲಿ 'ಕಣಿ' ಹೇಳುವಂತೆ 'ವರದಿ' ಮಾಡುತ್ತಿದ್ದುದು ಕೊರವಂಜಿಯ ವೈಶಿಷ್ಟ್ಯವಾಗಿತ್ತು. ಪ್ರಪಂಚದ ಬೇರೆಬೇರೆ ಭಾಷಾ ಸಾಹಿತ್ಯಗಳಲ್ಲಿ ಹೊಸದಾಗಿ ಬಂದ ಹಾಸ್ಯ ಪ್ರಕಾರಗಳನ್ನು ತಟ್ಟನೆ ಕನ್ನಡಕ್ಕೆ ಅಳವಡಿಸಿಕೊಂಡಿದ್ದು, ಆ ಮೂಲಕ ಕನ್ನಡ ಹಾಸ್ಯ ಸಾಹಿತ್ಯ ಕ್ಷೇತ್ರವನ್ನು ವಿಸ್ತಾರಗೊಳಿಸಿದ್ದು, ವೈವಿಧ್ಯಮಯಗೊಳಿಸಿದ್ದು ಕೊರವಂಜಿಯ ಮಹತ್ತರ ಸಾಧನೆ. ಹೀಗಾಗಿ ಕೊರವಂಜಿ ಬಹು ಬೇಗ 'ಜಾಣ ಕನ್ನಡಿಗರಿಗೆಲ್ಲ' ಪ್ರಿಯವಾಗಿತ್ತು. ಪ್ರತಿ ತಿಂಗಳ ಮೊದಲ ತೇದಿಯಂದು ತಪ್ಪದೆ ಪ್ರಕಟವಾಗುತ್ತಿದ್ದ ಕೊರವಂಜಿಯಲ್ಲಿ ಅಣಕವಾಡು ಲಘುಪದ್ಯ ಕಿರುಹರಟೆ ಕಿರುನಾಟಕ ಮುಂತಾದ ಬಗೆಬಗೆಯ ಲೇಖನಗಳಿರುತ್ತಿದ್ದುವು. ಕೊರವಂಜಿಯ ಲೇಖಕರ ಬಳಗದಲ್ಲಿ ಶ್ರೀರಂಗ, ಶಿವರಾಮ ಕಾರಂತ, ರಾಜರತ್ನಂ, ಅ.ರಾ.ಸೇ., ದಾಶರಥಿ ದೀಕ್ಷಿತ್, ರಾಮಿ, ಕೇಫ, ಟಿ. ಸುನಂದಮ್ಮ ಮುಂತಾದವರಿದ್ದರು.

ಪ್ರಪಂಚದ ಇತರ ಭಾಷೆಗಳ ಹಾಸ್ಯ ಸಾಹಿತ್ಯಕ್ಕೆ ಸಮವಾಗಿ, ಒಮ್ಮೊಮ್ಮೆ ಅದನ್ನು ಮೀರಿಸಬಲ್ಲ ಲೇಖನಗಳನ್ನು ಪ್ರಕಟಿಸಿದ ಕೊರವಂಜಿ ಕನ್ನಡ ಹಾಸ್ಯ ಸಾಹಿತ್ಯ ಪ್ರಕಾರಕ್ಕೆ ಹೊಸಹೊಸ ಆಯಾಮಗಳನ್ನು ಒದಗಿಸಿ ಬೆಳ್ಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿಕೊಳ್ಳಬೇಕಾದ ಸಮಯದಲ್ಲಿಯೇ ಕಾಡಿಗೋಡಿ ಕಣ್ಮರೆಯಾಯಿತು.

'ಕನ್ನಡ ಜನತೆಯಲ್ಲಿ ಹಾಸ್ಯಪ್ರಜ್ಞೆಯನ್ನು ಜೀವಂತವಾಗಿಸಿಕೊಂಡು ಬರುವ ಉಷ್ಣವಾಹಕವಾಗಬೇಕೆಂಬ' ಹೇರಾಸೆಯಿಂದ ಪ್ರಾರಂಭವಾದ 'ವಿನೋದ' (1951) ಈಗಲೂ ಪ್ರಕಟವಾಗುತ್ತಿರುವ ಏಕೈಕ ಹಾಸ್ಯಪ್ರಧಾನ ಮಾಸಪತ್ರಿಕೆ. ವಿನೋದದ ಸಂಪಾದಕ ಜಿ. ನಾರಾಯಣರು ಹೇಳುವಂತೆ, 'ಜೀವನಸಮಸ್ಯೆಗಳನ್ನು ಹಾಸ್ಯರೂಪದಲ್ಲಿ ಚಿತ್ರಿಸಿ ಅವಕ್ಕೆ ಪರಿಹಾರಗಳನ್ನು, ಸೂಕ್ತ ಸಲಹೆಗಳನ್ನು ಹಾಸ್ಯರೂಪದಲ್ಲಿ ಹೇಳುವುದೇ ಈ ಪತ್ರಿಕೆಯ ಧ್ಯೇಯ.

ಕಿರುನೋಟ, ವ್ಯಂಗ್ಯ ನೋಟ, ಚುಟುಕಗಳು, ಅಣಕವಾಡು, ಹಾಸ್ಯದ ಹೋಲ್ಡಾನ್, ವಿನೋದ ಗೀತೆಗಳು, ನವೀನ ಗಾದೆಗಳು—ಹೀಗೆ ವಿವಿಧ ಬಗೆಯ ಲೇಖನಗಳು ವಿನೋದದಲ್ಲಿ ಪ್ರಕಟವಾಗುತ್ತಿವೆಯಲ್ಲದೆ, ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಹಾಸ್ಯರೂಪದಲ್ಲಿ ಬಿಂಬಿಸುವ ಸಾಮಾಜಿಕ ಲೇಖನಗಳೂ ಪ್ರಕಟವಾಗುತ್ತಿವೆ. ವಿನೋದದ ಬರೆಹಗಾರರ ಬಳಗವೂ ದೊಡ್ಡದು: ಶ್ರೀರಂಗ, ರಾಶಿ, ಬೀಚಿ, ಗೊರೂರು, ನಾಡಿಗೇರ, ನಿರಂಜನ, ದಾಶರಥಿ ದೀಕ್ಷಿತ್, ಬುಳ್ಳ, ಎನ್ಕೆ ಮುಂತಾದವರಲ್ಲದೆ ಹಿರಿಯ ಕಿರಿಯ ಲೇಖಕಿಯರೂ ಇದರ ಬಳಗದಲ್ಲಿದ್ದಾರೆ. ನಾಡಿಗ್, ಪಿಟಿಲ್, ಪ್ರಭು, ಪ್ರೇಮಕುಮಾರ್, ಚಂದ್ರಕಾಂತ್, ಶ್ರೀನಿವಾಸಲು ಮುಂತಾದವರ ವ್ಯಂಗ್ಯ ಚಿತ್ರಗಳೂ ಪತ್ರಿಕೆಗೆ ವಿಶೇಷ ಕಳೆಯನ್ನು ಕೊಡುತ್ತಿವೆ.

ಪ್ರತಿವರ್ಷ ಸ್ವಾತಂತ್ರ್ಯ ಸಮಯದಲ್ಲಿ ವಿನೋದ 'ವಿಶೇಷ ಸಂಚಿಕೆ'ಯಾಗಿ ಪ್ರಕಟವಾಗು

ತ್ತಿದೆ. ಗಾತ್ರ ಮತ್ತು ಗುಣದಲ್ಲಿ ಈ ಸಂಚಿಕೆಗಳ ವೈಶಿಷ್ಟ್ಯ ಗಮನಾರ್ಹ.

ಪತ್ರಿಕೆಯಲ್ಲಿ ಪ್ರಕಟವಾದ ಕೆಲವು ಉತ್ತಮ ಹಾಸ್ಯ ಲೇಖನಗಳನ್ನು ಸಂಗ್ರಹಿಸಿ 'ವಿನೋದ ಲಹರಿ' ಎಂಬ ಗ್ರಂಥವನ್ನು, 'ವಿನೋದವಾಹಿನಿ' ಮತ್ತು 'ವಿನೋದ ಚಿತ್ರಗಳು' ಎಂಬ ಎರಡು ವ್ಯಂಗ್ಯ ಚಿತ್ರಗಳ ಸಂಕಲನಗಳನ್ನು ಪ್ರಕಟಿಸಿರುವುದು ಈ ಪತ್ರಿಕೆಯ ಇನ್ನೊಂದು ಸಾಧನೆ.

ಹಿರಿಯ ಲೇಖಕರ ಜೊತೆಗೆ ಕಿರಿಯ ಲೇಖಕರನ್ನು ಸೇರಿಸಿಕೊಂಡು, ಸ್ವಂತ ಕಷ್ಟಗಳನ್ನು ಗಮನಿಸದೆ, ಜನತೆಯ ಮುಖದಲ್ಲಿ ನಗೆಯನ್ನು ಮೂಡಿಸಬೇಕೆಂಬ ಆಸೆಯಿಂದ ಪ್ರಕಟವಾಗುತ್ತಿರುವ ಈ 'ಪತ್ರಿಕೆ ಶುಚಿಯಾದ ವಿನೋದವನ್ನು ಜನಕ್ಕೆ ಹಂಚುವ ಪತ್ರಿಕೆ, ಎಂದು ಹೆಸರಾಗಿದೆ.

* * *

ಕನ್ನಡದಲ್ಲಿ ಹಾಸ್ಯ ಸಾಹಿತ್ಯದ ಪ್ರಕಟಣೆ ಮತ್ತು ಪ್ರಚಾರಗಳಿಗೆಂದೇ ಪ್ರಾರಂಭವಾದ ಈ ಪತ್ರಿಕೆಗಳು ತಮ್ಮ ಉದ್ದೇಶದ ಸಾಧನೆಗಾಗಿ ನಡೆಸಿದ್ದು ಬಹುಮಟ್ಟಿಗೆ ಹೋರಾಟದ ಬದುಕನ್ನೇ. ಪ್ರೋತ್ಸಾಹದ ಅಭಾವ, ಹಣದ ಅಭಾವಗಳಿಂದ ಮುಗ್ಗರಿಸಿ ಬಿದ್ದು ಎದ್ದು ನಡೆದದ್ದೂ ಒಂದು ಪವಾಡದಂತಿದೆ. ಕನ್ನಡ ಪತ್ರಿಕೋದ್ಯಮದ ಚರಿತ್ರೆಯಲ್ಲಿ ಈ ವಿನೋದ ಪತ್ರಿಕೆಗಳ ಸಾಹಸಮಯ ಬದುಕು ಮತ್ತು ಸಾಧನೆಗಳು ವಿಶೇಷ ಉಲ್ಲೇಖಕ್ಕೆ ಅರ್ಹವಾಗಿವೆ.

ಕನ್ನಡ ಹಾಸ್ಯ ಸಾಹಿತ್ಯ ಪ್ರಕಾರಕ್ಕೆ ವಿವಿಧ ತಿರುವುಗಳನ್ನು ಕೊಟ್ಟು, ಹೊಸ ಹೊಸ ಆಯಾಮಗಳನ್ನು ಸೃಷ್ಟಿಸಿ, ಆ ಕ್ಷೇತ್ರ ವಿಸ್ತಾರವೂ ವೈಭವವೂ ಶ್ರೀಮಂತವೂ ಆಗುವಂತೆ ಮಾಡಿದ್ದು ಈ ಪತ್ರಿಕೆಗಳ ಬಹು ದೊಡ್ಡ ಸಾಧನೆ. ಪ್ರತಿಭಾವಂತ ಹಾಸ್ಯ ಲೇಖಕರನೇಕರನ್ನು ಈ ಪತ್ರಿಕೆಗಳು ಸೃಷ್ಟಿಸಿದ್ದನ್ನು ಮರೆಯುವಂತಿಲ್ಲ.

* * *

ಕನ್ನಡದಲ್ಲಿ ಲಘುಲೇಖನ, ಕಿರುಹರಟೆ, ಹಾಸ್ಯನಾಟಕ, ಚುಟುಕ ಮುಂತಾದ ಲೇಖನಗಳಿಗೆ ಪ್ರಜಾವಾಣಿ ಕನ್ನಡ ಪ್ರಭ, ಸುಧಾ, ಪ್ರಜಾಮತ, ಕಸ್ತೂರಿ, ಮಯೂರ, ಮಲ್ಲಿಗೆ ಮುಂತಾದ ಪತ್ರಿಕೆಗಳು ಸ್ಥಾನ ಕೊಟ್ಟಿರುವುದು ಸಂತಸದ ಸಂಗತಿ.

ವಿ.ಎನ್. ಶೇಷಗಿರಿರಾವ್

ಅಣುವಾದ*

೧

ವಿಜ್ಞಾನಕ್ಷೇತ್ರದಲ್ಲಿ ಅಣುವಾದಕ್ಕೆ ಕೊಟ್ಟಿರುವ ಸ್ಥಾನ ಮಹತ್ತ್ವದ್ದು. ವಿಜ್ಞಾನದ ಇತಿಹಾಸದಲ್ಲಿ 'ಅಣುವಾದ' ಡಾಲ್ಟನನಿಂದ ಸ್ಪಷ್ಟಗೊಂಡು ಪ್ರಸಿದ್ಧಿ ಹೊಂದಿತು. ಅಣು ಪರಮಾಣು, ಅಣುರಿಯಾಕ್ಟರ್, ಅಣುಶಕ್ತಿ–ಇವು ಇಂದಿನ ವಿಜ್ಞಾನದ ಸಾಮಾನ್ಯ ಪದಗಳಾಗಿವೆ. ಅಣುವಾದ' ಮೂಲತಃ ಆಧುನಿಕ ವಿಜ್ಞಾನದ ಕೊಡುಗೆಯೇನಲ್ಲ. ಅದು ಭಾರತೀಯ, ಪುರಾತನ ದರ್ಶನವಾದ ''ವೈಶೇಷಿಕ''ದಲ್ಲಿ, ಜೈನದರ್ಶನದಲ್ಲಿ ಹಾಗೂ ಪ್ರಾಚೀನ ಗ್ರೀಕರಲ್ಲಿ ಬೆಳಕನ್ನು ಕಂಡುಕೊಂಡಿದೆ. ಆದರೆ ವಿಜ್ಞಾನ ದೃಷ್ಟಿಯ ಅಣುವಾದಕ್ಕೂ ಮೇಲೆ ಹೇಳಿದ ದರ್ಶನಗಳ ತಾತ್ತ್ವಿಕ ದೃಷ್ಟಿಗೂ ಅಂತರವಿದೆ.

ಅಣು ಎಂದರೆ ಅತ್ಯಂತ ಸೂಕ್ಷ್ಮಪದಾರ್ಥ. ಅದು ಇಂದ್ರಿಯಗೋಚರವಲ್ಲ. ಅದು ಅವಿಭಾಜ್ಯ. ನಾವು ಒಂದು ವಸ್ತುವನ್ನು ವಿಭಜಿಸುತ್ತ ಹೋಗಬಹುದು. ಆದರೆ ಈ ವಿಭಜನೆಗೆ ಒಂದು ಮಿತಿ ಇದೆ. ವಸ್ತುವನ್ನು ವಿಭಜಿಸುತ್ತ ವಿಭಜಿಸುತ್ತ ಹೋದ ಹಾಗೆ ಕೊನೆಯಲ್ಲಿ ಪುನಃ ವಿಭಜಿಸಲಾಗದ ಒಂದು ಪೂರ್ಣ ಅಂಶ ಉಳಿಯುತ್ತದೆ. ಹೀಗೆ ಪುನಃ ವಿಭಜಿಸಲಾ

---

* ಆಧುನಿಕ ವಿಜ್ಞಾನದ ಪರಿಭಾಷೆಯಲ್ಲಿ ಅಣು ಎಂದರೆ ಮಾಲಿಕ್ಯೂಲ್ ಎಂದರ್ಥ. ಯಾವುದೇ ಸಂಯುಕ್ತದ ಅತಿ ಸೂಕ್ಷ್ಮ ಕಣವಿದು. ಇದನ್ನು ಮತ್ತೆ ವಿಭಾಗಿಸಿದರೆ ಆ ಸಂಯುಕ್ತದ ಸ್ವರೂಪ ಉಳಿದಿರುವುದಿಲ್ಲ. ಉದಾಹರಣೆಗೆ ನೀರಿನ ಅಣು, ಉಪ್ಪಿನ ಅಣು, ಇತ್ಯಾದಿ. ಪರಮಾಣು ಎಂದರೆ ಆ್ಯಟಮ್ ಎಂದರ್ಥ. ಯಾವುದೇ ಮೂಲವಸ್ತುವಿನ ಅಂದರೆ ಧಾತುವಿನ ಅತಿ ಸೂಕ್ಷ್ಮ ಕಣವಿದು. ಒಂದು ಕಾಲದಲ್ಲಿ ಇದು ಅವಿಭಾಜ್ಯ ಎಂದು ನಂಬಲಾಗಿತ್ತು. ಪರಮಾಣುವಿನ ಭೇದನೆ ಸಾಧ್ಯ ಎಂದು ಈಗ ಗೊತ್ತಿದೆ. ಆದರೆ ಭೇದನಾನಂತರ ಆ ಧಾತುವಿನ ಸ್ವರೂಪ ಮಾತ್ರ ಉಳಿದಿರುವುದಿಲ್ಲ. ನೀರು ಎಂಬ ಸಂಯುಕ್ತ ಆಕ್ಸಿಜನ್ ಮತ್ತು ಹೈಡ್ರೊಜನ್ ಎಂಬ ಎರಡು ಧಾತುಗಳಿಂದ ಆಗಿದೆ. ಉಪ್ಪು ಎಂಬ ಸಂಯುಕ್ತ ಸೋಡಿಯಂ ಮತ್ತು ಕ್ಲೋರಿನ್ ಎಂಬ ಧಾತುಗಳಿಂದ ಆಗಿದೆ. ಆದ್ದರಿಂದ ಹೈಡ್ರೊಜನ್ ಪರಮಾಣು, ಆಕ್ಸಿಜನ್ ಪರಮಾಣು ಎಂದು ಮುಂತಾಗಿ ಹೇಳುವುದುಂಟು. ಇದು ಹೇಗೇ ಇರಲಿ, ಪ್ರಸಕ್ತ ಲೇಖನದಲ್ಲಿ "ಅಣು" ಎಂಬ ಪದವನ್ನು "ಆ್ಯಟಮ್" ಎಂದರೆ "ಪರಮಾಣು" ಎನ್ನುವ ಅರ್ಥದಲ್ಲಿ ಲೇಖಕರು ಬಳಸಿದ್ದಾರೆ.

—ಸಂ.

ಗದ, ಅತ್ಯಂತ ಸೂಕ್ಷ್ಮವಾದ ಇಂದ್ರಿಯಗಳಿಗೆ ಅಗೋಚರವಾದ ಪದಾರ್ಥವೇ ಅಣು. ಇಂಗ್ಲೀಷಿನಲ್ಲಿ ಇದನ್ನೇ 'ಆ್ಯಟಮ್' ಎನ್ನುವರು.

ಭಾರತೀಯ ಷಡ್ದರ್ಶನಗಳಲ್ಲಿ ಒಂದಾದ ವೈಶೇಷಿಕ ದರ್ಶನದಲ್ಲಿ 'ಅಣುವಾದ'ದ ಚರ್ಚೆಯನ್ನು ನಾವು ಕಾಣಬಹುದು. ವೈಶೇಷಿಕ ದರ್ಶನ ಮೊದಲು ನಾಸ್ತಿಕ ದರ್ಶನವಾಗಿತ್ತು. ಇದರ ಪ್ರತಿಪಾದಕನಾದ ಕಣಾದ ಮಹರ್ಷಿಗೆ ದೇವರ ಅಸ್ತಿತ್ವದಲ್ಲಿ ನಂಬಿಕೆ ಇರಲಿಲ್ಲ.

ಈತನ ಪ್ರಕಾರ ಅಣುಗಳು ಅನೇಕ ಹಾಗೂ ಅನಂತ. ಅವುಗಳಿಗೆ ಗುಣಗಳಿವೆ. ಈ ಅಣುಗಳು ಭೌತಿಕವಾದವುಗಳು. ಜಡವಾದವುಗಳು, ನಾಲ್ಕು ವರ್ಗದ ಅಣುಗಳಿವೆ: 1 ವಾಯುವಿನ ಅಣುಗಳು 2 ತೇಜಸ್ಸಿನ (ಅಗ್ನಿ) ಅಣುಗಳು, 3 ನೀರಿನ ಅಣುಗಳು ಮತ್ತು 4 ಪೃಥ್ವಿಯ ಅಣುಗಳು. ಒಂದು ವರ್ಗದ ಅಣುಗಳಿಗೆ ಒಂದು ವಿಶೇಷಗುಣವಿರುತ್ತದೆ. ಉದಾಹರಣೆಗೆ, ವಾಯುವಿನ ಅಣುಗಳ ವಿಶೇಷ ಗುಣ ಸ್ಪರ್ಶ; ತೇಜಸ್ಸಿನ ಅಣುಗಳ ವಿಶೇಷ ಗುಣ ರೂಪ (ಬಣ್ಣ) ; ನೀರಿನ ಅಣುಗಳ ವಿಶೇಷಗುಣ ರಸ (ರುಚಿ) ಮತ್ತು ಪೃಥ್ವಿಯ ಅಣುಗಳ ವಿಶೇಷಗುಣ ವಾಸನೆ (ಗಂಧ).

ವಾಯುವಿಗೆ ಸ್ಪರ್ಶ ಒಂದೇ ಗುಣ ; ತೇಜಸ್ಸಿನ ಅಣುಗಳಿಗೆ ಸ್ಪರ್ಶ ಮತ್ತು ರೂಪ ಎಂಬ ಎರಡು ಗುಣಗಳಿವೆ ; ನೀರಿನ ಅಣುಗಳಿಗೆ ಸ್ಪರ್ಶ, ರೂಪ ಮತ್ತು ರುಚಿ ಎಂಬ ಮೂರು ಗುಣಗಳಿವೆ ; ಪೃಥ್ವಿಯ ಅಣುಗಳಿಗೆ ಸ್ಪರ್ಶ, ರೂಪ, ರುಚಿ ಮತ್ತು ಗಂಧ ಎಂಬ ನಾಲ್ಕು ಗುಣಗಳಿವೆ. ಹೀಗೆ ಪ್ರತಿಯೊಂದು ವರ್ಗದ ಅಣುಗಳಿಗೆ ವಿಶೇಷಗುಣವಲ್ಲದೆ ಇತರ ಗುಣಗಳೂ ಇರುತ್ತವೆ ಎಂದು ಈ ದರ್ಶನ ಸಾರುತ್ತದೆ. ವಿಶೇಷ ಗುಣದ ಆಧಾರದಮೇಲೆ ಒಂದು ವರ್ಗದ ಅಣುಗಳನ್ನು ಇನ್ನೊಂದು ವರ್ಗದ ಅಣುಗಳಿಂದ ಭಿನ್ನವೆಂದು ಹೇಳಬಹುದು.

ಒಂದು ವರ್ಗದ ಅಣುಗಳು ಇನ್ನೊಂದು ವರ್ಗದ ಅಣುಗಳಿಂದ ಭಿನ್ನವಾಗಿರುವುದಷ್ಟೇ ಅಲ್ಲದೆ, ಒಂದೇ ವರ್ಗದ ಅಣುಗಳಲ್ಲೂ ಪರಸ್ಪರ ವ್ಯತ್ಯಾಸವಿರುತ್ತದೆ. ಈ ವ್ಯತ್ಯಾಸಕ್ಕೆ ಕಾರಣ ಪ್ರತಿಯೊಂದು ಅಣುವಿನಲ್ಲಿರುವ 'ವಿಶೇಷ' ಎಂಬ ಪದಾರ್ಥ ಎಂದು ಈ ದರ್ಶನ ಅಭಿಪ್ರಾಯಪಡುತ್ತದೆ.

ವೈಶೇಷಿಕ ದರ್ಶನದ ಪ್ರಕಾರ ಅಣುಗಳು ಜಡವಾದವು ; ಅವಕ್ಕೆ ಸ್ವಯಂ ಚಲನೆ ಇಲ್ಲ.[1] ಚಲನೆ ಅವುಗಳ ಸ್ವರೂಪವಲ್ಲ ; ಅವು ಭೌತಿಕವಾದವು ; ಚಲನೆ ಅವುಗಳ ನೈಜ ಸ್ವಭಾವವಲ್ಲ.

ವೈಶೇಷಿಕ ದರ್ಶನದ ಪ್ರಕಾರ, ನಾವು ಕಾಣುವ ಜಗತ್ತಿನ ಪ್ರತಿಯೊಂದು ವಸ್ತುವೂ (ಆಕಾಶ, ಆತ್ಮ, ಮನಸ್ಸು, ಕಾಲ ಮತ್ತು ದಿಕ್‌ಗಳ ವಿನಾ) ಅಣುಗಳಿಂದ ಮಾಡಲ್ಪಟ್ಟಿವೆ. ಈಗ ಆ ವಸ್ತುಗಳು ಅಣುಗಳಿಂದ ಹೇಗೆ ಮಾಡಲ್ಪಟ್ಟಿವೆ ಎಂಬುದನ್ನು ವಿವೇಚಿಸೋಣ,

ಕಣಾದ ಮಹರ್ಷಿ ದೇವರ ಅಸ್ತಿತ್ವದನ್ನು ನಂಬಿರಲಿಲ್ಲ ಎಂದು ಮೊದಲೇ ಹೇಳಾಯಿತಷ್ಟೆ. ಅಣುಗಳು ಸ್ವರೂಪತಃ ಕ್ರಿಯಾರಹಿತವಾದರೂ (ಚಲನರಹಿತವಾದರೂ), ಜೀವಿಗಳ ಪಾಪಪುಣ್ಯಗಳು, ಅದೃಷ್ಟ, ಇವುಗಳಿಂದ ಅಣುಗಳಲ್ಲಿ ಪ್ರಥಮ ಚಲನೆ ಉಂಟಾಗುತ್ತದೆ.[2] ಹೀಗೆ ಪ್ರಥಮ

---

[1] ಚಂದ್ರಧರ್ ಶರ್ಮ : *A Critical Survey of Indian Philosophy*, ಪು. 183

[2] ಎಸ್. ರಾಧಾಕೃಷ್ಣನ್: *Indian Philosophy*, Vol II, ಪು. 197

ಚಲನೆ ಉಂಟಾದ ಎರಡು ಅಣುಗಳು ಸಂಯೋಗ ಹೊಂದಿ 'ದ್ವ್ಯಣುಕ' ಎಂಬ ಘಟಕ ಉಂಟಾಗುತ್ತದೆ. ದ್ವ್ಯಣುಕವು ಗಾತ್ರದಲ್ಲಿ ಅತ್ಯಂತ ಚಿಕ್ಕದಿದ್ದು ಇಂದ್ರಿಯಗಳಿಗೆ ಅಗೋಚರ ವಾಗಿರುತ್ತದೆ. ಇಂಥ ಮೂರು 'ದ್ವ್ಯಣುಕ'ಗಳು ತಮ್ಮತಮ್ಮಲ್ಲಿ ಸಂಯೋಗ ಹೊಂದಿ "ತ್ರ್ಯಣುಕ" ಎಂಬ ಘಟಕ ಫಲಿಸುತ್ತದೆ. ಈ ಘಟಕಕ್ಕೆ ಒಂದು ನಿರ್ದಿಷ್ಟವಾದ ಗಾತ್ರವಿರು ವುದರಿಂದ ಅದು ಇಂದ್ರಿಯಗಳಿಗೆ ಗೋಚರವಾಗುತ್ತದೆ. ಮನೆಯ ಬಾಗಿಲ ಅಥವಾ ಕಿಟಕಿಯ ಕಿಂಡಿಯ ಮೂಲಕ ಬರುತ್ತಿರುವ ಸೂರ್ಯ ರಶ್ಮಿಯಲ್ಲಿ ಕಾಣುವ ದೂಳಿನ ಪದಾರ್ಥಗಳ ಗಾತ್ರವೇ 'ತ್ರ್ಯಣುಕ'ದ ಗಾತ್ರವೆಂದು ಈ ದರ್ಶನದಲ್ಲಿ ಹೇಳಲಾಗಿದೆ.[3] ನಾವು ಪ್ರಪಂಚದಲ್ಲಿ ಕಾಣುವ ಎಲ್ಲ ವಸ್ತುಗಳೂ ಈ 'ತ್ರ್ಯಣುಕ'ಗಳ ಸಂಘಾತ ಅಥವಾ ಒಕ್ಕೂಟವಾಗಿವೆ. ಇದೇ ಸೃಷ್ಟಿ. ಸ್ಪಷ್ಟ ಮಾತುಗಳಲ್ಲಿ ಹೇಳುವುದಾದರೆ: ಅಣುಗಳು 'ದ್ವ್ಯಣುಕ'ವಾಗಿ, ಅನಂತರ 'ತ್ರ್ಯಣುಕ'ವಾಗಿ ವಸ್ತುವಾಗುವುದೇ ಸೃಷ್ಟಿ. ನಾಶವೆಂದರೆ ತ್ರ್ಯಣುಕಗಳಿಂದಾದ ವಸ್ತುಗಳು 'ದ್ವ್ಯಣುಕ'ವಾಗುವುದರ ಮೂಲಕ ಬಿಡಿ ಬಿಡಿಯಾದ ಅಣು ಗಳಾಗುವುದು. ಅಷ್ಟೇ ಹೊರತು ಸಂಪೂರ್ಣ ನಾಶ ಎಂಬುದಿಲ್ಲ. ವಸ್ತು ರೂಪಾಂತರ ಹೊಂದ ಬಹುದು ; ಆದರೆ ವಸ್ತುಗಳಿಗೆ ಮೂಲವಾದ ಅಣುಗಳಿಗೆ ನಾಶವಿಲ್ಲ ; ಅವು ಅವಿನಾಶಿಯಾದವು, ಅನಂತವಾದವು ಎಂದು ಈ ದರ್ಶನ ಸಾರುತ್ತದೆ. ಹೀಗೆ ಅಣುಗಳಲ್ಲಿ ಉಂಟಾಗುವ ಪ್ರಥಮ ಚಲನೆಗೆ ಕಾರಣ ಜೀವಿಗಳ ಪಾಪಪುಣ್ಯಗಳು ಮತ್ತು ಅದೃಷ್ಟ; ದೇವರೇನಲ್ಲ—ಎಂಬುದು ಕಣಾದರ ಸ್ಪಷ್ಟ ಅಭಿಪ್ರಾಯ.

'ಕಣಾದ ಸೂತ್ರಗಳ' ಭಾಷ್ಯಕಾರರಾದ ಪ್ರಶಸ್ತಪಾದರು ಈ ದರ್ಶನಕ್ಕೆ ಆಸ್ತಿಕತೆಯ ಬಣ್ಣವನ್ನು ತುಂಬಿದ್ದಾರೆ.[4] ವೇದಗಳ ಜನಕರು ಋಷಿಗಳೆಂದು ಕಣಾದರಂತೆ ಪ್ರಶಸ್ತಪಾದರು ಒಪ್ಪಿದರೂ, ಈ ಜಗತ್ತಿನ ಸೃಷ್ಟಿಗೆ ಒಬ್ಬ ಸರ್ವಶಕ್ತನಾದ ದೇವರೇ ಕಾರಣನೆಂದು ವಾದಿಸು ತ್ತಾರೆ. ಜಗತ್ತಿನ ಸೃಷ್ಟಿ ದೇವರ ಇಚ್ಛೆಗೆ ಒಳಪಟ್ಟಿದ್ದು; ಅವನ ಇಚ್ಛೆಗೆ ಅನುಗುಣವಾಗಿಯೇ ಕಾಲಕಾಲಕ್ಕೆ ಜಗತ್ತಿನ ಸೃಷ್ಟಿ ಪ್ರಳಯಗಳಾಗುತ್ತವೆ.[5] ಮೋಕ್ಷವನ್ನು ಕೊಡುವವನೂ ಈಶ್ವರನೇ. ಅವನು ಮಾನವನಲ್ಲಿ ಧರ್ಮ ಬುದ್ಧಿಯನ್ನು ಪ್ರಚೋದಿಸುವುದರ ಮೂಲಕ ಮೋಕ್ಷಾಕಾಂಕ್ಷಿ ಗಳಾಗುವಂತೆ ಮಾಡುತ್ತಾನೆ. ಈಶ್ವರ ಜಗತ್ತಿಗೆ ನಿಮಿತ್ತ ಕಾರಣ ; ಅಣುಗಳು ಉಪಾದಾನ ಕಾರಣ. ಜೀವಿಗಳ ಪಾಪಪುಣ್ಯಗಳು ಸಹಕಾರಿ ಕಾರಣ, ಎಂದು ಪ್ರಶಸ್ತಪಾದರು ಸ್ಪಷ್ಟವಾಗಿ ಬರೆಯುತ್ತಾರೆ. ಹೀಗೆ ಮೊದಲು ನಾಸ್ತಿಕ ದರ್ಶನ ಎಂದು ಕರೆಯಲ್ಪಡುತ್ತಿದ್ದ ವೈಶೇಷಿಕ ಈಗ ಆಸ್ತಿಕ ದರ್ಶನವಾಗುತ್ತದೆ.

೨

ಪ್ರಾಚೀನ ಗ್ರೀಕರ ತತ್ತ್ವಶಾಸ್ತ್ರದಲ್ಲೂ ಅಣುವಾದದ ಚರ್ಚೆ ನಡೆದಿದೆ. ಅವರಲ್ಲಿ ಮೊತ್ತ ಮೊದಲಿಗೆ ಅಣುವಾದವನ್ನು ಪ್ರತಿಪಾದಿಸಿದವರು ಲೂಸಿಪಸ್ ಮತ್ತು ಡೆಮಾಕ್ರೈಟಸ್ ಎಂಬ

---

[3] ಅದೇ, ಪು. 198

[4] ಅದೇ, ಪು. 199

[5] ಎ. ಬಿ. ಕೀತ್: *Indian Logic and Atomism* (Greenwood Press, 1968), ಪು. 215, 216

ಜ್ಞಾನಿದ್ವಯರು. ಇವರಿಬ್ಬರೂ ಪಾಶ್ಚಾತ್ಯ ಪ್ರಾಚೀನ ತತ್ತ್ವಶಾಸ್ತ್ರದಲ್ಲಿ ಸಾಮಾನ್ಯವಾಗಿ ಒಟ್ಟೊಟ್ಟಿಗೇ ಹೇಳಿಸಲ್ಪಡುತ್ತಾರೆ. ಲೂಸಿಪಸ್ ಬಹಳ ಕಾಲ ಇದ್ದಂತೆ ಕಂಡುಬರುವುದಿಲ್ಲ. ಆತನ ಬಗ್ಗೆ ನಮಗೆ ಈಗ ಉಪಲಬ್ಧವಾಗುವುದು ಅಲ್ಪ ಸಮಾಚಾರವೇ ಸರಿ. ಆತ ಜೀನೋ ಎಂಬುವನ ಶಿಷ್ಯನಾಗಿದ್ದ. ಡೆಮಾಕ್ರೈಟಸನ ಕಾಲ ಕ್ರಿ. ಪೂ ಸುಮಾರು 460–370. ಡೆಮಾಕ್ರೈಟಸ್ ಅಪ್ರತಿಮ ಜ್ಞಾನಿಯಾಗಿದ್ದ. ಅವನು ಸಾಹಸಪ್ರಿಯ; ಪ್ರವಾಸಾಪೇಕ್ಷಿ. ಅನೇಕ ದೇಶಗಳ ಪ್ರವಾಸ ಕೈಗೊಂಡು, ಪರಿಪಕ್ವವಾದ ಅನುಭವವನ್ನು ಪಡೆದಿದ್ದ. ಅವನು ಅದ್ವಿತೀಯ ಗಣಿತಜ್ಞನೂ ಆಗಿದ್ದ.

ಈ ಜ್ಞಾನಿದ್ವಯದ ಪ್ರಕಾರ ಅಣುಗಳು ಬಹಳ ಸೂಕ್ಷ್ಮವಾದ, ಪುನಃ ವಿಭಜಿಸಲಾಗದ, ಇಂದ್ರಿಯಗಳಿಗೆ ಗೋಚರವಾಗದ, ಅತ್ಯಂತ ಮೂಲಭೂತವಾದ ಪದಾರ್ಥಗಳಾಗಿವೆ(particles). ಅವು ಅಪರಿಮಿತ ಮತ್ತು ನಿತ್ಯ. ಒಂದು ಅಣುವಿನ ರೂಪ ಮತ್ತು ಗಾತ್ರ ಇನ್ನೊಂದರ ರೂಪ ಮತ್ತು ಗಾತ್ರದಿಂದ ಭಿನ್ನವಾಗಿರುತ್ತದೆ. ಆದರೆ ಎಲ್ಲ ಅಣುಗಳು ಒಂದೇ ತೆರನಾಗಿರುತ್ತವೆ. ಈ ಅಣುಗಳಿಗೆ ಚಲನಶಕ್ತಿ ಎಂಬುದು ನೈಜವಾದುದು, ಅವುಗಳ ಸ್ವರೂಪ.[6] ಇವು ಯಾವಾಗಲೂ ಚಲನ ಸ್ಥಿತಿಯಲ್ಲೇ ಕಂಡುಬರುತ್ತವೆ; ಇವುಗಳಿಗೆ ವಿಶ್ರಾಂತಿ ಎಂಬುದೇ ಇಲ್ಲ. ಇವು ಅವಿಭಾಜ್ಯ ಮತ್ತು ನಿತ್ಯ; ಇವು ಪರಿಣಾಮರಹಿತವಾದವು; ಇವುಗಳಿಗೆ ಹರಡುವ ಶಕ್ತಿ ಉಂಟು; ಇವು ಭಾರವಾದವು: ಇವು ಗಣಿತಶಾಸ್ತ್ರದ ಬಿಂದುಗಳಂತಲ್ಲ: ಇವು ಎಂದೆಂದಿಗೂ ತಾವಿರುವ ಸ್ಥಿತಿಯಲ್ಲೇ ಇರುತ್ತವೆ; ಇವು ನಾಶರಹಿತವಾದವು.

ಅಣುಗಳು ಗುಣರಹಿತವಾದವುಗಳಾಗಿವೆ. ಅವುಗಳಲ್ಲಿ ಯಾವ ಗುಣಗಳೂ ಇಲ್ಲ. ನಾವು ಅನುಭವಿಸುವ ವಸ್ತುಗಳು ಅವುಗಳಿಂದ ಮಾಡಲ್ಪಟ್ಟಿವೆ. ವಸ್ತುಗಳಿಗೆ ಗುಣಧರ್ಮಗಳಿವೆ ಎಂಬುದು ನಮ್ಮ ಅನುಭವಕ್ಕೆ ಬಂದ ವಿಷಯ. ವಸ್ತುಗಳ ಈ ಗುಣಧರ್ಮಗಳಿಗೆ ಆ ವಸ್ತುವಿನಲ್ಲಿರುವ ಅಣುಗಳ ಸ್ಥಿತಿ ಮತ್ತು ವ್ಯವಸ್ಥೆ ಕಾರಣವೇ[7] ಹೊರತು ಅವಕ್ಕೆ ಯಾವ ಗುಣಗಳೂ ಇಲ್ಲ. ಈ ಅಣುಗಳಿಗೆ ತೂಕ ಇದೆಯೆ ಇಲ್ಲವೇ ಎಂಬುವದರಲ್ಲಿ ಸಂಶಯವಿದೆ. ಡೆಮಾಕ್ರೈಟಸ್ ಅವಕ್ಕೆ ತೂಕ ಇದೆ ಎಂದು ಹೇಳಿದಂತೆ ಕಂಡುಬರುವುದಿಲ್ಲ. ಅವಕ್ಕೆ ತೂಕ ಇದೆ ಎಂಬ ವಿಚಾರ ಡೆಮಾಕ್ರೈಟಸನ ಬಳಿಕ ಬಂದ ಎಪಿಕ್ಯೂರಿಯನರ ಹೇಳಿಕೆ ಎಂದು ಪಾಶ್ಚಾತ್ಯ ತಾತ್ತ್ವಿಕ ಬರಹಗಾರನಾದ ಬರ್ನೆಟ್ಟನ ಅಭಿಪ್ರಾಯ.[8] ಅಣುವಾದದ ಜನಕದ್ವಯರಿಗೆ ಗುರುತ್ವಾಕರ್ಷಣ ಬಲವಂತೂ ತಿಳಿದೇ ಇರಲಿಲ್ಲ ಎಂದೂ ಬರ್ನೆಟ್ ಬರೆಯುತ್ತಾನೆ. ಅವು ಪರಸ್ಪರ ಸಂಪರ್ಕದಿಂದ ಸ್ಥಳಾಂತರಗೊಳ್ಳುತ್ತವೆ. ಅವುಗಳ ನೈಜವಾದ ಚಲನಶಕ್ತಿಯಿಂದ ಅವು ಪರಸ್ಪರ ಸಂಧಿಸುತ್ತವೆ ಹಾಗೂ ವಿಯೋಗ ಹೊಂದುತ್ತವೆ. ಅವುಗಳ ಈ ಚಲನ ಶಕ್ತಿಯು ಕಲ್ಪನೆ ಸಂದಿಗ್ಧ

[6] ಆರ್. ಆಡಮ್ಸನ್ : *The Development o Greek Philosophy*, ಪು. 62

[7] ನೋಡಿ : ಡಬ್ಲ್ಯೂ. ಟಿ. ಸ್ಟೇಸ್ : *A Critical Study of Greek Philo-ophy*, ಪು. 88

[8] ಅದೇ ಪು. 89

ವಾಗಿದೆ. ಅವು ಸಂಯೋಗ ಹೊಂದಬೇಕು ಇಲ್ಲವೇ ವಿಯೋಗ ಹೊಂದಬೇಕು ಎಂಬುವಕ್ಕೆ ಅವುಗಳ ಆಂತರಿಕ ಅವಶ್ಯಕತೆಯೇ ಕಾರಣ ಎಂದೂ ವಿವರಿಸಲಾಗಿದೆ.

ಲೂಸಿಪಸ್ ಮತ್ತು ಡೆಮಾಕ್ರೈಟಸ್—ಇವರ ಪ್ರಕಾರ 'ಅಣುಗಳು' ಒಂದು ಆತ್ಯಂತಿಕ ಸತ್ಯವಾದರೆ, ಶೂನ್ಯ ಪ್ರದೇಶ (empty space) ಇನ್ನೊಂದು ಆತ್ಯಂತಿಕ ಸತ್ಯ. ಶೂನ್ಯ ಪ್ರದೇಶವೆಂಬುದೊಂದು ಇರಲೇಬೇಕೆಂದು ಡೆಮಾಕ್ರೈಟಸ್ ಹೀಗೆ ವಾದಿಸುತ್ತಾನೆ. ಅಣುಗಳಿಗೆ ಚಲನೆ ಸ್ವಯಂಸಿದ್ಧವಾದುದು. ಅಣುಗಳು ಅತಿಶಯ ವೇಗದಿಂದ ಯಾವಾಗಲೂ ಚಲಿಸುತ್ತಿರುತ್ತವೆ. ಹೀಗೆ ಅವು ಚಲಿಸಲು ಸಾಧ್ಯವಾಗಬೇಕಾದರೆ ಶೂನ್ಯ ಪ್ರದೇಶ ಒಂದು ಇರಲೇಬೇಕು. ಈ ಶೂನ್ಯ ಪ್ರದೇಶದಲ್ಲೇ ಅಣುಗಳು ಚಲಿಸುತ್ತವೆ ಎಂದು ಡೆಮಾಕ್ರೈಟಸ್‌ನ ಸ್ಪಷ್ಟ ನಂಬಿಕೆ. ಅಭಾವಾತ್ಮಕವಾದ ಈ ಶೂನ್ಯ ಪ್ರದೇಶ ಭಾವಾತ್ಮಕಗಳಾದ ಅಣುಗಳಷ್ಟೇ ಸತ್ಯವಾದುದು.

ನಾವು ಕಾಣುವ ವಸ್ತುಗಳು, ನಮ್ಮ ಅನುಭವಕ್ಕೆ ಬರುವ ಜಗತ್ತು—ಇವುಗಳ ಉತ್ಪತ್ತಿಯನ್ನು ಡೆಮಾಕ್ರೈಟಸ್ ಈ ರೀತಿ ವಿವರಿಸುತ್ತಾನೆ. ಅಣುಗಳ ತೂಕ ಅವುಗಳ ಗಾತ್ರಗಳಿಗೆ ಅನುಗುಣವಾಗಿರುತ್ತದೆ. ಭಾರವಾದ ಅಣುಗಳು ಒಪಳ ವೇಗದಿಂದ ಕೆಳಕೆ) ಬೀಳುತ್ತವೆ. ಇವುಗಳ ಶೀಘ್ರ ಪತನದಿಂದ ಲಘುತರವಾದ ಅಣುಗಳು ಮೇಲಕ್ಕೆ ಎಸೆಯಲ್ಪಡುತ್ತವೆ. ಹೀಗೆ ಮೇಲಿನಿಂದ ಬೀಳುತ್ತಿರುವ ಭಾರವಾದ ಅಣುಗಳಿಗೂ ಕೆಳಗಿನಿಂದ ಮೇಲಕ್ಕೆ ಎಸೆಯಲ್ಪಟ್ಟ ಅಣುಗಳಿಗೂ ನಡುವೆ ಘರ್ಷಣೆ ಉಂಟಾಗಿ ಸುಳಿಯಾಕಾರದ ಚಲನೆಯೊಂದು ಉತ್ಪತ್ತಿಯಾಗುತ್ತದೆ. ಈ ಚಲನೆ (centripetal forcc) ಸಮತೂಕದ ಅಣುಗಳು ಒಂದೇ ಕಡೆ ಸೇರುವಂತೆ ಮಾಡುತ್ತದೆ. ಹೀಗೆ ಒಂದೇ ಕಡೆ ಸೇರಿದ ಭಾರವಾದ ಅಣುಗಳು ಮೊದಲು ವಾಯು ಎಂದೂ ಅನಂತರ ನೀರೆಂದೂ ತದನಂತರ ಘನವಾದ ಭೂಮಿಯೆಂದೂ ಕರೆಸಿಕೊಳ್ಳುತ್ತವೆ. ಲಘುತರವಾದ ಅಣುಗಳು ಅಗ್ನಿ ಆಕಾಶಗಳೆಂದು ಕರೆಸಿಕೊಳ್ಳುತ್ತವೆ. ಹೀಗೆ ಪ್ರಪಂಚ ಸೃಷ್ಟಿ ಆಗುತ್ತದೆ. ಅಣುಗಳು ಅಪರಿಮಿತವಾದುದರಿಂದ ಅವುಗಳಿಂದ ಸೃಷ್ಟಿಸಲ್ಪಡುವ ಲೋಕಗಳೂ ಅಗಣಿತ. ಡೆಮಾಕ್ರೈಟಸನ ಅಣುಗಳಿಗೆ ನಿರ್ದಿಷ್ಟವಾದ ದಿಕ್ಕುದೆಸೆಗಳಾಗಲಿ ಗುರಿ ಉದ್ದೇಶಗಳಾಗಲಿ ಇಲ್ಲ. ಅವು ಸದಾ ಚಲನೆಯಿಂದ (ಅಪರಿಮಿತ ವೇಗದಿಂದ) ಯದ್ವಾತದ್ವಾ ಶೂನ್ಯ ಪ್ರದೇಶದಲ್ಲಿ ಸಂಚರಿಸುತ್ತಿರುತ್ತವೆ.

ಲೂಸಿಪಸ್ ಮತ್ತು ಡೆಮಾಕ್ರೈಟಸ್ ಪ್ರಚಂಡ ನಿಯಂತ್ರಣವಾದಿಗಳು (Determinists). ಅವರ ಪ್ರಕಾರ ಜಗತ್ತಿನ ಪ್ರತಿಯೊಂದು ಕಾರ್ಯವೂ ನಿಯಮಬದ್ಧವಾಗಿದೆ. ಪ್ರತಿಯೊಂದು ಕಾರ್ಯದ ಚಲನವಲನಗಳು, ಸ್ಥಿತಿ-ಗತಿಗಳು ಪ್ರಕೃತಿಯ ಸ್ವಾಭಾವಿಕ ನಿಯಮಗಳಿಗನುಗುಣವಾಗಿ ಚಾಚೂ ತಪ್ಪದೆ ನಡೆಯುತ್ತವೆ. ಜಗತ್ತಿನ ಘಟನೆಗಳಿಗೆ ಸ್ವಾತಂತ್ರ್ಯವೆಂಬುದಿಲ್ಲ. ಪ್ರಕೃತಿಯ ನಿಯಮಗಳನ್ನು ಅವು ಯಾವಾಗಲೂ ಶಿರಸಾವಹಿಸಿ ನಡೆಯುತ್ತವೆ. ಪ್ರಪಂಚದಲ್ಲಿ ಆಕಸ್ಮಿಕ (chance) ಎಂಬುದಿಲ್ಲ ; ಎಲ್ಲವೂ ನಿಯಮಬದ್ಧ.

ಪ್ರತ್ಯಕ್ಷ ಜ್ಞಾನದ ಉತ್ಪತ್ತಿಯನ್ನು ಡೆಮಾಕ್ರೈಟಸ್ ತನ್ನ ಅಣುವಾದದ ಮೂಲಕವೇ ವಿವರಿಸುತ್ತಾನೆ. ಆತನ ಪ್ರಕಾರ ಅಣುಗಳಿಂದ ಮಾಡಲ್ಪಟ್ಟಿರುವ ವಸ್ತುಗಳು ತಮ್ಮ ಛಾಯೆಗಳನ್ನು ಹೊರಕ್ಕೆಸೆಯುತ್ತವೆ. ಹೀಗೆ ವಸ್ತುಗಳಿಂದ ಎಸೆಯಲ್ಪಟ್ಟ ಛಾಯೆಗಳು ಮಾನವನ

ಇಂದ್ರಿಯಗಳನ್ನು ಸ್ಪರ್ಶಿಸಿದಾಗ ಆ ವಸ್ತುಗಳ ಅರಿವಾಗುತ್ತದೆ. ವಸ್ತುಗಳಿಗೆ ಬಣ್ಣಗಳಾಗಲಿ ವಾಸನೆಯಾಗಲಿ ರುಚಿಯಾಗಲಿ ಇಲ್ಲ. ವಸ್ತುವಿನ ಛಾಯೆ ಮತ್ತು ಮಾನವನ ಇಂದ್ರಿಯಗಳ ನಡುವಿನ ಕೂಟವಾದಾಗ ವಸ್ತುಗಳ ಬಣ್ಣ, ರುಚಿ, ವಾಸನೆಯ ಅನುಭವವಾಗುತ್ತದೆ ಅಷ್ಟೆ. ಆದರೆ ವಸ್ತುಗಳು ಸಕಲಗುಣರಹಿತವಾದವು ಎಂದು ಡೆಮಾಕ್ರೈಟಸ್ ವಾದಿಸುತ್ತಾನೆ. 'ವಸ್ತುಗಳ ಪ್ರಾತಿನಿಧಿಕ ಪ್ರತ್ಯಕ್ಷವಾದ'ವನ್ನು (representative theory of perception) ಬೋಧಿಸಿ ಪ್ರಚಾರಪಡಿಸಿದ ಅನುಭವವಾದಿಯಾದ ಜಾನ್ ಲಾಕನ ಮೇಲೆ ಡೆಮಾಕ್ರೈಟಸನ ಪ್ರಭಾವವಾಗಿದೆ ಎಂಬುದನ್ನು ಇದರಿಂದ ಸ್ಪಷ್ಟವಾಗಿ ಊಹಿಸಬಹುದು.

೩

ಈಗ ಜೈನದರ್ಶನದಲ್ಲಿ ಪ್ರತಿಪಾದಿತವಾಗಿರುವ ಅಣುವಾದವನ್ನು ತಿಳಿಯೋಣ. ಅಣುಗಳು ತಮ್ಮ ತಮ್ಮಲ್ಲೇ ಭೇದವನ್ನು ತೋರ್ಪಡಿಸುತ್ತವೆ ಎಂಬ ನ್ಯಾಯ ವೈಶೇಷಿಕ ದರ್ಶನದ ಅಭಿಪ್ರಾಯವನ್ನು ಜೈನ ಧರ್ಮ ಒಪ್ಪುವುದಿಲ್ಲ. ಎಲ್ಲ ರೀತಿಯ ಅಣುಗಳು ಒಂದೇ ತೆರನಾದವು ಎಂದು ಲೂಸಿಪಸ್ ಮತ್ತು ಡೆಮಾಕ್ರೈಟಸ್ ನಂಬಿದಂತೆ, ಜೈನದರ್ಶನವೂ ನಂಬುತ್ತದೆ. ಆದರೂ ನಾವು ವಸ್ತುಗಳಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಈ ಭಿನ್ನತೆಗೆ ಅಣುಗಳು ಬೇರೆ ಬೇರೆ ಪ್ರಮಾಣದಲ್ಲಿ ಸಂಯೋಗ ಹೊಂದಿರುವುದು ಕಾರಣವೇ ಹೊರತು ಅಣುಗಳಲ್ಲೇ ಪರಸ್ಪರ ವ್ಯತ್ಯಾಸಗಳಿಲ್ಲ. ಅಣುಗಳಿಗೆ ಕೊನೆ ಇಲ್ಲ ; ಮೊದಲಿಲ್ಲ : ಮಧ್ಯಸ್ಥಿತಿಯೂ ಇಲ್ಲ. ಅವು ನಿತ್ಯ, ಅತ್ಯಂತಿಕ ಹಾಗೂ ಅವಿಭಾಜ್ಯ. ಅವು ಅಮೂರ್ತವಾದವುಗಳು. ಅಣುಗಳಿಗೆ ತೂಕ ಇದೆ. ಪ್ರತಿಯೊಂದು ಅಣುವೂ ಆಕಾಶದಲ್ಲಿ ಒಂದು ಬಿಂದುವನ್ನು ಆಕ್ರಮಿಸುತ್ತದೆ. ಪ್ರತಿಯೊಂದು ಅಣುವಿಗೂ ಬಣ್ಣ, ವಾಸನೆ, ಸ್ಪರ್ಶ ಮತ್ತು ರುಚಿ ಎಂಬ ಗುಣಗಳಿವೆ. ಅಣುಗಳು ಆಕರ್ಷಣೆ ಮತ್ತು ವಿಕರ್ಷಣೆಗಳನ್ನು ತೋರಿಸುತ್ತವೆ[9] ಎಂದು ಜೈನಧರ್ಮ ನಂಬುತ್ತದೆ. ಅಣುಗಳ ಚಲನೆಯು ಆಕಾರ, ಧರ್ಮ ಮತ್ತು ಅಧರ್ಮಗಳಿಂದ ಪ್ರಾರಂಭಿಸಲ್ಪಡುತ್ತದೆ.[10]

ವಸ್ತುಗಳು ಅಣುಗಳ ಸಂಘಾತ ಇಲ್ಲವೆ ಸ್ಕಂಧಗಳಾಗಿರಬಹುದು. ಜಗತ್ತಿನಲ್ಲಿ ಆಗುವ ಬದಲಾವಣೆ, ಪರಿವರ್ತನೆಗಳಿಗೆ, ಅಣುಗಳ ಸಂಯೋಗ ವಿಯೋಗಗಳೇ ಕಾರಣ. ಭಾರವಾದ ಅಣುಗಳು ಅಧೋಮುಖವಾಗಿ ಪ್ರಯಾಣ ಬೆಳೆಸುತ್ತವೆ ; ಲಘುತರವಾದ ಅಣುಗಳು ಊರ್ಧ್ವ ಮುಖವಾಗಿ ಚಲಿಸುತ್ತವೆ.

ಅಣುಗಳು ಸ್ವಭಾವದಲ್ಲಿ ನಿಯತವಾದವುಗಳಲ್ಲ. ಅವು ಬದಲಾಯಿಸುತ್ತಿರುತ್ತವೆ. ಪರಿಣಾಮವನ್ನು ಹೊಂದುತ್ತಿರುತ್ತವೆ. ಅವು ಪರಿಣಾಮದಲ್ಲಿ ಹೊಸ ಹೊಸ ರೂಪಗಳನ್ನು ಸಂಪಾದಿಸುತ್ತವೆ.[11]

೪

ಈಗ ಮೂರೂ ದರ್ಶನಗಳಲ್ಲಿ ಚರ್ಚಿತವಾಗಿರುವ "ಅಣು ವಾದದ" ತೌಲನಿಕ ಅಭ್ಯಾಸವನ್ನು ಮಾಡೋಣ. ನ್ಯಾಯ ವೈಶೇಷಿಕ ದರ್ಶನದಲ್ಲಿ ಚರ್ಚಿತವಾಗಿರುವ ಅಣುವಾದಕ್ಕೂ

---

9 ಎಸ್. ರಾಧಾಕೃಷ್ಣನ್ : *Indian Philosophy*, Vol. I, ಪು. 318

10 ಅದೇ, ಪು. 318

11 ಅದೇ, ಪು. 318

ಲೂಸಿಪಸ್ ಮತ್ತು ಡೆಮಾಕ್ರೈಟಸರ ಅಣುವಾದಕ್ಕೂ ಈ ವ್ಯತ್ಯಾಸಗಳಿವೆ :

ನ್ಯಾಯವೈಶೇಷಿಕ ದರ್ಶನದ ಅಣುಗಳು ಭೌತಿಕ ಹಾಗೂ ಜಡವಾದರೂ ಅವನ್ನೂ ಆಧ್ಯಾತ್ಮಿಕವಾದವು ಎಂದು ಕರೆಯುವುದು ರೂಢಿ. ಅಣುಗಳು ಅನಾದಿಕಾಲದಿಂದಲೂ ಆಧ್ಯಾತ್ಮ ವಸ್ತುವಾದ ಆತ್ಮದಂತೆ ಸ್ವತಂತ್ರವಾಗಿ ಅಸ್ತಿತ್ವದಲ್ಲಿ ಇರುವುದರಿಂದ ಅಣುಗಳು ಮುಖ್ಯತಃ ಆಧ್ಯಾತ್ಮಿಕವಾದವು ಎಂದು ಈ ದರ್ಶನದಲ್ಲಿ ಹೇಳಲಾಗಿದೆ. ಈ ದರ್ಶನದ ಅಣುಗಳಿಗೆ ಚಲನೆ ಇಲ್ಲ ; ಚಲನೆ ಅವುಗಳ ಸ್ವರೂಪವಲ್ಲ.

ಆದರೆ ಡೆಮಾಕ್ರೈಟಸನ ವಾದದಲ್ಲಿ ಅಣುಗಳು ಜಡ ಹಾಗೂ ಭೌತಿಕವಾದರೂ ಚಲನೆ ಅವುಗಳಿಗೆ ಸ್ವಯಂಸಿದ್ಧವಾದುದು. ಅವುಗಳು ಅನುದಿನವೂ ಬಹಳ ವೇಗದಿಂದ ಯದ್ವಾತದ್ವಾ ಗೊತ್ತುಗುರಿಯಿಲ್ಲದೆ ಚಲಿಸುತ್ತಿರುತ್ತವೆ. ಅವುಗಳಿಗೆ ವಿಶ್ರಾಂತಿ ಎಂಬುದೇ ಇಲ್ಲ.

ನ್ಯಾಯವೈಶೇಷಿಕ ದರ್ಶನದ ಪ್ರಕಾರ ಅಣುಗಳಲ್ಲಿ ಪ್ರಥಮಚಲನೆ ಉಂಟಾಗುವುದಕ್ಕೆ ಜೀವಿಗಳ ಪಾಪ ಪುಣ್ಯಗಳು ಮತ್ತು ಅದೃಷ್ಟ ಕಾರಣ. ಅವು ಸ್ವತಃ ಅಚೇತನಗಳಾದ್ದರಿಂದ ಜೀವಿಗಳ ಪಾಪ ಪುಣ್ಯ ಮತ್ತು ಅದೃಷ್ಟವನ್ನು ಆಧಾರವಾಗಿಟ್ಟುಕೊಂಡು, ಅವುಗಳಲ್ಲಿ ಚಲನೆಯನ್ನು ಪ್ರಾರಂಭಿಸಿ ಅವು ಸಂಯೋಗ ವಿಯೋಗ ಹೊಂದುವಂತೆ ಮಾಡುವ ಚೇತನ ತತ್ತ್ವ ಒಂದಿರಬೇಕು. ಆ ಚೇತನ ತತ್ತ್ವವೇ ಈಶ್ವರ ಅಥವಾ ದೇವರು ಎಂದು ವೈಶೇಷಿಕದ ಭಾಷ್ಯಕಾರರಾದ ಪ್ರಶಸ್ತಪಾದರು ಅಭಿಪ್ರಾಯಪಡುತ್ತಾರೆ. ಅಂದರೆ ಪ್ರಪಂಚದ ಸೃಷ್ಟಿ ಈಶ್ವರೇಚ್ಛೆ.

ಡೆಮಾಕ್ರೈಟಸ್ ದೇವರನ್ನು ನಂಬಿದರೂ ದೇವರು ಅಣುಗಳ ಚಲನೆಗೆ ಕಾರಣನೆಂದಾಗಲಿ, ಅಣುಗಳನ್ನು ಘರ್ಷಣೆ ಮಾಡಿಸುವವನೆಂದಾಗಲಿ ನಂಬುವುದಿಲ್ಲ. ಅಣುಗಳು ಸ್ವಭಾವತಃ ಚಲನೆಯುಳ್ಳದ್ದರಿಂದ, ಅವು ಇತರ ಅಣುಗಳೊಂದಿಗೆ ಘರ್ಷಣೆ ನಡೆಸಿ ಆಯಾ ವಸ್ತುಗಳು ಉತ್ಪತ್ತಿಯಾಗುತ್ತವೆಂದು, ಅದು ಕೇವಲ ಭೌತಿಕವಾದುದೆಂದು, ದೇವರು ಪ್ರಪಂಚದ ಸೃಷ್ಟಿಗೆ ಅನಾವಶ್ಯಕ ಎಂದು ಡೆಮಾಕ್ರೈಟಸ್ ಹೇಳುತ್ತಾನೆ.

ಅಂದರೆ ಡೆಮಾಕ್ರೈಟಸನ ಅಣುವಾದ ಆಧುನಿಕ ವಿಜ್ಞಾನ ಪ್ರತಿಪಾದಿಸಿರುವ ಅಣುವಾದಕ್ಕೆ ತೀರ ಹತ್ತಿರವಾಗಿದೆ. ಆಧುನಿಕ ವಿಜ್ಞಾನದಂತೆ ಅಣುಗಳು ಅತಿವೇಗದಿಂದ ಗೊತ್ತುಗುರಿ ಇಲ್ಲದೆ ಚಲಿಸುತ್ತಿರುತ್ತವೆ ಎಂದು ಹೇಳುವ ಡೆಮಾಕ್ರೈಟಸನ ವಿವರಣೆ ಗಮನೀಯವಾದುದು. " The theory of the atomists, in fact, was more nearly that of modern science than any other theory propounded in antiquity".[12] ಆದರೆ ಡೆಮಾಕ್ರೈಟಸನ ಅಣುವಾದಕ್ಕೂ, ವಿಜ್ಞಾನದ ಅಣುವಾದಕ್ಕೂ ಇರುವ ಒಂದು ವ್ಯತ್ಯಾಸವೆಂದರೆ : ಆಧುನಿಕ ವಿಜ್ಞಾನ ಶೂನ್ಯಪ್ರದೇಶವನ್ನು ನಂಬುವುದಿಲ್ಲ. ವಿಜ್ಞಾನಿಯು ದ್ರವ್ಯ (Matter) ತನ್ನ ಅತ್ಯಂತಿಕ ಸ್ಥಿತಿಯಲ್ಲಿ ಅಣುಪ್ರಮಾಣ ಎಂದು ನಂಬಿದರೂ ದ್ರವ್ಯವಿಲ್ಲದ ಕಡೆ ಶೂನ್ಯಪ್ರದೇಶ ಎಂಬುದಿಲ್ಲ ; ಅಲ್ಲಿ ಬೆಳಕಿನ ಅಲೆಗಳು (Light waves) ಇರುವುವು.[13] ಆಧುನಿಕ ವಿಜ್ಞಾನ ಮತ್ತು ಡೆಮಾಕ್ರೈಟಸನ ನಡುವೆ ಏನೇ

---

12 ಬರ್ಟ್ರೆಂಡ್ ರಸಲ್, *History of Western Philosophy* (George Allen & Unwin) ಪು. 84

13 ಅದೇ, ಪು. 87

ವ್ಯತ್ಯಾಸಗಳಿರಲಿ, ಆಧುನಿಕ ಅಣುವಾದ ಡೆಮಾಕ್ರಿಟಸನಿಂದ ಸ್ಫೂರ್ತಿ ಮತ್ತು ಬಲವನ್ನು ಪಡೆದಿದೆ ಎಂಬುದರಲ್ಲಿ ಎಳ್ಳಷ್ಟು ಸಂಶಯ ಇಲ್ಲ.

ಅಣುಗಳಿಗೆ ತೂಕವಿದೆಯೆ ಎಂಬ ವಿಚಾರದಲ್ಲಿ ಡೆಮಾಕ್ರಿಟಸನ ಸ್ಪಷ್ಟ ಅಭಿಪ್ರಾಯವನ್ನು ಗುರುತಿಸುವುದು ಕಷ್ಟಸಾಧ್ಯವಾದ ಕೆಲಸ. ಡೆಮಾಕ್ರಿಟಸ್ ಅಣುಗಳಿಗೆ ತೂಕ ಇದೆ ಎಂದು ನಂಬಿರಲಿಲ್ಲವೆಂದೂ, ಮುಂದೆ ಬಂದ ಎಪಿಕ್ಯೂರಿಯನರು ಅಣುಗಳಿಗೆ ತೂಕ ಇದೆ ಎಂದು ಪ್ರತಿಪಾದಿಸಿದರೆಂದೂ ಪಾಶ್ಚಾತ್ಯ ವಿದ್ವಾಂಸರು ಅಭಿಪ್ರಾಯಪಡುತ್ತಾರೆ.[14] ಅಣುಗಳಲ್ಲಿ ತಮ್ಮ ಆಂತರಿಕ ಆವಶ್ಯಕತೆಗೆ ಅನುಗುಣವಾಗಿ ಚಲನೆಯಿರುತ್ತದೆಂದೂ ಅದಕ್ಕೂ ಅವುಗಳ ತೂಕಕ್ಕೂ ಸಂಬಂಧ ಇಲ್ಲವೆಂದೂ ಡೆಮಾಕ್ರಿಟಸ್ ತಿಳಿದಿದ್ದನೆಂದೂ ಪಾಶ್ಚಾತ್ಯ ವಿದ್ವಾಂಸರು ಬರೆಯುತ್ತಾರೆ.[15]

ನ್ಯಾಯವೈಶೇಷಿಕ ದರ್ಶನದಲ್ಲೂ ಅಣುಗಳಿಗೆ ತೂಕ ಇದೆಯೋ ಎಂಬ ಅಂಶ ಅಸ್ಪಷ್ಟವಾಗಿದೆ. ಆದರೆ ಅಣುಗಳಿಗೆ ಗಾತ್ರವಿದೆ ಎಂಬ ವಿಚಾರದಲ್ಲಿ ತೊಡಕೇನೂ ಇಲ್ಲ.

ಡೆಮಾಕ್ರಿಟಸನ ಪ್ರಕಾರ ಅಣುಗಳು ಗುಣರಹಿತವಾಗಿವೆ, ನಾವು ವಸ್ತುಗಳಲ್ಲಿ ಕಾಣುವ ಗುಣವಿಶೇಷಗಳಿಗೆ ವಸ್ತು ಮತ್ತು ಇಂದ್ರಿಯಗಳ ನಡುವೆ ಆಗುವ ಸಂಪರ್ಕವೇ ಕಾರಣ. ಅಷ್ಟೇ ಏಕೆ ಅಣುಗಳಿಂದ ಮಾಡಲ್ಪಟ್ಟಿರುವ ವಸ್ತುಗಳು ಮೂಲತಃ ನಿರ್ಗುಣವಾದವುಗಳು ಎಂದು ಡೆಮಾಕ್ರಿಟಸ್ ವಾದಿಸುತ್ತಾನೆ. ಆದರೆ ನ್ಯಾಯವೈಶೇಷಿಕ ದರ್ಶನದಲ್ಲಿ ಅಣುಗಳಿಗೆ ಗುಣಧರ್ಮಗಳಿವೆ ಎಂದು ಹೇಳಲಾಗಿದೆ. ನಾಲ್ಕು ವರ್ಗದ ಅಣುಗಳಿದ್ದು, ಒಂದೊಂದು ವರ್ಗಕ್ಕೂ ಒಂದೊಂದು ವಿಶೇಷ ಗುಣವಿರುತ್ತದೆ. ಉದಾ : ವಾಯುವರ್ಗದ ಅಣುಗಳ ವಿಶೇಷ ಗುಣ ಸ್ಪರ್ಶ, ಇತ್ಯಾದಿ. ಇನ್ನೂ ಮುಂದೆ ಹೋಗಿ ಹೇಳಬೇಕೆಂದರೆ, ಪ್ರಪಂಚದ ವಸ್ತುಗಳೆಲ್ಲ ಅಣುರೂಪವಾದ ನಾಲ್ಕು ಭೂತಗಳಿಂದ (ವಾಯು, ತೇಜಸ್ಸು, ನೀರು ಮತ್ತು ಪೃಥ್ವಿ) ಮಾಡಲ್ಪಟ್ಟಿವೆ. ದ್ರವ್ಯ 'ಗುಣಾಶ್ರಯ' ಎಂಬುದು ಈ ದರ್ಶನದ ತೀರ್ಮಾನ.

ಡೆಮಾಕ್ರಿಟಸನ ಪ್ರಕಾರ ಆತ್ಮವೂ ಅಣುಗಳಿಂದ ಮಾಡಲ್ಪಟ್ಟಿದೆ;[16] ಅದು ಆಧ್ಯಾತ್ಮಿಕವಲ್ಲ. ಅಣುಗಳ ಸಂಯೋಗಕ್ರಿಯೆಯೇ ಜೀವ ಅಥವಾ ಆತ್ಮ; ಅವುಗಳ ವಿಯೋಗವೇ ಮರಣ ಎಂಬುದು ಡೆಮಾಕ್ರಿಟಸನ ಅಭಿಮತ. ಅಂದರೆ ಆತನ ಪ್ರಕಾರ ಆತ್ಮವೂ ಭೌತಿಕವಾದುದು.

ಆದರೆ ನ್ಯಾಯವೈಶೇಷಿಕದ ಪ್ರಕಾರ ಆತ್ಮ ಅಣುಗಳಿಂದ ಮಾಡಲ್ಪಟ್ಟಿಲ್ಲ. ಅದು ನಿತ್ಯ ಮತ್ತು ವಿಭು.[17] ಅದು ಭೌತಿಕವಾದುದಲ್ಲ; ಆಧ್ಯಾತ್ಮಿಕವಾದುದು. ತಾನು ಮನಸ್ಸಿನೊಡನೆ ಸಂಪರ್ಕವನ್ನು ಹೊಂದಿರುವ ವರೆಗೆ ಮಾತ್ರ ಅದು ತಿಳಿಯುವ ಶಕ್ತಿಯನ್ನು ಪಡೆದಿರುತ್ತದೆ.

---

14 ಅಡಿಟಿಪ್ಪಣಿಯ ಸಂಖ್ಯೆ 8ನ್ನು ನೋಡಿ.

15 ಆರ್. ಅಡಮ್ಸನ್ : *The Development of Greek Philosophy* ಪು. 61 & 62

16 ಡಬ್ಲ್ಯು. ಟಿ. ಸ್ಟೇಸ್: *A Critical Study of Greek Philosophy*, ಪು. 92

17 ಚಂದ್ರಧರ ಶರ್ಮ: *A Critical Survey of Indian Philosophy*, ಪು. 177

ಈ ಸಂಪರ್ಕ ಕಡಿದು ಹೋದ ತತ್‌ಕ್ಷಣವೇ ಆತ್ಮ ನಿರ್ವಿಕಲ್ಪ ಸ್ಥಿತಿಯನ್ನು ಹೊಂದುತ್ತದೆ. ಸುಖ, ದುಃಖ, ರಾಗ, ದ್ವೇಷ, ಜ್ಞಾನ, ಇಚ್ಛಾ, ಧರ್ಮ, ಅಧರ್ಮ ಮತ್ತು ಭಾವನಾ ಎಂಬ ನವಗುಣಗಳ ಆಶ್ರಯ ಸ್ಥಾನವಾಗಿದೆ, ಆತ್ಮ.

ವಸ್ತುಗಳು ಅಣುಗಳಿಂದ ಹೇಗೆ ಮಾಡಲ್ಪಟ್ಟಿವೆ ಎಂಬ ವಿಚಾರದಲ್ಲೂ ಡೆಮಾಕ್ರೈಟಸ್ ಮತ್ತು ನ್ಯಾಯವೈಶೇಷಿಕ ದರ್ಶನಗಳ ನಡುವೆ ವ್ಯತ್ಯಾಸಗಳಿವೆ. ಸಮತೂಕದ ಅಣುಗಳು ಮೇಲಿನಿಂದ ರಭಸವಾಗಿ ಬೀಳಲ್ಪಡುವುದರ ಮೂಲಕ ಲಘುತೂಕದ ಅಣುಗಳು ಮೇಲಕ್ಕೆಸೆಯಲ್ಪಡುತ್ತವೆ. ಭಾರೀ ತೂಕದ ಅಣುಗಳಿಗೂ ಲಘುತರವಾದ ಅಣುಗಳಿಗೂ ಹೀಗೆ ಘರ್ಷಣೆ ಉಂಟಾಗಿ ವರ್ತುಲಾಕಾರದ ಚಲನೆಯೊಂದು ಉತ್ಪತ್ತಿಯಾಗುತ್ತದೆ. ಈ ಚಲನೆ ಸಮತೂಕದ ಅಣುಗಳನ್ನು ಒಂದೇ ಕಡೆ ಕ್ರೋಢೀಕರಿಸುವುದರ ಮೂಲಕ ಘನ, ದ್ರವ, ಅನಿಲ ವಸ್ತುಗಳಾಗುತ್ತವೆ ಎಂದು ಡೆಮಾಕ್ರೈಟಸ್ ಅಭಿಪ್ರಾಯಪಡುತ್ತಾನೆ.

ಆದರೆ ನ್ಯಾಯವೈಶೇಷಿಕದ ವಿಚಾರವೇ ಬೇರೆ. ಈ ದರ್ಶನದಲ್ಲಿ ಅಣುಗಳು ಸ್ವಭಾವತಃ ಜಡವಾದುದರಿಂದ ತಮ್ಮಷ್ಟಕ್ಕೆ ತಾವೇ ಒಂದಕ್ಕೊಂದು ಸೇರಲಾರವು. ಪರಮಾತ್ಮನ ಇಚ್ಛೆಯಿಂದ ಈ ಅಣುಗಳು ಒಂದಕ್ಕೊಂದು ಸೇರಿಸಲ್ಪಡುತ್ತವೆ.[18] ಮೊದಲು ಒಂದೇ ವರ್ಗದ ಎರಡು ಅಣುಗಳು ಸೇರಿ 'ದ್ವ್ಯಣುಕ'ವಾಗಿ, ಇಂಥ ಮೂರು 'ದ್ವ್ಯಣುಕ'ಗಳು ಸೇರಿ 'ತ್ರ್ಯಣುಕ'ವಾಗಿ ಇಂಥ 'ತ್ರ್ಯಣುಕ'ಗಳಿಂದ ವಸ್ತುಗಳು ಉತ್ಪತ್ತಿಯಾಗುತ್ತವೆ ; ಡೆಮಾಕ್ರೈಟಸ್ ಹೇಳುವಂತೆ ಪರಸ್ಪರ ಘರ್ಷಣೆಯಿಂದ ಅಲ್ಲ. 'ಅಣುವಾದ' ಮುಖ್ಯತಃ ಗ್ರೀಕರ ಕೊಡುಗೆಯೆಂದೂ, ಗ್ರೀಕರಿಂದ ಪ್ರಭಾವಿತರಾದ ಭಾರತೀಯರು ಅಣುವಾದವನ್ನು ತಮ್ಮದೇ ಆದ ರೀತಿಯಲ್ಲಿ ಬೆಳಸಿದರೆಂದೂ, ಅಣುವಾದದ ಮೂಲಸ್ಫೂರ್ತಿ ಮತ್ತು ಪ್ರತಿಪಾದನೆ ಗ್ರೀಕರದ್ದೇ[19] ಎಂದೂ ಬರೆಯುವ ಪ್ರಸಿದ್ಧ ವಿದ್ವಾಂಸನಾದ ಎ. ಬಿ. ಕೀತನ ಅಭಿಪ್ರಾಯವನ್ನು ಅಲ್ಲಗಳೆಯಲು ಮುಖ್ಯ ಆಧಾರ ಅಂಶಗಳು ಭಾರತೀಯ ದರ್ಶನಕ್ಕೆ ಮೀಸಲಾದ 'ದ್ವ್ಯಣುಕ' 'ತ್ರ್ಯಣುಕ' ಭಾವನೆಗಳಾಗಿವೆ. ಮೊದಲು ಒಂದೇ ವರ್ಗದ ಎರಡು ಅಣುಗಳು ಸೇರಿ 'ದ್ವ್ಯಣುಕ'ವಾಗಿ, ಇಂಥ ಮೂರು 'ದ್ವ್ಯಣುಕ'ಗಳು ಸೇರಿ 'ತ್ರ್ಯಣುಕ'ವಾಗಿ ತದನಂತರ ನಾವು ಕಾಣುವ ಸ್ಥೂಲವಸ್ತುಗಳು ಉಂಟಾಗುತ್ತವೆ ಎಂಬ ನ್ಯಾಯವೈಶೇಷಿಕದರ್ಶನದ ವಿಚಾರಧಾರೆ ಗ್ರೀಕರಿಗೆ ಗೊತ್ತೇ ಇರಲಿಲ್ಲವೆಂದೂ, ಆದುದರಿಂದ ನ್ಯಾಯವೈಶೇಷಿಕ ದರ್ಶನದ ಅಣುವಾದ ಅವರದೇ ಆದ ಮೂಲ ಕೊಡುಗೆಯೆಂದೂ, ಅದು ಗ್ರೀಕರ ನಕಲು ಅಲ್ಲವೆಂದೂ, ಮತ್ತೊಬ್ಬ ಪ್ರಸಿದ್ಧ ಜರ್ಮನ್ ತಾತ್ತ್ವಿಕ ಬರಹಗಾರನಾದ ಮ್ಯಾಕ್ಸ್‌ಮುಲ್ಲರ್ ಅಡೆತಡೆಯಿಲ್ಲದೆ ಸ್ಪಷ್ಟವಾಗಿ ಭಾರತೀಯ ದರ್ಶನದ ಸ್ವಂತಿಕೆಯನ್ನು ಎತ್ತಿಹಿಡಿಯುತ್ತಾನೆ.[20]

---

18 ಎ. ಬಿ. ಕೀತ್ : *Indian Logic and Atomism* (Greenwood Press, New York) 1968, ಪು. 18, 214

19 ಅದೇ

20 ಮ್ಯಾಕ್ಸ್‌ಮುಲ್ಲರ್ : *Six systems of Philosophy*, ಪು. 584

ಪ್ರತ್ಯಕ್ಷಜ್ಞಾನದ ಉತ್ಪತ್ತಿಯನ್ನು ಡೆಮಾಕ್ರೈಟಸ್ ತನ್ನ ಅಣುವಾದದಿಂದಲೇ ವಿವರಿಸುತ್ತಾನೆ. ಅಣುಗಳಿಂದ ಮಾಡಲ್ಪಟ್ಟಿರುವ ವಸ್ತುಗಳಿಂದ ಎಸೆಯಲ್ಪಟ್ಟ ಛಾಯೆಗಳು ಮಾನವನ ಇಂದ್ರಿಯಗಳೊಡನೆ ಸಂಪರ್ಕಿಸಿದಾಗ ಪ್ರತ್ಯಕ್ಷಜ್ಞಾನದ ಅನುಭವವಾಗುತ್ತದೆ.

ಆದರೆ ನ್ಯಾಯವೈಶೇಷಿಕ ದರ್ಶನದಲ್ಲಿ ಪ್ರತ್ಯಕ್ಷ ಜ್ಞಾನವನ್ನು ಈ ರೀತಿ ವಿವರಿಸಲಾಗಿದೆ; "ಇಂದ್ರಿಯಾರ್ಥ ಸನ್ನಿಕರ್ಷ ಜನ್ಯಂ ಜ್ಞಾನಂ ಪ್ರತ್ಯಕ್ಷಂ"[21]. [ಇಂದ್ರಿಯ ಮತ್ತು ವಸ್ತುಗಳ (ಅರ್ಥ) ನಡುವಿನ ಸಂಪರ್ಕದಿಂದಾಗುವ ಜ್ಞಾನವೇ ಪ್ರತ್ಯಕ್ಷ]. ಇಲ್ಲಿ ವಸ್ತುವನ್ನು ತಿಳಿಯುವುದು, ಮನಸ್ಸಿನ ಸಹಕಾರವನ್ನು ಹೊಂದಿರುವ ಆತ್ಮ. ಆತ್ಮ ಮತ್ತು ಮನಸ್ ಎರಡೂ ಅಣುಗಳಿಂದ ಮಾಡಲ್ಪಟ್ಟಿಲ್ಲ ಎಂಬುದು ಇಲ್ಲಿಯ ಗಮನಾರ್ಹ ಅಂಶ.

ಸ್ವಯಂ ಚಲನಶಕ್ತಿಯುಳ್ಳ ಅಣುಗಳು ಶೂನ್ಯಪ್ರದೇಶದಲ್ಲಿ ಚಲಿಸುತ್ತವೆ ಎಂದು ಡೆಮಾಕ್ರೈಟಸ್ ಅಭಿಪ್ರಾಯಪಟ್ಟರೆ, ನ್ಯಾಯವೈಶೇಷಿಕ ದರ್ಶನದಲ್ಲಿ ನಿತ್ಯವೂ ಸರ್ವವ್ಯಾಪಕವೂ ಅಖಂಡವೂ ಆದ ಆಕಾಶವನ್ನು ಪ್ರತಿಪಾದಿಸಲಾಗಿದೆ. ಅಣುಗಳು ಸ್ವಭಾವತಃ ಚಲನಾರಹಿತವಾದುದರಿಂದ ತಮ್ಮ ಸ್ಥಳವನ್ನು ತಮ್ಮಿಷ್ಟಕ್ಕೆ ತಾವೇ ಬದಲಾಯಿಸಿಕೊಳ್ಳಲಾರವು. ಡೆಮಾಕ್ರೈಟಸ್ ಬೋಧಿಸಿದ 'ಅಣುವಾದ'ಕ್ಕೂ ಅವನ ನೀತಿಸಿದ್ಧಾಂತಕ್ಕೂ ಹೊಂದಾಣಿಕೆ ಇಲ್ಲವೆಂದೆನಿಸುತ್ತದೆ. ಆತ ಅಪ್ರತಿಮ ನೀತಿಬೋಧಕನೂ ನೀತಿವಂತನೂ ಆಗಿದ್ದ. ಅಣುಗಳು ಭೌತಿಕ ಎಂದು ಹೇಳಿದರೂ ನಿಜವಾದ ಸುಖ ಸಂತೋಷಗಳು ಭೌತವಸ್ತುಗಳಲ್ಲಿಲ್ಲ ; ಅವುಗಳನ್ನು ಪಡೆಯುವುದರಲ್ಲೂ ಇಲ್ಲ.[22] ಸುಖ ಆತ್ಮಕ್ಕೆ ಸಂಬಂಧಪಟ್ಟದ್ದು. ಕಷ್ಟ ಬಂದಾಗ ಕುಗ್ಗದ, ಹರ್ಷ ಬಂದಾಗ ಹಿಗ್ಗದ ಸಮಚಿತ್ತನಾಗಿರುವುದಕ್ಕಿಂತ ಬೇರೆ ಸುಖವಿಲ್ಲ. ಪ್ರತಿಯೊಬ್ಬರೂ ಇದ್ದುದರಲ್ಲಿ ಯಾವಾಗಲೂ ಸುಖಿಯಾಗಿರಬೇಕು ಎಂಬ ಇವನ ಬೀಜಮಂತ್ರವನ್ನು ಮುಂದೆ ಬಂದ ಎಪಿಕ್ಯೂರಿಯನರು ಪುಷ್ಟೀಕರಿಸಿ ಬೆಳಸಿದರು.

೫

ಜೈನದರ್ಶನದ ಅಣುವಾದ, ನ್ಯಾಯವೈಶೇಷಿಕ ದರ್ಶನಕ್ಕಿಂತ ಲೂಸಿಪಸ್ ಮತ್ತು ಡೆಮಾಕ್ರೈಟಸರ ದರ್ಶನಕ್ಕೆ ತೀರ ಹತ್ತಿರವಾಗಿದೆ. ಡೆಮಾಕ್ರೈಟಸನಂತೆ ಜೈನ ದರ್ಶನದಲ್ಲೂ ಎಲ್ಲಾ ಅಣುಗಳೂ ಏಕರೀತಿಯಾದವುಗಳು ಎಂದು ಹೇಳಲಾಗಿದೆ. ಅಣುಗಳಲ್ಲಿ ಪರಸ್ಪರ ವ್ಯತ್ಯಾಸಗಳಿಲ್ಲ.

ಅಣುಗಳಿಗೆ ಗುಣಗಳಿದ್ದರೂ, ಗುಣ ನಿತ್ಯವಾದುದಲ್ಲ ಎಂದು ಜೈನ ದರ್ಶನ ಸಾರುತ್ತದೆ. ಆದರೆ ನ್ಯಾಯವೈಶೇಷಿಕ ದರ್ಶನದ ಪ್ರಕಾರ ಅಣುಗಳ ಗುಣಗಳೂ ನಿತ್ಯ.[23]

---

21 ಎಸ್. ರಾಧಾಕೃಷ್ಣನ್: *Indian Philosophy*, Vol. II, ಪು. 49

22 ಡಬ್ಲ್ಯು. ಟಿ. ಸ್ಟೇಸ್ : *A Critical Study of Greek Philosophy*, ಪು. 93

23 ಸಿ. ಚಂದ್ರಧರ್ ಶರ್ಮ : *A Critical Survey of Indian Philosophy*, ಪು 185

ಜೈನಧರ್ಮದಲ್ಲಿ ಶಬ್ದಗುಣಕ್ಕೆ ಅಣುಗಳು ಕಾರಣ ಎಂದು ಹೇಳಿದೆ.[24] ಆದರೆ ನ್ಯಾಯ ವೈಶೇಷಿಕ ದರ್ಶನದಲ್ಲಿ ಅಣುಗಳಿಗೂ ಶಬ್ದಗುಣಕ್ಕೂ ಯಾವ ಸಂಬಂಧವೂ ಇಲ್ಲ.[25]

೬

ಅಣುವಾದ ಸ್ಪಷ್ಟವಾಗಿಲ್ಲದಿದ್ದರೂ ಮಸುಕು ಮಸುಕಾಗಿ ಉಪನಿಷತ್ತುಗಳಲ್ಲೂ ಕಂಡುಬರುತ್ತದೆ.[26] ಉದಾ : ಛಾಂದೋಗ್ಯ ಉಪನಿಷತ್ತನ್ನೇ[27] ತೆಗೆದುಕೊಳ್ಳೋಣ. ಅದರಲ್ಲಿ ಒಂದು ಕಥೆ ಬರುತ್ತದೆ. ಉದ್ದಾಲಕ ಆರುಣಿ ಗುರುಕುಲದಲ್ಲಿ ವಿದ್ಯಾಭ್ಯಾಸಮಾಡಿ ಹಿಂದಿರುಗಿ ಬಂದಿದ್ದ ತನ್ನ ಮಗ ಶ್ವೇತಕೇತುವನ್ನು ಹತ್ತಿರ ಕರೆದು, ಒಂದು ನ್ಯಗ್ರೋಧ ಹಣ್ಣನ್ನು ಹೋಳುಮಾಡಿ ಬೀಜವನ್ನು ತೆಗೆಯಲು ಸೂಚಿಸುತ್ತಾನೆ. ತೆಗೆದಿಡಲ್ಪಟ್ಟ ಬೀಜವನ್ನು ಕತ್ತರಿಸುವಂತೆ ತಂದೆ ಮಗನಿಗೆ ಆಜ್ಞಾಪಿಸುತ್ತಾನೆ. ಮಗ ಬೀಜವನ್ನು ಕತ್ತರಿಸುತ್ತಾನೆ. ಕತ್ತರಿಸಿದ ಭಾಗವನ್ನು ಪುನಃ ಕತ್ತರಿಸುವಂತೆ ಸೂಚಿಸುತ್ತಾನೆ. ಮಗ ಬೀಜವನ್ನು ಕತ್ತರಿಸುವುದನ್ನು ಮುಂದುವರಿಸುತ್ತಾನೆ. ಕೊನೆಯಲ್ಲಿ ಕತ್ತರಿಸಲಾಗದ ಒಂದು ಪೂರ್ಣ ಅಂಶ ಉಳಿಯುತ್ತದೆ. ಹೇಗೆ ಅಂಥ ಪೂರ್ಣ ಅಂಶದಿಂದ ಇಡೀ ನ್ಯಗ್ರೋಧ ವೃಕ್ಷ ಹೊರಬಂದಿದೆಯೋ ಹಾಗೆಯೇ ಅತಿ ಸೂಕ್ಷ್ಮವಾದ ಅಗೋಚರವಾದ, ಪುನಃ ವಿಭಜಿಸಲಾಗದ ಪೂರ್ಣ ಅಂಶಗಳಿಂದ ಈ ಜಗತ್ತು ಹೊರಬಂದಿದೆ ಎಂದು ತಂದೆ ಮಗನಿಗೆ ಉಪದೇಶಿಸುತ್ತಾನೆ. ಈ ಪೂರ್ಣ ಅಂಶವನ್ನು 'ಅಣು' ಎಂದು ಬಾಯಿಬಿಟ್ಟು ಹೇಳದಿದ್ದರೂ, ಅದೇ ಅಣು ಎಂಬ ವಿಚಾರದಲ್ಲಿ ಯಾವ ಸಂಶಯಕ್ಕೂ ಎಡೆಯಿಲ್ಲವೆಂದು ನಮಗೆ ಗೋಚರವಾಗುತ್ತದೆ.

೭

ನ್ಯಾಯವೈಶೇಷಿಕ, ಜೈನ ಮತ್ತು ಲೂಸಿಪಸ್–ಡೆಮಾಕ್ರೈಟಸ್ ದರ್ಶನಗಳಲ್ಲಿ ಚರ್ಚಿತವಾಗಿರುವ 'ಅಣುವಾದ' ಮೂಲತಃ ತಾತ್ತ್ವಿಕವಾದುದು ; ಪ್ರಪಂಚದ ಉತ್ಪತ್ತಿ ಸ್ಥಿತಿ ಲಯಗಳನ್ನು ತಾತ್ತ್ವಿಕದೃಷ್ಟಿಯಿಂದ ನೋಡಿದ್ದು ; ಇವುಗಳಿಗೆ ವೈಜ್ಞಾನಿಕ ಆಧಾರಗಳು ಅಲ್ಪವಾಗಿರಬಹುದು ಅಥವಾ ಇಲ್ಲದಿರಬಹುದು. ಆದರೆ ವೈಜ್ಞಾನಿಕ ಶೀಘ್ರ ಬೆಳವಣಿಗೆಗೆ ಈ ತಾತ್ತ್ವಿಕ ವಾದಗಳ ಚರ್ಚೆಯ ಪಾತ್ರ, ಹಿರಿಮೆ, ಅಪಾರವಾದುದು, ಅಸದೃಶವಾದುದು.

ವಿಜ್ಞಾನ ಅಣುವಾದವನ್ನು ಸಮರ್ಥಿಸಿದೆ. ಅಣು ಅತಿಸೂಕ್ಷ್ಮವಾದ ಪದಾರ್ಥ. ಆದರೆ ಅದು ಪ್ರಾಚೀನ ಭಾರತೀಯರಾಗಲಿ ಗ್ರೀಕರಾಗಲಿ ಹೇಳಿದಂತೆ ಅವಿಭಾಜ್ಯವಲ್ಲ. ಅದನ್ನು ವಿಭಜಿಸಲು ಸಾಧ್ಯ. ಪ್ರೋಟಾನ್, ನ್ಯೂಟ್ರಾನ್, ಎಲೆಕ್ಟ್ರಾನ್‌ಗಳ ಆಶ್ರಯಸ್ಥಾನವೇ ಅಣು. ಅದರ ವಿದಳನದಿಂದ ಅಗಾಧವಾದ ಶಕ್ತಿ ಹೊರಬೀಳುತ್ತದೆ. ಈ ಶಕ್ತಿಯನ್ನು ಜಗತ್ತಿನ ಮುನ್ನಡೆಗಾಗಲಿ ವಿನಾಶಕ್ಕಾಗಲಿ ಉಪಯೋಗಿಸಬಹುದು. ಶಾಂತರೀತಿಯ ಉದ್ದೇಶಗ ಮೂಲಕ ಜಗತ್ಕಲ್ಯಾಣಕ್ಕೆ ಈ ಶಕ್ತಿಯನ್ನು ವಿನಿಯೋಗಿಸಬೇಕೆಂಬುದು ಸಾಧುವೂ ಶಿಷ್ಟವೂ ಆದ ಮಾತು.

---

24 ಎ. ಬಿ. ಕೀತ್, *Indian Logic and Atomis* (1968), ಪು. 16

25 ಅದೇ p. 16

26 ಎಸ್. ರಾಧಾಕೃಷ್ಣನ್: *Indian Philosophy*, Vol. II, ಪು. 194

27 6 ನೆಯ ಅಧ್ಯಾಯ 12,ನೆಯ ಖಂಡ

ಆಧುನಿಕ ವೈಜ್ಞಾನಿಕ ಅಣುವಾದ ಲೂಸಿಪಸ್–ಡೆಮಾಕ್ರೈಟಸರ ಅಣುವಾದದಿಂದ ಬಹಳ ಪ್ರಭಾವಿತವಾಗಿದೆ ಎಂಬುದರಲ್ಲಿ ಸಂಶಯ ಇಲ್ಲ.[28] ಗ್ರೀಕರ ಅಣುವಾದದಂತೆ, ಆಧುನಿಕ ವೈಜ್ಞಾನಿಕ ಅಣುವಾದವೂ ಅಣುಗಳಿಗೆ ಯಾವ ಬಗೆಯ ಗುಣಗಳೂ ಇಲ್ಲವೆಂದು ಸ್ಥಿರಪಡಿಸಿದೆ. ಚಲನೆ ಅಣುಗಳಿಗೆ ಸ್ವಭಾವ ಸಿದ್ಧವಾದುದೆಂಬ ಸ್ಫೂರ್ತಿದಾಯಕ ಅಂಶಕ್ಕೆ ವಿಜ್ಞಾನ ಲೂಸಿಪಸ್–ಡೆಮಾಕ್ರೈಟಸರಿಗೆ ಎಷ್ಟು ಕೃತಜ್ಞತೆ ತೋರಿಸಿದರೂ ಅಲ್ಪವೇ ಆಗುತ್ತದೆ ; ಈ ಅಂಶದಲ್ಲಿ ಆಧುನಿಕ ವಿಜ್ಞಾನ ಲೂಸಿಪಸ್ ಮತ್ತು ಡೆಮಾಕ್ರೈಟಸರೊಡನೆ ಸಂಪೂರ್ಣವಾಗಿ ಒಪ್ಪುತ್ತದೆ.

ಲೂಸಿಪಸ್ ಮತ್ತು ಡೆಮಾಕ್ರೈಟಸರ ಅಣುವಾದದ ಇನ್ನೊಂದು ಮಹತ್ವದ ಅಂಶವನ್ನು ವಿಜ್ಞಾನ ತುಂಬು ಮನಸ್ಸಿನಿಂದ ಸ್ವಾಗತಿಸುತ್ತದೆ. ಅದೇನೆಂದರೆ, ಒಂದು ವಸ್ತುವಿನ ರೂಪ, ಆ ವಸ್ತುವಿನ ಅಣುಗಳ ಸ್ಥಾನ ಮತ್ತು ವ್ಯವಸ್ಥೆಗಳ ಆಧಾರದ ಮೇಲೆ ರೂಪಾಂತರವಾಗುವುದೆಂಬ ಅಂಶ.[29] ಉದಾಹರಣೆಗೆ, ನೀರು ಎಂಬ ಸಂಯುಕ್ತ ವಸ್ತುವನ್ನು ಕಾಯಿಸಿದಾಗ ಆವಿಯಾಗುವುದು, ಅತಿಯಾಗಿ ತಂಪು ಮಾಡಿದಾಗ ಮಂಜುಗಡ್ಡೆಯಾಗುವುದು. ಇಲ್ಲಿ ನೀರಿನ (H_2O) ಅಣುಗಳು ಪುನರ್ವ್ಯವಸ್ಥೆಗೆ ಒಳಗಾಗುತ್ತವೆ, ಅಷ್ಟೆ. ಆದರೆ ಅದರ ಎಲ್ಲ ಅಣುಗಳೂ ಒಂದೇ ತರನಾಗಿವೆ ಎಂಬ ಗ್ರೀಕ್ ಅಣುವಾದದ ಅಂಶವನ್ನು ಮಾತ್ರ ವಿಜ್ಞಾನ ತಿರಸ್ಕರಿಸುತ್ತದೆ. ಅದು ಇನ್ನೂ ಮುಂದೆ ಹೋಗಿ ಈ ಮೇಲಿನ ಅಂಶ ಲೂಸಿಪಸ್ ಮತ್ತು ಡೆಮಾಕ್ರೈಟಸರ ದೌರ್ಬಲ್ಯ ಹಾಗೂ ದೊಡ್ಡ ದೋಷವೆಂದು ವಿಮರ್ಶಿಸುತ್ತದೆ. ಈ ವಿಧದಲ್ಲಿ ಅಣುಗಳು ಒಂದೇ ತೆರನಾದವುಗಳಲ್ಲ ; ಅವುಗಳು ಭಿನ್ನ, ಬೇರೆಬೇರೆ ಎಂಬ ನ್ಯಾಯವೈಶೇಷಿಕ ದರ್ಶನದ ಮಹತ್ವ ವಿಚಾರಾಂಶವನ್ನು ಒಪ್ಪುವ ವಿಜ್ಞಾನ, ಅಣುಗಳಿಗೆ ಗುಣಧರ್ಮಗಳಿವೆ ಎಂಬ ನ್ಯಾಯವೈಶೇಷಿಕ ದರ್ಶನದ ಅಭಿಪ್ರಾಯವನ್ನು ಸಂಪೂರ್ಣವಾಗಿ ತಳ್ಳಿಹಾಕುತ್ತದೆ.

ಮೇಲಿನ ದರ್ಶನಗಳ ಸಾಧುವಾದ ಅಭಿಪ್ರಾಯಗಳಿಂದ ಪ್ರಾರಂಭಿಸುವ ವಿಜ್ಞಾನ ಇನ್ನೂ ಮುಂದುವರಿದು ಅಣುವಿನ ವಿಶ್ಲೇಷಣೆ ಮಾಡುತ್ತದೆ. ನ್ಯಾಯವೈಶೇಷಿಕ ಮತ್ತು ಗ್ರೀಕರ ದರ್ಶನಗಳಂತೆ ಅಣುಗಳು ವಸ್ತುಗಳ ಅತ್ಯಂತ ಸಣ್ಣಕಣಗಳೆಂದು ಬಹುಕಾಲ ತಿಳಿದುಕೊಳ್ಳಲಾಗಿತ್ತು. ಆದರೆ ಈಗ ಅಣುಗಳಲ್ಲಿ ಇನ್ನೂ ಸಣ್ಣಕಣಗಳು ಇರುವುದು ತಿಳಿದುಬಂದಿದೆ. ಪ್ರತಿಯೊಂದು ಅಣುವಿನಲ್ಲಿಯೂ ವಿದ್ಯುದಾವೇಶ (Electric charge) ಇರುವ ಕಣಗಳಿವೆ. ಪರಮಾಣುವಿನಲ್ಲಿ ಇರುವ ಕೆಲವು ಕಣಗಳು ಧನಾವೇಶವನ್ನೂ ಮತ್ತೆ ಕೆಲವು ಋಣಾವೇಶವನ್ನೂ ಹೊಂದಿವೆ. ಧನಾವಿಷ್ಟ ಕಣಗಳಿಗೆ 'ಪ್ರೋಟಾನುಗಳು' ಎಂದೂ ಋಣಾವಿಷ್ಟ ಕಣಗಳಿಗೆ 'ಎಲೆಕ್ಟ್ರಾನ್‌ಗಳು' ಎಂದೂ ಹೆಸರು. ಇವುಗಳ ಆವೇಶಗಳು ಪರಸ್ಪರ ಸಮವಾಗಿವೆ, ಆದರೆ ವಿರುದ್ಧವಾಗಿವೆ ; ಅಂದರೆ ಒಂದು ಅಣುವಿನಲ್ಲಿ (atom) ಇರುವ ಪ್ರೋಟಾನ್‌ಗಳ ಸಂಖ್ಯೆ ಅದರಲ್ಲಿರುವ ಎಲೆಕ್ಟ್ರಾನ್‌ಗಳ ಸಂಖ್ಯೆಗೆ ಸಮವಾಗಿರುತ್ತದೆ. ಆದ್ದರಿಂದ ಒಟ್ಟಾಗಿ ಅದು ವಿದ್ಯುತ್ತಟಸ್ಥವಾಗಿರುತ್ತದೆ. ಪ್ರೋಟಾನುಗಳು ಅಣುವಿನ ಮಧ್ಯದಲ್ಲಿರುವ ಕೇಂದ್ರ ಪ್ರದೇಶದಲ್ಲಿರುತ್ತವೆ. ಈ ಪ್ರದೇಶವನ್ನು ಅಣುಕೇಂದ್ರ ಅಥವಾ ನ್ಯೂಕ್ಲಿಯಸ್ ಎಂದು ಕರೆಯುತ್ತಾರೆ.

---

28 ಆರ್. ರೇನ : *The Philosophy of matter in the Atomic Era* (Asia publishing House, 1962), ಪು. 76

29 ಅದೇ, ಪು. 77

ಎಲೆಕ್ಟ್ರಾನ್‌ಗಳು ಕೇಂದ್ರದ ಸುತ್ತಲೂ ಬೇರೆಬೇರೆ ದೂರಗಳಲ್ಲಿ ಟಿಪ್ಪುಗಳನ್ನು ನೇಯುವ ತೆರನಾಗಿ ಚಲಿಸುತ್ತವೆ. ಪ್ರೋಟಾನ್‌ಗಳೊಂದಿಗೆ ಕೇಂದ್ರಬಿಂದುವಿನಲ್ಲಿ ನ್ಯೂಟ್ರಾನ್ ಎಂಬ ವಿದ್ಯುದ್ರಹಿತ ಇತರ ಸಣ್ಣಕಣಗಳೂ ಉಂಟು.

ಹೀಗೆ ಪ್ರಪಂಚದ ಎಲ್ಲ ವಸ್ತುಗಳೂ ಅಣುಗಳಿಂದ ಮಾಡಲ್ಪಟ್ಟಿವೆ ಎಂದು "ತಾತ್ವಿಕ ಅಣುವಾದ" ಪರಿಭಾವಿಸಿದರೆ, ಆಧುನಿಕ ವಿಜ್ಞಾನ (ಆಧುನಿಕ ಭೌತಶಾಸ್ತ್ರ) ಎಲ್ಲ ವಸ್ತುಗಳು ಎಲೆಕ್ಟ್ರಾನ್ ಮುಂತಾದ ಅತ್ಯಂತ ಸೂಕ್ಷ್ಮಕಣಗಳಿಂದ ಮಾಡಲ್ಪಟ್ಟಿವೆ ಎಂದು ಹೇಳುತ್ತದೆ. ಆಧುನಿಕ ಭೌತಶಾಸ್ತ್ರದ ಈ ತೀರ್ಮಾನ ಮೇಲೆ ವಿವೇಚಿಸಿದ ಮೂರು ತಾತ್ತ್ವಿಕ ಅಣುವಾದಗಳ ಮೇಲ್ಮೆಯನ್ನು ಪಡೆದಿದೆ ಎಂಬುದು ನಿರ್ವಿವಾದ. ಆದರೆ ಎಲೆಕ್ಟ್ರಾನ್, ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳಿಗೆ ಆಧಾರಭೂತವಾದ ಅಣುವನ್ನು ಮೊತ್ತಮೊದಲಿಗೆ ಧೈರ್ಯವಾಗಿ ಪರಿಕಲ್ಪಿಸಿ ಅವುಗಳ ಬಗ್ಗೆ ವಿಚಾರಾತ್ಮಕ ವಿಷಯಗಳನ್ನು ತಾತ್ತ್ವಿಕ ಚರ್ಚೆಯ ಮೂಲಕ (metaphysical discussions) ಹೊರಗೆಡಹಿದ ಕೀರ್ತಿ ಪ್ರಾಚೀನ ದರ್ಶನಗಳಾದ ನ್ಯಾಯವೈಶೇಷಿಕ, ಜೈನಧರ್ಮ ಮತ್ತು ಜ್ಞಾನಿದ್ವಯರಾದ ಲೂಸಿಪಸ್ ಹಾಗೂ ಡೆಮಾಕ್ರೈಟಸ್‌ಗಳಿಗೆ ಸಲ್ಲಬೇಕು.

ಮಾನವಿಕ ಕರ್ಣಾಟಕ

ಸಂಪುಟ ೪

೧೯೭೩-೭೪

ಸೂಚಿ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ

ವಿಷಯಸೂಚಿ

ಲೇಖನಗಳು

ಲೇಖಕ ಸೂಚಿ

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

ಮಾನವಿಕ ಕರ್ಣಾಟಕ

ಪ್ರಬುದ್ಧ ಕರ್ಣಾಟಕ

ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸ ಗಂಗೋತ್ರಿ, ಮೈಸೂರು-೫೭೦೦೦೬